ಶನಿವಾರ, ಮಾರ್ಚ್ 19, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬಣ್ಣದೋಕುಳಿ
ಮುಂಬೈನಲ್ಲಿ ಹೋಳಿ ಹಬ್ಬದ ಅಂಗವಾಗಿ ಶುಕ್ರವಾರ ಬಣ್ಣದಲ್ಲಿ ಮಿಂದೆದ್ದ ಯುವತಿಯರು

ಇಂದಿನಿಂದ ಶುರುವಾಗ್ತಿದೆ ಡ್ರಾಮಾ ಜೂನಿಯರ್ಸ್ ಸೀಸನ್4

ಡ್ರಾಮಾ ಜೂನಿಯರ್ಸ್ ಕನ್ನಡ ಕಿರುತೆರೆಯ ಇತಿಹಾಸದಲ್ಲೇ ಹೊಸದೊಂದು ಸಂಚಲನ ಸೃಷ್ಟಿಸಿದ ಕಾರ್ಯಕ್ರಮ. 3 ಸೀಸನ್ ಗಳನ್ನು ಯಶಸ್ವಿಯಾಗಿ ಮುಗಿಸಿ ಸೀನಿಯರ್ ಆಗಿರುವ ಡ್ರಾಮಾ ಜ್ಯೂನಿಯರ್ಸ್, ಈಗ ಮತ್ತೊಂದು ಹೆಜ್ಜೆ ಇಟ್ಟು ಮನರಂಜನೆಯ ಮೃಷ್ಟಾನ್ನ ನೀಡಲು ಸಜ್ಜಾಗಿದೆ. ರಾಜ್ಯದಾದ್ಯಂತ ಸಂಚರಿಸಿ ಎಲೆಮರೆಕಾಯಿಗಳಂತಿರುವ ಪ್ರತಿಭೆಗಳನ್ನು ಹುಡುಕಿ ಅವರಿಗೊಂದು ಅದ್ಭುತವಾದ ವೇದಿಕೆ ಕಲ್ಪಿಸಿಕೊಡುವ ಜೀ ಕನ್ನಡದ ಪ್ರಯತ್ನಕ್ಕೆ ಜನರಿಂದ ಮೆಚ್ಚುಗೆ ವ್ಯಕ್ತವಾಗಿದೆ. 3ವರ್ಷಗಳ ಬಳಿಕ ಡ್ರಾಮಾ ಜೂನಿಯರ್ಸ್ – 4 ಕಾರ್ಯಕ್ರಮ ಹಲವು ವಿಶೇಷತೆಗಳು, ಪ್ರತಿಭೆಗಳನ್ನು ಹೊತ್ತು ಬರುತ್ತಿದೆ.

ZEE ಕನ್ನಡ

ಸೀಸನ್ 4 ರ ವಿಶೇಷತೆಗಳು

- ನಮ್ಮ ನೆಲದ ಕಥೆಗಳ ಆಯ್ಕೆಯೇ ಪ್ರಮುಖ ಆಕರ್ಷಣೆ
- ಕನ್ನಡ ತನವನ್ನು ಪ್ರತಿನಿಧಿಸಲಿದೆ ಡ್ರಾಮಾ ಜೂನಿಯರ್ಸ್
- ಕನ್ನಡದ ಸಾಹಿತಿಗಳ ಸಣ್ಣ ಕಥೆಗಳಿಗೆ ಸಿಗಲಿದೆ ನಾಟಕ ರೂಪ
- ರಿಯಲ್ ಲೈಫ್ ಸಾಧಕರ ಸ್ಫೂರ್ತಿಯ ಬದುಕಿನ ಪರಿಚಯ
- ಸಾಮಾಜಿಕ ಸಂದೇಶ, ಸಂಬಂಧಗಳ ಮೌಲ್ಯದ ಕಥೆಗಳಾಗಲಿವೆ ನಾಟಕ
- ತೀರ್ಪುಗಾರರಾಗಿ ಜೀ ಕುಟುಂಬಕ್ಕೆ ಆಗಮಿಸಿದ್ದಾರೆ ಕ್ರೇಜಿ ಸ್ಟಾರ್ ರವಿಚಂದ್ರನ್ ಹಾಗು ಡಿಂಪಲ್ ಕ್ವೀನ್ ರಚಿತಾ ರಾಮ್
- 3 ವರ್ಷಗಳ ನಂತರ ಮಕ್ಕಳಿಗೆಂದೇ ಬರುತ್ತಿರುವ ಕಾರ್ಯಕ್ರಮ

ಮಕ್ಕಳ ನಟನಾ ಪ್ರದರ್ಶನಕ್ಕೆ ಇರುವ ಏಕೈಕ ಕಾರ್ಯಕ್ರಮ

ಹಾಡು, ನೃತ್ಯ, ಹಾಸ್ಯ ಹೀಗೆ ಎಲ್ಲಾ ರೀತಿಯ ರಿಯಾಲಿಟಿ ಶೋಗಳು ವೀಕ್ಷಕರನ್ನು ರಂಜಿಸಿದೆ ಆದರೆ ನಾವ್ ಹುಟ್ಟಿರೋದೇ ಡ್ರಾಮಾ ಮಾಡೋಕೆ ಎನ್ನುವ ಚಿಣ್ಣರ ಅಭಿನಯ ಕೌಶಲ್ಯಕ್ಕೆ ವಿಶೇಷವಾದ ವೇದಿಕೆ ಸೃಷ್ಟಿಸಿ ಕಿರುತೆರೆಗೆ ರಂಗಭೂಮಿಯನ್ನು ಪರಿಚಯಿಸಿದ ಹೆಗ್ಗಳಿಕೆಗೆ ಜೀ ಕನ್ನಡಕ್ಕಿದೆ. ಅಷ್ಟೇ ಅಲ್ಲದೆ ಕೇವಲ ಅನುಭವಿ ಬರಹಗಾರರಿಗಷ್ಟೇ ಮಣೆ ಹಾಕದೆ ಹೊಸ ಲೇಖಕರಿಗೂ ಅವಕಾಶ ನೀಡಿರುವುದು ಮತ್ತು ನಾಟಕಗಳನ್ನು ರೂಪಿಸುವ ನುರಿತ ರಂಗಕರ್ಮಿಗಳು ಆಯ್ಕೆಯಾಗಿರುವ ಈ ಮಕ್ಕಳಿಗೆ ಮಾರ್ಗದರ್ಶಕರಾಗಿರುವುದು ಈ ಶೋನ ವಿಶೇಷತೆಯಾಗಿದೆ. ಮತ್ತು ಕರ್ನಾಟಕದ ಎಲ್ಲಾ ಭಾಗದ ವೈಶಿಷ್ಟ್ಯಗಳನ್ನು ಪ್ರದರ್ಶಿಸುವುದು ಈ ಕಾರ್ಯಕ್ರಮದ ಮೂಲ ಉದ್ದೇಶವಾಗಿದೆ ಹಾಗು ವಿಶೇಷತೆಯಾಗಿದೆ.

3 ವರ್ಷದಿಂದ ಲಾಕ್ ಡೌನ್, ಆನ್ಲೈನ್ ಕ್ಲಾಸ್ ಎಂದು ಚಟುವಟಿಕೆಗಳಿಂದ ದೂರವಾಗಿದ್ದ ಮಕ್ಕಳಿಗೋಸ್ಕರ ಡ್ರಾಮಾ ಜೂನಿಯರ್ಸ್ ಮತ್ತೆ ಶುರುವಾಗುತ್ತಿದೆ.ಸದಾ ಲವಲವಿಕೆಯಿಂದಿರುವ ಲಕ್ಷ್ಮೀ ಅಮ್ಮನ ಜೊತೆ ರವಿಚಂದ್ರನ್ ಸರ್ ಮತ್ತೆ ರಚಿತಾ ರಾಮ್ ಇಬ್ಬರೂ ತೀರ್ಪುಗಾರರಾಗಿ ಜೀ ಕುಟುಂಬಕ್ಕೆ ಆಗಮಿಸಿರುವುದು ಡ್ರಾಮಾ ಜೂನಿಯರ್ಸ್ ರೀ ಲೋಡ್ ಆಗಿ ಬಂದಿದೆ ಎಂದೇ ಹೇಳಬಹುದು. ಪರೀಕ್ಷೆಗಳು ಮುಗಿದು ಬೇಸಿಗೆ ರಜೆಗಳು ಆರಂಭವಾಗುತ್ತಿರುವುದರಿಂದ ಜೂನಿಯರ್ಸ್, ಸೀನಿಯರ್ಸ್ ಎಲ್ಲರೂ ಒಟ್ಟಿಗೆ ಕುಳಿತು ಆನಂದದಿಂದ ನೋಡಬಹುದಾದ ಕಾರ್ಯಕ್ರಮ ಇದಾಗಿದೆ. ಈ ಸೀಸನ್ ನಲ್ಲೂ ಮಾಸ್ಟರ್ ಆನಂದ್ ನಿರೂಪಕರಾಗಿ ಮುಂದುವರೆಯಲಿದ್ದಾರೆ.

• ರಾಘವೇಂದ್ರ ಹುಣಸೂರು
ಜೀ ಕನ್ನಡ ಹಾಗೂ ಜೀ ಪಿಚ್ಚರ್ ಬ್ಯುಸಿನೆಸ್ ಹೆಡ್

ವೈರಲ್ ಆಗಿದೆ ಕಿಡ್ನ್ಯಾಪ್ ಪ್ರೋಮೋಗಳು

ಡ್ರಾಮಾ ಜೂನಿಯರ್ಸ್ ಸೀಸನ್ 4 ರ ಪ್ರೊಮೋ ವಿಭಿನ್ನವಾಗಿದ್ದು ಮಕ್ಕಳೇ ಕ್ರೇಜಿ ಸ್ಟಾರ್ ವಿ.ರವಿಚಂದ್ರನ್ ಮತ್ತು ರಚಿತಾ ರಾಮ್ ಅವರನ್ನು ಅಪಹರಿಸಿ ಕಾರ್ಯಕ್ರಮಕ್ಕೆ ತೀರ್ಪುಗಾರರಾಗಿ ಕರೆತರುವ ಪ್ರೊಮೋ ಈಗ ವೀಕ್ಷಕರ ಮೆಚ್ಚುಗೆ ಗಳಿಸಿದೆ ಹಾಗು ಸೋಷಿಯಲ್ ಮೀಡಿಯಾದಲ್ಲಿ ಸಾಕಷ್ಟು ವೈರಲ್ ಆಗುತ್ತಿದೆ. ಮಹಾನಟಿ ಲಕ್ಷ್ಮೀ ಅವರು ತಮ್ಮ ಸಹ ತೀರ್ಪುಗಾರರನ್ನು ಡ್ರಾಮಾ ಕುಟುಂಬಕ್ಕೆ ಸ್ವಾಗತಿಸುವ ರೀತಿ ಭರ್ಜರಿ ಪ್ರತಿಕ್ರಿಯೆ ಪಡೆದುಕೊಂಡಿದೆ.

ಕರ್ನಾಟಕದ ಎಲ್ಲಾ 31 ಜಿಲ್ಲೆಗಳಲ್ಲೂ ನಡೆದಿದೆ ಆಡಿಷನ್ಸ್

ಕೇವಲ ಪ್ರತಿಭೆಯನ್ನಷ್ಟೇ ಮಾನದಂಡವಾಗಿಸಿಕೊಂಡು 4 ರಿಂದ 14 ವಯಸ್ಸಿನ ಮಕ್ಕಳನ್ನು ಹುಡುಕಿ ಅವರಲ್ಲಿ ಅದ್ಭುತವಾಗಿ ಅಭಿನಯಿಸುವ ಟಾಪ್ 15 ಸ್ಪರ್ಧಿಗಳನ್ನು ಆಯ್ಕೆ ಮಾಡಿದ್ದು ಒಬ್ಬರಿಗೆ ಗೆಲುವು ಸಾಧಿಸುವ ಅವಕಾಶವಿದೆ. ಈಗಾಗಲೇ ಕರ್ನಾಟಕದ ಎಲ್ಲಾ 31 ಜಿಲ್ಲೆಗಳಲ್ಲೂ 2 ತಿಂಗಳುಗಳ ಕಾಲ ಆಡಿಷನ್ ಮಾಡಿದ್ದು ಸುಮಾರು 15 ಸಾವಿರಕ್ಕೂ ಹೆಚ್ಚು ಮಕ್ಕಳು ಪಾಲ್ಗೊಂಡಿದ್ದು ಈ ಕಾರ್ಯಕ್ರಮಕ್ಕಿರುವ ಜನಪ್ರಿಯತೆಗೆ ಸಾಕ್ಷಿಯಾಗಿದೆ.ಪ್ರತಿಭಾ ಶೋಧನೆಯಲ್ಲಿ ಹೆಸರುವಾಸಿಯಾಗಿರುವ ಜೀ ಕನ್ನಡ ವಾಹಿನಿ ಈ ಭಾರಿಯೂ ಸಹ ಅನೇಕ ವಿಶೇಷ ಅರ್ಹ ಪ್ರತಿಭೆಗಳನ್ನು ಆಯ್ಕೆ ಮಾಡಿದ್ದು ಅವರನ್ನು ಕರುನಾಡಿಗೆ ಪರಿಚಯಿಸಲು ಉತ್ಸುಕವಾಗಿದೆ.

ಈ ಶೋ ಜೊತೆ ನಂಗೊಂದು ಎಮೋಷನಲ್ ಕನೆಕ್ಷನ್ ಇದೆ. 3 ಸೀಸನ್ನೂ ನಾನು ತುಂಬಾ ಇಷ್ಟ ಪಟ್ಟು ನಿರೂಪಣೆ ಮಾಡಿದ್ದೆ ಈಗ ಈ ಸೀಸನ್ನಲ್ಲೂ ಅಷ್ಟೇ ಖುಷಿಯಿಂದ ನಿರೂಪಣೆ ಮಾಡೋಕೆ, ಮತ್ತೆ ಮಕ್ಕಳ ಪ್ರತಿಭೆಯನ್ನ ಕಣ್ತುಂಬಿಕೊಳ್ಳಕ್ಕೆ ಎದುರು ನೋಡ್ತಿದೀನಿ. ಮುಖ್ಯವಾಗಿ ಈ ಸಲ ಮೂವರು ತೀರ್ಪುಗಾರರಾಗಿ ಲಕ್ಷ್ಮೀ ಅಮ್ಮ, ರವಿಚಂದ್ರನ್ ಸರ್ ಮತ್ತೆ ರಚಿತಾ ರಾಮ್ ಇರೋದು ನಮ್ಮ ಕಾರ್ಯಕ್ರಮಕ್ಕೆ ಹೊಸ ಕಳೆ ಬಂದಿದೆ.

• ಮಾಸ್ಟರ್ ಆನಂದ್.

ಇಂದಿನಿಂದ ಶನಿ - ಭಾನು | 7.30PM

Scan ಮಾಡಿ Follow ಮಾಡಿ ಜೀ ಕನ್ನಡದ Latest Update ಪಡೆಯಿರಿ

ತೀರ್ಪುಗಾರರಾಗಿರಲಿದ್ದಾರೆ ಜನಮೆಚ್ಚಿದ ತ್ರಿವಳಿ ರತ್ನಗಳು

ಡ್ರಾಮಾ ಜೂನಿಯರ್ಸ್ ಶೋ ಜೊತೆ ನಂಗೊಂದು ವಿಶೇಷ ನಂಟಿದೆ. ಮಕ್ಕಳ ನಟನೆ, ಆಟ – ಪಾಠ, ಲೈಟ್ಸ್, ಕ್ಯಾಮೆರಾ, ಡ್ರಾಮ, ಆನಂದ್ ನಿರೂಪಣೆ ಎಲ್ಲವನ್ನೂ ಮಿಸ್ ಮಾಡ್ಕೊಳ್ತಿದ್ದೆ. ಕಳೆದ ಮೂರು ಸೀಸನ್ ನಂತೆ ಈ ಸಲಾನೂ ಕುತೂಹಲದಿಂದ ಈ ಕಾರ್ಯಕ್ರಮಕ್ಕೆ ಕಾಯ್ತಿದಿನಿ. ನನ್ನ ಜೊತೆ ರವಿಚಂದ್ರನ್ ಮತ್ತೆ ರಚಿತಾರಾಮ್ ಇಬ್ಬರು ಜಡ್ಜಸ್ ಆಗಿರೋದು ತುಂಬಾ ಖುಷಿ ವಿಷಯ ಹಾಗೇ ಮತ್ತೊಂದು ಯಶಸ್ವಿ ಸೀಸನ್ ನ ನಾನು ಎದುರು ನೋಡ್ತಿದೀನಿ.

• ಲಕ್ಷ್ಮೀ.



ಜೀ ಕನ್ನಡ ಅಂದ್ರೇನೆ ಹೊಸ ಕಾರ್ಯಕ್ರಮಗಳನ್ನ ಕೊಡ್ತಾ ಎಷ್ಟೋ ಜನರ ಕನಸುಗಳನ್ನು ನನಸು ಮಾಡೋ ಚಾನೆಲ್. ಮಕ್ಕಳು ಏನೇ ಮಾಡಿದ್ರು ಚೆಂದ, ಯಾವುದೇ ಕೆಲಸ ಆದ್ರೂ ಕಲ್ಮಶ ಇಲ್ದೇ ಮಾಡ್ತಾರೆ. ಇಬ್ಬರೂ ಅದ್ಭುತ ನಟಿಯರು ಲಕ್ಷ್ಮೀ ಮತ್ತೆ ರಚಿತಾ ರಾಮ್ ಜೊತೆ ತೀರ್ಪುಗಾರನಾಗಿರೋದು ಎಷ್ಟು ಖುಷಿ ವಿಷ್ಯಾನೋ ಈ ಕಿಲಾಡಿ ಮಕ್ಕಳನ್ನ ಜಡ್ಜ್ ಮಾಡೋದು ತುಂಬಾ ಚಾಲೆಂಜಿಂಗ್ ವಿಷಯ.

• ವಿ.ರವಿಚಂದ್ರನ್.

ಅರಸಿಯಾಗಿ ನನ್ನನ್ನು ಗುರುತಿಸಿದ್ದು ಜೀ ಕನ್ನಡ. ಈಗ ನನ್ನಿಷ್ಟದ ಡ್ರಾಮಾ ಜೂನಿಯರ್ಸ್ ಶೋ ಗೋಸ್ಕರ ನಮ್ಮ ಚಾನೆಲ್ ಗೆ ಮತ್ತೆ ಬಂದಿರೋದು ಹೆಮ್ಮೆ ಅನ್ಸಿದೆ .ರವಿಚಂದ್ರನ್ ಸರ್ ಮತ್ತೆ ಲಕ್ಷ್ಮೀ ಮೇಡಂ ಅಂತ ಲೆಜೆಂಡ್ಸ್ ಜೊತೆ ನಾನೂ ಕೂಡ ಒಬ್ಬಳು ಜಡ್ಜ್ ಆಗಿರೋದು ತುಂಬಾನೇ ಖುಷಿ ವಿಷಯ. ಮಕ್ಕಳ ಟ್ಯಾಲೆಂಟ್ ನೋಡೋಕೆ ಅವರಿಂದ ಕಲಿಯೋಕೆ ನಾನು ಕಾಯ್ತಿದಿನಿ.

• ರಚಿತಾ ರಾಮ್.

ಡ್ರಾಮಾ ಜೂನಿಯರ್ಸ್‌ನ ಇನ್ನೂ ಹೆಚ್ಚಿನ ಅಪ್‌ಡೇಟ್‌ಗಳಿಗಾಗಿ ಇಲ್ಲಿ ಭೇಟಿ ನೀಡಿ /zeekannadatv /zeekannada /zeekannada /zeekannada zee5.com

ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಪಠ್ಯಕ್ರಮಕ್ಕೆ ಭಗವದ್ಗೀತೆ ಸೇರಿಸುವ ಪ್ರಸ್ತಾವದ ಬಗ್ಗೆ ಸಚಿವ ನಾಗೇಶ್

‘ಪಠ್ಯದಲ್ಲಿ ಭಗವದ್ಗೀತೆ ಅಳವಡಿಕೆ ಸದ್ಯಕ್ಕಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಠ್ಯಪುಸ್ತಕದಲ್ಲಿ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ (2022–23) ಭಗವದ್ಗೀತೆ ಸೇರಿಸುವ ಪ್ರಸ್ತಾವ ಇಲ್ಲ. ಮುಂದಿನ ಶೈಕ್ಷಣಿಕ ವರ್ಷದಲ್ಲಿ ಸೇರಿಸುವ ಬಗ್ಗೆ ಚರ್ಚಿಸಿ, ತೀರ್ಮಾನ ಕೈಗೊಳ್ಳುತ್ತೇವೆ’ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

‘ಗುಜರಾತ್ ಮಾದರಿಯಲ್ಲಿ ರಾಜ್ಯದಲ್ಲೂ ಪಠ್ಯಕ್ರಮದಲ್ಲಿ ಭಗವದ್ಗೀತೆ ಅಧ್ಯಯನ ಅಳವಡಿಸಲಾಗುತ್ತದೆಯೇ ಎಂದು ಪತ್ರಕರ್ತರೇ ಕೆದಕಿ ನನ್ನನ್ನು ಪ್ರಶ್ನೆ ಮಾಡಿದ್ದರು. ಈ ಬಗ್ಗೆ ನಾನೇ ಸ್ವತಃ ಏನನ್ನೂ ಪ್ರಸ್ತಾಪ ಮಾಡಿಲ್ಲ’ ಎಂದು ಅವರು ಪ್ರತಿಕ್ರಿಯಿಸಿದರು. ‘ನೀವೇ (ಮಾಧ್ಯಮದವರು) ಇದನ್ನು ಪ್ರಸ್ತಾಪ ಮಾಡಿರುವುದರಿಂದ ಈ ಬಗ್ಗೆ ಶಿಕ್ಷಣ ತಜ್ಞರ ಸಲಹೆ ಪಡೆದು ಮುಂದಿನ ಶೈಕ್ಷಣಿಕ ವರ್ಷದಿಂದ ನೀತಿ ಶಿಕ್ಷಣ ರೂಪದಲ್ಲಿ ಕಲಿಕೆಗೆ ಆದ್ಯತೆ ನೀಡಲಾಗುವುದು’ ಎಂದರು.

ಮುಖ್ಯಾಂಶಗಳು

- ನಾನೇ ಸ್ವತಃ ಏನನ್ನೂ ಪ್ರಸ್ತಾಪ ಮಾಡಿಲ್ಲ. ಪತ್ರಕರ್ತರೇ ಪ್ರಶ್ನಿಸಿದ್ದರು
- ಭಗವದ್ಗೀತೆ ಎಲ್ಲರಿಗೂ ಸೇರಿದ್ದು. ಶತಮಾನಗಳಿಂದ ಇದರ ಅಧ್ಯಯನ ಇದೆ
- ಈಗ ಪಠ್ಯದಲ್ಲಿ ಜ್ಞಾನವಿದೆ, ಸಂಸ್ಕಾರವಿಲ್ಲ. ನೈತಿಕ ಶಿಕ್ಷಣ ಸೇರಿಸಿ ಎಂಬ ಬೇಡಿಕೆ ಇದೆ



ಬಿ.ಸಿ. ನಾಗೇಶ್

‘ಭಗವದ್ಗೀತೆ ಎಲ್ಲ ಧರ್ಮಗಳಿಗೂ ಸೇರಿದ್ದು. ಪ್ರಪಂಚದ ಎಲ್ಲ ದೇಶಗಳಲ್ಲಿ ಭಗವದ್ಗೀತೆಯನ್ನು ಅಭ್ಯಾಸ ಮಾಡುವ ಕ್ರಮ ಬಂದಿದೆ. ಇದು ಯಾವುದೇ ಧರ್ಮ, ಜಾತಿಗೆ ಸಂಬಂಧಿಸಿದ್ದಲ್ಲ. ಶತಮಾನಗಳಿಂದ ಭಗವದ್ಗೀತೆ ಅಧ್ಯಯನ ಮಾಡುವ, ಓದುವ ಪದ್ಧತಿ ನಮ್ಮಲ್ಲಿದೆ’ ಎಂದರು.

‘ಈಗ ಪುಸ್ತಕದಲ್ಲಿ ಜ್ಞಾನವಿದೆ, ಸಂಸ್ಕಾರವಿಲ್ಲ ಎನ್ನುತ್ತಿದ್ದಾರೆ. ನೈತಿಕ ಶಿಕ್ಷಣ ತರುವಂತೆ ಹಲವರು ಬೇಡಿಕೆ ಇಟ್ಟಿದ್ದಾರೆ. ಈ ಬಗ್ಗೆ ಶಿಕ್ಷಣ ತಜ್ಞರ ಸಲಹೆ ಪಡೆದು ಮುಂದಿನ ಶೈಕ್ಷಣಿಕ ವರ್ಷದಿಂದ ನೀತಿ ವಿಜ್ಞಾನದ ಕಲಿಕೆಗೆ ಆದ್ಯತೆ ನೀಡಲಾಗುವುದು. ಈ ವಿಷಯದ ಬಗ್ಗೆ ಮುಖ್ಯಮಂತ್ರಿ ಜೊತೆ ಕೂಲಂಕಷವಾಗಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು’ ಎಂದರು.

ಹಿಜಾಬ್‌ಗೆ ಅವಕಾಶ ಇಲ್ಲ: ‘ಹಿಜಾಬ್ ವಿಚಾರವಾಗಿ ಸುಪ್ರೀಂ ಕೋರ್ಟ್ ಮೊರೆ ಹೋಗುವ ವಿದ್ಯಾರ್ಥಿನಿಯರಿಗೆ ಶಿಕ್ಷಣ ಇಲಾಖೆ ಮತ್ತೆ ಸ್ಪಷ್ಟನೆ ನೀಡಿದೆ. ಈ ವಿಷಯದಲ್ಲಿ ಈಗಾಗಲೇ ಸುಪ್ರೀಂಕೋರ್ಟ್ ಈ ಬಗ್ಗೆ ತೀರ್ಪು ನೀಡಿದ್ದು, ಹಿಜಾಬ್ ಧರಿಸಿ ಶಾಲೆಗೆ ಹಾಜರಾಗಲು ಅಥವಾ ಪರೀಕ್ಷೆಗೆ ಹಾಜರಾಗಲು ಅವಕಾಶ ಇಲ್ಲ ಎಂದು ತಿಳಿಸಲಾಗಿದೆ’ ಎಂದು ಸಚಿವರು ತಿಳಿಸಿದರು.

‘ದ್ವಿತೀಯ ಪಿಯುಸಿ ಪರೀಕ್ಷೆಗೆ ತಿಂಗಳು ಮಾತ್ರ ಬಾಕಿ ಇದೆ. ಈ ಮಧ್ಯೆಯೇ ಸುಪ್ರೀಂಕೋರ್ಟ್ ಮೊರೆ ಹೋದರೆ, ಅಲ್ಲಿಯ ತೀರ್ಪು ಬರುವವರೆಗೂ ಹಿಜಾಬ್ ಧರಿಸಲು ಅವಕಾಶ ನೀಡಿ ಎಂದು ಕೆಲವು ಮುಸ್ಲಿಂ ವಿದ್ಯಾರ್ಥಿಗಳು ಬೇಡಿಕೆ ಇಟ್ಟಿದ್ದರು. ಹಿಜಾಬ್ ಧರಿಸಿ ಪರೀಕ್ಷೆ ಬರೆಯಲು ಅವಕಾಶ ನೀಡಿ ಎಂದು ಕೇಳಿದ್ದರು. ಆದರೆ, ಅದಕ್ಕೆ ಅವಕಾಶ ಇಲ್ಲ’ ಎಂದೂ ಅವರು ಸ್ಪಷ್ಟಪಡಿಸಿದರು.

ಪ್ರದರ್ಶನ, ಗಳಿಕೆಯಲ್ಲಿ ‘ಜೇಮ್ಸ್’ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ದಿವಂಗತ ಪುನೀತ್ ರಾಜ್‌ಕುಮಾರ್ ನಟನೆಯ ‘ಜೇಮ್ಸ್’ ಸಿನಿಮಾ ಪ್ರದರ್ಶನ ಹಾಗೂ ಗಳಿಕೆ ವಿಚಾರದಲ್ಲಿ ಚಂದನವನದಲ್ಲಿ ಹೊಸ ದಾಖಲೆ ಬರೆದಿದೆ.

ಶುಕ್ರವಾರವೂ ರಾಜ್ಯದೆಲ್ಲೆಡೆ ‘ಜೇಮ್ಸ್’ ಹಬ್ಬ ಜೋರಾಗಿತ್ತು. ಕರ್ನಾಟಕದಲ್ಲೇ 386 ಏಕಪರದೆ ಚಿತ್ರಮಂದಿರ ಹಾಗೂ ಎಲ್ಲ ಮಲ್ಟಿಪ್ಲೆಕ್ಸ್‌ಗಳು, ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶದಲ್ಲಿ 400–500 ಏಕಪರದೆ ಚಿತ್ರಮಂದಿರಗಳು, ತಮಿಳುನಾಡಿನಲ್ಲಿ 150–180 ಚಿತ್ರಮಂದಿರಗಳು, ಕೇರಳದಲ್ಲಿ 80 ಚಿತ್ರಮಂದಿರಗಳಲ್ಲಿ ಹೀಗೆ ವಿಶ್ವವ್ಯಾಪಿ ಒಟ್ಟು 4 ಸಾವಿರಕ್ಕೂ ಅಧಿಕ ತೆರೆಗಳಲ್ಲಿ ‘ಜೇಮ್ಸ್’ ಪ್ರದರ್ಶನ ನಡೆದಿದೆ. ಬೆಂಗಳೂರಿನ ಕೆಲ ಮಲ್ಟಿಪ್ಲೆಕ್ಸ್‌ಗಳಲ್ಲಿ ಗುರುವಾರ 22 ಪ್ರದರ್ಶನಗಳು ಇದ್ದವು. ಶುಕ್ರವಾರವೂ ಹಲವು ಮಲ್ಟಿಪ್ಲೆಕ್ಸ್‌ಗಳಲ್ಲಿ ಕನಿಷ್ಠ 10–12 ಪ್ರದರ್ಶನಗಳಿದ್ದವು. ರಾಜ್ಯದ ಹಲವು ಏಕಪರದೆ ಚಿತ್ರಮಂದಿರಗಳಲ್ಲಿ ಭಾನುವಾರದವರೆಗೂ ಟಿಕೆಟ್‌ಗಳು ಬಹುತೇಕ ಮಾರಾಟವಾಗಿದೆ.

ಮೊದಲ ದಿನದ ಗಳಿಕೆ, ₹40 ಕೋಟಿಗೆ ಡಿಜಿಟಲ್ ಹಕ್ಕು ಮಾರಾಟ, ಸುಮಾರು ₹10–15 ಕೋಟಿಗೆ ಸ್ಯಾಟಲೈಟ್ ಹಕ್ಕು ಹಾಗೂ ವಾಹಿನಿಗೆ ಸಿನಿಮಾ ಮಾರಾಟ, ಹಿಂದಿ ಡಬ್ಬಿಂಗ್ ಹಕ್ಕು ಸೇರಿ ಈಗಾಗಲೇ ‘ಜೇಮ್ಸ್’ ಗಳಿಕೆ ₹100 ಕೋಟಿ ದಾಟಿದೆ. ಕರ್ನಾಟಕದಲ್ಲೇ ಮೊದಲ ದಿನ ‘ಜೇಮ್ಸ್’ ಸುಮಾರು ₹30–₹35 ಕೋಟಿ ಗಳಿಸಿದೆ ಎನ್ನಲಾಗಿದೆ. ಐದು ಭಾಷೆಗಳಲ್ಲಿ ಬಿಡುಗಡೆಯಾದ ಈ ಸಿನಿಮಾದ ಗಳಿಕೆ ತುಂಬಾ ಜೋರಾಗಿದೆ. ಈ ಕುರಿತು ಚಿತ್ರತಂಡವು ಅಧಿಕೃತವಾಗಿ ಇನ್ನಷ್ಟೇ ಮಾಹಿತಿ ನೀಡಬೇಕಿದೆ. ಈ ಹಿಂದೆ ನಟ ಯಶ್ ನಟನೆಯ ಕೆ.ಜಿ.ಎಫ್ ಪ್ರದರ್ಶನ, ಗಳಿಕೆಯಲ್ಲಿ ದಾಖಲೆ ಹೊಂದಿತ್ತು.

ಹೊಸಪೇಟೆಯಲ್ಲಿ ಸಂಭ್ರಮ: ಚಿತ್ರತಂಡವು ಹೊಸಪೇಟೆಯಲ್ಲಿ ಬಿಡುಗಡೆ ಪೂರ್ವ ಕಾರ್ಯಕ್ರಮ ಆಯೋಜಿಸಲು ಸಿದ್ಧತೆ ನಡೆಸಿತ್ತು. ಆದರೆ ಕೊನೆಯ ಕ್ಷಣದಲ್ಲಿ ಬೆಂಗಳೂರಿನಲ್ಲೇ ಈ ಕಾರ್ಯಕ್ರಮ ಆಯೋಜಿಸಿತ್ತು. ಇದೀಗ 25ನೇ ದಿನದ ಸಂಭ್ರಮವನ್ನು ಹೊಸಪೇಟೆಯಲ್ಲಿ ಅದ್ಧೂರಿಯಾಗಿ ಆಯೋಜಿಸಲು ಚಿತ್ರತಂಡ ನಿರ್ಧರಿಸಿದೆ. ‘ಚಿತ್ರ ಬಿಡುಗಡೆಗೆ ಮೊದಲೇ ಡಿಜಿಟಲ್ ಹಕ್ಕು ಸೋನಿ ಲಿವ್‌ಗೆ ಮಾರಾಟವಾಗಿದೆ. ಈ ಒಟಿಟಿ ವೇದಿಕೆಯಲ್ಲಿ ಬರುತ್ತಿರುವ ಮೊದಲ ಕನ್ನಡ ಸಿನಿಮಾ ‘ಜೇಮ್ಸ್’. ಪ್ರಸ್ತುತ ಆಗಿರುವ ದಾಖಲೆ ಅಪ್ಪು ಅವರಿಗೆ ಜನ ಕೊಡುಗೆ. ಇದು ಅಭಿಮಾನಿಗಳು ಬರೆದ ದಾಖಲೆ’ ಎಂದಿದ್ದಾರೆ ನಿರ್ದೇಶಕ ಚೇತನ್ ಕುಮಾರ್.

ಚಿತ್ರಮಂದಿರಗಳಲ್ಲಿ ‘ಜೇಮ್ಸ್’ ಹಬ್ಬ

ಪುನೀತ್ ಅಭಿಮಾನಿ ಸಾವು

ನಂಜನಗೂಡು: ತಾಲ್ಲೂಕಿನ ಯಡಿಯಾಲ ಗ್ರಾಮದಲ್ಲಿ ಗುರುವಾರ ರಾತ್ರಿ ನಡೆದ ಪುನೀತ್ ರಾಜ್‌ಕುಮಾರ್ ಜನ್ಮದಿನ ಹಾಗೂ ಜೇಮ್ಸ್ ಚಿತ್ರದ ಸಂಭ್ರಮಾಚರಣೆ ವೇಳೆ ಅಭಿಮಾನಿ ಆಕಾಶ್ (22) ಕುಸಿದು ಬಿದ್ದು ಮೃತಪಟ್ಟರು. ಗ್ರಾಮದ ಬಸ್ ನಿಲ್ದಾಣದ ಬಳಿ ನೃತ್ಯ ಮಾಡುತ್ತಿದ್ದ ಆಕಾಶ್ ಅವರಿಗೆ ಎದೆನೋವು ಕಾಣಿಸಿಕೊಂಡಿತ್ತು. ಸರಗೂರು ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಮೃತಪಟ್ಟರು.

ಸಿ.ಎಂ ಸಮರ್ಥನೆ ● 6 ಸಾವಿರ ಎಕರೆ ಪ್ರದೇಶದಲ್ಲಿ ಪಾಳೇಕರ್ ನೈಸರ್ಗಿಕ ಕೃಷಿ ಪದ್ಧತಿ ಜಾರಿ

ಬೇರೆ ರಾಜ್ಯಗಳಿಗಿಂತಲೂ ಆರ್ಥಿಕ ಸ್ಥಿತಿ ಉತ್ತಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ನಂತರ ರಾಜ್ಯದ ಆರ್ಥಿಕ ಸ್ಥಿತಿ ಚೇತರಿಕೆ ಕಾಣುತ್ತಿದ್ದು, ಬೇರೆ ರಾಜ್ಯಗಳಿಗೆ ಹೋಲಿಸಿದರೆ ರಾಜಸ್ವ ಕೊರತೆ ಕಡಿಮೆ ಇದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶುಕ್ರವಾರ ಸಮರ್ಥಿಸಿಕೊಂಡರು.

ವಿಧಾನಪರಿಷತ್ತಿನಲ್ಲಿ ಬಜೆಟ್ ಮೇಲಿನ ಚರ್ಚೆಗೆ ಉತ್ತರಿಸಿದ ಅವರು, ‘2022-23ನೇ ಸಾಲಿನಲ್ಲಿ ರಾಜಸ್ವ ಕೊರತೆ ₹14,699 ಕೋಟಿ ಇದೆ. ಆಂಧ್ರಪ್ರದೇಶದಲ್ಲಿ ₹ 17 ಸಾವಿರ ಕೋಟಿ, ಕೇರಳದಲ್ಲಿ ₹22,968 ಕೋಟಿ, ಮಹಾರಾಷ್ಟ್ರದಲ್ಲಿ ₹24 ಸಾವಿರ ಕೋಟಿ, ರಾಜಸ್ಥಾನದಲ್ಲಿ ₹23ಸಾವಿರ ಕೋಟಿ ರಾಜಸ್ವ ಕೊರತೆ ಇದೆ’ ಎಂದರು.

‘ರಾಜ್ಯದ ಆರ್ಥಿಕ ಇತಿಹಾಸದಲ್ಲಿ ಹಲವು ಬಾರಿ ಸಂಕಷ್ಟ ಎದುರಿಸಿದ್ದರೂ ಬಜೆಟ್ ಗಾತ್ರ ಕುಗ್ಗಿಸಿರಲಿಲ್ಲ. ಈ ಬಾರಿಯೂ ಇದೇ ನೀತಿ ಅನುಸರಿಸಲಾಗಿದೆ. ಸಂಪನ್ಮೂಲಗಳ ಸಂಗ್ರಹಕ್ಕೆ ಹೆಚ್ಚು ಆದ್ಯತೆ ನೀಡಲಾಗಿದೆ. ಕಳೆದ ವರ್ಷ ನವೆಂಬರ್‌ನಿಂದ ಆರ್ಥಿಕತೆ ಸುಧಾರಣೆಯಾಗಿದೆ. ಕೋವಿಡ್ ಮೂರನೇ ಅಲೆಯೂ ಪರಿಣಾಮ ಬೀರಲಿಲ್ಲ. ಮೋಟಾರ್ ವಾಹನ ತೆರಿಗೆ ಹೊರತುಪಡಿಸಿ ಇತರ ತೆರಿಗೆಗಳ ಸಂಗ್ರಹದಲ್ಲಿ ಹೆಚ್ಚಳವಾಗಿದೆ’ ಎಂದು ತಿಳಿಸಿದರು.

‘ಸದ್ಯ ನಿಷ್ಕ್ರಿಯವಾಗಿರುವ ಕರ್ನಾಟಕ ಕೃಷಿ ಉತ್ಪನ್ನಗಳ ಮಾರುಕಟ್ಟೆ ಸಂಸ್ಕರಣೆ ಮತ್ತು ರಫ್ತು ನಿಗಮ (ಕೆಪೆಕ್) ಸಂಸ್ಥೆಯನ್ನು ಕ್ರಿಯಾಶೀಲಗೊಳಿಸಲು ₹50 ಕೋಟಿ ನೀಡಲಾಗುವುದು. ಈ ಸಂಸ್ಥೆ ಮೂಲಕ ಕೃಷಿ ಉತ್ಪನ್ನಗಳನ್ನು ರಫ್ತು ಮಾಡಲು ಅನುಕೂಲವಾಗಲಿದೆ. ಕೃಷಿ ತಜ್ಞ ಸುಭಾಷ್ ಪಾಳೇಕರ್ ಅವರ ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿ ಪದ್ಧತಿಯನ್ನು ಪ್ರಾಯೋಗಿಕವಾಗಿ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳ ಆರು ಸಾವಿರ ಎಕರೆ ಪ್ರದೇಶದಲ್ಲಿ ಕೈಗೊಳ್ಳಲಾಗುವುದು. ಫಲಿತಾಂಶ ಆಧರಿಸಿ ರೈತರಿಗೆ ಉತ್ತೇಜನ ನೀಡಲಾಗುವುದು’ ಎಂದರು.

‘30 ಸಾವಿರ ಸ್ವಸಹಾಯ ಸಂಘಗಳಿಗಾಗಿ ಬ್ಯಾಂಕ್ ಸ್ಥಾಪಿಸಲು ₹500 ಕೋಟಿ ಒದಗಿಸಲಾಗುವುದು. ಇದರಿಂದ ನಾಲ್ಕು ಲಕ್ಷ ಮಹಿಳೆಯರಿಗೆ ಅನುಕೂಲವಾಗಲಿದೆ’ ಎಂದರು.

ಮುಖ್ಯಮಂತ್ರಿ ಉತ್ತರಕ್ಕೆ ಅತೃಪ್ತಿ ವ್ಯಕ್ತಪಡಿಸಿದ ಕಾಂಗ್ರೆಸ್ ಸದಸ್ಯರು, ‘ಇದು ನಿರಾಶಾದಾಯಕ ಬಜೆಟ್. ಜನ ವಿರೋಧಿ’ ಎಂದು ಟೀಕಿಸಿ ವಿರೋಧಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು.

ಕಾಂಗ್ರೆಸ್ ಸದಸ್ಯರ ನಡೆಗೆ ಕಟುವಾಗಿ ಪ್ರತಿಕ್ರಿಯಿಸಿದ ಬೊಮ್ಮಾಯಿ, ‘ವಿರೋಧ ಪಕ್ಷದವರಿಗೆ ಬಜೆಟ್ ತಿರುಳು ಅರ್ಥವಾಗಿಲ್ಲ. ಕಾಂಗ್ರೆಸ್‌ನಿಂದ ಆರ್ಥಿಕತೆಯ ಮತ್ತು ನೈತಿಕತೆಯ ಪಾಠ ಕಲಿಯಬೇಕಾಗಿಲ್ಲ. ಪ್ರಗತಿದಾಯಕ ಬಜೆಟ್ ಇದಾಗಿದ್ದು, ಆರ್ಥಿಕ ಶಿಸ್ತು ತರಲು ಯತ್ನಿಸಲಾಗಿದೆ’ ಎಂದು ಪ್ರತಿಪಾದಿಸಿದರು.



ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಬಸವರಾಜ ಬೊಮ್ಮಾಯಿ ಮಾತನಾಡಿದರು ಪ್ರಜಾವಾಣಿ ಚಿತ್ರ

> **ಹೆಣ್ಣು ಮಕ್ಕಳು ಉಳಿತಾಯಕ್ಕೆ ಆದ್ಯತೆ ನೀಡುತ್ತಾರೆ. ನಮ್ಮ ದೇಶದಲ್ಲಿನ ಸಾಸಿವೆ, ಜೀರಿಗೆ ಡಬ್ಬಿಗಳು ಅಮೆರಿಕದ ಬ್ಯಾಂಕ್‌ಗಳಿಗಿಂತ ಶಕ್ತಿಯುತವಾಗಿವೆ.**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

‘ಆಹಾರ ಸಾಮಗ್ರಿ ಖರೀದಿ: ಟೆಂಡರ್ ಪ್ರಕ್ರಿಯೆ ಬದಲಾವಣೆ’

ಬೆಂಗಳೂರು: ‘ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳಿಗೆ ಆಹಾರ ಸಾಮಗ್ರಿ ಖರೀದಿ ಟೆಂಡರ್ ಪ್ರಕ್ರಿಯೆಯಲ್ಲಿ ಬದಲಾವಣೆ ತರಲಾಗಿದೆ’ ಎಂದು ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಶುಕ್ರವಾರ ಕಾಂಗ್ರೆಸ್ ಸದಸ್ಯರೊಬ್ಬರು ‘ಪ್ರಜಾವಾಣಿ’ ವರದಿಯಲ್ಲಿನ ಅಂಶಗಳನ್ನು ಪ್ರಸ್ತಾಪಿಸಿ ಅತಿ ಕಡಿಮೆ ಬೆಲೆಗೆ ಗೋಡಂಬಿ, ದ್ರಾಕ್ಷಿ ಮುಂತಾದ ಆಹಾರ ಸಾಮಗ್ರಿಗಳನ್ನು ಖರೀದಿಸಿರುವ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ‘ಇಲ್ಲಿಯವರೆಗೆ ಖರೀದಿಯು ವ್ಯವಸ್ಥಿತವಾಗಿರಲಿಲ್ಲ. ಈಗ ಸಂಪೂರ್ಣವಾಗಿ ಪಾರದರ್ಶಕ ವ್ಯವಸ್ಥೆ ಜಾರಿಗೊಳಿಸಲಾಗಿದೆ’ ಎಂದು ತಿಳಿಸಿದರು.

‘ಆಹಾರ ಸಾಮಗ್ರಿಗಳನ್ನು ನಾಲ್ಕು ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಇದರಿಂದ ವಂಚನೆಗೆ ಅವಕಾಶ ಇಲ್ಲದಂತಾಗಿದೆ. ಉದಾಹರಣೆಗೆ, ಮೊದಲ ವಿಭಾಗದಲ್ಲಿ ಅಕ್ಕಿ, ಗೋಧಿ, ಸಕ್ಕರೆ, ಬೇಳೆಕಾಳು ಹಾಗೂ ಎರಡನೇ ವಿಭಾಗದಲ್ಲಿ ಗೋಡಂಬಿ, ದ್ರಾಕ್ಷಿ ಇತ್ಯಾದಿಗಳನ್ನು ವಿಂಗಡಿಸಲಾಗಿದೆ’ ಎಂದರು.

‘ಅಕ್ರಮಗಳಲ್ಲಿ ಭಾಗಿಯಾದವರನ್ನು ರಕ್ಷಿಸುವ ಪ್ರಶ್ನೆಯೇ ಇಲ್ಲ. ಅವ್ಯವಹಾರದಲ್ಲಿ ಶಾಮೀಲಾದ ಆರೋಪದಲ್ಲಿ ತುಮಕೂರಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಡಾ.ಆರ್.ಸುಬ್ರಾನಾಯಕ್ ಮತ್ತು ಮೇಲ್ವಿಚಾರಕ ಎಚ್.ಬಿ.ವಿನೋದ ಕುಮಾರ್ ಅವರನ್ನು ಅಮಾನತುಗೊಳಿಸಲಾಗಿದೆ’ ಎಂದರು.

‘ಈ ಅಧಿಕಾರಿಯು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದರು. ಆದರೆ, ಅದೇ ಹುದ್ದೆಯಲ್ಲಿ ಮತ್ತು ಅದೇ ಜಿಲ್ಲೆಯಲ್ಲಿ ಮುಂದುವರಿಸುವುದಿಲ್ಲ’ ಎಂದರು.

‘ಯಾವುದೇ ಆಸ್ತಿ ಮಾರಾಟ ಇಲ್ಲ’

‘ರಾಜ್ಯದಲ್ಲಿ ಯಾವುದೇ ಆಸ್ತಿ ಮಾರಾಟ ಮಾಡುವ ಪ್ರಶ್ನೆಯೇ ಇಲ್ಲ. ನಷ್ಟದಲ್ಲಿರುವ ಸಾರಿಗೆ ನಿಗಮಗಳು ಮತ್ತು ಎಸ್ಕಾಂಗಳಿಗೆ ಶಕ್ತಿ ತುಂಬಲು ಕ್ರಮಕೈಗೊಳ್ಳಲಾಗುವುದು’ ಎಂದು ಬಸವರಾಜ ಬೊಮ್ಮಾಯಿ ತಿಳಿಸಿದರು.

‘2021–22ರಲ್ಲಿ 352 ಯೋಜನೆಗಳನ್ನು ಘೋಷಿಸಲಾಗಿತ್ತು. ಇವುಗಳಲ್ಲಿ 261 ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. 81 ಯೋಜನೆಗಳು ವಿವಿಧ ಹಂತದಲ್ಲಿವೆ. ನಾಲ್ಕು ಯೋಜನೆಗಳನ್ನು ಮಾತ್ರ ಕೈಬಿಡಲಾಗಿದೆ’ ಎಂದು ತಿಳಿಸಿದರು.

ಮುನಿಸಿಪಲ್ ಕಾರ್ಪೊರೇಷನ್ ವ್ಯಾಪ್ತಿಯ ಜಮೀನು

‘ಸರ್ವೆ ಅಧಿಕಾರ ತಹಶೀಲ್ದಾರ್‌ಗಿದೆ’

ಬೆಂಗಳೂರು: ‘ಕರ್ನಾಟಕ ಭೂ ಕಂದಾಯ ಕಾಯ್ದೆ-1964ರ ಕಲಂ 140 (2)ರ ಅಡಿಯಲ್ಲಿ ಮುನಿಸಿಪಲ್ ಕಾರ್ಪೊರೇಷನ್ ವ್ಯಾಪ್ತಿಯಲ್ಲಿ ವ್ಯಾಜ್ಯದಲ್ಲಿರುವ ಜಮೀನುಗಳ ಸಮೀಕ್ಷೆ ನಡೆಸುವ ಹಾಗೂ ಗಡಿ ಮತ್ತು ಗುರುತಿಸುವ ಅಧಿಕಾರ ತಹಶೀಲ್ದಾರ್‌ಗೆ ಇದೆ’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಈ ಕುರಿತು ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಮೇಲ್ಮನವಿಯನ್ನು, ನ್ಯಾಯಮೂರ್ತಿ ಅಲೋಕ್ ಅರಾಧೆ ಹಾಗೂ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ವಿಭಾಗೀಯ ನ್ಯಾಯಪೀಠ ಪುರಸ್ಕರಿಸಿದೆ.

‘ಸಮೀಕ್ಷೆ ಸಮಯದಲ್ಲಿ ಜಾಗದ ಗಡಿಯ ಸರ್ವೆ ನಂಬರ್ ಅಥವಾ ಉಪವಿಭಾಗದ ಸರ್ವೆ ನಂಬರ್ ಕುರಿತಂತೆ ಏನಾದರೂ ವ್ಯಾಜ್ಯ ಉದ್ಭವಿಸಿದಲ್ಲಿ ಸರ್ವೆ ಅಧಿಕಾರಿಯು ಜಮೀನಿನ ದಾಖಲೆಗಳ ಅನುಸಾರ ವಿಚಾರಣೆ ನಡೆಸಿ ಸೂಕ್ತ ತೀರ್ಮಾನ ಕೈಗೊಳ್ಳುತ್ತಾರೆ. ಹೀಗಾಗಿ, ಭೂ ಕಂದಾಯ ಕಾಯ್ದೆ–1964ರ ಕಲಂ 140 (2)ರ ಅಡಿಯಲ್ಲಿ ತಹಶೀಲ್ದಾರ್ ಅವರು ಜಮೀನಿನ ಸಮೀಕ್ಷೆ ನಡೆಸಿ ಸರ್ವೆ ನಂಬರ್ ಅಥವಾ ಗಡಿಯನ್ನು ನಿರ್ಧರಿಸುವ ಅಧಿಕಾರವನ್ನು ಹೊಂದಿದ್ದಾರೆ’ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

‘ಸರ್ವೆ ಸಂಖ್ಯೆ ಅಥವಾ ಜಮೀನು ಮುನಿಸಿಪಲ್ ಕಾರ್ಪೊರೇಷನ್ ವ್ಯಾಪ್ತಿಯಲ್ಲಿದೆಯೇ ಅಥವಾ ಅದರ ಮಿತಿಯಿಂದ ಹೊರಗಿದೆಯೇ ಎಂಬ ಅಂಶವನ್ನು ಪರಿಗಣಿಸದೆಯೇ ತಹಶೀಲ್ದಾರ್ ತನ್ನ ಅಧಿಕಾರ ಚಲಾಯಿಸಿ ಗಡಿ ಗುರುತಿಸಬಹುದು’ ಎಂದು ನ್ಯಾಯಪೀಠ ಹೇಳಿದೆ.

‘ಭೂ ಕಂದಾಯ ಕಾಯ್ದೆ–1964ರ ಕಲಂ 2 (12) ಮತ್ತು 2 (32)ರಲ್ಲಿ ಬಳಸಲಾದ 'ಹಿಡುವಳಿ' ಮತ್ತು 'ಸರ್ವೆ ನಂಬರ್'ನಂತಹ ಅಭಿವ್ಯಕ್ತಿಗಳನ್ನು ಕಲಂ 140ರ ಜೊತೆಯಲ್ಲಿಯೇ ಪರಿಗಣಿಸಬೇಕು’ ಎಂದು ನ್ಯಾಯಪೀಠ ವಿವರಿಸಿದೆ.

ಎಂಎಸ್‌ಪಿ ಲೋಪ ಸರಿಪಡಿಸಿ: ವೆಂಕಟರಾವ್ ನಾಡಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯೋಜನೆ ಅಡಿಯಲ್ಲಿ ರೈತರಿಂದ ಆಹಾರ ಧಾನ್ಯ ಖರೀದಿಗೆ ಕೇಂದ್ರ ಸರ್ಕಾರ ಮಿತಿ ಹಾಕಿಲ್ಲ. ರಾಜ್ಯ ಸರ್ಕಾರವೇ ಮಿತಿ ವಿಧಿಸಿರುವುದರಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಜೆಡಿಎಸ್‌ನ ವೆಂಕಟರಾವ್ ನಾಡಗೌಡ ಆರೋಪಿಸಿದರು.

ವಿಧಾನಸಭೆಯಲ್ಲಿ ಶುಕ್ರವಾರ ಇಲಾಖಾವಾರು ಬೇಡಿಕೆಗಳ ಕುರಿತ ಚರ್ಚೆಯಲ್ಲಿ ಮಾತನಾಡಿ, ‘ನೆರೆಯ ರಾಜ್ಯಗಳಲ್ಲಿ ನವೆಂಬರ್– ಡಿಸೆಂಬರ್ ತಿಂಗಳಲ್ಲೇ ಎಂಎಸ್‌ಪಿ ಯೋಜನೆಯಡಿ ಖರೀದಿ ಆರಂಭವಾಗುತ್ತದೆ. ಆದರೆ, ನಮ್ಮ ರಾಜ್ಯದಲ್ಲಿ ಜನವರಿ ಬಳಿಕ ಖರೀದಿ ಆರಂಭಿಸಲಾಗುತ್ತಿದೆ. ಇದರಿಂದ ರೈತರು ಕಣದಲ್ಲೇ ತಮ್ಮ ಉತ್ಪನ್ನಗಳನ್ನು ಕಡಿಮೆ ದರಕ್ಕೆ ಮಾರಾಟ ಮಾಡುತ್ತಿದ್ದಾರೆ. ಈ ಲೋಪ ಸರಿಪಡಿಸಬೇಕು’ ಎಂದು ಆಗ್ರಹಿಸಿದರು.

ಕೇಂದ್ರ ಸರ್ಕಾರ ಎಂಎಸ್‌ಪಿ ಅಡಿ ಖರೀದಿಗೆ ಮಿತಿಯನ್ನೇ ಹಾಕಿಲ್ಲ. ಆದರೆ, ರಾಜ್ಯ ಸರ್ಕಾರ ಹಣವಿದ್ದರೂ ಖರೀದಿಸುತ್ತಿಲ್ಲ. ಎಂಎಸ್‌ಪಿ ಯೋಜನೆಯಡಿ ರೈತರ ಉತ್ಪನ್ನಗಳಿಗೆ ಗೌರವಯುತ ದರ ನಿಗದಿ ಮಾಡುತ್ತಿಲ್ಲ ಎಂದರು.

‘ಕೇವಲ ಮಾತಿನಿಂದ ರೈತರ ಆದಾಯ ದ್ವಿಗುಣಗೊಳ್ಳುವುದಿಲ್ಲ. ರೈತರ ಕುಟುಂಬಗಳ ಮತಗಳ ಮೇಲೆ ಕಣ್ಣಿಟ್ಟು ಯೋಜನೆ ಮಾಡಿದರೆ ಕೃಷಿಕರ ಉದ್ಧಾರ ಆಗುವುದಿಲ್ಲ. ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಘೋಷಿಸಿರುವ ಡೀಸೆಲ್ ಸಬ್ಸಿಡಿ ಯೋಜನೆಯೂ ಅಂತಹದ್ದೇ’ ಎಂದು ವಾಗ್ದಾಳಿ ನಡೆಸಿದರು.

ಎಣ್ಣೆ ಕಾಳುಗಳ ಬೆಳೆಯನ್ನು ಸರ್ಕಾರ ಪ್ರೋತ್ಸಾಹಿಸಬೇಕು. ಖಾಸಗಿ ಜಮೀನುಗಳ ಕೆರೆಗಳ ಅಭಿವೃದ್ಧಿಗೆ ಅನುದಾನ ನೀಡಬೇಕು. ಕೋಳಿ ಸಾಕಣೆಯನ್ನೂ ಕೃಷಿ ವ್ಯಾಪ್ತಿಗೆ ತರಬೇಕು. ಅಂತರರಾಷ್ಟ್ರೀಯ ಮಟ್ಟದ ಕುಕ್ಕುಟ ಉದ್ಯಮ ಕಂಪನಿಗಳ ಹಿಡಿತದಿಂದ ರಾಜ್ಯದ ಕೋಳಿ ಸಾಕಣೆದಾರರನ್ನು ಹೊರತರಲು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

‘ನೇಕಾರರಿಗೆ ನೆರವು ನೀಡಿ’: ಬಿಜೆಪಿಯ ಸಿದ್ದು ಸವದಿ ಮಾತನಾಡಿ, ‘ನೇಕಾರರು ಸಂಕಷ್ಟದಲ್ಲಿದ್ದಾರೆ. ಅವರಿಗೆ ಹೆಚ್ಚಿನ ಆರ್ಥಿಕ ನೆರವು ನೀಡಬೇಕು. ನೇಕಾರ ಕುಟುಂಬಗಳು ಪಡೆದಿರುವ ನಗದು ಸಾಲ ₹ 7 ಕೋಟಿ ಇದ್ದು, ಅದನ್ನು ಮನ್ನಾ ಮಾಡಲು ಸರ್ಕಾರ ಹಿಂದೇಟು ಹಾಕುತ್ತಿರುವುದು ಸರಿಯಲ್ಲ’ ಎಂದರು.

ಕೃಷಿ ಕಾಯ್ದೆ: ತಿದ್ದುಪಡಿ ವಾಪಸ್‌ಗೆ ಆಗ್ರಹ

ಜೆಡಿಎಸ್‌ನ ವೆಂಕಟರಾವ್ ನಾಡಗೌಡ ಅವರು ಕನಿಷ್ಠ ಬೆಂಬಲ ಬೆಲೆ ಯೋಜನೆ ಕುರಿತು ಮಾತನಾಡುವಾಗ ಮಧ್ಯ ಪ್ರವೇಶಿಸಿದ ಬಿಜೆಪಿ ಬಿ.ಎಸ್. ಯಡಿಯೂರಪ್ಪ, ‘ನಮ್ಮ ಸರ್ಕಾರ ರೈತರಿಗಾಗಿ ಏನೂ ಮಾಡಿಲ್ಲ ಎಂಬುದು ಸರಿಯಲ್ಲ. ನಾವೂ ಸಾಕಷ್ಟು ಕೆಲಸ ಮಾಡಿದ್ದೇವೆ’ ಎಂದರು.

ಆಗ ಕಾಂಗ್ರೆಸ್‌ನ ಪ್ರಿಯಾಂಕ್ ಖರ್ಗೆ, ‘ಯಡಿಯೂರಪ್ಪ ಅವರ ಮಾತು ಮತ್ತು ಕೃತಿ ಒಂದೇ ತೆರನಾಗಿಲ್ಲ. ಅವರ ಕಾಲದಲ್ಲೇ ಕೃಷಿ ಸಂಬಂಧಿ ಕಾನೂನುಗಳಿಗೆ ಮೂರು ಕರಾಳ ತಿದ್ದುಪಡಿ ತರಲಾಗಿದೆ. ಅದರಿಂದಲೇ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ರೈತರ ಪರ ಇದ್ದರೆ ಆ ಕಾನೂನುಗಳ ತಿದ್ದುಪಡಿ ವಾಪಸ್ ಪಡೆಯಿರಿ’ ಎಂದು ಆಗ್ರಹಿಸಿದರು.

ಅಲೆಮಾರಿ ವಸತಿ ಘಟಕ ವೆಚ್ಚ ಹೆಚ್ಚಳ

ಬೆಂಗಳೂರು: ಅಂಬೇಡ್ಕರ್ ವಸತಿ ಯೋಜನೆಯಡಿ (ಅಲೆಮಾರಿ ವಸತಿ) ಅನುಷ್ಠಾನಗೊಳಿಸುತ್ತಿರುವ ವಸತಿ ಘಟಕ ವೆಚ್ಚವನ್ನು ಹೆಚ್ಚಿಸಿ ಸರ್ಕಾರ ಆದೇಶ ಹೊರಡಿಸಿದೆ.

ಗ್ರಾಮಾಂತರ ಪ್ರದೇಶಕ್ಕೆ ₹1.75 ಲಕ್ಷ ಇದ್ದ ಮೊತ್ತವನ್ನು ₹3.50 ಲಕ್ಷಕ್ಕೆ, ನಗರ ಪ್ರದೇಶಕ್ಕೆ ₹2 ಲಕ್ಷ ಇದ್ದ ಮೊತ್ತವನ್ನು ₹4 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಅಲೆಮಾರಿ ವಸತಿ ಯೋಜನೆಯನ್ನು ತುರ್ತಾಗಿ ಜಾರಿಗೊಳಿಸಲು ಅಂಬೇಡ್ಕರ್ ಅಭಿವೃದ್ಧಿ ನಿಗಮ, ಅಲೆಮಾರಿ ಕೋಶ, ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮಕ್ಕೆ ಸಮಾಜ ಕಲ್ಯಾಣ ಇಲಾಖೆ ಕಾರ್ಯದರ್ಶಿ ಸೂಚಿಸಿದ್ದಾರೆ.

ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅವರು ಮಾ.7ರಂದು ಈ ಸಂಬಂಧ ಟಿಪ್ಪಣಿ ಕಳುಹಿಸಿದ್ದರು.

ಕೆಆರ್‌ಐಡಿಎಲ್‌ನ ₹55 ಕೋಟಿ ವಾಪಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೆಆರ್‌ಐಡಿಎಲ್ ಸಂಸ್ಥೆಯಲ್ಲಿ ದುರುಪಯೋಗಪಡಿಸಿಕೊಂಡಿದ್ದ ₹55 ಕೋಟಿ ಮೊತ್ತವನ್ನು ವಾಪಸ್ ಪಡೆದುಕೊಳ್ಳಲಾಗಿದೆ’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಶುಕ್ರವಾರ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಕೆಆರ್‌ಐಡಿಎಲ್‌ನಲ್ಲಿ 3 ವರ್ಷಗಳಲ್ಲಿ ನಡೆದಿದೆ ಎನ್ನಲಾದ ಹಗರಣಗಳ ಬಗ್ಗೆ ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್ ಅವರ ಪ್ರಶ್ನೆಗೆ ಈ ಬಗ್ಗೆ ವಿವರ ನೀಡಿದ ಅವರು, ‘ಅಕ್ರಮಗಳಲ್ಲಿ ಭಾಗಿಯಾದವರ ವಿರುದ್ಧ ಕಠಿಣ ಕ್ರಮಕೈಗೊಳ್ಳಲಾಗುತ್ತಿದೆ’ ಎಂದರು.

‘ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ಮಂಗಳೂರಿನ ಕುಳಾಯಿ ಶಾಖೆಯಲ್ಲಿ ಈ ಮೊತ್ತವನ್ನು ನಿಶ್ಚಿತ ಠೇವಣಿಯಾಗಿ ಇರಿಸಲಾಗಿತ್ತು. ಬ್ಯಾಂಕ್ ಸಿಬ್ಬಂದಿ ಇತರರೊಂದಿಗೆ ಶಾಮೀಲಾಗಿ ದುರುಪಯೋಗಪಡಿಸಿಕೊಂಡಿದ್ದರು. ಮೊತ್ತವನ್ನು ಸರ್ಕಾರ, ಸಂಸ್ಥೆಯ ಪರಿಶ್ರಮದಿಂದ 2022ರ ಫೆ.28ರಂದು ಹಿಂಪಡೆಯಲು ಸಾಧ್ಯವಾಗಿದೆ’ ಎಂದು ತಿಳಿಸಿದರು.

‘ಇದೇ ರೀತಿ ಆನೇಕಲ್ ವಿಧಾನ ಸಭಾ ಕ್ಷೇತ್ರದಲ್ಲಿ 2018–19ರಿಂದ 2020–21ನೇ ಸಾಲಿನವರೆಗೆ ವಿವಿಧ ಕಾಮಗಾರಿಗಳಲ್ಲಿ ಹಣ ದುರ್ಬಳಕೆ, ಕಳಪೆ ಕಾಮಗಾರಿಗಳ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸಲು 2021ರ ಡಿ.15ರಂದು ಸಮಿತಿ ರಚಿಸಲಾಗಿದೆ. ಈ ಸಮಿತಿಯ ವರದಿಯನ್ನು ನಿರೀಕ್ಷಿಸಲಾಗುತ್ತಿದೆ’ ಎಂದರು.

‘ಬಿಬಿಎಂಪಿ ವ್ಯಾಪ್ತಿಯ ರಾಜರಾಜೇಶ್ವರಿ ನಗರ ಕ್ಷೇತ್ರದಲ್ಲಿನ 114 ಕಾಮಗಾರಿಗಳನ್ನು ಕೈಗೊಳ್ಳದೆಯೇ ₹118.26 ಕೋಟಿ ಅಕ್ರಮ ನಡೆಸಲಾಗಿದೆ ಎನ್ನುವ ಕುರಿತು ಲೋಕಾಯುಕ್ತರು ಫೆ.28ರಂದು ವರದಿ ಸಲ್ಲಿಸಿದ್ದಾರೆ. ಕೆಆರ್‌ಐಡಿಎಲ್ ಸಂಸ್ಥೆ ಜೊತೆಗೆ ಬಿಬಿಎಂಪಿ ಅಧಿಕಾರಿಗಳು ಅಕ್ರಮ ನಡೆಸಿರುವ ಉಲ್ಲೇಖವಿದೆ. ಪೂರ್ಣ ವಿವರ ಪಡೆದು ಸಂಬಂಧಪಟ್ಟ ಅಧಿಕಾರಿ, ಸಿಬ್ಬಂದಿ ವಿರುದ್ಧ ಕ್ರಮವಹಿಸಲಾಗುವುದು’ ಎಂದು ತಿಳಿಸಿದರು.

‘ಸಂಸ್ಥೆಯನ್ನು ಮುಚ್ಚುವುದೇ ಲೇಸು’

‘ಕಮಿಷನ್ ದಂಧೆಯಲ್ಲಿ ತೊಡಗಿರುವ ಕೆಆರ್‌ಐಡಿಎಲ್ ಸಂಸ್ಥೆಯನ್ನು ಮುಚ್ಚುವುದೇ ಲೇಸು’ ಎಂದು ಯು.ಬಿ. ವೆಂಕಟೇಶ್ ಹೇಳಿದರು.

‘ಕಾಮಗಾರಿಗಳನ್ನು ಕೈಗೊಳ್ಳದೆಯೇ ಬಿಲ್ ಪಾವತಿಸಲಾಗುತ್ತಿದೆ. ಈ ಸಂಸ್ಥೆಯ ಅಗತ್ಯವಿದೆಯೇ ಎನ್ನುವುದು ಚರ್ಚೆಯಾಗಬೇಕು’ ಎಂದರು.

ಲುವಿವ್: ಉಕ್ರೇನ್ ಜನಪ್ರಿಯ ನಟಿ ಒಕ್ಸಾನಾ ಶ್ವೆಟ್ಸ್ ಕ್ಷಿಪಣಿಗೆ ಬಲಿ

ಯುದ್ಧವಿಮಾನ ದುರಸ್ತಿ ಘಟಕದ ಮೇಲೆ ಸರಣಿ ದಾಳಿ

ಕೀವ್ (ಪಿಟಿಐ/ಎಪಿ): ಶಾಂತಿ ಮಾತುಕತೆಗಳ ಪ್ರಕ್ರಿಯೆ ಚಾಲ್ತಿಯಲ್ಲಿರುವ ನಡುವೆಯೇ ರಷ್ಯಾ ಮತ್ತು ಉಕ್ರೇನ್ ಸಂಘರ್ಷ ದಿನೇದಿನೇ ತಾರಕ್ಕೇರುತ್ತಿದೆ. ರಷ್ಯಾ ಶುಕ್ರವಾರ ಮುಂಜಾನೆ ನ್ಯಾಟೊ ರಾಷ್ಟ್ರ ಪೋಲೆಂಡ್ ಗಡಿಯ ಉಕ್ರೇನ್‌ನ ಲುವಿವ್ ನಗರದಲ್ಲಿನ ಯುದ್ಧ ವಿಮಾನಗಳ ದುರಸ್ತಿ ಘಟಕದ ಮೇಲೆ ಕ್ಷಿಪಣಿಗಳ ದಾಳಿ ನಡೆಸಿದೆ. ಘಟನೆಯಲ್ಲಿ ಸಂಭವಿಸಿರುವ ಸಾವು–ನೋವಿನ ಅಂದಾಜು ಇನ್ನೂ ಸಿಕ್ಕಿಲ್ಲ.

ಇದೇ ವೇಳೆ ಕೀವ್ ನಗರದ ವಸತಿ ಕಟ್ಟಡದ ಮೇಲೆ ರಷ್ಯಾದ ರಾಕೆಟ್ ಅಪ್ಪಳಿಸಿ, ಉಕ್ರೇನ್‌ನ ಜನಪ್ರಿಯ ನಟಿ ಒಕ್ಸಾನಾ ಶ್ವೆಟ್ಸ್ (67) ಮೃತಪಟ್ಟಿದ್ದಾರೆ. ಇವರು ದೇಶದ ‘ಅತ್ಯುನ್ನತ ಕಲಾವಿದೆ’ ಗೌರವಕ್ಕೆ ಪಾತ್ರರಾಗಿದ್ದರು.

ಲುವಿವ್ ನಗರದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆರು ಕಿ.ಮೀ. ದೂರದಲ್ಲಿರುವ ಯುದ್ಧ ವಿಮಾನಗಳ ದುರಸ್ತಿ ಘಟಕದ ಮೇಲೆ ಕನಿಷ್ಠ 7 ಕ್ಷಿಪಣಿಗಳು ಅಪ್ಪಳಿಸಿವೆ. ಇದರಲ್ಲಿ ಎರಡು ಕ್ಷಿಪಣಿಗಳನ್ನು ಉಕ್ರೇನ್ ಹೊಡೆದುರುಳಿಸಿದೆ. ಘಟಕದ ಸುತ್ತಲಿನ ವಸತಿ ಕಟ್ಟಡಗಳಿಗೂ ಕ್ಷಿಪಣಿ ದಾಳಿಯಿಂದ ಬೆಂಕಿ ಹೊತ್ತಿದ್ದು, ದಟ್ಟ ಹೊಗೆ ಆವರಿಸಿದೆ. ಕಪ್ಪು ಸಮುದ್ರದ ಕಡೆಯಿಂದ ಕ್ಷಿಪಣಿಗಳ ದಾಳಿ ನಡೆದಿದೆ ಎಂದು ಲುವಿವ್ ನಗರದ ಮೇಯರ್ ಆಂಡ್ರಿ ಸಡೋವಿ ತಿಳಿಸಿದ್ದಾರೆ.

ಕ್ಷಿಪಣಿ ದಾಳಿಗೆ ಧ್ವಂಸವಾದ ಮರಿಯುಪೋಲ್‌ನ ರಂಗಮಂದಿರದಿಂದ ಈವರೆಗೆ 130 ಮಂದಿ ರಕ್ಷಿಸಲಾಗಿದೆ. ಮಹಿಳೆಯರು ಮತ್ತು ಮಕ್ಕಳು ಸೇರಿ ಸಾವಿರಕ್ಕೂ ಹೆಚ್ಚು ಮಂದಿ ಇದರಲ್ಲಿ ಆಶ್ರಯ ಪಡೆದಿದ್ದರು. ಈ ರಂಗಮಂದಿರವನ್ನು ಪುನರ್ ನಿರ್ಮಿಸಿಕೊಡುವುದಾಗಿ ಇಟಲಿ ಸರ್ಕಾರ ಘೋಷಿಸಿದೆ.

ಭಾರತ ಕಳವಳ: ಯುದ್ಧಪೀಡಿತ ಉಕ್ರೇನ್‌ನಲ್ಲಿ ಮಾನವೀಯ ಬಿಕ್ಕಟ್ಟಿನ ಪರಿಸ್ಥಿತಿ ಹದಗೆಡುತ್ತಿರುವ ಬಗ್ಗೆ ವಿಶ್ವಸಂಸ್ಥೆಯಲ್ಲಿ ಭಾರತ ಶುಕ್ರವಾರ ಕಳವಳ ವ್ಯಕ್ತಪಡಿಸಿದೆ.

ವಿಶ್ವಸಂಸ್ಥೆಯಲ್ಲಿ ಭಾರತದ ಕಾಯಂ ಪ್ರತಿನಿಧಿ ಟಿ.ಎಸ್.ತಿರುಮೂರ್ತಿ ಭದ್ರತಾ ಮಂಡಳಿ ಸಭೆಯಲ್ಲಿ ಮಾತನಾಡಿ, ‘ಯುದ್ಧದಿಂದಾಗಿ ತೊಂದರೆಯಲ್ಲಿರುವ ಜನರ ಅಗತ್ಯ ಪೂರೈಸಲು ತುರ್ತು ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದರು.

ಉಕ್ರೇನ್‌ನಲ್ಲಿ ಇನ್ನೂ 50 ಭಾರತೀಯರು ಇದ್ದಾರೆ. ಈ ಪೈಕಿ 15ರಿಂದ 20 ಮಂದಿ ತವರಿಗೆ ಮರಳಲು ಬಯಸಿದ್ದಾರೆ. ಅವರನ್ನು ಶೀಘ್ರವೇ ಕರೆತರಲಾಗುವುದು ಎಂದು ವಿದೇಶಾಂಗ ಸಚಿವಾಲಯ ಹೇಳಿದೆ.

ಜನಾಂಗೀಯ ದ್ವೇಷ ಸಹಿಸಲ್ಲ: ಉಕ್ರೇನ್ ರಾಜಕಾರಣಿಗಳು ಜನಾಂಗೀಯ ದ್ವೇಷ ಸಾಧಿಸುತ್ತಿದ್ದು, ರಷ್ಯನ್ನರನ್ನು ದೇಶದಿಂದ ಹೊರಹಾಕಲು ಪ್ರಚೋದಿಸುತ್ತಿದ್ದಾರೆ. ಉಕ್ರೇನ್‌ನನ್ನು ನಾಜಿಮುಕ್ತಗೊಳಿಸುವುದು ಮತ್ತು ರಷ್ಯಾ ಭಾಷಿಗರ ವಿರುದ್ಧ ತಾರತಮ್ಯದ ಕಾನೂನುಗಳನ್ನು ರದ್ದುಗೊಳಿಸಲು ರಷ್ಯಾ ಆಗ್ರಹಿಸುತ್ತದೆ ಎಂದು ವಿದೇಶಾಂಗ ಸಚಿವ ಸೆರ್ಗೈ ಲಾವ್ರೊವ್ ಹೇಳಿದ್ದಾರೆ.

‘ರಷ್ಯಾ ವಿರುದ್ಧ ಧ್ವನಿ ಎತ್ತಿ’

ವಾಷಿಂಗ್ಟನ್ (ಪಿಟಿಐ): ಉಕ್ರೇನ್ ಮೇಲೆ ದಾಳಿ ನಡೆಸುತ್ತಿರುವ ರಷ್ಯಾ ವಿರುದ್ಧ ಭಾರತ ಧ್ವನಿ ಎತ್ತಬೇಕು ಎಂದು ಅಮೆರಿಕದ ವಿವಿಧ ಪಕ್ಷಗಳ ಜನಪ್ರತಿನಿಧಿಗಳು ಆಗ್ರಹಿಸಿದ್ದಾರೆ.

ಸಂಸದ ಜೋ ವಿಲ್ಸನ್ ಮತ್ತು ಇಂಡೋ–ಅಮೆರಿಕನ್ ಸಂಸದ ರೋ ಖನ್ನಾ ಅಮೆರಿಕದಲ್ಲಿನ ಭಾರತ ರಾಯಭಾರಿ ತರಣ್‌ಜಿತ್ ಸಿಂಗ್ ಸಂಧು ಅವರೊಂದಿಗೆ ಈ ಬಗ್ಗೆ ಚರ್ಚೆ ನಡೆಸಿದರು.

‘ಪುಟಿನ್ ಉಕ್ರೇನ್ ನಾಗರಿಕರನ್ನೇ ಗುರಿಯಾಗಿಸಿ ದಾಳಿ ನಡೆಸುತ್ತಿರುವುದರ ವಿರುದ್ಧ ಭಾರತ ಧ್ವನಿ ಎತ್ತಬೇಕು. ಉಭಯ ರಾಷ್ಟ್ರಗಳೊಂದಿಗೆ ಸ್ನೇಹ ಸಂಬಂಧ ಹೊಂದಿರುವ ಭಾರತ ಶಾಂತಿ ಸ್ಥಾಪನೆಗೆ ತನ್ನ ಪ್ರಭಾವ ಬಳಸಬೇಕು’ ಎಂದು ಖನ್ನಾ ಆಗ್ರಹಿಸಿದರು.

ಉಕ್ರೇನ್‌ನ ಕೀವ್ ನಗರದ ಐದು ಅಂತಸ್ತಿನ ವಸತಿ ಕಟ್ಟಡ ರಷ್ಯಾ ಪಡೆಗಳು ನಡೆಸಿದ ಶೆಲ್ ದಾಳಿಗೆ ಛಿದ್ರಗೊಂಡಿದೆ. ಪೊಲೀಸರು ಶುಕ್ರವಾರ ರಕ್ಷಣಾ ಕಾರ್ಯಾಚರಣೆ ನಡೆಸಿದರು – ಎಎಫ್‌ಪಿ ಚಿತ್ರ

‘ಪರಿಹಾರ ಹುಡುಕಲು ರಷ್ಯಾ ಸಿದ್ಧ’

ಮಾಸ್ಕೊ: ‘ಉಕ್ರೇನ್ ಮಾತುಕತೆಯನ್ನು ಅನಗತ್ಯವಾಗಿ ಲಂಬಿಸಲು ಪ್ರಯತ್ನಿಸುತ್ತಿದೆ’ ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಆರೋಪಿಸಿದ್ದಾರೆ.

ಜರ್ಮನಿಯ ಛಾನ್ಸಲರ್ ಒಲಾಫ್ ಸ್ಕೋಲ್ಜ್ ಅವರೊಂದಿಗೆ ಶುಕ್ರವಾರ ದೂರವಾಣಿಯಲ್ಲಿ ಮಾತನಾಡಿದ ಪುಟಿನ್, ಉಕ್ರೇನ್ ಅವಾಸ್ತವಿಕ ಪ್ರಸ್ತಾವಗಳನ್ನು ಹೆಚ್ಚೆಚ್ಚು ಮುಂದಿಡುತ್ತಿದೆ. ಆದರೆ ರಷ್ಯಾ, ಪರಿಹಾರ ಹುಡುಕಲು ಸಿದ್ಧವಿದೆ ಎಂದು ತಿಳಿಸಿರುವುದಾಗಿ ರಷ್ಯಾದ ‘ಟಾಸ್’ ಸುದ್ದಿ ಸಂಸ್ಥೆ ತಿಳಿಸಿದೆ.

ಪುಟಿನ್ ಬೇಸರ: ‘ಅವರು ಹೆಗಲಿಗೆ ಹೆಗಲು ಕೊಟ್ಟು, ಪರಸ್ಪರನ್ನು ಬೆಂಬಲಿಸುತ್ತಿದ್ದಾರೆ. ಅವಶ್ಯಕತೆ ಬಿದ್ದಾಗ ಒಬ್ಬರನ್ನು ರಕ್ಷಿಸಲು ಇನ್ನೊಬ್ಬರು ಯುದ್ಧಭೂಮಿಯಲ್ಲಿ ಗುಂಡಿಗೆ ಎದೆಕೊಡುತ್ತಿದ್ದಾರೆ. ಆದರೆ, ಬಹುಕಾಲದಿಂದ ನಮ್ಮಲ್ಲಿ ಇಂತಹ ಒಗ್ಗಟ್ಟು ಕಾಣಿಸುತ್ತಿಲ್ಲ’ ಎಂದು ಪುಟಿನ್ ಉಕ್ರೇನಿಗರ ಹೆಸರನ್ನು ಉಲ್ಲೇಖಿಸದೆ, ತಮ್ಮ ಟೀಕಾಕಾರರ ವಿರುದ್ಧ ಹರಿಹಾಯ್ದರು.

ಕ್ರಿಮಿಯಾ ಮತ್ತು ಸೆವೆಸ್ಟೊಪೋಲ್ ಅನ್ನು ನಿಯಂತ್ರಣಕ್ಕೆ ತೆಗೆದುಕೊಂಡ 8ನೇ ವಾರ್ಷಿಕೋತ್ಸವದಲ್ಲಿ ಅವರು ಮಾತನಾಡಿದರು. ‘ಯಾರೇ ಆಗಲಿ ತಮ್ಮ ಮಿತ್ರನೊಬ್ಬನಿಗೆ ಆತ್ಮಾರ್ಪಣೆ ಮಾಡುವುದಕ್ಕಿಂತಲೂ ದೊಡ್ಡ ಪ್ರೀತಿ ಮತ್ತೊಂದಿಲ್ಲ’ ಎಂದು ಧರ್ಮಗ್ರಂಥದ ಸಾಲನ್ನು ಉಲ್ಲೇಖಿಸಿದರು.

23ನೇ ದಿನದ ಬೆಳವಣಿಗೆಗಳು

- ಯುದ್ಧಪೀಡಿತ ನಗರಗಳಿಂದ ನಾಗರಿಕರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲು ಶುಕ್ರವಾರದಿಂದಲೇ ಮರಿಯುಪೋಲ್, ಸುಮಿ, ಹಾರ್ಕಿವ್, ಕೊನೊಟೊಪ್ ಸೇರಿದಂತೆ 9 ಕಡೆ ಮಾನವೀಯ ಕಾರಿಡಾರ್‌ಗಳನ್ನು ತೆರೆಯಲು ರಷ್ಯಾ ಮತ್ತು ಉಕ್ರೇನ್ ಸಮ್ಮತಿಸಿದವು
- ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಉಕ್ರೇನ್‌ನಲ್ಲಿನ ಮಾನವೀಯ ಬಿಕ್ಕಟ್ಟಿನ ನಿರ್ಣಯದ ಮತದಾನವನ್ನು ರಷ್ಯಾ ಮಿತ್ರರಾಷ್ಟ್ರಗಳಾದ ಭಾರತ ಮತ್ತು ಚೀನಾದ ಬೆಂಬಲ ಸಿಗದೇ ಕೈಬಿಟ್ಟಿತು
- ರಷ್ಯಾವು ಯುರೋಪಿನಾದ್ಯಂತ ‘ಶೀತಲ ಸಮರದ ಹೊಸ ಗೋಡೆ’ ನಿರ್ಮಿಸುತ್ತಿದೆ–ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಆಕ್ರೋಶ
- ಪಕ್ಷಪಾತದ ಸುದ್ದಿ ಪ್ರಸಾರಕ್ಕಾಗಿ ರಷ್ಯಾದ ಸರ್ಕಾರಿ ಸ್ವಾಮ್ಯದ ‘ಆರ್‌ಟಿ’ ವಾಹಿನಿಯ ಪರವಾನಗಿಯನ್ನು ಬ್ರಿಟನ್ ಸಂವಹನಗಳ ನಿಯಂತ್ರಕ ರದ್ದುಪಡಿಸಿದೆ. ಈ ಹಿಂದೆ ನಿಯಮ ಉಲ್ಲಂಘಿಸಿದ್ದಕ್ಕಾಗಿ ‘ಆರ್‌ಟಿ’ಗೆ 2 ಲಕ್ಷ ಪೌಂಡ್ ದಂಡ ಕೂಡ ವಿಧಿಸಿದೆ
- ರಷ್ಯಾದ ಮೇಲೆ ಯುರೋಪ್ ಒಕ್ಕೂಟದ ನಿರ್ಬಂಧಗಳ 5ನೇ ಪ್ಯಾಕೇಜ್ ಹೇರುವ ಬಗ್ಗೆ ಯುರೋಪ್ ವಿದೇಶಾಂಗ ವ್ಯವಹಾರಗಳು ಮತ್ತು ಭದ್ರತಾ ನೀತಿಯ ಉನ್ನತ ಪ್ರತಿನಿಧಿ ಜೋಸೆಫ್ ಬೊರೆಲ್ ಫಾಂಟೆಲ್ಸ್ ಜತೆಗೆ ಉಕ್ರೇನ್ ವಿದೇಶಾಂಗ ಸಚಿವ ಡಿಮಿಟ್ರೊ ಕುಲೆಬಾ ಚರ್ಚೆ ನಡೆಸಿದರು
- ರಷ್ಯಾ ಎಸಗುತ್ತಿರುವ ಯುದ್ಧಾಪರಾಧಗಳ ಮೌಲ್ಯಮಾಪನ ಮತ್ತು ಸೂಕ್ತ ದಾಖಲೆಗಳ ಕಲೆಹಾಕುವುದರಲ್ಲಿ ಅಮೆರಿಕದ ಅಧಿಕಾರಿಗಳು ನಿರತರಾಗಿದ್ದಾರೆ – ವಿದೇಶಾಂಗ ಕಾರ್ಯದರ್ಶಿ ಆಂಟೋನಿ ಬ್ಲಿಂಕೆನ್
- ‘ದುಷ್ಟ ಮತ್ತು ದೇಶದ್ರೋಹಿ’ಗಳ ನಿರ್ಮೂಲನೆಯೊಂದಿಗೆ ರಷ್ಯಾ ಶುದ್ಧೀಕರಣ ಮಾಡುವುದಾಗಿ ಪುಟಿನ್ ಹೇಳಿದ ಬೆನ್ನಲ್ಲೇ ರಷ್ಯಾ ಸೇನೆಯ ಅತ್ಯುನ್ನತ ಕಮಾಂಡರ್ ಒಬ್ಬರನ್ನು ದೇಶದ್ರೋಹಕ್ಕಾಗಿ ಬಂಧಿಸಲಾಗಿದೆ
- ರಷ್ಯಾವು ಉಕ್ರೇನ್‌ನ 43 ಆಸ್ಪತ್ರೆಗಳ ಮೇಲೆ ದಾಳಿ ನಡೆಸಿದೆ. ಇದರಲ್ಲಿ 12 ಜನ ಮೃತಪಟ್ಟಿದ್ದು, 34 ಮಂದಿಗೆ ಗಾಯಗಳಾಗಿವೆ– ವಿಶ್ವ ಆರೋಗ್ಯ ಸಂಸ್ಥೆ
- ನಾಗರಿಕರನ್ನೇ ಗುರಿಯಾಗಿಸಿಕೊಂಡು ಆಸ್ಪತ್ರೆಗಳು, ಶಾಲೆಗಳು ಮತ್ತು ಜನವಸತಿಗಳ ಮೇಲೆ ನಿರಂತರ ವಾಯು ದಾಳಿ ನಡೆಸುತ್ತಿರುವ ರಷ್ಯಾದ ವಿರುದ್ಧ ತನಿಖೆಗೆ ವಿಶ್ವದ ಪ್ರಮುಖ ರಾಷ್ಟ್ರಗಳ ನಾಯಕರ ಒತ್ತಾಯ
- ಅತ್ಯಾಧುನಿಕ ಕೆಎ–52 ಹೆಲಿಕಾಪ್ಟರ್ ನಿಖರ ದಾಳಿ ನಡೆಸುತ್ತಿರುವ ಮತ್ತು ಉಕ್ರೇನ್‌ನ ಸೇನಾ ವಾಯು ನೆಲೆಯ ಮೇಲೆ ಇಳಿಯುತ್ತಿರುವ ವಿಡಿಯೊ ತುಣುಕನ್ನು ರಷ್ಯಾ ರಕ್ಷಣಾ ಸಚಿವಾಲಯ ಬಿಡುಗಡೆ ಮಾಡಿದೆ
- ಚೆರ್ನಿವ್ ನಗರದಲ್ಲಿ ಆಹಾರ ಪಡೆಯಲು ಸರದಿಯಲ್ಲಿ ನಿಂತಿದ್ದ ನಾಗರಿಕರ ಮೇಲೆ ನಡೆದ ಶೆಲ್ ದಾಳಿಯಲ್ಲಿ 10 ಮಂದಿ ಮೃತಪಟ್ಟಿದ್ದಾರೆ. ಮೃತಪಟ್ಟವರಲ್ಲಿ ಅಮೆರಿಕದ ಪ್ರಜೆಯೊಬ್ಬರು ಸೇರಿದ್ದಾರೆ
- ಟರ್ಕಿಯ ಡ್ರೋನ್‌ಗಳು ಉಕ್ರೇನ್‌ನ ರಕ್ಷಣಾ ಸಾಮರ್ಥ್ಯವನ್ನು ಹೆಚ್ಚಿಸಿವೆ
- ಮರಿಯುಪೋಲ್ ನಗರ ರಷ್ಯಾ ಸೇನೆಯ ದಾಳಿಯಿಂದ ಶೇ 90ರಷ್ಟು ಸರ್ವನಾಶವಾಗಿದೆ- ನಗರದ ಮೇಯರ್
- ಉಕ್ರೇನ್‌ನಲ್ಲಿ ರಷ್ಯಾದ ‘ಅಧಿಕಾರದ ವಿಕೃತ ದುರುಪಯೋಗ’ ನಡೆಯುತ್ತಿದೆ. ದಾಳಿಗೀಡಾಗಿರುವ ಉಕ್ರೇನಿಗರಿಗೆ ತಮ್ಮ ಅಸ್ತಿತ್ವ, ಇತಿಹಾಸ ಹಾಗೂ ಸಂಪ್ರದಾಯ ಹಾಗೂ ನೆಲ ರಕ್ಷಿಸಿಕೊಳ್ಳಲು ನೆರವಾಗುವಂತೆ ಪೋಪ್ ಫ್ರಾನ್ಸಿಸ್ ಕರೆ ನೀಡಿದ್ದಾರೆ

ರಷ್ಯಾಕ್ಕೆ ನೆರವು ನೀಡದಿರಿ: ಎಚ್ಚರಿಕೆ

ವಾಷಿಂಗ್ಟನ್, ಬೀಜಿಂಗ್ (ಪಿಟಿಐ/ಎಪಿ): ರಷ್ಯಾಕ್ಕೆ ಆರ್ಥಿಕ ಹಾಗೂ ಸೇನಾ ನೆರವು ನೀಡಬಾರದು ಎಂದು ಅಮೆರಿಕ ಶುಕ್ರವಾರ ಚೀನಾಕ್ಕೆ ಎಚ್ಚರಿಕೆ ನೀಡಿದೆ.

ರಷ್ಯಾ ಮತ್ತು ಉಕ್ರೇನ್ ಸಂಘರ್ಷದ ಬಗ್ಗೆ ಅಮೆರಿಕ ಅಧ್ಯಕ್ಷ ಜೋ ಬೈಡನ್ ಮತ್ತು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರ ನಡುವೆ ವಿಡಿಯೊ ಕರೆಯ ಮಾತುಕತೆಗೂ ಮೊದಲು, ಶ್ವೇತಭವನ ಚೀನಾಕ್ಕೆ ಈ ಎಚ್ಚರಿಕೆ ನೀಡಿತು.

ವಿಡಿಯೊ ಕರೆಯ ಮಾತುಕತೆಯಲ್ಲಿ ಬೈಡನ್ ಅವರು ಉಕ್ರೇನ್ ಮೇಲಿನ ಆಕ್ರಮಣ ಉತ್ತೇಜಿಸಲು ಚೀನಾ, ರಷ್ಯಾಗೆ ನೆರವು ನೀಡಿದರೆ ತೀವ್ರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಜಿನ್‌ಪಿಂಗ್ ಅವರಿಗೆ ನೇರ ಎಚ್ಚರಿಕೆ ನೀಡಿದರು. ರಷ್ಯಾದ ಆಕ್ರಮಣ ಖಂಡಿಸುವ ನಿರ್ಣಯ ಬೆಂಬಲಿಸದಿರುವ ಬಗ್ಗೆಯೂ ಜಿನ್‌ಪಿಂಗ್ ಅವರನ್ನು ಬೈಡನ್ ಪ್ರಶ್ನಿಸಿದರು ಎಂದು ಶ್ವೇತಭವನದ ಮಾಧ್ಯಮ ಕಾರ್ಯದರ್ಶಿ ಜೆನ್ ಸಾಕಿ ಹೇಳಿದರು.

‘ಉಕ್ರೇನ್‌ಗೆ ಶಸ್ತ್ರಾಸ್ತ್ರಗಳನ್ನು ರವಾನಿಸುವ ಮೂಲಕ ರಷ್ಯಾವನ್ನು ಅಮೆರಿಕ ಪ್ರಚೋದಿಸುತ್ತಿದೆ. ಸಂಘರ್ಷವನ್ನೂ ಹೆಚ್ಚಿಸುತ್ತಿದೆ’ ಎಂದು ಚೀನಾ ಮತ್ತೊಮ್ಮೆ ಆರೋಪಿಸಿತು. ಬಿಕ್ಕಟ್ಟಿನ ಇತ್ಯರ್ಥಕ್ಕೆ ಮಾತುಕತೆ ಮತ್ತು ಮಾನವೀಯ ನೆಲೆಯಲ್ಲಿ ನೀಡುವ ನೆರವು ಮಾತ್ರ ಪರಿಹಾರ ಎಂದು ಪ್ರತಿಪಾದಿಸಿತು.

ವಿಶ್ವದ ಶಾಂತಿ ಮತ್ತು ಸೌಹಾರ್ದ ಕಾಪಾಡಲು ಚೀನಾ ಮತ್ತು ಅಮೆರಿಕದ ಜಂಟಿ ಸಹಕಾರ ಅಗತ್ಯ ಎಂದು ಜಿನ್‌ಪಿಂಗ್ ಅವರು ಬೈಡನ್‌ಗೆ ತಿಳಿಸಿದರು.

ಆರೋಪ ನಿರಾಕರಿಸಿದ ಚೀನಾ: ರಷ್ಯಾಕ್ಕೆ ಸೇನಾ ನೆರವು ನೀಡಿದೆ ಎಂಬ ಮಾಧ್ಯಮ ವರದಿಗಳನ್ನು ಚೀನಾ ಸರ್ಕಾರ ಅಲ್ಲಗೆಳೆದಿದೆ. ರಷ್ಯಾದ ಗಡಿಯಲ್ಲಿ ಚೀನಾದ ಸೇನಾ ಪಡೆಗಳು ಬೀಡುಬಿಟ್ಟಂತೆ ತೋರಿಸಿರುವ ಚಿತ್ರ ನಕಲಿ ಎಂದು ಅದು ಸ್ಪಷ್ಟನೆ ನೀಡಿದೆ.

ಶನಿವಾರ, ಮಾರ್ಚ್ 19, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 78 | ಪುಟ 22
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಮಾರ್ಚ್ 22ರ ವಿಶ್ವ ಜಲ ದಿನದ ನೆಪದಲ್ಲಿ ಕೆಲ ಗೃಹಿಣಿಯರು ಅನುಸರಿಸುತ್ತಿರುವ ನೀರಿನ ಮಿತಬಳಕೆ ವಿಧಾನಗಳನ್ನು ತಿಳಿಯೋಣ ಬನ್ನಿ

ಹಿಜಾಬ್: ಪರೀಕ್ಷೆ ಬಹಿಷ್ಕರಿಸಿದ ವಿದ್ಯಾರ್ಥಿಗಳು 4
ಸೋನಿಯಾ ಜತೆಗೆ ಗುಲಾಂ ನಬಿ ಆಜಾದ್ ಭೇಟಿ 10
ಚರ್ಚೆ: 'ದಿ ಕಾಶ್ಮೀರ್ ಫೈಲ್ಸ್' ಸಿನಿಮಾಕ್ಕೆ ಸರ್ಕಾರ ಉತ್ತೇಜನ, ಪ್ರೋತ್ಸಾಹ ನೀಡುವುದು ಸರಿಯೇ? 9
ಮೇಕೆದಾಟು ಯೋಜನೆ: ಸಿಎಂ ಭರವಸೆ- ಡಿಕೆಶಿ 3D
ಜಿ-23 ಮುಖಂಡರ ಜತೆ ಸಂಧಾನ? 10

15 ದಿನದ ಉಚಿತ ರದ್ದತಿಯೊಂದಿಗೆ ಆರೋಗ್ಯ ವಿಮೆ!
ತೆರಿಗೆ ಪ್ರಯೋಜನಗಳು^
ಮೆಡಿಕಲ್ ಟೆಸ್ಟ್ ಇಲ್ಲ
15 ದಿನಗಳೊಳಗೆ* ರದ್ದು ಮಾಡಬಹುದು

ಟೆನ್ಷನ್ ಇಲ್ಲದೆ ಇನ್ಶೂರೆನ್ಸ್ ಪಡೆಯಿರಿ
PhonePe
PhonePe ಇನ್ಶೂರೆನ್ಸ್ ಬ್ರೋಕಿಂಗ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ IRDAI ನೋಂ. 766 ಡೈರೆಕ್ಟ್ ಬ್ರೋಕರ್ – ಲೈಫ್ ಮತ್ತು ಜನರಲ್ – ಆಗಸ್ಟ್ 10, 2024ರ ವರೆಗೆ ಮಾನ್ಯ. CIN - U66000KA2020FTC132814. ನೋಂದಾಯಿತ ಕಚೇರಿ – ಕಚೇರಿ-2, ಮಹಡಿ 4,5,6,7, ವಿಂಗ್ A, ಬ್ಲಾಕ್ A, ಸಲಾರ್ಪುರಿಯಾ ಸಾಫ್ಟ್ ಜೋನ್, ಸರ್ವೀಸ್ ರೋಡ್, ಗ್ರೀನ್ ಗ್ಲೆನ್ ಲೇಔಟ್, ಬೆಳ್ಳಂದೂರು, ಬೆಂಗಳೂರು, ಕರ್ನಾಟಕ – 560103. ಮಾರಾಟವನ್ನು ಮುಕ್ತಾಯ ಮಾಡುವುದಕ್ಕಿಂತ ಮೊದಲು ಸಂಬಂಧಿಸಿದ ವಿಮೆದಾರರ ಮಾರಾಟ ಕೈಪಿಡಿಯನ್ನು ದಯವಿಟ್ಟು ಗಮನವಿಟ್ಟು ಓದಿ. PhonePe ಟ್ರೇಡ್ ಲೋಗೋದ ಮಾಲೀಕತ್ವವನ್ನು PhonePe ಪ್ರೈವೇಟ್ ಲಿಮಿಟೆಡ್ ಹೊಂದಿದೆ ಮತ್ತು ಬಳಕೆದಾರರ ಲೈಸೆನ್ಸ್ ಕರಾರು ಅಡಿಯಲ್ಲಿ PhonePe ಇನ್ಶೂರೆನ್ಸ್ ಬ್ರೋಕಿಂಗ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಬಳಸಿದೆ. ಜಾಹೀರಾತು ಕೋಡ್: PM/377. *ಫ್ರೀ ಲುಕ್ ರದ್ದತಿಯ ಸಂದರ್ಭದಲ್ಲಿ ಮಾತ್ರ. ಕ್ಲೇಮ್ ಇಲ್ಲದಿರುವಿಕೆ ಮತ್ತು ಸ್ಟಾಂಪ್ ಡ್ಯೂಟಿ ಕಡಿತಗೊಳಿಸುವಿಕೆ, ವೈದ್ಯಕೀಯ ತಪಾಸಣೆ ವೆಚ್ಚಗಳು ಮತ್ತು ಕವರ್‌ನಲ್ಲಿನ ಅವಧಿಗೆ ಅನುಪಾತ ಆಧರಿತ ರಿಸ್ಕ್ ಪ್ರೀಮಿಯಂಗೆ ಒಳಪಟ್ಟಿರುತ್ತದೆ. ^ತೆರಿಗೆ ಪ್ರಯೋಜನಗಳು ತೆರಿಗೆ ಕಾನೂನುಗಳ ಬದಲಾವಣೆಗೆ ಒಳಪಟ್ಟಿದೆ. PhonePe ಬಳಕೆದಾರರಿಗೆ ಮಾತ್ರ ಗ್ರೂಪ್ ವಿಮೆ. PhonePe ಆಪ್ನ ಸದಸ್ಯರಾಗಲು ಅಥವಾ ನಿರ್ದಿಷ್ಟ ವಿಮೆ ಪಾಲಿಸಿಯನ್ನು ಖರೀದಿಸಲು ಇದು ಕೊಡುಗೆ ಅಥವಾ ಆಹ್ವಾನ ಅಥವಾ ಶಿಫಾರಸು ಅಲ್ಲ.

ಪ್ರಾಥಮಿಕ ಶಾಲೆಗಳ 15 ಸಾವಿರ ಶಿಕ್ಷಕರ ನೇಮಕಾತಿಗೆ ಚಾಲನೆ: ಸಚಿವ ಬಿ.ಸಿ.ನಾಗೇಶ್

ಶಿಕ್ಷಕರ ನೇಮಕ: ಮೇ 21–22ಕ್ಕೆ ಸಿಇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾಥಮಿಕ ಶಾಲೆಗಳಲ್ಲಿನ ಪದವೀಧರ ಶಿಕ್ಷಕರ (6ರಿಂದ 8ರವರೆಗಿನ ತರಗತಿ) 15 ಸಾವಿರ ಹುದ್ದೆಗಳಿಗೆ ನೇಮಕಾತಿಗೆ ಸಾರ್ವಜನಿಕ ಶಿಕ್ಷಣ ಇಲಾಖೆ ಇದೇ 21ರಂದು ಅಧಿಸೂಚನೆ ಹೊರಡಿಸಲಿದ್ದು, ಸ್ಪರ್ಧಾತ್ಮಕ ಪರೀಕ್ಷೆಯು (ಸಿಇಟಿ) ಮೇ 21 ಮತ್ತು 22ರಂದು ನಡೆಯಲಿದೆ.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್, 'ಈ ನೇಮಕಾತಿಯಲ್ಲಿ ಕಲ್ಯಾಣ ಕರ್ನಾಟಕ ಭಾಗಕ್ಕೆ 5 ಸಾವಿರ ಹುದ್ದೆಗಳು ಮೀಸಲಾಗಿರುತ್ತವೆ. ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಇದೇ 23ರಿಂದ ಏಪ್ರಿಲ್ 22ರವರೆಗೆ ಅವಕಾಶವಿದೆ' ಎಂದು ತಿಳಿಸಿದರು.

'ಆಂಗ್ಲಭಾಷೆ, ಗಣಿತ, ವಿಜ್ಞಾನ ಮತ್ತು ಜೀವ ವಿಜ್ಞಾನ (ಮಕ್ಕಳ ಮತ್ತು ಶಿಕ್ಷಕರ ಅನುಪಾತಕ್ಕೆ ಅನುಗುಣವಾಗಿ ಎರಡನೇ ಹುದ್ದೆ) ಮತ್ತು ಸಮಾಜ ಪಠ್ಯವಿಷಯದ ಶಿಕ್ಷಕರ ಹುದ್ದೆಗಳಿಗೆ ಈ ನೇಮಕಾತಿ ನಡೆಯಲಿದೆ' ಎಂದೂ ಅವರು ಹೇಳಿದರು.

'ರಾಜ್ಯದಲ್ಲಿ 1ರಿಂದ 8ನೇ ತರಗತಿ ವರೆಗಿನ ಶಿಕ್ಷಕರ ಹುದ್ದೆಗಳಲ್ಲಿ 30 ಸಾವಿರ ಹುದ್ದೆಗಳು ಖಾಲಿ ಇವೆ. 6ನೇ ತರಗತಿಯಿಂದ 8ನೇ ತರಗತಿವರೆಗಿನ ಹಂತದಲ್ಲೇ ಸಾಕಷ್ಟು ಶಿಕ್ಷಕರ ಕೊರತೆ ಇದೆ' ಎಂದು ಸಚಿವರು ಹೇಳಿದರು.

ಪರೀಕ್ಷಾ ವಿಧಾನ ಹೇಗೆ?

- ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಮೂರು ಪತ್ರಿಕೆಗಳಿವೆ. ಅವುಗಳಲ್ಲಿ ಪತ್ರಿಕೆ-1 (ಬಹು ಆಯ್ಕೆ ಮಾದರಿ) 150 ಅಂಕಗಳಿಗೆ ಮೀಸಲಾಗಿರುತ್ತದೆ. ಇದು ಗರಿಷ್ಠ 150 ಅಂಕಗಳ ಪತ್ರಿಕೆಯಾಗಿರುತ್ತದೆ. ಇದರಲ್ಲಿ ಅಭ್ಯರ್ಥಿಗಳು ಕನಿಷ್ಠ ಅಂಕಗಳನ್ನು ಗಳಿಸಬೇಕೆಂಬ ಮಾನದಂಡವಿಲ್ಲ. ಆದರೆ, ಇದನ್ನು ಮೆರಿಟ್‌ಗೆ ಪರಿಗಣಿಸಲಾಗುವುದು.
- ಪತ್ರಿಕೆ-2ರ ವಿಷಯವು ಸಾಮರ್ಥ್ಯ ಅಥವಾ ಜ್ಞಾನ (ಜನರಲ್ ನಾಲೆಜ್) ಒಳಗೊಂಡಿರುತ್ತದೆ. ಇದರ ಗರಿಷ್ಠ ಅಂಕ 150. ಇದರಲ್ಲಿ 50 ಅಂಕಗಳಿಗೆ ಬಹು ಆಯ್ಕೆ ಮಾದರಿ ಹಾಗೂ 100 ಅಂಕಗಳಿಗೆ ವಿವರಣಾತ್ಮಕ ಮಾದರಿ ಪ್ರಶ್ನೆಗಳಿರುತ್ತವೆ. ಇದರಲ್ಲಿ ಆಯ್ಕೆಗೆ ಅರ್ಹತೆ ಪಡೆಯಲು ಕನಿಷ್ಠ 45 ಅಂಕಗಳನ್ನು ಗಳಿಸುವುದು ಕಡ್ಡಾಯ. ಈ ಅಂಕಗಳನ್ನು ಮೆರಿಟ್‌ಗೆ ಪರಿಗಣಿಸಲಾಗುವುದು.
- ಪತ್ರಿಕೆ-3 ಭಾಷಾ ಸಾಮರ್ಥ್ಯಕ್ಕೆ ಸಂಬಂಧಿಸಿದ್ದು, ವಿವರಣಾತ್ಮಕ ಮಾದರಿಯ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಆಯಾ ವಿಷಯದ ಬೋಧನಾ ಮಾಧ್ಯಮಕ್ಕೆ ಸಂಬಂಧಿಸಿದಂತೆ ಈ ಭಾಷಾ ಸಾಮರ್ಥ್ಯದ ಪರೀಕ್ಷೆ ನಡೆಯಲಿದೆ. ಇದರ ಗರಿಷ್ಠ ಅಂಕ 100. ಆಯ್ಕೆಗೆ ಅರ್ಹತೆ ಪಡೆಯಲು ಕನಿಷ್ಠ ಶೇ 50 ಅಂಕಗಳನ್ನು ಗಳಿಸುವುದು ಕಡ್ಡಾಯ. ಇವುಗಳನ್ನು ಮೆರಿಟ್ ಗೆ ಪರಿಗಣಿಸಲಾಗುವುದು (ಇದು ಆಂಗ್ಲ ಭಾಷಾ ಹುದ್ದೆಯ ಅಭ್ಯರ್ಥಿಗಳನ್ನು ಬಿಟ್ಟು).

2 ವರ್ಷಗಳ ವಯೋಮಿತಿ ಸಡಿಲಿಕೆ

'ಕೋವಿಡ್‌ನ ಎರಡು ಅಲೆಗಳ ಕಾರಣದಿಂದ ನೇಮಕಾತಿ ಪ್ರಕ್ರಿಯೆ ನಡೆಸಲಾಗಿರಲಿಲ್ಲ. ಹೀಗಾಗಿ ಒಂದು ಅವಧಿಗೆ ಮಾತ್ರ ಅನ್ವಯವಾಗುವಂತೆ ಅಭ್ಯರ್ಥಿಗಳಿಗೆ ಎರಡು ವರ್ಷಗಳ ವಯೋಮಿತಿ ಸಡಿಲಗೊಳಿಸಲಾಗಿದೆ' ಎಂದು ಸಚಿವ ನಾಗೇಶ್ ಹೇಳಿದರು.

'ಪರಿಶಿಷ್ಟ ಜಾತಿ ಮತ್ತು ಪಂಗಡ ಹಾಗೂ ಅಂಗವಿಕಲರಿಗೆ 47 ವರ್ಷಗಳವರೆಗೆ, ಪ್ರವರ್ಗ 2ಎ, 2ಬಿ, 3ಎ ಮತ್ತು 3ಬಿಯರಿಗೆ 43 ವರ್ಷ ಗರಿಷ್ಠ ಇದ್ದುದನ್ನು 45ಕ್ಕೆ ಏರಿಸಲಾಗಿದೆ. ಅಂತೆಯೇ ಸಾಮಾನ್ಯ ವರ್ಗದವರ ಗರಿಷ್ಠ ವಯೋಮಿತಿ 40 ಇದ್ದುದನ್ನು 42ಕ್ಕೆ ಏರಿಸಲಾಗಿದೆ. ಇದು ಈ ಬಾರಿಗೆ ಮಾತ್ರವೇ ಅನ್ವಯವಾಗುತ್ತದೆ' ಎಂದು ಅವರು ವಿವರಿಸಿದರು.

'ಗಣಿತ ವಿಷಯದಲ್ಲಿ ಶಿಕ್ಷಕರ ಸಾಕಷ್ಟು ಕೊರತೆಯಿರುವ ಕಾರಣ ಆನ್ವಯಿಕ ಗಣಿತ ಬೋಧಕ ವರ್ಗಕ್ಕೆ ಈ ಬಾರಿ ಎಂಜಿನಿಯರಿಂಗ್ ಪದವಿ ಪೂರೈಸಿ ಬಿ.ಇಡಿ ಅಥವಾ ಟಿಇಟಿ ಪೂರೈಸಿದವರನ್ನೂ ಪರಿಗಣಿಸಲಾಗುತ್ತಿದೆ' ಎಂದರು.

'15 ಸಾವಿರ ಶಿಕ್ಷಕರ ನೇಮಕದಲ್ಲಿ ಮಂಗಳಮುಖಿಯರಿಗೆ ಶೇ 1ರಷ್ಟು ಹುದ್ದೆಗಳನ್ನು ಮೀಸಲು ಇರಿಸಲಾಗಿರುತ್ತದೆ' ಎಂದೂ ಅವರು ಹೇಳಿದರು.

ಶಿಕ್ಷಣ ಇಲಾಖೆ ವತಿಯಿಂದಲೇ ಸಂಪೂರ್ಣ ಆಯ್ಕೆ ಪ್ರಕ್ರಿಯೆ ನಡೆಯಲಿದೆ. ಆದಷ್ಟು ಶೀಘ್ರ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಿ, ಶಿಕ್ಷಕರ ನೇಮಕಾತಿ ಮಾಡಲಾಗುವುದು

ಬಿ.ಸಿ. ನಾಗೇಶ್
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ

ಬಣ್ಣದ ಹಬ್ಬ — ಬೆಂಗಳೂರಿನ ಹೋಟೆಲೊಂದರಲ್ಲಿ ಹೋಳಿ ಹಬ್ಬದ ಅಂಗವಾಗಿ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಯುವಕ, ಯುವತಿಯರು ಬಣ್ಣ ಎರಚಿ ಸಂಭ್ರಮಿಸಿದರು -ಪ್ರಜಾವಾಣಿ ಚಿತ್ರ/ ರಂಜು ಪಿ.

ಉಭಯ ಸದನಗಳ ನಾಯಕರ ಜೊತೆ ಸಿ.ಎಂ ಸಭೆ

'ಅಗತ್ಯ ಬಿದ್ದರೆ ಕೇಂದ್ರಕ್ಕೆ ನಿಯೋಗ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಧಾನಮಂಡಲ ಅಧಿವೇಶನ ಮುಗಿದ ತಕ್ಷಣ ನಾನು ದೆಹಲಿಗೆ ತೆರಳಿ ರಾಜ್ಯದ ಜಲ ಯೋಜನೆಗಳ ಕುರಿತು ಕೇಂದ್ರ ಜಲಶಕ್ತಿ ಸಚಿವರ ಜೊತೆ ಚರ್ಚಿಸುತ್ತೇನೆ. ಅಗತ್ಯವಿದ್ದರೆ ಸರ್ವಪಕ್ಷಗಳ ನಿಯೋಗ ದೆಹಲಿಗೆ ಕರೆದೊಯ್ಯಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಅಂತರರಾಜ್ಯ ಜಲ ವಿವಾದಗಳ ಕುರಿತು ವಿಧಾನ ಮಂಡಲದ ಉಭಯ ಸದನಗಳ ನಾಯಕರ ಜೊತೆ ಶುಕ್ರವಾರ ಸಭೆ ನಡೆಸಿದ ಬಳಿಕ ಸುದ್ದಿಗಾರರ ಜೊತೆ ಅವರು ಮಾತನಾಡಿದರು. 'ಸರ್ವಪಕ್ಷ ನಾಯಕರ ಸಭೆಯಲ್ಲಿ ಜಲ ಯೋಜನೆಗಳಿಗೆ ವೇಗ ಕೊಡುವ ಬಗ್ಗೆ ಚರ್ಚಿಸಿದ್ದೇವೆ. ಮುಂದಿನ ವಾರ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ದೆಹಲಿಗೆ ತೆರಳಲಿದ್ದಾರೆ' ಎಂದು ತಿಳಿಸಿದರು.

'ಮೇಕೆದಾಟು ಯೋಜನೆಯ ಕುರಿತು ಕಾವೇರಿ ಜಲನಿರ್ವಹಣಾ ಪ್ರಾಧಿಕಾರದ ಸಭೆಗಳಲ್ಲಿ ವಿಸ್ತೃತ ಚರ್ಚೆಯಾಗಿದೆ. ಈ ಕುರಿತು ನಡಾವಳಿಗಳಲ್ಲಿ ದಾಖಲಿಸದೆ ಇರುವುದು ಗಮನಕ್ಕೆ ಬಂದಿದೆ. ಈ ಬಗ್ಗೆ ಕೂಡಲೇ ಜಲಶಕ್ತಿ ಸಚಿವರು ಮತ್ತು ಪ್ರಾಧಿಕಾರದ ಜೊತೆ ಚರ್ಚಿಸಿ, ನಡಾವಳಿಯಲ್ಲಿ ಚರ್ಚೆ ದಾಖಲಿಸಲು ಕ್ರಮ ವಹಿಸಲಾಗುವುದು' ಎಂದರು.

'ಕೃಷ್ಣಾ ಮೇಲ್ದಂಡೆ ಯೋಜನೆ ಹಂತ 3ರ ಕುರಿತು ಕೇಂದ್ರ ಸರ್ಕಾರ ಇನ್ನೂ ಅಧಿಸೂಚನೆ ಹೊರಡಿಸಿಲ್ಲ. ಇದಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನಲ್ಲಿ ರಾಜ್ಯ ಸರ್ಕಾರ ಸಲ್ಲಿಸಿದ ಮಧ್ಯಂತರ ಅರ್ಜಿ ವಿಚಾರಣೆಯ ಪೀಠದಿಂದ ಇಬ್ಬರು ನ್ಯಾಯಮೂರ್ತಿಗಳು ಹಿಂದೆ ಸರಿದಿದ್ದಾರೆ. ಮತ್ತೊಬ್ಬ ನ್ಯಾಯಮೂರ್ತಿ ನೇಮಕ ಮಾಡುವಂತೆ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅವರಿಗೆ ಮನವಿ ಸಲ್ಲಿಸಲಾಗುವುದು' ಎಂದು ತಿಳಿಸಿದರು.

'ಕೇಂದ್ರ ಸರ್ಕಾರದ ನದಿ ಜೋಡಣೆ ಯೋಜನೆಗೆ ಸಂಬಂಧಿಸಿ, ರಾಜ್ಯಕ್ಕೆ ಹಂಚಿಕೆಯಾಗುವ ನೀರಿನ ಪ್ರಮಾಣವನ್ನು ಸ್ಪಷ್ಟಪಡಿಸುವಂತೆ ಕೇಂದ್ರವನ್ನು ಕೋರಲಾಗಿದೆ. ಯೋಜನೆಯ ತಾಂತ್ರಿಕ ವರದಿಯ ಮಾಹಿತಿ ಒದಗಿಸುವಂತೆ ವಿರೋಧ ಪಕ್ಷಗಳು ಕೋರಿದ್ದು, ವರದಿ ಲಭ್ಯವಾದ ಕೂಡಲೇ ಒದಗಿಸಲಾಗುವುದು' ಎಂದು ತಿಳಿಸಿದರು.

ಮೇಕೆದಾಟು ಯೋಜನೆಗೆ ಕಾವೇರಿ ಜಲನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ಪರಿಸರ ಸಚಿವಾಲಯದ ಅನುಮೋದನೆ ಪಡೆಯಲು ಕ್ರಮ ವಹಿಸಲಾಗುವುದು

ಬಸವರಾಜ ಬೊಮ್ಮಾಯಿ
ಮುಖ್ಯಮಂತ್ರಿ

ರಾಜ್ಯದ ಜಲ ಯೋಜನೆಗಳಿಗೆ ಸಂಬಂಧಿಸಿದಂತೆ ಕೇಂದ್ರಕ್ಕೆ ನಿಯೋಗ ಕರೆದೊಯ್ದು ಒತ್ತಡ ಹಾಕುವಂತೆ ಎಂದು ನಾವು ಹೇಳಿದ್ದೇವೆ. ಸರ್ಕಾರ ನಮ್ಮ ನಿಲುವನ್ನು ಒಪ್ಪಿದೆ

ಸಿದ್ದರಾಮಯ್ಯ
ವಿಧಾನಸಭೆ ವಿರೋಧ ಪಕ್ಷದ ನಾಯಕ

ಕೆನರಾ ಬ್ಯಾಂಕ್
Canara Bank
Government of India Undertaking
Together We Can
ಗೃಹ ಸಾಲ 6.65% ಬಡ್ಡಿ ದರದಲ್ಲಿ
ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಸ್ಕ್ಯಾನ್ ಮಾಡಿ ತಕ್ಷಣದ ಅನುಮೋದನೆ ಪಡೆಯಿರಿ
*ಷರತ್ತುಗಳು ಅನ್ವಯಿಸುತ್ತವೆ
1800 425 0018

ಸುದರ್ಶನ್ ಜ್ಯುವೆಲರ್ಸ್
ಚಿನ್ನ ❖ ಬೆಳ್ಳಿ ❖ ಚಿನ್ನದ ಆಭರಣಗಳು
916 Hallmark Gold Rate
₹4735/-gm
ಬೆಳ್ಳಿ ₹ 64,000/-
ಚಿಕ್ಕಪೇಟೆ: 41300355
*CA
Gangothri

ಮದುವೆಯಾಗು ಎಂದಿದ್ದಕ್ಕೆ ಕೃತ್ಯ: ಲಿಂಗಾಯತ ಯುವಕನ ವಿರುದ್ಧ ಎಫ್‌ಐಆರ್

ಪರಿಶಿಷ್ಟ ಜಾತಿ ಯುವತಿ ಕೊಲೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜಯಪುರ ಜಿಲ್ಲೆಯ ತಾಳಿಕೋಟೆಯ ಉಪ ತಹಶೀಲ್ದಾರ್ ಅಶೋಕ ಶರ್ಮಾ ಅವರ ಮಗಳು ದಾನೇಶ್ವರಿ (23) ಅನುಮಾನಾಸ್ಪದ ರೀತಿಯಲ್ಲಿ ನಗರದಲ್ಲಿ ಮೃತಪಟ್ಟಿದ್ದಾರೆ. ಮೈ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಕೊಲೆ ಮಾಡಿರುವ ಶಂಕೆ ವ್ಯಕ್ತಪಡಿಸಿ ಅವರ ಸಹೋದರಿ ಪೊಲೀಸರಿಗೆ ದೂರು ನೀಡಿದ್ದಾರೆ.

ದಾನೇಶ್ವರಿ



ಶಿವಕುಮಾರ್

'ವಿಜಯಪುರ ಬಿಎಲ್‌ಡಿಇಎ ಎಂಜಿನಿಯರಿಂಗ್ ಕಾಲೇಜಿನಲ್ಲಿ ಪದವಿ ಮುಗಿಸಿದ್ದ ದಾನೇಶ್ವರಿ, ಉದ್ಯೋಗಕ್ಕೆ ಪೂರಕ ಕೋರ್ಸ್ ಅಧ್ಯಯನಕ್ಕಾಗಿ ಬೆಂಗಳೂರಿಗೆ ಬಂದಿದ್ದರು. ಬಿಟಿಎಂ ಲೇಔಟ್‌ನ ಪೇಯಿಂಗ್ ಗೆಸ್ಟ್ ಕಟ್ಟಡವೊಂದರಲ್ಲಿ ವಾಸವಿದ್ದರು. ಶೇ 75ರಷ್ಟು ಸುಟ್ಟ ಗಾಯಗಳಾಗಿದ್ದ ಅವರನ್ನು ಮಾರ್ಚ್ 15ರಂದು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

'ಪರಿಶಿಷ್ಟ ಜಾತಿಯ ದಾನೇಶ್ವರಿ ಹಾಗೂ ಲಿಂಗಾಯತ ಸಮುದಾಯದ ಶಿವಕುಮಾರ್ ಹಿರೇಹಾಳ ಪರಸ್ಪರ ಪ್ರೀತಿಸುತ್ತಿದ್ದರು. ಮದುವೆಯಾಗುವಂತೆ ಕೇಳಿದ್ದಕ್ಕಾಗಿ ಸಿಟ್ಟಾದ ಶಿವಕುಮಾರ್, ಕೊಲೆ ಮಾಡಿ ಪರಾರಿಯಾಗಿರುವ ಬಗ್ಗೆ ಯುವತಿಯ ಸಹೋದರಿ ದೂರು ನೀಡಿದ್ದಾರೆ. ಪರಿಶಿಷ್ಟ ಜಾತಿ, ಪಂಗಡ ದೌರ್ಜನ್ಯ ತಡೆ ಕಾಯ್ದೆ ಹಾಗೂ ಕೊಲೆ ಆರೋಪದಡಿ ಶಿವಕುಮಾರ್ ವಿರುದ್ಧ ಎಫ್‌ಐಆರ್ ದಾಖಲಿಸಿ, ತನಿಖೆ ಮುಂದುವರಿಸಲಾಗಿದೆ' ಎಂದೂ ಹೇಳಿದರು.

ಕಾಲೇಜು ಸಹಪಾಠಿಗಳು: 'ಸಿಂದಗಿ ತಾಲ್ಲೂಕಿನ ಗೋಲಗೇರಿಯ ದಾನೇಶ್ವರಿ ಹಾಗೂ ಬಾದಾಮಿ ನಿವಾಸಿ ಶಿವಕುಮಾರ್, ವಿಜಯಪುರದ ಬಿಎಲ್‌ಡಿಇಎ ಎಂಜಿನಿಯರಿಂಗ್ ಕಾಲೇಜಿನಲ್ಲಿ ಪದವಿ ವ್ಯಾಸಂಗ ಮಾಡುತ್ತಿದ್ದರು.

10ನೇ ಪುಟ ನೋಡಿ

ಮುಖ್ಯಮಂತ್ರಿ ಎದುರೇ ಆತ್ಮಹತ್ಯೆಗೆ ಯತ್ನ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಎದುರೇ ವೃದ್ಧರೊಬ್ಬರು ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದು, ಅವರನ್ನು ಪೊಲೀಸರು ರಕ್ಷಿಸಿದ್ದಾರೆ.

ಸುಂಕದಕಟ್ಟೆ ನಿವಾಸಿ ಚಂದ್ರಶೇಖರ್ ಎಂಬುವರು ಮುಖ್ಯಮಂತ್ರಿಗೆ ದೂರು ನೀಡಲು ಆರ್.ಟಿ. ನಗರದ ಮನೆ ಎದುರು ನಡೆದ 'ಜನತಾ ದರ್ಶನ'ಕ್ಕೆ ಶುಕ್ರವಾರ ಬಂದಿದ್ದರು.

ಮನವಿ ಸಲ್ಲಿಸಿದ್ದ ಚಂದ್ರಶೇಖರ್, 'ನಿವೇಶನ ವಿಚಾರದಲ್ಲಿ ಅನ್ನಪೂರ್ಣೇಶ್ವರಿ ನಗರ ಠಾಣೆ ಇನ್‌ಸ್ಪೆಕ್ಟರ್ ಅವರಿಂದ ನನಗೆ ಅನ್ಯಾಯ ಆಗಿದೆ. ಆರೋಪಿಗಳ ಜೊತೆ ಸೇರಿಕೊಂಡಿರುವ ಪೊಲೀಸರು ನನಗೆ ಕಿರುಕುಳ ನೀಡುತ್ತಿದ್ದಾರೆ' ಎಂದು ದೂರಿದ್ದರು. ಮನವಿ ಪರಿಶೀಲಿಸುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದರು.

ಅಷ್ಟಕ್ಕೆ ಸುಮ್ಮನಾಗದ ವೃದ್ಧರು, 'ಈಗಾಗಲೇ ಹಲವರಿಗೆ ದೂರು ನೀಡಿದ್ದೇನೆ. ಯಾವುದೇ ಪ್ರಯೋಜನವಾಗಿಲ್ಲ' ಎಂದು ಕೂಗುತ್ತಲೇ ಜೇಬಿನಲ್ಲಿದ್ದ ವಿಷದ ಬಾಟಲಿ ಹೊರತೆಗೆದು ಕುಡಿಯಲು ಮುಂದಾಗಿದ್ದರು. ಅದನ್ನು ನೋಡಿದ ಪೊಲೀಸರು, ವಿಷದ ಬಾಟಲಿ ಕಸಿದುಕೊಂಡು ಅವರನ್ನು ಬೇರೆಡೆ ಕರೆದೊಯ್ದು ಮಾಹಿತಿ ಪಡೆದುಕೊಂಡರು. ಮುಖ್ಯಮಂತ್ರಿ ಸಹ, ವೃದ್ಧನಿಗಾದ ಅನ್ಯಾಯ ಸರಿಪಡಿಸುವಂತೆ ಹಿರಿಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

'ನಿವೇಶನ ವಿಚಾರವಾಗಿ 2021ರ ಆಗಸ್ಟ್ 3ರಂದು ಚಂದ್ರಶೇಖರ್ ದೂರು ನೀಡಿದ್ದರು. ಸಿಸಿಬಿ ಅಧಿಕಾರಿಗಳಿಗೂ ಅರ್ಜಿ ಸಲ್ಲಿಸಿದ್ದರು. ನಿವೇಶನ ಮಾರಾಟಗಾರರ ಜೊತೆ ಒಪ್ಪಂದದ ಮೂಲಕ ಚಂದ್ರಶೇಖರ್ ಸಮಸ್ಯೆ ಇತ್ಯರ್ಥಪಡಿಸಿಕೊಂಡಿರುವುದು ಗೊತ್ತಾಗಿದೆ. ಇದೀಗ ಅವರು ಸಿ.ಎಂಗೆ ದೂರು ನೀಡಿದ್ದಾರೆ. ಅದನ್ನು ಪರಿಶೀಲಿಸಲಾಗುತ್ತಿದೆ' ಎಂದು ಪೊಲೀಸ್ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

ನವೀನ್ ಪಾರ್ಥಿವ ಶರೀರ 21ರಂದು ತಾಯ್ನಾಡಿಗೆ: ಸಿ.ಎಂ

ಬೆಂಗಳೂರು: 'ಉಕ್ರೇನ್‌ನಲ್ಲಿ ರಷ್ಯಾ ಪಡೆಗಳು ನಡೆಸಿದ ಕ್ಷಿಪಣಿ ದಾಳಿಯಲ್ಲಿ ಮೃತಪಟ್ಟಿರುವ ಹಾವೇರಿಯ ಚಳಗೇರಿ ಗ್ರಾಮದ ನವೀನ್ ಗ್ಯಾನಗೌಡರ ಅವರ ಮೃತದೇಹ ಸೋಮವಾರ ಬೆಳಿಗ್ಗೆ ಬೆಂಗಳೂರಿಗೆ ತಲುಪಲಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರ ಜೊತೆ ಶುಕ್ರವಾರ ಮಾತನಾಡಿದ ಅವರು, 'ಸೋಮವಾರ ಬೆಳಗಿನ ಜಾವ 3 ಗಂಟೆಗೆ ನವೀನ್ ಅವರ ಪಾರ್ಥಿವ ಶರೀರವು ಬೆಂಗಳೂರು ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತಲುಪಲಿದೆ' ಎಂದರು.

3ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ತಹಶೀಲ್ದಾರ್ ವರ್ಗಾವಣೆ: ವಿಧಾನಸಭೆ ಮೊಗಸಾಲೆಯಲ್ಲೇ ಜಟಾಪಟಿ

ಅಶೋಕ – ಅಶ್ವತ್ಥನಾರಾಯಣ ಕಿತ್ತಾಟ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಗಡಿ ತಾಲ್ಲೂಕಿನ ತಹಶೀಲ್ದಾರ್ ವರ್ಗಾವಣೆ ವಿಚಾರದಲ್ಲಿ ಕಂದಾಯ ಸಚಿವ ಆರ್.ಅಶೋಕ ಮತ್ತು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ನಡುವೆ ವಿಧಾನಸಭೆ ಮೊಗಸಾಲೆಯಲ್ಲೇ ಗುರುವಾರ ಕಿತ್ತಾಟ ನಡೆದಿದೆ. ಇಬ್ಬರೂ ಕೈ-ಕೈ ಮಿಲಾಯಿಸುವ ಹಂತಕ್ಕೆ ತಲುಪಿದ್ದು ಶುಕ್ರವಾರ ಬಹಿರಂಗಗೊಂಡಿದೆ.

ರಾಮನಗರ ಜಿಲ್ಲಾ ಉಸ್ತುವಾರಿ ಸಚಿವರಾಗಿರುವ ಅಶ್ವತ್ಥನಾರಾಯಣ, ಮಾಗಡಿ ತಹಶೀಲ್ದಾರ್ ಶ್ರೀನಿವಾಸ್ ಅವರನ್ನು ವರ್ಗಾವಣೆ ಮಾಡುವಂತೆ ಕಂದಾಯ ಸಚಿವರಿಗೆ ಪತ್ರ ಬರೆದಿದ್ದರು. ಆದರೆ, ಕಂದಾಯ ಸಚಿವರು ವರ್ಗಾವಣೆ ಆದೇಶ ಹೊರಡಿಸಿರಲಿಲ್ಲ. ಈ ವಿಚಾರದಲ್ಲಿ ಇಬ್ಬರ ನಡುವೆ ಗುರುವಾರ ಮಧ್ಯಾಹ್ನ ಜಗಳ ನಡೆದಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಶ್ರೀನಿವಾಸ್ ಬದಲಿಗೆ ಬೇರೊಬ್ಬ ಅಧಿಕಾರಿಯನ್ನು ನೇಮಿಸುವಂತೆ ಅಶ್ವತ್ಥನಾರಾಯಣ ಮೂರು ಬಾರಿ ಪತ್ರ ಬರೆದಿದ್ದರು. ಅದನ್ನು ಅಶೋಕ ಮಾನ್ಯ ಮಾಡಿರಲಿಲ್ಲ. ಶ್ರೀನಿವಾಸ್‌ಗೆ ಪ್ರಭಾವಿ ಮಠಾಧೀಶರೊಬ್ಬರ ಬೆಂಬಲ ಇದ್ದು, ವರ್ಗಾವಣೆ ಸಾಧ್ಯವಿಲ್ಲ ಎಂದು ಕಂದಾಯ ಸಚಿವರು ಹೇಳಿದ್ದರು ಎಂಬ ಮಾಹಿತಿಯೂ ಲಭ್ಯವಾಗಿದೆ.

ಭಾವು ಪತ್ತಾರ್

'ಗುರುವಾರ ಮಧ್ಯಾಹ್ನ ವಿಧಾನಸಭೆ ಕಲಾಪ ನಡೆಯುತ್ತಿದ್ದ ಅವಧಿಯಲ್ಲೇ ಇಬ್ಬರೂ ಸಚಿವರು ಆಡಳಿತ ಪಕ್ಷದ ಮೊಗಸಾಲೆಯ ಸಚಿವರ ಕೊಠಡಿಯಲ್ಲಿ ಮುಖಾಮುಖಿ ಆಗಿದ್ದಾರೆ. ಆಗ, ಅಶ್ವತ್ಥನಾರಾಯಣ ತಹಶೀಲ್ದಾರ್ ವರ್ಗಾವಣೆ ವಿಷಯ ಪ್ರಸ್ತಾಪಿಸಿದ್ದಾರೆ. 'ನಾನು ಒಬ್ಬ ಜಿಲ್ಲಾ ಉಸ್ತುವಾರಿ ಸಚಿವ. ನನಗೆ ಅಷ್ಟೂ ಬೆಲೆ ಇಲ್ಲವೆ? ನಾನು ಹಲವು ಬಾರಿ ಹೇಳಿದರೂ ವರ್ಗಾವಣೆ ಮಾಡುವುದಿಲ್ಲ ಎಂದರೆ ಹೇಗೆ' ಎಂದು ಏರಿದ ದನಿಯಲ್ಲಿ ಕಂದಾಯ ಸಚಿವರನ್ನು ಪ್ರಶ್ನಿಸಿದರು' ಎಂದು ಪ್ರತ್ಯಕ್ಷದರ್ಶಿ ಮೂಲಗಳು ತಿಳಿಸಿವೆ.

ಅದಕ್ಕೆ ಸಿಟ್ಟಾದ ಅಶೋಕ, 'ನನ್ನ ಇಲಾಖೆಯಲ್ಲಿ ಯಾರನ್ನು? ಎಲ್ಲಿಗೆ ವರ್ಗಾವಣೆ ಮಾಡಬೇಕು? ಎಂಬುದು ನನಗೆ ಗೊತ್ತಿದೆ. ನಿಮ್ಮಿಂದ ಅದನ್ನು ಕಲಿಯಬೇಕಿಲ್ಲ. ಪಕ್ಷದಲ್ಲಿ ನಾನು ನಿಮಗಿಂತಲೂ ಹಿರಿಯ. ನನಗೆ ನಿಮ್ಮ ಉಪದೇಶ ಬೇಡ' ಎಂದು ಗದರಿದರು.

ನಂತರ ಇಬ್ಬರ ನಡುವೆಯೂ ಏಕವಚನದಲ್ಲೇ ವಾಕ್ಸಮರ ನಡೆದಿದೆ. 'ನೀನು ಏನೇನು ಮಾಡುತ್ತಿದ್ದೀಯ ಎಂಬುದು ನನಗೂ ಗೊತ್ತಿದೆ' ಎಂದು ಇಬ್ಬರೂ ಜಗಳವಾಡಿಕೊಂಡರು. ಇಬ್ಬರ ಇಲಾಖೆಗಳಲ್ಲಿ ನಡೆಯುತ್ತಿರುವ ಬೆಳವಣಿಗೆಗಳನ್ನೂ ಪ್ರಸ್ತಾಪಿಸಿ ಪರಸ್ಪರ ನಿಂದಿಸಿಕೊಂಡರು.

ಮಾತು ತಾರಕಕ್ಕೇರಿದಾಗ ಒಂದು ಹಂತದಲ್ಲಿ ಅಶ್ವತ್ಥನಾರಾಯಣ ಸಿಟ್ಟಿಗೆದ್ದು ಅಶೋಕ ಅವರ ಮೇಲೆರಗಿ ಹೋದರು. ಅವರೂ ಸಿಟ್ಟಿನಿಂದಲೇ ಇವರತ್ತ ಧಾವಿಸಿದರು. ಸ್ಥಳದಲ್ಲಿದ್ದ ಕೆಲವು ಸಚಿವರು ಮತ್ತು ಶಾಸಕರು ಇಬ್ಬರನ್ನೂ ತಡೆದು, ಸಮಾಧಾನಪಡಿಸಿದರು ಎಂದು ಸ್ಥಳದಲ್ಲಿದ್ದ ವ್ಯಕ್ತಿಯೊಬ್ಬರು ಘಟನೆಯನ್ನು ವಿವರಿಸಿದರು.

'ಜಗಳವೇನೂ ನಡೆದಿಲ್ಲ'

'ತಹಶೀಲ್ದಾರ್ ವರ್ಗಾವಣೆ ವಿಚಾರದಲ್ಲಿ ನಾನು ಕೇಳಿದ್ದು ನಿಜ. ವರ್ಗಾವಣೆ ಮಾಡದೇ ಇರುವುದಕ್ಕೆ ಅವರಿಗೂ ತಾಂತ್ರಿಕ ಕಾರಣಗಳು ಇರಬಹುದು. ಈ ವಿಚಾರದಲ್ಲಿ ಜಗಳವೇನೂ ಆಗಿಲ್ಲ. ಇಬ್ಬರೂ ಸಹೋದರರ ರೀತಿಯಲ್ಲೇ ಇದ್ದೇವೆ' ಎಂದು ಘಟನೆ ಕುರಿತು ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಪ್ರತಿಕ್ರಿಯಿಸಿದ್ದಾರೆ.

ಸಚಿವ ಆರ್. ಅಶೋಕ ಅವರು ಪ್ರತಿಕ್ರಿಯೆ ಪಡೆಯಲು ಲಭ್ಯವಾಗಲಿಲ್ಲ. ಹಲವು ಬಾರಿ ಪ್ರಯತ್ನಿಸಿದರೂ ದೂರವಾಣಿ ಕರೆ ಸ್ವೀಕರಿಸಲಿಲ್ಲ.

SHREE SAI GOLD PALACE
www.saigoldpalace.com
Shree Sai Gold Palace
ಶ್ರೀ ಸಾಯಿ ಗೋಲ್ಡ್ ಪ್ಯಾಲೇಸ್
ವಾರ್ಷಿಕೋತ್ಸವದ ಸಂಭ್ರಮಕ್ಕೆ ರಿಯಾಯಿತಿ ಉತ್ಸವ

Buy Gold at Dubai Rate
ಪ್ರತಿ ಕೆಜಿ ಬೆಳ್ಳಿ ವಸ್ತುಗಳ ಖರೀದಿಯ ಮೇಲೆ ₹2000 ರಿಯಾಯಿತಿ
ನೀವು ಖರೀದಿಸುವ ಬೆಳ್ಳಿ ಆಭರಣದ ಮೇಲೆ 5% ರಿಯಾಯಿತಿ
ಪ್ರತಿ ಕ್ಯಾರೆಟ್ ವಜ್ರದ ಆಭರಣಗಳ ಖರೀದಿಯ ಮೇಲೆ ₹5000 ರಿಯಾಯಿತಿ
ಹಳೆಯ ಚಿನ್ನವನ್ನು ಇಂದಿನ (BLR 916) ಚಿನ್ನದ ದರಕ್ಕೆ Exchange ಮಾಡಿಕೊಳ್ಳಿ
Win 20Lakhs Worth Prizes
ಚಿನ್ನ ಖರೀದಿಸಿ 20 ಲಕ್ಷ ಬೆಲೆಬಾಳುವ ಬಹುಮಾನ ಗೆಲ್ಲಿ
Basavanagudi 6366929823 | HSR Layout 7406227661 | Yelahanka 9513034919 | K.R. Puram 6366947191

ಬುಲೇವಾರ್ಡ್ ಅಕ್ರಮ: ತನಿಖೆಗೆ ಆಗ್ರಹ

ಬೆಂಗಳೂರು: 'ಮಹಾಲಕ್ಷ್ಮೀ ಬಡಾವಣೆ ಕ್ಷೇತ್ರದ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗುವ ಬುಲೇವಾರ್ಡ್ ಉದ್ಯಾನ ಅಭಿವೃದ್ಧಿ ಕಾಮಗಾರಿಯ ಟೆಂಡರ್‌ನಲ್ಲಿ ಭಾರಿ ಅಕ್ರಮ ನಡೆದಿದ್ದು, ಈ ಬಗ್ಗೆ ಸರ್ಕಾರ ಸೂಕ್ತ ತನಿಖೆ ನಡೆಸಬೇಕು' ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ (ಕೆಆರ್‌ಎಸ್) ಬೆಂಗಳೂರು ಘಟಕದ ಅಧ್ಯಕ್ಷ ಎಸ್.ಮಂಜುನಾಥ್ ಆಗ್ರಹಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಕ್ಷೇತ್ರದ ಬಹುತೇಕ ರಸ್ತೆಗಳ ಕಿರಿದಾಗಿದ್ದು, ಬುಲೇವಾರ್ಡ್‌ನಂತಹ ಕಾಮಗಾರಿಗೆ ಸ್ಥಳಾವಕಾಶವೇ ಇಲ್ಲ. ಆದರೂ ಕಾಮಗಾರಿ ಕೈಗೆತ್ತಿಕೊಂಡಿರುವುದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದ್ದು, ಅಕ್ರಮ ನಡೆದಿರುವುದು ಸ್ಪಷ್ಟವಾಗುತ್ತಿದೆ' ಎಂದು ಆರೋಪಿಸಿದರು.

'ಈ ಕಾಮಗಾರಿಯನ್ನು ಯಾವುದೇ ವಿವೇಚನೆಯಿಲ್ಲದೆ, ಕೇವಲ ಹಣ ಮಾಡುವ ಉದ್ದೇಶದಿಂದ ಕೈಗೆತ್ತಿಕೊಳ್ಳಲಾಗಿದೆ. ಪಾಲಿಕೆ ಮತ್ತು ರಾಜ್ಯ ಸರ್ಕಾರ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಬೇಕು. ಅಕ್ರಮದಲ್ಲಿ ಭಾಗಿಯಾಗಿರುವ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ವಿರುದ್ಧ ಭ್ರಷ್ಟಾಚಾರ ನಿಗ್ರಹ ದಳಕ್ಕೆ ದೂರು ನೀಡಿ, ತನಿಖೆ ನಡೆಸಬೇಕು' ಎಂದು ಆಗ್ರಹಿಸಿದರು.

ವಿವಿಧ ಕಟ್ಟಡಗಳ ಉದ್ಘಾಟನೆ ಇಂದು

ಬೆಂಗಳೂರು: ಗೋವಿಂದರಾಜ ವಿಧಾನಸಭಾ ಕ್ಷೇತ್ರದಲ್ಲಿ ಪಾಲಿಕೆ ವತಿಯಿಂದ ನಿರ್ಮಿಸಿರುವ ವಿವಿಧ ಕಟ್ಟಡಗಳ ಉದ್ಘಾಟನೆ ಮಾ.19ರಂದು ನಡೆಯಲಿದೆ.

ಸಂಜೆ 4.30ಕ್ಕೆ ಮಾಗಡಿ ರಸ್ತೆಯ ಪೊಲೀಸ್ ಕಾಲೊನಿಯಲ್ಲಿರುವ ನೂತನ ಶಾಲಾ ಕಟ್ಟಡ ಹಾಗೂ ಸಂಜೆ 5.30ಕ್ಕೆ ಮಾರುತಿ ಮಂದಿರ ವಾರ್ಡ್‌ನ ಕೆನರಾ ಬ್ಯಾಂಕ್ ಕಾಲೊನಿಯಲ್ಲಿರುವ 'ಅಮ್ಮಂ ಬಳ್ ಸುಬ್ಬರಾವ್ ಪೈ ಸ್ಮಾರಕ ಕಲಾ ಮಂಟಪ' ಮತ್ತು 'ಕೆನರಾ ಬ್ಯಾಂಕ್ ಕಾಲೊನಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ವಿವಿಧೋದ್ದೇಶ ಕಟ್ಟಡ'ವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಲಿದ್ದಾರೆ.

ವಸತಿ ಸಚಿವ ವಿ.ಸೋಮಣ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ಅತಿಥಿಗಳಾಗಿ ಸಚಿವರಾದ ಆರ್.ಅಶೋಕ, ಬಿ.ಸಿ.ನಾಗೇಶ್, ಮುನಿರತ್ನ, ಸಂಸದ ತೇಜಸ್ವಿ ಸೂರ್ಯ, ಶಾಸಕ ಅ.ದೇವೇಗೌಡ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಗುತ್ತಿಗೆ ಪಡೆದಿರುವ ಬಿಎಂಟಿಸಿ: ಪ್ರತಿ ಬಸ್‌ಗೆ ₹50 ಲಕ್ಷ ವೆಚ್ಚ

24 ಎಲೆಕ್ಟ್ರಿಕ್ ಬಸ್‌ಗಳು ಮಾತ್ರ ಸಂಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಟಿಸಿ ಗುತ್ತಿಗೆ ಪಡೆದಿರುವ 90 ಎಲೆಕ್ಟ್ರಿಕ್ ಬಸ್‌ಗಳಲ್ಲಿ 24 ಮಾತ್ರ ನಗರದಲ್ಲಿ ಸದ್ಯ ಸಂಚರಿಸುತ್ತಿವೆ.

ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಕಾಂಗ್ರೆಸ್‌ನ ಕೆ. ಗೋವಿಂದರಾಜ್ ಅವರ ಪ್ರಶ್ನೆಗೆ ಉತ್ತರಿಸಿದ ಸಾರಿಗೆ ಸಚಿವ ಬಿ. ಶ್ರೀರಾಮುಲು, '2021ರ ಡಿಸೆಂಬರ್‌ನಲ್ಲಿ ಸಂಸ್ಥೆಯು ಎಲೆಕ್ಟ್ರಿಕ್ ಬಸ್‌ಗಳ ಸಂಚಾರವನ್ನು ಆರಂಭಿಸಿದೆ. ಗುತ್ತಿಗೆ ಆಧಾರದ ಮೇಲೆ ಈ ಬಸ್‌ಗಳನ್ನು ಪಡೆಯಲಾಗಿದೆ' ಎಂದು ವಿವರಿಸಿದರು.

'ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆ ಅಡಿಯಲ್ಲಿ ಎನ್‌ಟಿಪಿಸಿ ವಿದ್ಯುತ್ ವ್ಯಾಪಾರ ನಿಗಮ ಈ ಬಸ್‌ಗಳ ನಿರ್ವಹಣೆ ಕೈಗೊಂಡಿದೆ. ಉಳಿದ ಎಲೆಕ್ಟ್ರಿಕ್ ಬಸ್‌ಗಳ ಕಾರ್ಯಾಚರಣೆಯನ್ನು ಹಂತ ಹಂತವಾಗಿ ಆರಂಭಿಸಲಾಗುವುದು' ಎಂದು ಅವರು ತಿಳಿಸಿದರು.

'ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ಬಿಎಂಟಿಸಿಗೆ ಒಟ್ಟಾರೆ ₹50 ಕೋಟಿ ಅನುದಾನ ದೊರೆಯಲಿದೆ. ಈ ಅನುದಾನದಲ್ಲಿ ಪ್ರತಿ ಬಸ್‌ಗೆ ₹50 ಲಕ್ಷದಂತೆ 90 ಬಸ್‌ಗಳಿಗೆ ₹45 ಕೋಟಿಯನ್ನು ಎನ್‌ಟಿಪಿಸಿ ವಿದ್ಯುತ್ ವ್ಯಾಪಾರ ನಿಗಮಕ್ಕೆ ನೀಡಲಾಗಿದೆ. ಉಳಿದ ಮೊತ್ತವನ್ನು ಚಾರ್ಜಿಂಗ್ ಕೇಂದ್ರ ಇತರ ಮೂಲಸೌಕರ್ಯಗಳನ್ನು ಕಲ್ಪಿಸಲು ಉಪಯೋಗಿಸಲಾಗುವುದು' ಎಂದು ಹೇಳಿದರು.

'ಬಿಎಂಟಿಸಿ ಯಾವುದೇ ಎಲೆಕ್ಟ್ರಿಕ್ ಬಸ್‌ಗಳನ್ನು ಖರೀದಿಸಿಲ್ಲ. ಇನ್ನೂ 300 ಎಲೆಕ್ಟ್ರಿಕ್ ಬಸ್‌ಗಳನ್ನು ಕೇಂದ್ರ ಸರ್ಕಾರದ ಫೇಮ್–2 ಯೋಜನೆ ಅಡಿಯಲ್ಲಿ ಅಶೋಕ್ ಲೇಲ್ಯಾಂಡ್ ಸ್ವಿಚ್ ಮೊಬಿಲಿಟಿ ಆಟೋಮೋಟಿವ್ ಲಿಮಿಟೆಡ್ ಮೂಲಕ ಗುತ್ತಿಗೆ ಪಡೆಯಲಾಗುವುದು' ಎಂದು ಅವರು ತಿಳಿಸಿದರು.

ಎಲೆಕ್ಟ್ರಿಕ್ ಬಸ್

'ಚಾರ್ಜಿಂಗ್ ಪಾಯಿಂಟ್‌ಗಳೇ ಇಲ್ಲ'

'ಪೂರ್ವ ಸಿದ್ಧತೆಯೇ ಇಲ್ಲದೆಯೇ ಎಲೆಕ್ಟ್ರಿಕ್ ಬಸ್‌ಗಳ ಸಂಚಾರ ಆರಂಭಿಸಲಾಗಿದೆ. ನಗರದಲ್ಲಿ ಬಸ್‌ಗಳ ಸಂಖ್ಯೆಗೆ ತಕ್ಕಂತೆ ಚಾರ್ಜಿಂಗ್ ಪಾಯಿಂಟ್‌ಗಳೇ ಇಲ್ಲದಿರುವುದರಿಂದ ಸಮಸ್ಯೆಯಾಗಿದೆ' ಎಂದು ಗೋವಿಂದರಾಜು ದೂರಿದರು.

'ಒಂದು ದಿನಕ್ಕೆ 80 ಕಿ.ಮೀ. ಮಾತ್ರ ಈ ಬಸ್‌ಗಳು ಸಂಚರಿಸುತ್ತಿವೆ. ಆದರೆ, ಒಪ್ಪಂದದ ಅನ್ವಯ 180 ಕಿ.ಮೀ. ಸಂಚರಿಸಬೇಕು. ಜತೆಗೆ, 90 ಬಸ್‌ಗಳಿಗೆ ಹಣ ಪಾವತಿಸಲಾಗುತ್ತಿದೆ. ಹೀಗಾಗಿ, ಇದರಲ್ಲಿ ಅವ್ಯವಹಾರ ನಡೆದಿದೆ' ಎಂದು ಆರೋಪಿಸಿದರು.

'ಸಹಕಾರ ರತ್ನ ಪ್ರಶಸ್ತಿ' ನಾಳೆ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ ಭಾನುವಾರ (ಮಾ.20) ಕೆಂಗೇರಿ ಉಪನಗರದ ಗಣೇಶ ಮೈದಾನದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಸಕ್ತ ಸಾಲಿನ 'ಸಹಕಾರ ರತ್ನ ಪ್ರಶಸ್ತಿ' ಪ್ರದಾನ ಮಾಡಲಾಗುವುದು ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಬಾರಿ ಸಹಕಾರ ರತ್ನ ಪ್ರಶಸ್ತಿಗೆ 100 ಅರ್ಜಿಗಳು ಬಂದಿವೆ. ಒಂದು ಜಿಲ್ಲೆಗೆ ಒಬ್ಬರಿಗೆ ಸಹಕಾರ ರತ್ನ ಪ್ರಶಸ್ತಿ ನೀಡಲಾಗುವುದು. ಇಲಾಖೆಯಿಂದಲೂ ಪ್ರಶಸ್ತಿ ಪುರಸ್ಕೃತರನ್ನು ಗುರುತಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚನೆ ನೀಡಿದ್ದರು. ಅವರಿಗೆ ಆಯ್ಕೆ ಪಟ್ಟಿಯನ್ನು ಸಲ್ಲಿಸಲಾಗಿದೆ' ಎಂದು ಹೇಳಿದರು.

ಅತ್ಯುತ್ತಮ ಸಹಕಾರ ಸಂಘಗಳು, ಅತ್ಯುತ್ತಮ ಸಹಕಾರ ಬ್ಯಾಂಕ್‌ಗಳನ್ನು ಗುರುತಿಸಿ ಸನ್ಮಾನ ಮಾಡಲಾಗುತ್ತದೆ. ಮುಖ್ಯಮಂತ್ರಿಯವರ ಅನುಮೋದನೆ ದೊರಕಿದ ಬಳಿಕ ಪ್ರಶಸ್ತಿ ಪುರಸ್ಕೃತರ ಪಟ್ಟಿಯನ್ನು ಪ್ರಕಟಿಸಲಾಗುವುದು. ಪುರಸ್ಕೃತರಿಗೆ ಚಿನ್ನದ ಪದಕ, ಶಾಲು, ಹಾರ, ಸ್ಮರಣಿಕೆ ಮತ್ತು ಪ್ರಶಂಸಾ ಪತ್ರಗಳನ್ನು ನೀಡಲಾಗುವುದು ಎಂದು ತಿಳಿಸಿದರು.

ರಾಜ್ಯ ಸಹಕಾರ ಮಹಾಮಂಡಳ, ರಾಜ್ಯ ಸಹಕಾರ ವಸತಿ ಮಹಾಮಂಡಳ ಮತ್ತು ಸಹಕಾರ ಇಲಾಖೆ ಜಂಟಿಯಾಗಿ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸುತ್ತಿವೆ. ಮುಖ್ಯಮಂತ್ರಿಯವರು ಪ್ರಶಸ್ತಿ ಪ್ರದಾನ ಮಾಡುವರು. ಕಂದಾಯ ಸಚಿವ ಆರ್. ಅಶೋಕ ಸಹಕಾರ ಧ್ವಜಾರೋಹಣ ನಡೆಸುವರು ಎಂದರು.

ಸ್ತ್ರೀ ಶಕ್ತಿ ಸಂಘಗಳು ಮತ್ತು ಸ್ವಸಹಾಯ ಗುಂಪುಗಳಿಗೆ ₹ 20 ಕೋಟಿ ಸಾಲ ವಿತರಿಸುವ ಪ್ರಕ್ರಿಯೆಯೂ ಭಾನುವಾರ ನಡೆಯಲಿದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ವ್ಯಾಪ್ತಿಯ ರೈತರಿಗೆ ಕೃಷಿ ಸಾಲ ವಿತರಣೆಯನ್ನೂ ಮಾಡಲಾಗುವುದು ಎಂದು ಹೇಳಿದರು.

ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷ ಜಿ.ಟಿ. ದೇವೇಗೌಡ, ಸಹಕಾರ ಸಂಘಗಳ ರಿಜಿಸ್ಟ್ರಾರ್ ಎಸ್. ಜಿಯಾಉಲ್ಲಾ ಅವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಪುನೀತ್ ರಾಜ್‌ಕುಮಾರ್‌ಗೆ ಪ್ರಶಸ್ತಿ

ಚಿತ್ರನಟ ಪುನೀತ್ ರಾಜ್‌ಕುಮಾರ್ ಅವರಿಗೆ ಮರಣೋತ್ತರವಾಗಿ 'ಸಹಕಾರ ರತ್ನ ಪ್ರಶಸ್ತಿ' ಪ್ರದಾನ ಮಾಡಲಾಗುವುದು ಎಂದು ಸಚಿವ ಸೋಮಶೇಖರ್ ತಿಳಿಸಿದರು.

ಪುನೀತ್ ಅವರು ಕರ್ನಾಟಕ ಹಾಲು ಮಹಾಮಂಡಳದ ಪ್ರಚಾರ ರಾಯಭಾರಿಯಾಗಿ ಸಹಕಾರ ಕ್ಷೇತ್ರಕ್ಕೆ ಸೇವೆ ಸಲ್ಲಿಸಿರುವುದನ್ನು ಪರಿಗಣಿಸಿ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತಿದೆ ಎಂದು ಅವರು ಹೇಳಿದರು.

'ಮಕ್ಕಳಲ್ಲಿ ಸಂಸ್ಕಾರ ಹೆಚ್ಚಿಸುವುದು ಶಿಕ್ಷಕರ ಜವಾಬ್ದಾರಿ'

ಪ್ರಜಾವಾಣಿ ವಾರ್ತೆ

ಯಲಹಂಕ: 'ಶಿಕ್ಷಕ ವೃತ್ತಿಗೆ ಗೌರವಯುತ ಸ್ಥಾನವಿದ್ದು, ಮಕ್ಕಳಿಗೆ ಸಂಸ್ಕಾರಯುತ ಶಿಕ್ಷಣ ನೀಡುವ ಜವಾಬ್ದಾರಿ ಶಿಕ್ಷಕರ ಮೇಲಿದೆ' ಎಂದು ಕಾಂಗ್ರೆಸ್ ಮುಖಂಡ ಎನ್.ಎನ್.ಶ್ರೀನಿವಾಸಯ್ಯ ಹೇಳಿದರು.

ಸಹಕಾರ ನಗರದ ಕಾವೇರಿ ಬಿ.ಇಡಿ ಕಾಲೇಜಿನಲ್ಲಿ ಪ್ರಥಮ ವರ್ಷದ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಸ್ವಾಗತ ಸಮಾರಂಭ ಹಾಗೂ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, 'ಶಿಕ್ಷಕರು ಶಿಸ್ತು, ಸರಳತೆ, ಶ್ರದ್ಧೆ ಮತ್ತಿತರ ಗುಣಗಳನ್ನು ಅಳವಡಿಸಿಕೊಳ್ಳಬೇಕು. ಮಕ್ಕಳಿಗೆ ಒಳ್ಳೆಯ ಶಿಕ್ಷಣ ನೀಡುವ ಮೂಲಕ ಅವರನ್ನು ಈ ದೇಶದ ಆಸ್ತಿಯಾಗಿ ಮಾಡಬೇಕು' ಎಂದರು.

ಕಾವೇರಿ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಬಿ.ಎಂ. ದೇವರಾಜಪ್ಪ, ಪ್ರಾಂಶುಪಾಲ ಇ.ಬಿ. ರಾಜೇಶ್, ಸಹಾಯಕ ಪ್ರಾಧ್ಯಾಪಕ ಬಿಂದುಕುಮಾರ್ ಇದ್ದರು. ವಿದ್ಯಾರ್ಥಿಗಳು ನಡೆಸಿಕೊಟ್ಟ ಸಾಂಸ್ಕೃತಿಕ ಕಾರ್ಯಕ್ರಮ ಗಮನ ಸೆಳೆಯಿತು.

ನವೋದ್ಯಮಿಗಳಿಗೆ ಉತ್ತೇಜನ ಆಶಯ

ಬೆಂಗಳೂರು: ನವೋದ್ಯಮಗಳನ್ನು ಆರಂಭಿಸುವ ಯುವ ಪ್ರತಿಭೆಗಳಿಗೆ ಉತ್ತೇಜಿಸಲು ಹಾಗೂ ವಿದ್ಯಾರ್ಥಿಗಳನ್ನು ಶಿಕ್ಷಣದ ಹಂತದಲ್ಲೇ ಉದ್ಯಮಿಗಳನ್ನಾಗಿಸುವ ಉದ್ದೇಶದೊಂದಿಗೆ ಕೋಕ್ರಿಯೇಟ್ ವೆಂಚರ್ಸ್ ಸಂಸ್ಥೆಯು ಪಿಇಎಸ್ ವಿಶ್ವವಿದ್ಯಾಲಯದ ಜತೆಗೂಡಿ 'ವೆಂಚರ್ ಸ್ಟುಡಿಯೊ' ಆರಂಭಿಸಿದೆ.

'ಪೆಸು ವೆಂಚರ್‌ಲ್ಯಾಬ್ಸ್' (ಪಿವಿಎಲ್) ಕಾರ್ಯಕ್ರಮದಡಿ ಆರಂಭಿಸಿರುವ ವೆಂಚರ್ ಸ್ಟುಡಿಯೊ, ನವೋದ್ಯಮಿಗಳಿಗೆ ಮಾನವ ಸಂಪನ್ಮೂಲ, ತಂತ್ರಜ್ಞಾನ, ಸಲಹೆಗಳನ್ನು ನೀಡುವ ಉದ್ದೇಶ ಹೊಂದಿದೆ. 15ಕ್ಕೂ ಹೆಚ್ಚು ನವೋದ್ಯಮಗಳು ಈ ಕಾರ್ಯಕ್ರಮದಡಿ ಆರಂಭಗೊಂಡಿದ್ದು, ಅವುಗಳಲ್ಲಿ 6ಕ್ಕೂ ಹೆಚ್ಚು ಸಂಸ್ಥೆಗಳು ಮನ್ನಣೆ ಗಳಿಸಿವೆ.

'ಈ ಕಾರ್ಯಕ್ರಮ ವಿದ್ಯಾರ್ಥಿಗಳು ಉದ್ಯೋಗಾಕಾಂಕ್ಷಿಗಳಾಗುವ ಬದಲು ಉದ್ಯೋಗದ ಸೃಷ್ಟಿಕರ್ತರನ್ನಾಗಿ ಮಾಡುತ್ತದೆ. ವಾಣಿಜ್ಯ ಮತ್ತು ಜಾಗತಿಕವಾಗಿ ಸಮಾಜಕ್ಕೆ ಅನುಕೂಲವಾಗುವ ನವೋದ್ಯಮಗಳನ್ನು ಆರಂಭಿಸಲು ಅನುಕೂಲವಾಗಲಿದೆ' ಎಂದು ಪಿಇಎಸ್ ವಿಶ್ವವಿದ್ಯಾಲಯದ ಕುಲಪತಿ ಎಂ.ಆರ್.ದೊರೆಸ್ವಾಮಿ ತಿಳಿಸಿದರು.

ಕೋಕ್ರಿಯೇಟ್ ವೆಂಚರ್ಸ್ ಸಂಸ್ಥಾಪಕ ಸುರೇಶ್ ನರಸಿಂಹ, 'ಗೂಗಲ್, ಫೇಸ್‌ಬುಕ್, ಮೈಕ್ರೊಸಾಫ್ಟ್‌ನಂತಹ ದೊಡ್ಡ ಕಂಪನಿಗಳೆಲ್ಲ ಕ್ಯಾಂಪಸ್‌ನಿಂದಲೇ ಆರಂಭಗೊಂಡವು. ಅಮೆರಿಕದ ಯಶಸ್ಸನ್ನು ಭಾರತದಲ್ಲೂ ಅನುಕರಿಸುವ ಉದ್ದೇಶದೊಂದಿಗೆ ಕೋಕ್ರಿಯೇಟ್ ವೆಂಚರ್ಸ್ ಸ್ಥಾಪಿಸಿದ್ದೇವೆ. ರಾಜ್ಯದ ಪ್ರತಿಭೆಗಳು ಉದ್ಯಮಶೀಲತೆ ಸ್ವೀಕರಿಸಲು ಇದು ಉತ್ತಮ ಮಾರ್ಗವಾಗಲಿದೆ' ಎಂದರು.

ಸಂಪರ್ಕ: 9845256878 ಅಥವಾ https://www.pesuventurelabs.com

ನಗರದಲ್ಲಿ ಇಂದು

ದೃಶ್ಯ ಮತ್ತು ಪ್ರದರ್ಶನ ಕಲಾ ಕೇಂದ್ರದ ಉದ್ಘಾಟನೆ (ಸಂಜೆ 4): ಅತಿಥಿಗಳು–ಬಿ.ಜಯಶ್ರೀ, ಅರುಂಧತಿ ನಾಗ್, ಜಯಂತ ಕಾಯ್ಕಿಣಿ, ಸಂಗೀತಾ ಕಟ್ಟಿ, ಅಧ್ಯಕ್ಷತೆ–ಎಂ.ಕೆ. ಪಾಂಡುರಂಗಶೆಟ್ಟಿ, ಸಂಜೆ 5.30ಕ್ಕೆ ಯಕ್ಷ ದೇಗುಲ ವತಿಯಿಂದ ಯಕ್ಷಗಾನ ಪ್ರದರ್ಶನ, 6.30ಕ್ಕೆ ಲತಾ ಮಂಗೇಶ್ಕರ್ ಅವರಿಗೆ ನಮನ, ಆಯೋಜನೆ–ಆರ್.ವಿ.ವಿಶ್ವವಿದ್ಯಾಲಯದ ದೃಶ್ಯ ಮತ್ತು ಪ್ರದರ್ಶನ ಕಲಾ ಕೇಂದ್ರ, ಸ್ಥಳ–ಆರ್.ವಿ.ದಂತ ಕಾಲೇಜು ಸಭಾಂಗಣ, ಜೆ.ಪಿ.ನಗರ 1ನೇ ಹಂತ

ಬಿ.ಜಯಶ್ರೀ

'ಬಿ–ಸೇಫ್ ಕ್ಷೇತ್ರ' ವರದಿ ಬಿಡುಗಡೆ ಮತ್ತು ಸಂವಾದ: ಅತಿಥಿಗಳು–ಶಾಸಕ ಅರವಿಂದ ಲಿಂಬಾವಳಿ, ಬಿ–ಪ್ಯಾಕ್ ಅಧ್ಯಕ್ಷೆ ಕಿರಣ್ ಮಜುಂದಾರ್ ಶಾ, ಸಚಿವ ಸಿ.ಎನ್. ಅಶ್ವತ್ಥನಾರಾಯಣ, ನಟಿ ಪ್ರಣೀತಾ ಸುಭಾಷ್, ಆಯೋಜನೆ–ರೋಟರಿ ಹೌಸ್ ಆಫ್ ಫ್ರೆಂಡ್‌ಶಿಪ್, ಲ್ಯಾವೆಲ್ಲೆ ರಸ್ತೆ, ಬೆಳಿಗ್ಗೆ 11

ಕಿರಣ್ ಮಜುಂದಾರ್ ಶಾ

ವಿಶ್ವ ಕಾವ್ಯ ದಿನ: 'ಸಮಕಾಲೀನ ಕಾವ್ಯಚಿಂತನೆಯಲ್ಲಿ ಹೊಸ ತಲೆಮಾರಿನ ಪಾತ್ರ' ಸಂವಾದ: ಅತಿಥಿಗಳು–ಎಂ.ಆರ್. ಕಮಲಾ, ಶ್ರೀಧರ ಬನವಾಸಿ, ವಿ.ಎ. ಲಕ್ಷ್ಮಣ, ಪೂರ್ಣಿಮಾ ಮಾಳಗಿಮನಿ, ಆಯೋಜನೆ ಮತ್ತು ಸ್ಥಳ–ಹರಿವು ಬುಕ್ಸ್, ಡಿವಿಜಿ ರಸ್ತೆ, ಬೆಳಿಗ್ಗೆ 11.30

'ರಾಷ್ಟ್ರೀಯ ಶಿಕ್ಷಣ ನೀತಿಯಡಿ ಹೊಸ ಸವಾಲುಗಳು ಮತ್ತು ಅವಕಾಶಗಳು' ಸಂವಾದ: ಅತಿಥಿಗಳು–ಎಂ.ಮದನ್ ಗೋಪಾಲ್, ಗೌರೀಶ್ ಜೋಶಿ, ಆರ್. ಉಪೇಂದ್ರ ಶೆಟ್ಟಿ, ಆಯೋಜನೆ ಮತ್ತು ಸ್ಥಳ–ಯೂನಿವರ್ಸಲ್ ಸಮೂಹ ಸಂಸ್ಥೆಗಳು, ಗುರುರಾಯನಪುರ, ರಾಮೋಹಳ್ಳಿ ಹತ್ತಿರ, ಬೆಳಿಗ್ಗೆ 11

'ಮಹಾಭಾರತ' ಭೂಮಕಾವ್ಯ ಮತ್ತು ಭಾರತ ರಾಷ್ಟ್ರ ಪುಸ್ತಕ ಬಿಡುಗಡೆ: ಪ್ರೊ.ಸಿ.ಎನ್.ರಾಮಚಂದ್ರನ್, ಸಂವಾದ–ಗಣೇಶ ಎನ್ ದೇವಿ, ಎಂ.ಜಿ.ಹೆಗಡೆ, ಆಯೋಜನೆ–ಕ್ರಿಯಾ ಮಾಧ್ಯಮ, ಸ್ಥಳ–ಬಿಎಂಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 4.30

ಮನೆಯಂಗಳದಲ್ಲಿ ಮಾತುಕತೆ: ತಿಂಗಳ ಅತಿಥಿ–ಗಂಗಾವತಿ ಬಿ.ಪ್ರಾಣೇಶ್, ಆಯೋಜನೆ–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ–ನಯನ ಸಭಾಂಗಣ, ಕನ್ನಡ ಭವನ, ಸಂಜೆ 4


ಗಂಗಾವತಿ ಪ್ರಾಣೇಶ್

ಪಂಡಿತ್ ಭೀಮಸೇನ ಜೋಶಿ ಅವರ ಜನ್ಮಶತಾಬ್ದಿ ಅಂಗವಾಗಿ 'ಪೂರ್ಣಾಹುತಿ' ಸಂಗೀತೋತ್ಸವ: ಉದ್ಘಾಟನೆ–ವಿನಾಯಕ ತೊರವಿ, ಆರ್. ವಿ.ಗುಮಾಸ್ತೆ, ಸಂಗೀತ ಕಾರ್ಯಕ್ರಮ–ಆರತಿ ಅಂಕಲಿಕರ್, ಪಂಡಿತ್ ವೆಂಕಟೇಶ ಕುಮಾರ್, ಕೊಳಲು ವಾದಕ ರಾಕೇಶ್ ಚೌರಾಸಿಯ, ಆಯೋಜನೆ–ಪಂಡಿತ್ ಡಿ.ವಿ.ಕಾಣೆಬುವಾ ಪ್ರತಿಷ್ಠಾನ ಮತ್ತು ಕೇಂದ್ರ ಸಂಸ್ಕೃತಿ ಸಚಿವಾಲಯ, ಸ್ಥಳ–ಪತ್ತಿ ಸಭಾಂಗಣ, ರಾಮಮಂದಿರ ಸಮೀಪ, ಎನ್.ಆರ್.ಕಾಲೊನಿ, ಸಂಜೆ 5

ಸಿದ್ಧಾಪುರ ಶಿವಕುಮಾರ್ ಅವರ 'ಭಾವ ರೇಖೆಗಳ ನಡುವೆ' ಪುಸ್ತಕ ಬಿಡುಗಡೆ: ಜೋಗಿ, ಪುಸ್ತಕ ಕುರಿತು–ವಿ.ನಾಗೇಂದ್ರ ಪ್ರಸಾದ್, ಅತಿಥಿಗಳು–ಸಂತೋಷ್ ಹಾನಗಲ್, ಎಂ.ಪ್ರಕಾಶಮೂರ್ತಿ, ಅಧ್ಯಕ್ಷತೆ–ಎಂ.ಎನ್. ನಂದೀಶ್ ಹಂಚೆ, ಆಯೋಜನೆ–ಕಗ್ಗೆರೆ ಪ್ರಕಾಶನ, ಸ್ಥಳ–ಕೃಷ್ಣರಾಜ ಪರಿಷನ್ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಕೆ.ಆರ್.ಜಾನಕಮ್ಮ ಅವರಿಗೆ ಸನ್ಮಾನ: ಶಾಸಕ ಎಂ.ಕೃಷ್ಣಪ್ಪ, ಆಯೋಜನೆ–ಟೆಲಿಕಾಂ ಬಡಾವಣೆ ಕ್ಷೇಮಾಭಿವೃದ್ಧಿ ಸಂಘ, ಸ್ಥಳ–ಟೆಲಿಕಾಂ ಬಡಾವಣೆ ಪಾರ್ಕ್, ಟಿಂಬರ್ ಯಾರ್ಡ್, ಮೈಸೂರು ರಸ್ತೆ, ಸಂಜೆ 6

ಭಾರತ ಸರ್ಕಾರ
ಅಪರ ನಿರ್ದೇಶಕರ ಕಚೇರಿ, ಕೇಂದ್ರ ಸರ್ಕಾರದ ಆರೋಗ್ಯ ಯೋಜನೆ
3ನೇ ಮಹಡಿ, ಇ–ವಿಂಗ್ ಕೇಂದ್ರೀಯ ಸದನ್, ಕೋರಮಂಗಲ, ಬೆಂಗಳೂರು–34.

ಪ್ರಸ್ತುತ ಶಿವಾಜಿನಗರದಲ್ಲಿರುವ ಸಿಜಿಹೆಚ್‌ಎಸ್ ವೆಲ್‌ನೆಸ್ ಸೆಂಟರ್‌ಗಳು ಮತ್ತು ಪಾಲಿಕ್ಲಿನಿಕ್‌ನ್ನು ಹೊಸ ಸ್ಥಳಗಳಲ್ಲಿ ನೆಲೆಗೊಳಿಸಲು ವಸತಿ/ವಾಣಿಜ್ಯ ಪ್ರದೇಶದಲ್ಲಿ ಸ್ಥಳಾವಕಾಶ ಬೇಕಾಗಿದೆ

ಸಿಜಿಹೆಚ್‌ಎಸ್, ಬೆಂಗಳೂರು, ಇವರು ಶಿವಾಜಿನಗರ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಸಿಜಿಹೆಚ್‌ಎಸ್ ವೆಲ್‌ನೆಸ್ ಸೆಂಟರ್ ಮತ್ತು ಪಾಲಿಕ್ಲಿನಿಕ್‌ನ್ನು ಹೊಸ ಸ್ಥಳಗಳಲ್ಲಿ ನೆಲೆಗೊಳಿಸಲು ಕೇಂದ್ರ ಸ್ಥಳದಲ್ಲಿ ಆದ್ಯನೀಯವಾಗಿ ನೆಲ ಮಹಡಿಯಲ್ಲಿ (ಅಥವಾ) 1ನೇ ಮಹಡಿಯಲ್ಲಿ ಲಿಫ್ಟ್ ಸಹಿತ ಸೂಕ್ತವಾದ ಸ್ಥಳಾವಕಾಶಕ್ಕಾಗಿ ಆಸಕ್ತಿಯುಳ್ಳ ವ್ಯಕ್ತಿಗಳಿಂದ ಆಫರುಗಳನ್ನು ಆಹ್ವಾನಿಸಿದ್ದಾರೆ.
ಆಸಕ್ತಿಯುಳ್ಳ ವ್ಯಕ್ತಿಗಳು ಕಟ್ಟಡದ ನಕ್ಷೆಯ ಜೊತೆಗೆ ತಮ್ಮ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು "ಅಪರ ನಿರ್ದೇಶಕರು, ಸಿಜಿಹೆಚ್‌ಎಸ್, ಇ–ವಿಂಗ್, 3ನೇ ಮಹಡಿ, ಕೇಂದ್ರೀಯ ಸದನ್, ಕೋರಮಂಗಲ, ಬೆಂಗಳೂರು – 560034" ಇವರಿಗೆ ದಿನಾಂಕ: **08.04.2022**ರ ಮುನ್ನ ಸಲ್ಲಿಸತಕ್ಕದ್ದು. ಸ್ಥಳಾವಕಾಶಕ್ಕಾಗಿ ನೀಡಿರುವ ಈ ಜಾಹೀರಾತನ್ನು ಯಾವುದೇ ಸಮಯದಲ್ಲಿ ಯಾವುದೇ ಕಾರಣ ನೀಡದೆ ರದ್ದುಪಡಿಸುವ ಹಕ್ಕನ್ನು ಸಿಜಿಹೆಚ್‌ಎಸ್ ಕಾಯ್ದಿರಿಸಿಕೊಂಡಿದೆ. ಪೂರ್ಣ ವಿವರಗಳಿಗಾಗಿ ಸಿಜಿಹೆಚ್‌ಎಸ್ ವೆಬ್‌ಸೈಟ್: **cghsbng.gov.in** ನೋಡಿ.
ಸಹಿ/– ಅಪರ ನಿರ್ದೇಶಕರು, ಸಿಜಿಹೆಚ್‌ಎಸ್, ಬೆಂಗಳೂರು

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್, ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐ.ಎಫ್.ಟಿ) ಸಂಖ್ಯೆ: 51/2021–22 ದಿನಾಂಕ: 15.03.2022
(ರಸ್ತೆ ಕಾಮಗಾರಿಗಾಗಿ–ಸ್ಟ್ಯಾಂಡರ್ಡ್ ಬಿಡ್ಡಿಂಗ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1–2 ರಂತೆ ಏಕ–ಲಕೋಟೆ ಪದ್ಧತಿಯಲ್ಲಿ)
ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ **ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್** ಮೂಲಕ ಏಕ–ಲಕೋಟೆ ಪದ್ಧತಿಯಲ್ಲಿ ಕಾಮಗಾರಿಗಳ ಟೆಂಡರ್‌ಗಳನ್ನು ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000ರ ಅನ್ವಯ ಈ ಕೆಳಗೆ ಸಹಿ ಮಾಡಿದವರು ಆಹ್ವಾನಿಸಿರುತ್ತಾರೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ದಿನಾಂಕ: **18.03.2022 ರಿಂದ 25.03.2022ರ ಸಂಜೆ 4.00 ಗಂಟೆಯವರೆಗೆ** ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. (1) ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕಡೆಯ ದಿನಾಂಕ: **18.03.2022 (ಮಧ್ಯಾಹ್ನ 3.00 ಗಂಟೆಗೆ ಕಛೇರಿ ವೇಳೆಯಲ್ಲಿ). (2)** ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕಡೆಯ ದಿನಾಂಕ: **25.03.2022 (ಸಂಜೆ 4.00 ಗಂಟೆಯವರೆಗೆ). (3)** ಆರ್ಥಿಕ ಬಿಡನ್ನು ತೆರೆಯುವ ದಿನಾಂಕ: **28.03.2022 ಬೆಳಿಗ್ಗೆ 11.00 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ **www.kpwd.gov.in** ವೆಬ್‌ಸೈಟ್‌ನ್ನು ಸಂಪರ್ಕಿಸಬಹುದು ಅಥವಾ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.
ಸಹಿ/– ತಿಮ್ಮರಾಯಪ್ಪ .ಬಿ, ಕಾರ್ಯಪಾಲಕ ಇಂಜಿನಿಯರ್,
ಲೋ.ಇ. ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ420/ಎಂ.ಸಿ.ಎ/2021–22
ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಮಳೆ ನೀರಿನ ಚರಂಡಿ – ಪೂರ್ವ ವಲಯ, 9ನೇ ಮಹಡಿ, ಶಾಪಿಂಗ್ ಕಾಂಪ್ಲೆಕ್ಸ್, 4ನೇ ಬ್ಲಾಕ್, ಜಯನಗರ, ಬೆಂಗಳೂರು–560011.
ಸಂಖ್ಯೆ: ಕಾಅ/ಮನೀಚ/ಪೂವ/ಟೆಂಡರ್/01/2021–22 ದಿನಾಂಕ: 17–03–2022
ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)
(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಆಯುಕ್ತರು, ಬೃಬೆಂಮಪಾ ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಮನೀಚ – ಪೂರ್ವ ವಲಯ, ಬೃಬೆಂಮಪಾ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗೆ ವಿವರವಾದ ಯೋಜನಾ ವರದಿ ಸಿದ್ಧಪಡಿಸುವ ಸೇವೆಗಳಿಗಾಗಿ ಹೆಸರಾಂತ ಸಮಾಲೋಚಕರು, ಸಮಾಲೋಚನಾ ಸೇವೆ ಒದಗಿಸುವವರಿಂದ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಯೋಜನೆಯ ಅಂದಾಜು ಪ್ರದೇಶ (ಚದರ ಕಿ.ಮೀ.ಗಳಲ್ಲಿ)	ಇ.ಎಂ.ಡಿ (ರೂ. ಲಕ್ಷಗಳಲ್ಲಿ)
1	ಬೆಂಗಳೂರು ನಗರದಲ್ಲಿನ ಕೋರಮಂಗಲ – ಚಲ್ಲಘಟ್ಟ ಕಣಿವೆಯ ಪ್ರಾಥಮಿಕ, ದ್ವಿತೀಯ ಮತ್ತು ತೃತೀಯ ಚರಂಡಿಗಳಿಗೆ ಕರ್ನಾಟಕ ಸರ್ಕಾರದ ಅನುದಾನಗಳಡಿಯಲ್ಲಿ ಸೇತುವೆಗಳು / ಕಲ್ವರ್ಟ್‌ಗಳ ಪುನರ್‌ವಿನ್ಯಾಸ ಸೇರಿದಂತೆ ಮಳೆ ನೀರಿನ ಚರಂಡಿಗಳ ನಿರ್ಮಾಣ / ಪುನರ್ ರೂಪಿಸುವಿಕೆಗಾಗಿ ವಿವರವಾದ ಮಾಸ್ಟರ್ ಯೋಜನಾ ವರದಿ ಸಿದ್ಧಪಡಿಸಲು ಸಮಾಲೋಚನಾ ಸೇವೆಗಳನ್ನು ಒದಗಿಸುವಿಕೆ.	260.0	6.20

ಟೆಂಡರ್ ವೇಳಾಪಟ್ಟಿ: 1) ಆರ್‌ಎಫ್‌ಪಿ ಡಾಕ್ಯೂಮೆಂಟ್‌ನ್ನು ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **www.eproc.karnataka.gov.in** ನಲ್ಲಿ ದಿನಾಂಕ: **18–03–2022ರಂದು 16.00 ಗಂಟೆಯಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: **21–03–2022ರಂದು 15.00 ಗಂಟೆಗೆ.** 3) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **26–03–2022ರಂದು 16.00 ಗಂಟೆವರೆಗೆ.** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **28–03–2022ರಂದು 16.30 ಗಂಟೆಗೆ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಮಳೆ ನೀರಿನ ಚರಂಡಿ, ಪೂರ್ವ ವಲಯ, ಬಿಬಿಎಂಪಿ.
ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ.
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಶ್ರೀ ಲಕ್ಷ್ಮೀನಾರಾಯಣ ಕೋ–ಆಪರೇಟಿವ್ ಬ್ಯಾಂಕ್ (ನಿ),
ನಂ. 1627/2, ಪಾರ್ಕ್ ರಸ್ತೆ, ರಾಮಮೋಹನಪುರ, ಬೆಂಗಳೂರು–560021
ದೂರವಾಣಿ ಸಂಖ್ಯೆ: 23320489/ 23422356/ 29555489
ಚುನಾವಣಾ ತಿಳುವಳಿಕೆ ಪತ್ರ
ಮೇಲ್ಕಂಡ ಬ್ಯಾಂಕಿನ ಆಡಳಿತ ಮಂಡಳಿಯಲ್ಲಿ ನಿಧನದಿಂದ ತೆರವಾದ ಒಂದು ನಿರ್ದೇಶಕ (ಸಾಮಾನ್ಯ) ಸ್ಥಾನಕ್ಕೆ ಆಡಳಿತ ಮಂಡಳಿಯ ಉಳಿದ ಅವಧಿಗೆ ಚುನಾವಣೆಯನ್ನು ದಿನಾಂಕ 20.03.2022 ಭಾನುವಾರದಂದು ಬೆಳಗ್ಗೆ 9.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ ನಡೆಸಲು ನಿಶ್ಚಯಿಸಲಾಗಿದೆ. ಚುನಾವಣಾ ತಿಳಿವಳಿಕೆ ಮತ್ತು ವೇಳಾ ಪಟ್ಟಿಯನ್ನು ಈಗಾಗಲೇ ಅಂಚೆ ಮೂಲಕ ಕಳುಹಿಸಿದ್ದು, ಯಾವುದೇ ಅರ್ಹ ಸದಸ್ಯರಿಗೆ ತಲುಪದಿದ್ದಲ್ಲಿ ಈ ಪ್ರಕಟಣೆಯನ್ನೇ ಚುನಾವಣಾ ತಿಳುವಳಿಕೆ ಪತ್ರ ಎಂದು ಪರಿಗಣಿಸಿ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಕೋರುತ್ತಾ, ಹೆಚ್ಚಿನ ಮಾಹಿತಿ ಅವಶ್ಯವಿದ್ದಲ್ಲಿ ಬ್ಯಾಂಕಿನ ರಿಟರ್ನಿಂಗ್ ಅಧಿಕಾರಿಯನ್ನು ಅಥವಾ ಬ್ಯಾಂಕಿನ ಆಡಳಿತ ಕಚೇರಿಯನ್ನು ಸಂಪರ್ಕಿಸಲು ಕೋರಲಾಗಿದೆ.
ಸ್ಥಳ: ಬೆಂಗಳೂರು
ದಿನಾಂಕ: 18.03.2022
ಸಹಿ/–
ರಿಟರ್ನಿಂಗ್ ಅಧಿಕಾರಿ
ಶ್ರೀ ಲಕ್ಷ್ಮೀನಾರಾಯಣ ಕೋ–ಆಪರೇಟಿವ್ ಬ್ಯಾಂಕ್ (ನಿ),

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ವಿಭಾಗ, ಕೋಲಾರ
ಕಾರ್ಯಪಾಲಕ ಅಭಿಯಂತರರ ಕಛೇರಿ, ಕನನೀಸ ಮತ್ತು ಒಚ ಮಂಡಳಿ, ವಿಭಾಗ, ಕೋಲಾರ, ನಂ. 2114, ಹನುಮೇಗೌಡ ಕಾಂಪೌಂಡ್, ಎಂ.ಬಿ. ರಸ್ತೆ, ಕೋಲಾರ–563101. ದೂರವಾಣಿ: 08152–223403
ಫ್ಯಾಕ್ಸ್: 08152–220742, ಮೊಬೈಲ್: 9480813121,
24*7 ಸಹಾಯವಾಣಿ: 080–40001000
ಸಂಖ್ಯೆ: ಕಜಮ/ಕಾ.ಅ/ಕೋ/ತಾ.ಸ./ಸ.ಅ–1/1080/2020–21
ದಿನಾಂಕ: 17.03.2022
ಅಲ್ಪಾವಧಿ ಟೆಂಡರ್ ಪ್ರಕಟಣೆ
ಈ ಕೆಳಗೆ ತಿಳಿಸಿರುವ ಕಾಮಗಾರಿಗಳಿಗೆ ಕೆಳಕಂಡ ತಾಂತ್ರಿಕ/ಆರ್ಥಿಕ ಅರ್ಹತೆಗಳನ್ನು ಹೊಂದಿರುವ ಸಂಸ್ಥೆ/ಗುತ್ತಿಗೆದಾರರುಗಳಿಂದ ಐಟಂವಾರು ಟೆಂಡರ್ ಅನ್ನು ಮೊಹರಾದ ಎರಡು ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. (1) **ಕಾಮಗಾರಿಯ ಹೆಸರು:** ಇ–ಪ್ರೊಕ್ಯೂರ್‌ಮೆಂಟ್ ಇಂಡೆಂಟ್ ನಂಬರ್ KUWSDB/2021-22/OW/WORK_INDENT 3112/CALL-2. ಬಾಗೇಪಲ್ಲಿ ಪಟ್ಟಣದ ಒಳಚರಂಡಿ ಯೋಜನೆಯಡಿ ನಿರ್ಮಿಸಲು ಉದ್ದೇಶಿಸಿರುವ ವೆಟ್‌ವೆಲ್‌ನಲ್ಲಿ 3 ಸಂಖ್ಯೆ 15 ಹೆಚ್.ಪಿ ಅಥವಾ ಸೂಕ್ತ ಸಾಮರ್ಥ್ಯದ ನಾನ್‌ಕ್ಲಾಗ್ ಸೀವೇಜ್ ಪಂಪ್‌ಸೆಟ್, 150 ಕೆ.ವಿ.ಎ ಟ್ರಾನ್ಸ್‌ಫಾರ್ಮರ್ ಹಾಗೂ 100 ಕೆ.ವಿ.ಎ ಡಿ.ಜಿ. ಸೆಟ್ ಮತ್ತು ಸಂಬಂಧಿತ ಪರಿಕರಗಳನ್ನು ಒದಗಿಸಿ ಅಳವಡಿಸುವ ಕಾಮಗಾರಿ. ಅಂದಾಜು ಮೊತ್ತ: **ರೂ.48,40,537/–**. ಬಿಡ್ ಭದ್ರತೆ ಮೊತ್ತ: **ರೂ.97,000/–**. **ತಾಂತ್ರಿಕ ಅರ್ಹತೆಯ ನಿಬಂಧನೆಗಳು** ಗುತ್ತಿಗೆದಾರರು ಕಳೆದ 5 ಆರ್ಥಿಕ ವರ್ಷಗಳಲ್ಲಿ ಟೆಂಡರ್ ಮೊತ್ತದ ಶೇ.50 ಕ್ಕಿಂತ ಕಡಿಮೆ ಇಲ್ಲದ ಒಂದು ಸಮಾನ ರೂಪದ ಕಾಮಗಾರಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿರಬೇಕು. ತಾಂತ್ರಿಕ ಇತರೆ ನಿಬಂಧನೆಗಳು ಇ–ಪ್ರೊಕ್ಯೂರ್‌ಮೆಂಟ್ ಹಾಗೂ ಬಿಡ್ ದಾಖಲೆಯಲ್ಲಿರುವಂತೆ. (1) ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿಯ ದಿನಾಂಕ: **19.03.2022 ಬೆಳಿಗ್ಗೆ 11.00 ರಿಂದ 25.03.2022, ಸಂಜೆ 5.00 ಘಂಟೆಯವರೆಗೆ.** (2) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **25.03.2022, ಸಂಜೆ 5.30 ಘಂಟೆಯ ಒಳಗೆ.** (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **28.03.2022, ಬೆಳಗ್ಗೆ 11.00 ಘಂಟೆ ನಂತರ.** (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: **30.03.2022, ಬೆಳಗ್ಗೆ 11.00 ಘಂಟೆ ನಂತರ.**
ಸಹಿ/– ಕಾರ್ಯಪಾಲಕ ಅಭಿಯಂತರು,
ಕನನೀಸ ಮತ್ತು ಒಚ ಮಂಡಳಿ, ವಿಭಾಗ, ಕೋಲಾರ.
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ446/ಎಂ.ಸಿ.ಎ/2021–22
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ನೈಋತ್ಯ ರೈಲ್ವೆ
ಇ–ಟೆಂಡರ್ ಪ್ರಕಟಣೆ ಸಂ. 31 ಯುಬಿಎಲ್ 2021–22
ದಿನಾಂಕ : 11–03–2022
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕೆಲಸದ ಹೆಸರು	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ : ಹುಬ್ಬಳ್ಳಿ – ಹುಬ್ಬಳ್ಳಿಯ ಗಾಲ್ಫ್ ಲಿಂಕ್ ಕಾಲೋನಿ ಮತ್ತು ಬ್ರೂಕ್ ರೋಡ್ ಕಾಲೋನಿಗೆ ದುರಸ್ತಿಗಳು.	ರೂ. 39,25,998/–
2	ಹುಬ್ಬಳ್ಳಿ ವಿಭಾಗ : ಹುಬ್ಬಳ್ಳಿ – ಅನುಪಯುಕ್ತ ಜಿಎಸ್‌ಡಿಯ ವಿಲೇವಾರಿಗಾಗಿ 18 ಬಿನ್‌ಗಳ ನಿರ್ಮಾಣ.	ರೂ. 2,15,47,408/–
3	ಹುಬ್ಬಳ್ಳಿ ವಿಭಾಗ : ಅಳ್ನಾವರ – ನಿಲ್ದಾಣದ ಪ್ಲ್ಯಾಟ್‌ಫಾರಂ–1 ಮತ್ತು ಪ್ಲ್ಯಾಟ್‌ಫಾರಂ–2/3 ಮೇಲೆ 400 ಮೀ.ಗಳ ಐಆರ್‌ಎಸ್ ವಿಧ ಕವರ್‌ನ್ನು ಒದಗಿಸುವುದು.	ರೂ. 2,13,58,999/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 12–04–2022ರಂದು 11:00 ಗಂಟೆವರೆಗೆ.
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಹಿರಿಯ ವಿಭಾಗೀಯ ಇಂಜಿನಿಯರ್ / ಸಮನ್ವಯ ಹುಬ್ಬಳ್ಳಿ
ಪಿಯುಬಿ/462/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2021–22
S.W.Railways SWRRLY SWRRLY

ನೈಋತ್ಯ ರೈಲ್ವೆ
ಇ–ಟೆಂಡರ್ ಪ್ರಕಟಣೆ ಸಂ. ಆರ್‌ಇಎಸ್‌ಬಿಸಿ–ಇ–295–ಆರ್‌ಆರ್‌ಬಿ–02 ದಿನಾಂಕ : 12–03–2022
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ನೈಋತ್ಯ ರೈಲ್ವೆಯಲ್ಲಿ ರೈಲ್ವೆ ವಿದ್ಯುದೀಕರಣ ಕಾಮಗಾರಿಗಾಗಿ ಸಿಪಿಡಿ/ಆರ್‌ಇ/ಎಸ್‌ಬಿಸಿ ಇವರ ವ್ಯಾಪ್ತಿಯಲ್ಲಿ ಭೂಮಿ ಕೆಲಸಗಳನ್ನು ಒಳಗೊಂಡು ಹೈಟ್ ಗೇಜ್‌ಗಳ ತಯಾರಿಕೆ ಮತ್ತು ಸ್ಥಾಪನೆ, ಪಿಎಫ್ ಶೆಲ್ಟರ್‌ಗೆ ಮಾರ್ಪಾಡು, ರಕ್ಷಣಾ ಪರದೆಯನ್ನು ಒದಗಿಸುವುದು, ಇತ್ಯಾದಿ. ಕಾಮಗಾರಿ ಪೂರ್ಣಗೊಳಿಸುವ ಅವಧಿ ಒಂಬತ್ತು ತಿಂಗಳು.	ರೂ. 8,80,42,013.75

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 25–04–2022 ರಂದು 11.00 ಗಂಟೆವರೆಗೆ
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಉಪ ಮುಖ್ಯ ಇಂಜಿನಿಯರ್ / ರೈಲ್ವೆ ವಿದ್ಯುದೀಕರಣ ಬೆಂಗಳೂರು
ಪಿಯುಬಿ/463/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2021–22
S.W.Railways SWRRLY SWRRLY

ನೈಋತ್ಯ ರೈಲ್ವೆ
ಪ್ರಕಟಣೆ
ರೈಲ್ವೆ ನಿಲ್ದಾಣಗಳಲ್ಲಿ ಸ್ಥಳೀಯ ಉತ್ಪನ್ನಗಳ ಪ್ರಚಾರ ಚಟುವಟಿಕೆಗಳು
ಚನ್ನಪಟ್ಟಣದ ಆಟಿಕೆಗಳ ಉತ್ಪಾದಕರು, ವಿಶೇಷವಾಗಿ ಕರ್ನಾಟಕದ "ಗೊಂಬೆಗಳ ಊರು" ಎಂದು ಹೆಸರಾದ ಚನ್ನಪಟ್ಟಣದ ಉತ್ಪಾದಕರು, ಅವರ ಸಂಘಗಳಿಂದ ಸರ್ಕಾರಿ ಏಜೆನ್ಸಿಗಳನ್ನು ಒಳಗೊಂಡು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪ್ರಯಾಣಿಕರಿಗೆ ಸುಲಭವಾಗಿ ಲಭಿಸುವಂತೆ ತಾತ್ಕಾಲಿಕ ಕಾರ್ಯನಿರತ ಮಳಿಗೆಯನ್ನು ಭಾಗವಹಿಸುವವರಿಗೆ ಒದಗಿಸಲಾಗುವುದು. ಭಾಗವಹಿಸುವವರು ನಿಲ್ದಾಣಗಳಲ್ಲಿ ಮತ್ತು ಪ್ಲ್ಯಾಟ್‌ಫಾರಂಗಳ ಮೇಲೆಯೂ ಸಹ ಆಟಿಕೆಗಳನ್ನು ಮಾರಾಟ ಮಾಡಬಹುದು. 25ನೇ ಮಾರ್ಚ್ 2022 ರಿಂದ ಜಾರಿಯಾಗುವಂತೆ ಮಳಿಗೆಯ ಅವಧಿಯು 15 ದಿನಗಳಾಗಿದ್ದು, ... ಕೇವಲ ... ನೀಡಲಾಗುವುದು. ... ಸಲ್ಲಿಕೆಯ ... ಮಂಜೂರು ... ರೂ. 500/– ... ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು, ... ಬೆಂಗಳೂರು – 560 023, ... ದಿನಾಂಕ : 22–03–2022ರಂದು 16:00 ಗಂಟೆಯ ಒಳಗೆ ... 22–03–2022 ... ಆಸಕ್ತಿಯುಳ್ಳವರು ... ವ್ಯವಸ್ಥಾಪಕರು (9731666950) ... ಅಧೀಕ್ಷಕರು (9731666905) ... ಸಂಪರ್ಕಿಸಬಹುದು.
ಹೆಚ್ಚಿನ ವಿವರಗಳಿಗಾಗಿ www.swr.indianrailways.gov.in ಗೆ ಲಾಗ್‌ಆನ್ ಮಾಡಿ.
ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು ಬೆಂಗಳೂರು
S.W.Railways SWRRLY SWRRLY

ಸಾರ್ವಜನಿಕ ಪ್ರಕಟಣೆ
ನನ್ನ ಕಕ್ಷಿದಾರರು ಷೆಡ್ಯೂಲ್‌ನಲ್ಲಿ (ಇನ್ನು ಮುಂದೆ ಇದನ್ನು "ಷೆಡ್ಯೂಲ್ ಸ್ವತ್ತು" ಎಂದು ಕರೆಯಲಾಗುವುದು) ವಿವರಿಸಿರುವ ಸ್ಥಿರಾಸ್ತಿಗಳನ್ನು ಅದರ ಮಾಲೀಕರಿಂದ ಖರೀದಿಸಲು ಆಸಕ್ತಿ ಹೊಂದಿದ್ದಾರೆ. ಸ್ವತ್ತಿನ ಪ್ರಸ್ತುತ ಮಾಲೀಕರು, ಇತರೆ ವಿವರಗಳನ್ನು ಈ ಕೆಳಕಂಡ ಷೆಡ್ಯೂಲ್‌ನಲ್ಲಿ ಒದಗಿಸಲಾಗಿದೆ.
ಷೆಡ್ಯೂಲ್ ಆಸ್ತಿ ಹಾಗೂ ಅದರ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿ ಮಾಲೀಕರ ಅಥವಾ ಹಿಂದಿನ ಮಾಲೀಕರ ಬಗ್ಗೆ ಯಾವುದೇ ಹಕ್ಕು, ಶೀರ್ಷಿಕೆ, ಆಸಕ್ತಿ ಅಥವಾ ಬೇಡಿಕೆಯನ್ನು (ನೋಂದಾಯಿತ ಅಥವಾ ನೋಂದಾಯಿಸದ) ಹೊಂದಿದ್ದರೆ, ಶೀರ್ಷಿಕೆ ಅಥವಾ ಯಾವುದೇ ವಹಿವಾಟುಗಳು ಅಥವಾ ದಾಖಲೆಗಳು ಇದ್ದಲ್ಲಿ ಅವುಗಳನ್ನು ಈ ಸೂಚನೆಯ ಪ್ರಕಟಣೆಯ 10 (ಹತ್ತು) ದಿನಗಳೊಳಗಾಗಿ ತಮ್ಮ ಹೇಳಿಕೆಗಳು, ಆಕ್ಷೇಪಣೆಗಳನ್ನು ಬರವಣಿಗೆಯಲ್ಲಿ ಸಲ್ಲಿಸತಕ್ಕದ್ದು.
ನಿಗದಿತ ಸಮಯದಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸದಿದ್ದಲ್ಲಿ, ಯಾವುದೇ ವ್ಯಕ್ತಿಗೆ ಯಾವುದೇ ಹಕ್ಕು, ಶೀರ್ಷಿಕೆ, ಆಸಕ್ತಿ, ಕ್ಲೈಮ್, ಬೇಡಿಕೆ, ಶುಲ್ಕ ಅಥವಾ ಹೊರೆ ಇರುವುದಿಲ್ಲ ಎಂದು ನಾವು ಖಚಿತವಾಗಿ ಭಾವಿಸಿ ಮಾಲೀಕರು ಷೆಡ್ಯೂಲ್ ಸ್ವತ್ತಿನ ಬಗ್ಗೆ ಸಂಪೂರ್ಣವಾದ ಹಕ್ಕನ್ನು ಹೊಂದಿದ್ದಾರೆ ಎಂದು ದೃಢೀಕರಿಸಿ ನಮ್ಮ ಅಭಿಪ್ರಾಯವನ್ನು ತಿಳಿಸುತ್ತೇವೆ.
ಸ್ವತ್ತಿನ ಷೆಡ್ಯೂಲ್
ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕಿನ ವಿಜಯಪುರ ಹೋಬಳಿಯಲ್ಲಿನ ಚಿಕ್ಕತತ್ತಮಂಗಲ, ಕೊಂಡೇನಹಳ್ಳಿ ಮತ್ತು ದಂಡಿಗನಹಳ್ಳಿ ಗ್ರಾಮಗಳಿಗೆ ಒಳಪಟ್ಟಿರುವ ಈ ಕೆಳಗೆ ನಮೂದಿಸಿರುವ ಸರ್ವೆ ನಂಬರುಗಳನ್ನು ಒಳಗೊಂಡ ಎಲ್ಲಾ ಭಾಗಗಳು ಮತ್ತು ಜಮೀನುಗಳು:

ಕ್ರ. ಸಂ.	ಸರ್ವೆ ನಂಬರ್	ಗ್ರಾಮ	ಮಾಲೀಕರು	ವಿಸ್ತೀರ್ಣ		ಕರಾಬ್	ಚಕ್ಕುಬಂದಿ			
				ಎಕರೆ	ಗುಂಟೆ	ಎ/ಗುಂಟೆ	ಪೂರ್ವಕ್ಕೆ	ಪಶ್ಚಿಮಕ್ಕೆ	ಉತ್ತರಕ್ಕೆ	ದಕ್ಷಿಣಕ್ಕೆ
1.	88 (ಹಳೇ ಸ. ನಂ.36)	ಚಿಕ್ಕತತ್ತಮಂಗಲ	ಬಿ. ಎನ್. ಬೈರೇಗೌಡ	4	0	1ಎಕರೆ 28ಗುಂಟೆ	ಸ. ನಂ. 87	ಸ. ನಂ. 89	ಸ. ನಂ. 71/2 & 77	ವಿಜಯಪುರ ರಸ್ತೆ
2.	89 ರ ಭಾಗ (ಹಳೇ ಸ. ನಂ.36)	ಚಿಕ್ಕತತ್ತಮಂಗಲ	ಎನ್ ನಳಿನಾ ಮತ್ತು ಎನ್ ರೋಶಿನಿ	1	39	0	ಸ. ನಂ. 88	ಸ. ನಂ. 89 ರ ಭಾಗ	ಸ. ನಂ. 77 ರ ಕೊಂಡೇನಹಳ್ಳಿ ಗ್ರಾಮ	ವಿಜಯಪುರ ರಸ್ತೆ
3.	57/2 (ಹಳೇ ಸ. ನಂ.21)	ಕೊಂಡೇನಹಳ್ಳಿ	ಭರತ್ ಬಿ	2	0	0.8	ಸ. ನಂ. 77	ಸ. ನಂ. 49/2	ಸ. ನಂ. 57/1	ಸ. ನಂ. 58
4.	58	ಕೊಂಡೇನಹಳ್ಳಿ	ಭಾರತಿ ಬಿ ಗೌಡ	4	0	1	ಸ. ನಂ. 77	ಸ. ನಂ. 49/2 ಮತ್ತು 50	ಸ. ನಂ. 57/2	ಸ. ನಂ. 59
5.	59	ಕೊಂಡೇನಹಳ್ಳಿ	ಭಾರತಿ ಬಿ ಗೌಡ	4	0	1	ಸ. ನಂ. 77	ಸ. ನಂ. 50	ಸ. ನಂ. 58	ಸ. ನಂ. 77, 78 79 ಮತ್ತು 21
6.	71/2	ಕೊಂಡೇನಹಳ್ಳಿ	ಭಾರತಿ ಬಿ ಗೌಡ	2	0	0	ಕೊಕ್ರಪಡಿ ಗ್ರಾಮದ ಗಡಿ	ಸ. ನಂ. 77	ಸ. ನಂ. 71/1	ಚಿಕ್ಕತತ್ತಮಂಗಲ ಗ್ರಾಮದ ಗಡಿ
7.	79 (ಹಳೇ ಸ. ನಂ. 21/29)	ಕೊಂಡೇನಹಳ್ಳಿ	ಎನ್ ನಳಿನಾ ಎನ್ ರೋಶಿನಿ ಮತ್ತು ನಂಜಮ್ಮ	4	0	0	ಸ. ನಂ. 78	ಸ. ನಂ. 21 ಮತ್ತು 80	ಸ. ನಂ. 59	ಚಿಕ್ಕತತ್ತಮಂಗಲ ಗ್ರಾಮದ ಗಡಿ
8.	80 (ಹಳೇ ಸ. ನಂ. 21/47)	ಕೊಂಡೇನಹಳ್ಳಿ	ಎನ್ ನಳಿನಾ ಎನ್ ರೋಶಿನಿ ಮತ್ತು ನಂಜಮ್ಮ	2	0	0	ಸ. ನಂ. 79	ಸ. ನಂ. 21	ಸ. ನಂ. 21	ಚಿಕ್ಕತತ್ತಮಂಗಲ ಗ್ರಾಮದ ಗಡಿ
9.	78 (ಹಳೇ ಸ. ನಂ. 21/45)	ಕೊಂಡೇನಹಳ್ಳಿ	ಬಿ.ಎನ್. ಬೈರೇಗೌಡ	2	0	0	ಸ. ನಂ. 77	ಸ. ನಂ. 79	ಸ. ನಂ. 59	ಚಿಕ್ಕತತ್ತಮಂಗಲ ಗ್ರಾಮದ ಗಡಿ
10.	21/50	ಕೊಂಡೇನಹಳ್ಳಿ	ಎನ್ ನಳಿನಾ ಎನ್ ರೋಶಿನಿ ಮತ್ತು ನಂಜಮ್ಮ	2	0	0	ಸ. ನಂ. 79	ಸ. ನಂ. 21	ಸ. ನಂ. 21	ಸ. ನಂ. 80
11.	77 (ಹಳೇ ಸ. ನಂ. 21/31)	ಕೊಂಡೇನಹಳ್ಳಿ	ಬಿ.ಎನ್. ಬೈರೇಗೌಡ	4	0	0	ಸ. ನಂ. 71/1, 71/2, ಮತ್ತು 21	ಸ. ನಂ. 78	ಸ. ನಂ. 59, 58, ಮತ್ತು 57/2	ಚಿಕ್ಕತತ್ತಮಂಗಲ ಗ್ರಾಮದ ಗಡಿ
12.	51	ಕೊಂಡೇನಹಳ್ಳಿ	ಸಂಜೀವ್ ಪ್ರಕಾಶ್ HUF & ಸೂರಜ್ ಪ್ರಕಾಶ್ HUF	5	0	10	ಸ. ನಂ. 21	ದಂಡಿಗನಹಳ್ಳಿ ಗ್ರಾಮದ ಗಡಿ	ಸ. ನಂ. 50	ಸ. ನಂ. 21
13.	49/2	ಕೊಂಡೇನಹಳ್ಳಿ	ಸಂಜೀವ್ ಪ್ರಕಾಶ್ HUF & ಸೂರಜ್ ಪ್ರಕಾಶ್ HUF	2	27	3	ಸ. ನಂ. 55/3 56, 57/1, 57/2 ಮತ್ತು 58	ಸ. ನಂ. 48/2	ಸ. ನಂ. 49/1	ಸ. ನಂ. 50
14.	48/2	ಕೊಂಡೇನಹಳ್ಳಿ	ಸಂಜೀವ್ ಪ್ರಕಾಶ್ HUF & ಸೂರಜ್ ಪ್ರಕಾಶ್ HUF	2	30	3	ಸ. ನಂ. 49/2	ದಂಡಿಗನಹಳ್ಳಿ ಗ್ರಾಮದ ಗಡಿ	ಸ. ನಂ. 48/1	ಸ. ನಂ. 50
15.	75/1	ಕೊಂಡೇನಹಳ್ಳಿ	ಆರ್. ಮುನಿರತ್ನಮ್ಮ	2	0	0	ಸ. ನಂ. 21	ದಂಡಿಗನಹಳ್ಳಿ ಗ್ರಾಮದ ಗಡಿ	ಸ. ನಂ. 21	ಸ. ನಂ. 75/2
16.	75/2	ಕೊಂಡೇನಹಳ್ಳಿ	ಪಿ. ಶಿವಮಲ್ಲಪ್ಪ	2	0	0	ಸ. ನಂ. 21	ದಂಡಿಗನಹಳ್ಳಿ ಗ್ರಾಮದ ಗಡಿ	ಸ. ನಂ. 75/1	ಸ. ನಂ. 21
17.	21 (ಹಳೇ ಸ.ನಂ.21/34)	ಕೊಂಡೇನಹಳ್ಳಿ	ಜಯಲಕ್ಷ್ಮಿ ಮತ್ತು ಇತರರು	4	0	0	ಸ. ನಂ. 21	ದಂಡಿಗನಹಳ್ಳಿ ಗ್ರಾಮದ ಗಡಿ	ಸ. ನಂ. 51	ಸ. ನಂ. 75/1
18.	21 (ಹಳೇ ಸ.ನಂ. 21/39)	ಕೊಂಡೇನಹಳ್ಳಿ	ಜಯಲಕ್ಷ್ಮಿ ಮತ್ತು ಇತರರು	2	0	0	ಚಿಕ್ಕತತ್ತಮಂಗಲ ಗ್ರಾಮದ ಗಡಿ ಮತ್ತು ಸರ್ವೆ ನಂ. 80	ಸ. ನಂ. 21	ಸ. ನಂ. 21 ಮತ್ತು 80	ಸ. ನಂ. 21/ಪಿ4
19.	21 (ಹಳೇ ಸ.ನಂ. 21/ಪಿ4)	ಕೊಂಡೇನಹಳ್ಳಿ	ಜಯಲಕ್ಷ್ಮಿ ಮತ್ತು ಇತರರು	2	0	0	ಚಿಕ್ಕತತ್ತಮಂಗಲ ಗ್ರಾಮದ ಗಡಿ	ಸ. ನಂ. 21	ಸ. ನಂ. 21/39	ಕೋರಮಂಗಲ ರಸ್ತೆ
20.	154	ದಂಡಿಗಾನಹಳ್ಳಿ	ಸಂಜೀವ್ ಪ್ರಕಾಶ್	2	0	0	ಕೊಂಡೇನಹಳ್ಳಿ ಗ್ರಾಮದ ಗಡಿ	ಸ. ನಂ. 113	ಸ. ನಂ. 113	ಸ. ನಂ. 153

ಜೆರಾಲ್ಡ್ ಮನೋಹರನ್, ಪಾಲುದಾರ, ಜೆಎಸ್‌ಎ, ವಕೀಲರು ಮತ್ತು ಸಾಲಿಸಿಟರ್ಸ್,
ಲೆವೆಲ್ 3, ಪ್ರೆಸ್ಟೀಜ್ ಒಬೆಲಿಸ್ಕ್, 3, ಕಸ್ತೂರ್ಬಾ ರಸ್ತೆ, ಬೆಂಗಳೂರು–560 001.
ದಿ: 19–03–2022 ದೂ: 080–43503600/080–43503610 ಇಮೇಲ್ ಐಡಿ – gerald@jsalaw.com ಬೆಂಗಳೂರು

ಕೋವಿಡ್: ಮುನ್ನೆಚ್ಚರಿಕೆಗೆ ಕೇಂದ್ರದ ಸೂಚನೆ



ನವದೆಹಲಿ (ಪಿಟಿಐ): ಆಗ್ನೇಯ ಏಷ್ಯಾ ಮತ್ತು ಯುರೋಪಿನ ಕೆಲವು ಭಾಗಗಳಲ್ಲಿ ಕೊರೊನಾ ವೈರಸ್ ಪ್ರಕರಣಗಳು ಹೆಚ್ಚುತ್ತಿರುವ ಬೆನ್ನಲ್ಲೇ ಕೇಂದ್ರ ಸರ್ಕಾರವು, ಶೀತಜ್ವರ ಮಾದರಿಯ ಆರೋಗ್ಯ ಸಮಸ್ಯೆ (ಐಎಲ್‌ಐ) ಮತ್ತು ತೀವ್ರ ಉಸಿರಾಟದ ಸಮಸ್ಯೆಗಳ (ಸಾರಿ) ಕುರಿತು ಮತ್ತೆ ಮೇಲ್ವಿಚಾರಣೆ ಆರಂಭಿಸುವಂತೆ ಎಲ್ಲ ರಾಜ್ಯ ಸರ್ಕಾರಗಳಿಗೆ ಸೂಚಿಸಿದೆ.

‘ಐಎಲ್‌ಐ’ ಮತ್ತು ‘ಸಾರಿ’ ಇರುವವರಿಗೆ ಕೋವಿಡ್ ಪರೀಕ್ಷೆ ಸಹಿತ ವಿವಿಧ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಬೇಕು. ಕೋವಿಡ್ ನಿರ್ವಹಣೆಗೆ ಇದು ಪ್ರಮುಖ ಆಧಾರ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಭಾರತದಲ್ಲಿ ಕೋವಿಡ್ ಪ್ರಕರಣಗಳಲ್ಲಿ ಇಳಿಕೆ ಕಂಡುಬಂದ ಕಾರಣ ಇತ್ತೀಚೆಗೆ ಪರೀಕ್ಷೆಗಳನ್ನು ಸ್ಥಗಿತಗೊಳಿಸಲಾಗಿತ್ತು.

‘ಐಎಲ್‌ಐ’ ಮತ್ತು ‘ಸಾರಿ’ ಕಾರಣಕ್ಕಾಗಿ ಆಸ್ಪತ್ರೆಗೆ ದಾಖಲಾಗುವ ರೋಗಿಗಳ ಗಂಟಲ ದ್ರವದ ಮಾದರಿಯನ್ನು ವೈರಾಣುವಿನ ವಂಶವಾಹಿಗಳ ಸಂರಚನೆಯ ವಿಶ್ಲೇಷಣೆಗಾಗಿ (ಜೀನೋಮ್ ಸೀಕ್ವೆನ್ಸಿಂಗ್) ಕಳುಹಿಸುವಂತೆ ಸರ್ಕಾರ ಸೂಚಿಸಿದೆ.

ಈ ಕುರಿತು ಕೇಂದ್ರ ಆರೋಗ್ಯ ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಭೂಷಣ್ ಅವರು ಎಲ್ಲ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಪತ್ರ ಬರೆದು, ಹೊಸ ಕೋವಿಡ್ ರೂಪಾಂತರಗಳನ್ನು ಸಮಯೋಚಿತವಾಗಿ ಪತ್ತೆಹಚ್ಚಲು ಸಾಕಷ್ಟು ಸಂಖ್ಯೆಯಲ್ಲಿ ಮಾದರಿಗಳನ್ನು ವೈರಾಣು ಸಂರಚನಾ ವಿಶ್ಲೇಷಣೆ ಸಂಸ್ಥೆಯಾದ ಐಎನ್‌ಎಸ್‌ಎಸಿಒಜಿ ಜಾಲಕ್ಕೆ ಸಲ್ಲಿಸುವಂತೆ ಸೂಚಿಸಿದ್ದಾರೆ.

ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳು ಪುನರಾರಂಭವಾಗಿರುವ ಈ ಸಂದರ್ಭದಲ್ಲಿ ಇನ್ನಷ್ಟು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡು, ಕೋವಿಡ್ ನಿಯಮಗಳನ್ನು ಪಾಲಿಸುವಂತೆ ಕ್ರಮಗಳನ್ನು ತೆಗೆದುಕೊಳ್ಳಬೇಕು. ಹೊಸ ಪ್ರಕರಣಗಳು ಪತ್ತೆಯಾದರೆ ಕೂಡಲೇ ಸೋಂಕಿತರ ಸಂಪರ್ಕದಲ್ಲಿ ಇರುವವರನ್ನು ಪರೀಕ್ಷೆಗೆ ಒಳಪಡಿಸಿ ಕಣ್ಗಾವಲು ಇಡಬೇಕು. ಈ ಮೂಲಕ ಸೋಂಕು ಹರಡುವಿಕೆ ನಿಯಂತ್ರಿಸಲು ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಕೋವಿಡ್ ನಿಯಮಗಳ ಪಾಲನೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಗಳು ಜನ ಜಾಗೃತಿ ಮೂಡಿಸುವುದರ ಜತೆಗೆ, ನಿಯಮಿತವಾಗಿ ಕೈ ಶುಚಿಗೊಳಿಸುವ ಮತ್ತು ವೈಯಕ್ತಿಕ ಅಂತರ ಸೇರಿದಂತೆ ಇತರ ಮುನ್ನೆಚ್ಚರಿಕಾ ಕ್ರಮಗಳನ್ನು ಅನುಸರಿಸುವಂತೆ ಅರಿವು ಮೂಡಿಸಬೇಕು. ಕೋವಿಡ್ ನಿಯಮಗಳನ್ನು ಸಮರ್ಪಕವಾಗಿ ಪಾಲಿಸಬೇಕು ಎಂದು ರಾಜೇಶ್ ಭೂಷಣ್ ಅವರಯ ಸೂಚಿಸಿದ್ದಾರೆ.

ಕೋವಿಡ್ ಪರಿಸ್ಥಿತಿಯ ಮಧ್ಯಭಾಗದಲ್ಲಿದ್ದೇವೆ–ಡಬ್ಲ್ಯುಎಚ್‌ಒ

ಜಿನೀವಾ (ರಾಯಿಟರ್ಸ್): ‘ಕೋವಿಡ್–19 ಪರಿಸ್ಥಿತಿ ಇನ್ನೂ ಅಂತ್ಯಗೊಂಡಿಲ್ಲ’ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಸ್ಪಷ್ಟಪಡಿಸಿದೆ.

ಕೋವಿಡ್ ಕುರಿತ ಹೊಸ ಅಂಕಿ ಅಂಶಗಳನ್ನು ಆಧರಿಸಿ ಡಬ್ಲ್ಯುಎಚ್‌ಒ ವಕ್ತಾರರಾದ ಮಾರ್ಗರೆಟ್ ಹ್ಯಾರಿಸ್ ಅವರು ಈ ವಿಷಯ ತಿಳಿಸಿದ್ದಾರೆ.

‘ನಾವು ಖಂಡಿತವಾಗಿಯೂ ಸದ್ಯ ಕೋವಿಡ್ ಪರಿಸ್ಥಿತಿಯ ಮಧ್ಯದಲ್ಲಿದ್ದೇವೆ’ ಎಂದು ಅವರು ಹೇಳಿದರು.

ದೇವತ್ಕಲ್: ಸಚಿವ ಅಶೋಕ ಗ್ರಾಮವಾಸ್ತವ್ಯ ಇಂದು

ಯಾದಗಿರಿ: ‘ಜಿಲ್ಲಾಧಿಕಾರಿ ನಡೆ ಹಳ್ಳಿ ಕಡೆ’ ಕಾರ್ಯಕ್ರಮದ ಭಾಗವಾಗಿ ಕಂದಾಯ ಸಚಿವ ಆರ್. ಅಶೋಕ ಅವರು ಸುರಪುರ ತಾಲ್ಲೂಕಿನ ದೇವತ್ಕಲ್‌ನಲ್ಲಿ ಇದೇ 19ರಂದು ಗ್ರಾಮ ವಾಸ್ತವ್ಯ ಮಾಡಲಿದ್ದಾರೆ.

11.30ರ ಕಾರ್ಯಕ್ರಮದಲ್ಲಿ ಸಿಎಂ ಬಸವರಾಜ ಬೊಮ್ಮಾಯಿ ಅವರು ₹ 1,060 ಕೋಟಿ ವೆಚ್ಚದ 102 ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಿದ್ದಾರೆ. ಸಚಿವ ಗೋವಿಂದ ಕಾರಜೋಳ ಪಾಲ್ಗೊಳ್ಳುವರು.

Walk in Interview

ರಿಲೇಷನ್‌ಶಿಪ್ ಎಗ್ಸಿಕ್ಯೂಟಿವ್ ಜ್ಯು. ಅಸಿಸ್ಟೆಂಟ್ (ಪುರುಷರಿಗಾಗಿ)

ವಿದ್ಯಾರ್ಹತೆ : (ಪದವಿಧರರು ಕನಿಷ್ಟ ಸರಾಸರಿ 40% ಅಂಕಗಳು)/ ಸ್ನಾತಕೋತ್ತರ ಪದವಿ ಯಾವುದೇ ಕ್ಷೇತ್ರದಲ್ಲಿ. ವಯಸ್ಸಿನ ಮಿತಿ: 25 ವರ್ಷಕ್ಕಿಂತ ಒಳಗಿನವರಾಗಿರಬೇಕು.

ದಯವಿಟ್ಟು ಪ್ರಮಾಣಪತ್ರ ತನ್ನಿ, 10 ನೇ ತರಗತಿಯಿಂದ ನಂತರದ ನಿಮ್ಮ ಎಲ್ಲ ವರ್ಷಾನುಕ್ರಮ/ಸೆಮಿಸ್ಟರ್ ಆಧಾರಿತ ಮೂಲ ಮತ್ತು ದೃಢೀಕರಿಸಿದ ಪ್ರತಿಗಳು, ಪಾನ್ ಕಾರ್ಡ್, 4 ಪಾಸ್‌ಪೋರ್ಟ್ ಸೈಜ್ ಫೋಟೋಗಳು.

ಸಂದರ್ಶನದ ಸ್ಥಳಗಳು
ಅಭ್ಯರ್ಥಿಗಳು ತಮ್ಮ ಸಮೀಪದ ಸ್ಥಳದಲ್ಲಿ (ಶಾಖೆ) ನೇರವಾಗಿ ಸಂದರ್ಶನಕ್ಕೆ ಬರಬಹುದು

Date : 20.03.2022 & 22.03.2022
Sunday & Tuesday
ಸಮಯ : 9.30 ಮುಂಜಾನೆಯಿಂದ 4.00 ಸಾ.

Contact : 9108470770, 9342787552, 9379073169, 9353049419

ಆಕರ್ಷಕ ವೇತನ ಲಾಭಗಳು. ಹೊರ ಊರಿನ ಅಭ್ಯರ್ಥಿಗಳಿಗಾಗಿ ಉಚಿತ ಉಳಿದುಕೊಳ್ಳುವ ಹಾಸ್ಟೆಲ್ ವ್ಯವಸ್ಥೆ ಮಾಡಲಾಗುತ್ತದೆ.

ಮಣಪ್ಪುರಂ ಫೈನಾನ್ಸ್ ಲಿಮಿಟೆಡ್
Make Life Easy
Toll Free : 1800 420 22 33

CCA ESTD: 1999
ಚಾಣಕ್ಯ ಕರಿಯರ್ ಅಕಾಡೆಮಿ ವಿಜಯಪುರ
(IAS & KAS ತರಬೇತಿ ಕೇಂದ್ರ)

15000 ಶಿಕ್ಷಕರ ನೇಮಕಾತಿ

ಆನ್‌ಲೈನ್ ರೆಕಾರ್ಡೆಡ್ ವಿಡಿಯೋ ಕ್ಲಾಸುಗಳು

(ಪೇಪರ್–1 & ಪೇಪರ್–2)

ಕಲಾ ಶಿಕ್ಷಕರು	ಗಣಿತ & ವಿಜ್ಞಾನ ಶಿಕ್ಷಕರು	ಇಂಗ್ಲೀಷ ಶಿಕ್ಷಕರು
4000/-	6000/-	3000/-

ಪೇಪರ್–1	278 ವಿಡಿಯೋ ತರಗತಿಗಳು
ಪೇಪರ್–2 ವಿಜ್ಞಾನ & ಗಣಿತ	216 ವಿಡಿಯೋ ತರಗತಿಗಳು
ಪೇಪರ್–2 ಇಂಗ್ಲೀಷ ಶಿಕ್ಷಕರು	100 ವಿಡಿಯೋ ತರಗತಿಗಳು
ಪೇಪರ್–2 ಸಮಾಜ ವಿಜ್ಞಾನ ಶಿಕ್ಷಕರು	176 ವಿಡಿಯೋ ತರಗತಿಗಳು

ಆನ್‌ಲೈನ್ ರೆಕಾರ್ಡೆಡ್ ವಿಡಿಯೋ ಕ್ಲಾಸಗಳು ತೃಪ್ತಿಕರವಾಗದಿದ್ದರೆ ಹಣ ಹಿಂತಿರುಗಿಸಲಾಗುವುದು.

ಪ್ರವೇಶಕ್ಕಾಗಿ PhonePe | Paytm 9880957562 ಮೂಲಕ ಹಣ ಸಂದಾಯ ಮಾಡಬಹುದು

PhonePe/ Paytm ಜಮಾ ಮಾಡಿದ ರಶೀದಿ ಹಾಗೂ ಹೆಸರನ್ನು ಕಡ್ಡಾಯವಾಗಿ ಈ ವಾಟ್ಸ್‌ಆಪ್ ನಂಬರಿಗೆ 7795397159 ಕಳುಹಿಸಬೇಕು

ಮಲಘಾಣ ಬಿಲ್ಡಿಂಗ್, ಮೀನಾಕ್ಷಿ ಚೌಕ, ವಿಜಯಪುರ
☎: 08352-222197, 240197 Cell : 9448179762, 9900056218

ಕೋವಿಡ್‌ನಿಂದಾಗಿ ಮೂತ್ರಪಿಂಡ ಸಮಸ್ಯೆ ಹೆಚ್ಚಳ: ಡಾ.ನರೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ಕಾಣಿಸಿಕೊಂಡ ಬಳಿಕ ಜನರ ಓಡಾಟ ಹಾಗೂ ದೈಹಿಕ ಚಟುವಟಿಕೆಗಳು ಕಡಿಮೆ ಆಗಿವೆ. ಇದರಿಂದಾಗಿ ಮಧುಮೇಹ ಹಾಗೂ ತೀವ್ರತರ ಬೊಜ್ಜು ಸಮಸ್ಯೆ ಹೊಂದಿರುವವರಲ್ಲಿ ಮೂತ್ರಪಿಂಡ ಸಮಸ್ಯೆಗಳು ಹೆಚ್ಚುತ್ತಿವೆ’ ಎಂದು ಬಿಜಿಎಸ್ ಗ್ಲೆನಿಗಲ್ಸ್ ಗ್ಲೋಬಲ್ ಆಸ್ಪತ್ರೆಯ ಮೂತ್ರಶಾಸ್ತ್ರ ತಜ್ಞ ಡಾ.ಎಸ್. ನರೇಂದ್ರ ಕಳವಳ ವ್ಯಕ್ತಪಡಿಸಿದರು.

ಆಸ್ಪತ್ರೆಯು 12 ವರ್ಷಗಳಲ್ಲಿ 640 ಮೂತ್ರಪಿಂಡ ಕಸಿ ನಡೆಸಿದೆ. 2020ರಲ್ಲಿ 39 ಹಾಗೂ 2021ರಲ್ಲಿ 71 ಕಸಿ ಶಸ್ತ್ರಚಿಕಿತ್ಸೆಗಳನ್ನು ಮಾಡಲಾಗಿದೆ. ಈ ಬಗ್ಗೆ ವಿವರಿಸಿದ ಅವರು, ‘ಕಳಪೆ ಜೀವನಶೈಲಿ, ಪಾಶ್ಚಾತ್ಯ ಆಹಾರ ಪದ್ಧತಿ ಹಾಗೂ ಒತ್ತಡದ ಜೀವನ ವಿಧಾನವು ಆರೋಗ್ಯದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತಿದೆ. ಜೀವನಶೈಲಿ ಸುಧಾರಣೆ ಮತ್ತು ಆರಂಭಿಕ ಹಂತದಲ್ಲಿಯೇ ರೋಗ ಪತ್ತೆಯಿಂದ ಮೂತ್ರಪಿಂಡ ಸಮಸ್ಯೆ ತಡೆಗಟ್ಟಲು ಸಾಧ್ಯ’ ಎಂದು ಡಾ.ಎಸ್. ನರೇಂದ್ರ ಹೇಳಿದರು.

ಮೂತ್ರಪಿಂಡ ಕಸಿ ವಿಭಾಗದ ಮುಖ್ಯಸ್ಥ ಡಾ.ಬಿ.ಟಿ. ಅನಿಲ್ ಕುಮಾರ್, ‘ಕೋವಿಡ್ ಪ್ರಕರಣಗಳು ಗರಿಷ್ಠ ಸಂಖ್ಯೆಗೆ ತಲುಪಿದಾಗ ಅಂಗಾಂಗ ದಾನ ಮತ್ತು ಕಸಿ ಶಸ್ತ್ರಚಿಕಿತ್ಸೆಗೆ ಸಮಸ್ಯೆಯಾಗಿತ್ತು. ಈ ಅವಧಿಯಲ್ಲಿ ಕಸಿ ಪ್ರಮಾಣ ಶೇ 50ರಿಂದ ಶೇ 90ರಷ್ಟು ಇಳಿಕೆಯಾಗಿತ್ತು. ಕಸಿ ಮಾಡಿಸಿಕೊಂಡ ರೋಗಿಗಳು ನಿಯಮಿತವಾಗಿ ಆಸ್ಪತ್ರೆಗಳಿಗೆ ಭೇಟಿ ನೀಡಿ, ತಪಾಸಣೆ ಮಾಡಿಸಿಕೊಳ್ಳುವುದೂ ಕಷ್ಟವಾಗಿತ್ತು. ಇದರಿಂದ ಅನೇಕರಲ್ಲಿ ಮೂತ್ರಪಿಂಡ ಸಮಸ್ಯೆ ಗಂಭೀರ ಸ್ವರೂಪಕ್ಕೆ ತಿರುಗಿ, ಮೂತ್ರಪಿಂಡ ವೈಫಲ್ಯವೂ ಸಂಭವಿಸಿದೆ’ ಎಂದು ವಿವರಿಸಿದರು.

ನವೀನ್ ಪಾರ್ಥಿವ ಶರೀರ 21ರಂದು ತಾಯ್ನಾಡಿಗೆ: ಸಿ.ಎಂ

ಒಂದನೇ ಪುಟದಿಂದ

ಮಗನ ದೇಹದಾನ (ಹಾವೇರಿ ವರದಿ): ‘ಮಗನ ಮೃತದೇಹವನ್ನು ದಾನ ಮಾಡುತ್ತೇವೆ’ ಎಂದು ನವೀನ್ ಅವರ ತಂದೆ ಶೇಖರಪ್ಪ ಗ್ಯಾನಗೌಡರ ತಿಳಿಸಿದರು. ‘ನನ್ನ ಮಗ ವೈದ್ಯಕೀಯ ಕ್ಷೇತ್ರದಲ್ಲಿ ಸಾಧನೆ ಮಾಡಬೇಕು ಎಂಬ ಆಸೆ ಹೊಂದಿದ್ದ. ಬೇರೆ ವೈದ್ಯಕೀಯ ವಿದ್ಯಾರ್ಥಿಗಳ ಮುಖಾಂತರವಾದರೂ ಅವನ ಮೃತದೇಹ ವೈದ್ಯಕೀಯ ಕ್ಷೇತ್ರಕ್ಕೆ ಬಳಕೆಯಾಗಲಿ’ ಎಂದು ಗ್ಯಾನಗೌಡರ ಹೇಳಿದರು.

12-14 ವರ್ಷ: 68,321 ಮಕ್ಕಳಿಗೆ ಲಸಿಕೆ

ಬೆಂಗಳೂರು: ರಾಜ್ಯದಲ್ಲಿ ಮೂರು ದಿನಗಳ ಅವಧಿಯಲ್ಲಿ 12-14 ವರ್ಷ ವಯೋಮಾನದ 68,321 ಮಕ್ಕಳು ‘ಕೊರ್ಬೆವ್ಯಾಕ್ಸ್’ ಕೋವಿಡ್ ಲಸಿಕೆ ಪಡೆದುಕೊಂಡಿದ್ದಾರೆ.

ಕಳೆದ ಬುಧವಾರದಿಂದ ಈ ವಯೋಮಾನದವರಿಗೆ ಲಸಿಕೆ ವಿತರಣೆ ಪ್ರಾರಂಭವಾಗಿದೆ. 20 ಲಕ್ಷ ಮಕ್ಕಳು 12–14 ವರ್ಷದವರಾಗಿದ್ದಾರೆ. ಚಿತ್ರದುರ್ಗ (11,708), ಬಳ್ಳಾರಿ (7,892), ಕೋಲಾರ (7,776), ಚಾಮರಾಜನಗರ (7,366) ಹಾಗೂ ತುಮಕೂರಿನಲ್ಲಿ (5,788) ಅಧಿಕ ಮಕ್ಕಳಿಗೆ ಲಸಿಕೆ ನೀಡಲಾಗಿದೆ.

ಈ ಸಂಖ್ಯೆ ಧಾರವಾಡ (20), ಬೀದರ್ (21), ಹಾವೇರಿ (23), ಬೆಳಗಾವಿ (39), ಶಿವಮೊಗ್ಗ (40) ಹಾಗೂ ದಾವಣಗೆರೆಯಲ್ಲಿ (47) 50ಕ್ಕಿಂತ ಕಡಿಮೆ ಇವೆ.

‘ಶಿವಾರ್ಚಕ ಜನಾಂಗವನ್ನು ‘ಪ್ರವರ್ಗ–3ಬಿ’ಗೆ ಸೇರಿಸಿ’

ಬೆಂಗಳೂರು: ‘ಎಲ್ಲ ಕ್ಷೇತ್ರಗಳಲ್ಲಿ ಹಿಂದುಳಿದಿರುವ ಶಿವಾರ್ಚಕ ಜನಾಂಗವನ್ನು ಪ್ರವರ್ಗ 3ಬಿ ಪಟ್ಟಿಗೆ ಸೇರಿಸಬೇಕು ಹಾಗೂ ಇದಕ್ಕೆ ಸಂಬಂಧಿಸಿದ ಎನ್.ಶಂಕರಪ್ಪ ವರದಿಯನ್ನು ಸರ್ಕಾರ ಜಾರಿ ಮಾಡಬೇಕು’ ಎಂದು ರಾಜ್ಯ ಶಿವಾರ್ಚಕ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಸ್. ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

‘ಬೆಂಗಳೂರು, ರಾಮನಗರ, ಮಂಡ್ಯ, ಮೈಸೂರು, ಚಾಮರಾಜನಗರ, ಹಾಸನ ಜಿಲ್ಲೆಗಳಲ್ಲಿ ಶಿವಾರ್ಚಕ ಜನಾಂಗದವರು ಹೆಚ್ಚಿನ ಸಂಖ್ಯೆಯಲ್ಲಿದ್ದೇವೆ. ಈ ಪೈಕಿ ಹೆಚ್ಚಿನವರು ಶಿವನ ದೇವಸ್ಥಾನ ಮತ್ತು ಗ್ರಾಮ ದೇವತೆಗಳ ದೇವಸ್ಥಾನಗಳಲ್ಲಿ ಪೂಜೆ ಮಾಡಿಕೊಂಡು ಜೀವನ ನಡೆಸುತ್ತಿದ್ದೇವೆ. ಜನಾಂಗದವರು ಶಿಕ್ಷಣದಲ್ಲೂ ಹಿಂದುಳಿದಿದ್ದಾರೆ’.

‘ಈ ಹಿಂದೆ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಎನ್. ಶಂಕರಪ್ಪ ಅವರು ಶಿವಾರ್ಚಕ ಜನಾಂಗವನ್ನು 3ಬಿ ಪಟ್ಟಿಗೆ ಸೇರಿಸಬೇಕು ಎಂದು ಸರ್ಕಾರಕ್ಕೆ ಸಲಹೆ ನೀಡಿದ್ದರು. ಬಳಿಕ ಎಚ್.ಕಾಂತರಾಜು ಅಧ್ಯಕ್ಷರಾದರು. ಇವರು ಹಿಂದುಳಿದ ಜನಾಂಗಗಳ ವರದಿ ಸಿದ್ಧಪಡಿಸಿದ್ದಾರೆ. ಆದರೆ, ಈವರೆಗೆ ಸರ್ಕಾರ ವರದಿ ಜಾರಿ ಮಾಡಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಸಂಘ–ಸಂಸ್ಥೆ: ₹ 2.5 ಲಕ್ಷ ಅನುದಾನ ನಿಗದಿ

ಬೆಂಗಳೂರು: ‘ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಡಿ ನೋಂದಾಯಿಸಲ್ಪಟ್ಟ ಸಂಘ–ಸಂಸ್ಥೆಗಳಿಗೆ ವಾರ್ಷಿಕ ಅನುದಾನದ ಗರಿಷ್ಠ ಮೊತ್ತವನ್ನು ₹ 2.5 ಲಕ್ಷಕ್ಕೆ ಸೀಮಿತಗೊಳಿಸಲಾಗಿದೆ’ ಎಂದು ಸಚಿವ ವಿ.ಸುನಿಲ್ ಕುಮಾರ್ ತಿಳಿಸಿದ್ದಾರೆ.

‘ಅನುದಾನ ಹಂಚಿಕೆ ಕುರಿತಂತೆ ಕೆಲ ಸಂಘ–ಸಂಸ್ಥೆಗಳು ಏಕಸ್ವಾಮ್ಯ ಸ್ಥಾಪಿಸಿವೆ. ಬೋಗಸ್ ಸಂಸ್ಥೆಗಳ ಪಾಲಿಗೆ ಅನುದಾನ ಸೇರುತ್ತಿದೆ ಎಂಬ ಆರೋಪಗಳಿದ್ದವು. ಹೀಗಾಗಿ, ಈ ನಿರ್ಧಾರ ಕೈಗೊಳ್ಳಲಾಗಿದೆ’ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಕವನ ಸ್ಪರ್ಧೆ: ಪುಷ್ಪ ಪ್ರಸಾದ್ ಪ್ರಥಮ

ಬೆಂಗಳೂರು: ಕನ್ನಡ ಸಂಘರ್ಷ ಸಮಿತಿಯ ಅನ್ನಪೂರ್ಣೇಶ್ವರಿ ಬಡಾವಣೆ ಘಟಕವು ರಾಷ್ಟ್ರಕವಿ ಎಂ.ಗೋವಿಂದ ಪೈ ಅವರ 140ನೇ ಜನ್ಮದಿನದ ಪ್ರಯುಕ್ತ ಹಮ್ಮಿಕೊಂಡಿದ್ದ ಕವನ ಸ್ಪರ್ಧೆಯಲ್ಲಿ ಉಡುಪಿಯ ಪುಷ್ಪ ಪ್ರಸಾದ್ ಅವರಿಗೆ ಮೊದಲ ಬಹುಮಾನ ಲಭಿಸಿದೆ.

ಅವರು ರಚಿಸಿದ್ದ ‘ಇತಿಹಾಸ ಸೇರಿದ ಮಣ್ಣಿನ ಮಡಕೆ’ ಕವಿತೆಯು ಪ್ರಶಸ್ತಿಗೆ ಆಯ್ಕೆಯಾಗಿದ್ದು ₹2 ಸಾವಿರ ಬಹುಮಾನ ಸಿಗಲಿದೆ. ಬೆಂಗಳೂರಿನ ಗಿರೀಶ್ ಕನ್ನಡಿಗ ರಚಿಸಿದ್ದ ‘ಬಡತನ’ ಹಾಗೂ ಕಾನುಗೋಡುವಿನ ಟಿ.ಎಸ್. ಭವ್ಯ ಅವರ ‘ನಮ್ಮ ಹೆಮ್ಮೆಯ ಕನ್ನಡ ನಾಡು’ ಕವಿತೆಗಳು ಕ್ರಮವಾಗಿ ದ್ವಿತೀಯ ಹಾಗೂ ತೃತೀಯ ಬಹುಮಾನಗಳಿಗೆ ಆಯ್ಕೆಯಾಗಿವೆ. ಇವರು ಕ್ರಮವಾಗಿ ₹1,500 ಹಾಗೂ ₹1,000 ನಗದು ಪಡೆಯಲಿದ್ದಾರೆ’ ಎಂದು ಸಂಘದ ಅಧ್ಯಕ್ಷ ಎ.ಎಸ್. ನಾಗರಾಜಸ್ವಾಮಿ ತಿಳಿಸಿದ್ದಾರೆ.

ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ
ಭಾರತ ಸರ್ಕಾರ
ಮತ್ತು ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.

ಪರಿಶಿಷ್ಟ ಜಾತಿಯ ನಿರುದ್ಯೋಗಿ ಅಭ್ಯರ್ಥಿಗಳಿಗೆ ಉಚಿತ ವೃತ್ತಿಪರ ತರಬೇತಿ

ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 2021–22ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ನಿರುದ್ಯೋಗಿ ಯುವಕ ಮತ್ತು ಯುವತಿಯರಿಗೆ ಮೈಸೂರಿನಲ್ಲಿರುವ ಭಾರತ ಸರ್ಕಾರದ ಕೇಂದ್ರೀಯ ಪೆಟ್ರೋಕೆಮಿಕಲ್ಸ್ ತಂತ್ರಜ್ಞಾನ ಸಂಸ್ಥೆಯಲ್ಲಿ (CIPET). ಉಚಿತ ಊಟ ಹಾಗೂ ವಸತಿಯೊಂದಿಗೆ ಪ್ಲಾಸ್ಟಿಕ್ಸ್ ತಂತ್ರಜ್ಞಾನದ ಬಗ್ಗೆ 3 ತಿಂಗಳ ವಿವಿಧ ರೀತಿಯ ವೃತ್ತಿಪರ ತರಬೇತಿಗಳನ್ನು ಹಮ್ಮಿಕೊಳ್ಳಲಾಗಿದೆ. ತರಬೇತಿ ಅವಧಿಯಲ್ಲಿ ತಿಂಗಳಿಗೆ ರೂ. **2,000/-** ಶಿಷ್ಯ ವೇತನ ನೀಡಲಾಗುವುದು.

ತರಬೇತಿ ವಿವರ	ವಿದ್ಯಾರ್ಹತೆ	ಕಾರ್ಯಕ್ರಮದ ವಿಶೇಷತೆ
1. Machine Operator Assistant – Injection Moulding 2. Machine Operator Assistant – Plastics Processing	8th Pass / SSLC / PUC / Degree / ITI	• ಉಚಿತ ಊಟ ಹಾಗೂ ವಸತಿ • ಬೇಸಿಕ್ ಕಂಪ್ಯೂಟರ್ & ಸ್ಪೋಕನ್ ಇಂಗ್ಲೀಷ್ ತರಬೇತಿ • ತಿಂಗಳಿಗೆ 2,000/- ಶಿಷ್ಯ ವೇತನ ನೀಡಲಾಗುವುದು • ಕ್ಯಾಂಪಸ್ ಮುಖಾಂತರ ಉದ್ಯೋಗಾವಕಾಶಕ್ಕೆ ನೆರವು

ವಯೋಮಿತಿ: 18–35 ವರ್ಷ

ಆಯ್ಕೆಯ ವಿಧಾನ : ಉಚಿತ ತರಬೇತಿ ಪಡೆಯಲು ಇಚ್ಛಿಸುವ ಅರ್ಹ ಅಭ್ಯರ್ಥಿಗಳು ತಮ್ಮ ವಿದ್ಯಾರ್ಹತೆ, ಡೇಟ್ ಆಫ್ ಬರ್ತ್ ಪ್ರೂಫ್, ಗುರುತಿನ / ಐ ಡಿ ಪ್ರೂಫ್ (ಆಧಾರ್ ಕಾರ್ಡ್ / ವೋಟರ್ ಐಡಿ / ರೇಶನ್ ಕಾರ್ಡ್) ಇತ್ತೀಚಿನ ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ಎಲ್ಲಾ ಮೂಲ ದಾಖಲೆಗಳು ಮತ್ತು ಒಂದು ಸೆಟ್ ಪ್ರತಿ, 6 ಪಾಸ್ ಪೋರ್ಟ್ ಅಳತೆಯ ಇತ್ತೀಚಿನ ಫೋಟೋಗಳೊಂದಿಗೆ ಈ ಕೆಳಗೆ ಸೂಚಿಸಿದ ತರಬೇತಿ ಸಂಸ್ಥೆಯ ವಿಳಾಸದಲ್ಲಿ ಆಯ್ಕೆ ಸಂದರ್ಶನಕ್ಕೆ ಭಾಗವಹಿಸಲು ಸೂಚಿಸಲಾಗಿದೆ.

ತರಬೇತಿ ಸಂಸ್ಥೆಯ ವಿಳಾಸ :
ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ, ಭಾರತ ಸರ್ಕಾರ (CIPET, CSTS, GOI), 437/ಎ, ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ಮೈಸೂರು - 570 016

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
ಮೊ: 93807 56024, 90666 48466, 98458 73498, 0821-2510619
Email : sstcmys1@gmail.com

ಸಂಕ್ಷಿಪ್ತ ಸುದ್ದಿ

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ

ಬೆಂಗಳೂರು: ಆರ್.ಎಲ್.ಜಾಲಪ್ಪ ಅಕಾಡೆಮಿಯಿಂದ ಬಡ ಮತ್ತು ಗ್ರಾಮೀಣ ಭಾಗದ ಯುವಕ-ಯುವತಿಯರಿಗೆ ಕೆಎಎಸ್, ಪಿಎಸ್ಐ, ಎಫ್‌ಡಿಎ, ಎಸ್‌ಡಿಎ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ನಾಲ್ಕು ತಿಂಗಳ ಉಚಿತ ತರಬೇತಿ ನೀಡಲಾಗುವುದು.

ಏಪ್ರಿಲ್ 20ರಿಂದ ತರಬೇತಿ ಆರಂಭಗೊಳ್ಳಲಿದೆ. ಆಸಕ್ತರು www.rljacademy.in ವೆಬ್‌ಸೈಟ್‌ನಲ್ಲಿ ಏಪ್ರಿಲ್ 15ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ. ತರಬೇತಿ ಸ್ಥಳ: ಆರ್.ಎಲ್. ಜಾಲಪ್ಪ ಅಕಾಡೆಮಿ, ಸೋಲೂರು, ಮಾಗಡಿ ತಾಲ್ಲೂಕು, ರಾಮನಗರ. ಸಂಪರ್ಕ:9900 606042.

ಮಾರ್ಚ್ 27ರಂದು ಉದ್ಯೋಗ ಮೇಳ

ಬೆಂಗಳೂರು: 'ದೀನ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ ಯೋಜನೆ'ಯಡಿ (ಡಿಡಿಯು-ಜಿಕೆವೈ) ನಿರುದ್ಯೋಗಿಗಳಿಗೆ ಕುಂಬಳಗೋಡಿನ ರಾಜರಾಜೇಶ್ವರಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಮಾ.27ರಂದು ಬೆಳಿಗ್ಗೆ 9.30ರಿಂದ ಸಂಜೆ 4.30ರವರೆಗೆ ಉದ್ಯೋಗ ಮೇಳ ಆಯೋಜಿಸಲಾಗಿದೆ.

ಮುತ್ತೂಟ್ ಗ್ರೂಪ್, ಎಚ್‌ಡಿಎಫ್‌ಸಿ ಬ್ಯಾಂಕ್, ಆಕ್ಸಿಸ್ ಬ್ಯಾಂಕ್, ಯುರೇಕಾ ಫೋರ್ಬ್ಸ್, ಟೀಮ್ ಲೀಸ್, ಇಂಪ್ಯಾಕ್ಟ್, ರಿಲಯನ್ಸ್ ಸೇರಿದಂತೆ ಪ್ರತಿಷ್ಠಿತ ಕಂಪನಿಗಳು ಮೇಳದಲ್ಲಿ ಇರಲಿವೆ. ಆಸಕ್ತರು ಗೂಗಲ್ ಲಿಂಕ್ https://forms.gle/FcuM18DKZ7Gsngqm6 ಮೂಲಕ ನೋಂದಣಿ ಮಾಡಿಕೊಳ್ಳಬಹುದು. **ಸಂಪರ್ಕ:**99649 07444, 79750 14738.

ಲ್ಯಾಪ್‌ಟಾಪ್, ಟ್ಯಾಬ್ ವಿತರಣೆ

ಬೆಂಗಳೂರು: ಮಲ್ಲೇಶ್ವರ ಕ್ಷೇತ್ರ ವ್ಯಾಪ್ತಿಯ ಸರ್ಕಾರಿ ಶಾಲೆಗಳಿಗೆ 60 ಲ್ಯಾಪ್‌ಟಾಪ್ ಮತ್ತು 150 ಟ್ಯಾಬ್‌ಗಳನ್ನು ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ ವಿತರಿಸಿದರು.

ಡಾ.ಸಿ.ಎನ್. ಅಶ್ವತ್ಥನಾರಾಯಣ ಪ್ರತಿಷ್ಠಾನ, ಶಿಕ್ಷಣ ಫೌಂಡೇಷನ್ ಮತ್ತು ಇಂಡೋ-ಮಿಮ್ ಸಂಘಟನೆಗಳ ವತಿಯಿಂದ ಸುಬೇದಾರಪಾಳ್ಯದ ಶಾಲೆಯಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಲ್ಯಾಪ್‌ಟಾಪ್ ವಿತರಿಸಲಾಯಿತು.

ಬಳಿಕ ಮಾತನಾಡಿದ ಸಚಿವರು, 'ಮಲ್ಲೇಶ್ವರ ಕ್ಷೇತ್ರದಲ್ಲಿರುವ ಸರ್ಕಾರಿ ಶಾಲೆಗಳನ್ನು ಇಡೀ ದೇಶಕ್ಕೇ ಮಾದರಿಯಾಗಿ ಅಭಿವೃದ್ಧಿಪಡಿಸಲಾಗುತ್ತಿದೆ. ಡಿಜಿಟಲೀಕರಣಕ್ಕೆ ಹೆಚ್ಚಿನ ಒತ್ತು ಕೊಡಲಾಗಿದೆ' ಎಂದು ತಿಳಿಸಿದರು.

ನಗರದ ರಾಯಲ್ ಆರ್ಕಿಡ್ ಹೋಟೆಲ್‌ನಲ್ಲಿ ಯುವಜನರು ಸಂಭ್ರಮದಿಂದ ಬಣ್ಣದೋಕುಳಿ ನಡೆಸಿದರು ಚಿತ್ರ: ರಂಜು ಪಿ.

ಮಹಿಳೆಯರು ಹಾಗೂ ಮಕ್ಕಳು ನಗರದಲ್ಲಿ ಬಣ್ಣದೋಕುಳಿ ನಡೆಸಿ ಸಂಭ್ರಮಿಸಿದರು ಚಿತ್ರ: ಎಂ.ಎಸ್ ಮಂಜುನಾಥ್

ಹೋಟೆಲ್, ಮೈದಾನಗಳಲ್ಲಿ ಹಬ್ಬದ ಸಂಭ್ರಮ

ಬಣ್ಣದೋಕುಳಿಯಲ್ಲಿ ಮಿಂದೆದ್ದ ಯುವಜನರು

ನಗರದ ಹೋಟೆಲ್ ಒಂದರಲ್ಲಿ ಯುವಜನರು ಪರಸ್ಪರ ಬಣ್ಣ ಎರಚಿ ಸಂಭ್ರಮಿಸುತ್ತಿರುವುದು

ಚಾಮರಾಜಪೇಟೆಯಲ್ಲಿ ಬಾಲಕಿಯರು ಬಣ್ಣದ ನೀರಿಗೆ ಮೈಯೊಡ್ಡಿ ಸಂಭ್ರಮಿಸಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಹೋಳಿ ಹಬ್ಬವನ್ನು ಶುಕ್ರವಾರ ಸಂಭ್ರಮದಿಂದ ಆಚರಿಸಲಾಯಿತು. ಮಕ್ಕಳು, ಯುವಜನರು ಸೇರಿದಂತೆ ಎಲ್ಲ ವಯೋಮಾನದವರು ಬೆಳಿಗ್ಗೆಯಿಂದ ಸಂಜೆಯವರೆಗೂ ಬಣ್ಣದಲ್ಲಿ ಮಿಂದೆದ್ದರು.

ನಗರದಲ್ಲಿ ಕೋವಿಡ್ ನಿರ್ಬಂಧದಿಂದಾಗಿ ಎರಡು ವರ್ಷಗಳಿಂದ ಹೋಳಿ ಹಬ್ಬ ಸಾರ್ವಜನಿಕ ಸ್ಥಳಗಳಲ್ಲಿ ನಡೆದಿರಲಿಲ್ಲ. ಕೋವಿಡ್ ನಿಯಂತ್ರಣಕ್ಕೆ ಬಂದಿದ್ದರಿಂದ ಯುವಜನರು ರಸ್ತೆ, ಬೀದಿಗಳಲ್ಲಿ ಬಣ್ಣ ಎರಚಿ ಸಂಭ್ರಮಿಸಿದರು. ಶಾಲಾ-ಕಾಲೇಜು, ಹೋಟೆಲ್‌ಗಳು, ಮೈದಾನಗಳಲ್ಲಿಯೂ ಹೋಳಿ ಆಚರಣೆ ನಡೆಯಿತು. ಕೆಲ ಅಪಾರ್ಟ್‌ಮೆಂಟ್ ವಸತಿ ಸಮುಚ್ಚಯ ಹಾಗೂ ಮನೆಗಳಲ್ಲಿ ಪರಸ್ಪರ ಬಣ್ಣ ಹಚ್ಚಿ, ಸಿಹಿ ಸವಿದರು.

ಬಿಸಿಲಿನ ನಡುವೆಯೂ ಮಕ್ಕಳು ಪಿಚಕಾರಿ ಮೂಲಕ ಬಣ್ಣದ ನೀರನ್ನು ಸಿಡಿಸಿ ಸಂಭ್ರಮಿಸಿದರು. ಕೆಲವೆಡೆ ಡಿ.ಜೆ ಸಂಗೀತಕ್ಕೆ ಮೈಮರೆತು ಯುವಜನರು ಕುಣಿದು ಕುಪ್ಪಳಿಸಿದರು. ಜೈನ ಸಮುದಾಯದವರು ಮನೆಗಳಲ್ಲಿ ಬಿಳಿ ಬಣ್ಣದ ಉಡುಪು ಧರಿಸಿ, ಬಣ್ಣದೋಕುಳಿ ನಡೆಸುವ ಜತೆಗೆ ಬಂಧು-ಬಳಗದವರಿಗೆ ಸಿಹಿ ಹಂಚಿದರು. ಖಾಸಗಿ ಕಂಪನಿಗಳ ಕಚೇರಿಗಳಲ್ಲಿ ಸರಳವಾಗಿ ಹೋಳಿ ಆಚರಿಸಲಾಯಿತು.

ಚರ್ಚ್‌ಸ್ಟ್ರೀಟ್, ಚಾಮರಾಜಪೇಟೆ, ಶೇಷಾದ್ರಿಪುರ ಸೇರಿದಂತೆ ವಿವಿಧೆಡೆ ರಸ್ತೆಗಳಲ್ಲಿಯೂ ಹೋಳಿ ಆಚರಿಸಿದ್ದರಿಂದ ಸಂಜೆಯ ವೇಳೆಗೆ ವಿವಿಧ ಬಣ್ಣಗಳಿಂದ ರಸ್ತೆಗಳು ವರ್ಣರಂಜಿತವಾಗಿದ್ದವು. ರಾಜಾಜಿನಗರದ ಇಸ್ಕಾನ್ ಸೇರಿದಂತೆ ವಿವಿಧೆಡೆ ಹೋಳಿ ಹಬ್ಬದ ಸಂಭ್ರಮಾಚರಣೆ ವೈಭವಯುತವಾಗಿ ನಡೆಯಿತು.

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಶೇಷಾದ್ರಿಪುರದಲ್ಲಿ ಮಹಿಳೆಯರು ಡೋಲು ಬಾರಿಸಿ ಹೋಳಿ ಆಚರಿಸಿದರು ಚಿತ್ರ: ಬಿ.ಕೆ. ಜನಾರ್ದನ್

ಕರಗ ಉತ್ಸವದ ಸಿದ್ಧತೆ ಚುರುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐತಿಹಾಸಿಕ ಬೆಂಗಳೂರು ಕರಗ ಉತ್ಸವ ಅದ್ಧೂರಿಯಿಂದ ಆಚರಿಸಲು ನಿರ್ಧರಿಸಿರುವ ಬಿಬಿಎಂಪಿ, ಸಿದ್ಧತೆ ಕಾರ್ಯಗಳನ್ನು ಚುರುಕುಗೊಳಿಸಿದೆ.

ಮುಖ್ಯ ಆಯುಕ್ತ ಗೌರವ್ ಗುಪ್ತ ಅಧ್ಯಕ್ಷತೆಯಲ್ಲಿ ಪೂರ್ವ ಸಿದ್ಧತಾ ಸಭೆ ಶುಕ್ರವಾರ ನಡೆಯಿತು. ಶಾಸಕ ಉದಯ್ ಬಿ. ಗರುಡಾಚಾರ್ ಮಾತನಾಡಿ, 'ಕರಗ ಉತ್ಸವವು ಪುರಾತನ ಹಾಗೂ ಪ್ರಸಿದ್ಧ ಹಬ್ಬವಾಗಿದೆ. ಕೋವಿಡ್ ಸೋಂಕು ಆವರಿಸಿದ್ದರಿಂದ ಎರಡು ವರ್ಷ ಸರಳವಾಗಿ ಆಚರಿಸಲಾಗಿತ್ತು. ಈಗ ಸೋಂಕು ಕಡಿಮೆಯಾಗಿದ್ದು, ನಿಯಮಗಳನ್ನು ಪಾಲಿಸಿಕೊಂಡೇ ಅದ್ಧೂರಿಯಾಗಿ ಆಚರಣೆ ಮಾಡಲು ಸಿದ್ದತೆ ಮಾಡಿಕೊಳ್ಳಬೇಕು' ಎಂದು ತಿಳಿಸಿದರು.

ಸಭೆಯಲ್ಲಿ ಶಾಸಕ ಉದಯ್ ಗರುಡಾಚಾರ್ ಮಾತನಾಡಿದರು. ಗೌರವ್ ಗುಪ್ತ, ಪಿ.ಆರ್. ರಮೇಶ್, ಜೆ.ಮಂಜುನಾಥ್ ಇದ್ದರು

ವಿಧಾನ ಪರಿಷತ್ ಸದಸ್ಯ ಪಿ.ಆರ್.ರಮೇಶ್ ಮಾತನಾಡಿ, 'ಕರಗ ಉತ್ಸವವು ದಕ್ಷಿಣ, ಪೂರ್ವ ಹಾಗೂ ಪಶ್ಚಿಮ ವಲಯಗಳ ವ್ಯಾಪ್ತಿಯಲ್ಲಿ ನಡೆಯಲಿದ್ದು, ಕರಗ ಹೋಗಿ ಬರುವ ಎಲ್ಲ ರಸ್ತೆಗಳನ್ನು ದುರಸ್ತಿಗೊಳಿಸಿ ಸುಸ್ಥಿತಿಯಲ್ಲಿಡಬೇಕು. ಸಂಪಂಗಿರಾಮ ನಗರದ ಕಲ್ಯಾಣಿಯ ಸುತ್ತಲು ಸ್ವಚ್ಛಗೊಳಿಸಬೇಕು. ಬೀದಿ ದೀಪಗಳ ಅಳವಡಿಕೆ, ಜಲ ಮಂಡಳಿಯಿಂದ ಸಮರ್ಪಕ ನೀರಿನ ವ್ಯವಸ್ಥೆ, ಒಳಚರಂಡಿ ಸ್ವಚ್ಛಗೊಳಿಸುವ ಕೆಲಸ ಮಾಡಬೇಕು. ಉತ್ಸವಕ್ಕೆ ಅಗತ್ಯ ಅನುದಾನವನ್ನು ಕೂಡಲೆ ಬಿಡುಗಡೆ ಮಾಡಬೇಕು' ಎಂದು ಹೇಳಿದರು.

ಗೌರವ್ ಗುಪ್ತ ಮಾತನಾಡಿ, 'ಕೋವಿಡ್ ಸೋಂಕು ನಿಯಂತ್ರಣದಲ್ಲಿದೆ. ಏ.8 ರಿಂದ ಆರಂಭವಾಗಲಿದ್ದು, ಏ.16 ರಂದು ಕರಗ ಶಕ್ತ್ಯೋತ್ಸವ ನಡೆಯಲಿದೆ. ಮೆರವಣಿಗೆಯಲ್ಲಿ ಅತಿಗಣ್ಯರು ಭಾಗವಹಿಸಲಿದ್ದಾರೆ. ಸಾವಿರಾರು ಸಂಖ್ಯೆಯಲ್ಲಿ ಸಾರ್ವಜನಿಕರು ಸೇರಲಿದ್ದು, ಎಲ್ಲಾ ರೀತಿಯ ಸಿದ್ದತೆಗಳನ್ನು ಮಾಡಿಕೊಳ್ಳಬೇಕು. ಪಾಲಿಕೆ, ಜಿಲ್ಲಾಧಿಕಾರಿ, ಮುಜರಾಯಿ ಇಲಾಖೆ ಹಾಗೂ ಪೊಲೀಸ್ ಇಲಾಖೆ ಸಮನ್ವಯದಿಂದ ಕಾರ್ಯನಿರ್ವಹಿಸಿ ಯಾವುದೇ ಅಡಚಣೆ ಆಗದಂತೆ ಉತ್ಸವ ಯಶಸ್ವಿಗೊಳಿಸಬೇಕು' ಎಂದರು.

ನಗರ ಜಿಲ್ಲಾಧಿಕಾರಿ ಜೆ. ಮಂಜುನಾಥ್, ಪಾಲಿಕೆ ವಿಶೇಷ ಆಯುಕ್ತರಾದ ತ್ರಿಲೋಕ್ ಚಂದ್ರ, ರಂಗಪ್ಪ, ತುಳಸಿ ಮದ್ದಿನೇನಿ, ಜಂಟಿ ಆಯುಕ್ತರಾದ ಶಿಲ್ಪಾ, ಶ್ರೀನಿವಾಸ್, ಜಗದೀಶ್ ನಾಯಕ್, ಉಪ ಆಯುಕ್ತ ಯೋಗೇಶ್ ಇದ್ದರು.

'ಸಂಯುಕ್ತ ಹೋರಾಟ'ದಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಆಯೋಜನೆ

21ರಿಂದ 'ಜನ ಪರ್ಯಾಯ ಬಜೆಟ್ ಅಧಿವೇಶನ'

ಬೆಂಗಳೂರು: ಕರ್ನಾಟಕ ಭೂ ಸುಧಾರಣಾ (ತಿದ್ದುಪಡಿ) ಕಾಯ್ದೆ, ಎಪಿಎಂಸಿ (ನಿಯಂತ್ರಣ ಅಭಿವೃದ್ಧಿ) ಕಾಯ್ದೆ ಹಾಗೂ ಕರ್ನಾಟಕ ಜಾನುವಾರು ಹತ್ಯೆ (ನಿಷೇಧ ಮತ್ತು ಸಂರಕ್ಷಣೆ) ಕಾಯ್ದೆಯನ್ನು ರಾಜ್ಯ ಸರ್ಕಾರ ಹಿಂಪಡೆಯಲು ಆಗ್ರಹಿಸಿ 'ಸಂಯುಕ್ತ ಹೋರಾಟ-ಕರ್ನಾಟಕ'ದ ನೇತೃತ್ವದಲ್ಲಿ ಮಾರ್ಚ್ 21ರಿಂದ 23ರವರೆಗೆ 'ಬೆಂಗಳೂರು ಚಲೋ' ಹಾಗೂ 'ಜನ ಪರ್ಯಾಯ ಬಜೆಟ್ ಅಧಿವೇಶನ'ವನ್ನು ಸ್ವಾತಂತ್ರ್ಯ ಉದ್ಯಾನದಲ್ಲಿ ಹಮ್ಮಿಕೊಳ್ಳಲಾಗಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಯುಕ್ತ ಹೋರಾಟದ ಸಂಯೋಜಕ ಜಿ.ಸಿ.ಬಯ್ಯಾರೆಡ್ಡಿ, 'ಮಾರ್ಚ್ 21ರಂದು ಅಧಿವೇಶನವನ್ನು ರೈತ ನಾಯಕ ರಾಕೇಶ್‌ಸಿಂಗ್ ಟಿಕಾಯತ್, ಯೋಗೇಂದ್ರ ಯಾದವ್, ಕೃಷಿ ಕಾರ್ಯಕರ್ತೆ ಕವಿತಾ ಕುರುಗಂಟಿ ಉದ್ಘಾಟಿಸಲಿದ್ದಾರೆ' ಎಂದು ತಿಳಿಸಿದರು.

'22ರಂದು ಬೆಳಿಗ್ಗೆ 11 ಗಂಟೆಯಿಂದ ಕೃಷಿ ಕಾಯ್ದೆಗಳ ಕುರಿತು ವಿಚಾರ ಮಂಡನೆ, ಚರ್ಚೆಗಳು ನಡೆಯಲಿವೆ. ಟಿ.ಎನ್.ಪ್ರಕಾಶ್ ಕಮ್ಮರಡಿ, ಪ್ರೊ.ಟಿ.ಆರ್.ಚಂದ್ರಶೇಖರ್ ಮತ್ತು ಸಿ.ರಘು ಅವರು ಮಾತನಾಡಲಿದ್ದಾರೆ. ಮಧ್ಯಾಹ್ನ 2.30ರಿಂದ ಕಾರ್ಮಿಕ ಕಾಯ್ದೆಗಳ ತಿದ್ದುಪಡಿ, ಕನಿಷ್ಠ ವೇತನ, ಸಾರ್ವಜನಿಕ ವಲಯದ ಖಾಸಗೀಕರಣದ ಬಗ್ಗೆ ನಡೆಯುವ ಚರ್ಚೆಗಳಲ್ಲಿ ಪ್ರೊ.ಬಾಬು ಮ್ಯಾಥ್ಯೂ, ಎಚ್.ವಿ. ಅನಂತ ಸುಬ್ಬರಾವ್, ವಿ.ಜಿ. ಕೆ.ನಾಯರ್, ಮೈತ್ರೇಯಿ ಕೃಷ್ಣನ್ ಸೇರಿದಂತೆ ಹಲವರು ವಿಚಾರ ಮಂಡಿಸಲಿದ್ದಾರೆ' ಎಂದರು.

ದಲಿತ ಮುಖಂಡ ಮಾವಳ್ಳಿ ಶಂಕರ್, '23ರಂದು ಬೆಳಿಗ್ಗೆ 11ರಿಂದ ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಗಳ (ಟಿಎಸ್‌ಪಿ) ಅನುದಾನ ಮತ್ತು ವೆಚ್ಚ, ದಲಿತರು-ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ ಹಾಗೂ ಮಹಿಳಾ ಸಮಸ್ಯೆಗಳ ಕುರಿತು ಚಂದ್ರ ಪೂಜಾರಿ, ಕೆ.ಎಸ್.ವಿಮಲಾ ಮಾತನಾಡಲಿದ್ದಾರೆ. ಮಧ್ಯಾಹ್ನ 3ರಿಂದ ಅಧಿವೇಶನದ ಸಮಾರೋಪ ನಡೆಯಲಿದೆ' ಎಂದರು.

'ಎಲ್ಲ ಅಧಿವೇಶನಗಳಲ್ಲಿ ಮೂಡಿ ಬರುವ ಬೇಡಿಕೆಗಳನ್ನು ಒಳಗೊಂಡು ಸಮಗ್ರ ನಿರ್ಣಯ ಮಂಡಿಸಲಾಗುವುದು. ರಾಜ್ಯ ಸರ್ಕಾರ ಮತ್ತು ವಿರೋಧ ಪಕ್ಷಗಳ ನಿಲುವುಗಳನ್ನು ಆಧರಿಸಿ ಮುಂದಿನ ಹೋರಾಟದ ರೂಪರೇಷೆಗಳನ್ನು ಅಂತಿಮಗೊಳಿಸಲಿದ್ದೇವೆ. ಸಮಾರೋಪಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರನ್ನು ಆಹ್ವಾನಿಸಲಾಗಿದೆ' ಎಂದು ಮಾಹಿತಿ ನೀಡಿದರು.

ಎಸ್‌.ಟಿ ಮೀಸಲು ಹೆಚ್ಚಳ: ಮಾರ್ಚ್ 23ಕ್ಕೆ ಸಭೆ

ಬೆಂಗಳೂರು: ಪರಿಶಿಷ್ಟ ಪಂಗಡಗಳ (ಎಸ್‌.ಟಿ) ಮೀಸಲಾತಿ ಪ್ರಮಾಣವನ್ನು ಶೇಕಡ 7.5ಕ್ಕೆ ಹೆಚ್ಚಿಸುವ ಬೇಡಿಕೆ ಕುರಿತು ಚರ್ಚಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಇದೇ ಬುಧವಾರ (ಮಾರ್ಚ್ 23) ಉನ್ನತಮಟ್ಟದ ಸಭೆ ನಡೆಸಲಾಗುವುದು ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ತಿಳಿಸಿದರು.

ಎಸ್‌.ಟಿ ಮೀಸಲಾತಿಯನ್ನು ಶೇ 7.5ಕ್ಕೆ ಹೆಚ್ಚಿಸುವ ತೀರ್ಮಾನ ಪ್ರಕಟಿಸುವಂತೆ ಆಗ್ರಹಿಸಿ ಕಾಂಗ್ರೆಸ್ ಮತ್ತು ಜೆಡಿಎಸ್ ಶಾಸಕರು ಗುರುವಾರ ಸಂಜೆ ವಿಧಾನಸಭೆಯಲ್ಲಿ ಧರಣಿ ಆರಂಭಿಸಿದ್ದರು.

ಜೆ.ಸಿ. ಮಾಧುಸ್ವಾಮಿ

ಶುಕ್ರವಾರವೂ ಕಲಾಪ ಆರಂಭವಾಗುತ್ತಿದ್ದಂತೆ ಧರಣಿ ಮುಂದುವರಿಸಿದರು. ಧರಣಿ ಹಿಂಪಡೆಯುವಂತೆ ಮನವೊಲಿಸಿದ ಕಾನೂನು ಸಚಿವರು ಈ ವಿಷಯ ಪ್ರಕಟಿಸಿದರು.

'ಈ ವಿಚಾರದಲ್ಲಿ ಮುಂದಿನ ಕ್ರಮ ಕೈಗೊಳ್ಳುವ ಕುರಿತು ಮುಖ್ಯಮಂತ್ರಿ ಮತ್ತು ನಾನು ಚರ್ಚಿಸಿದ್ದೇವೆ. ವಿರೋಧ ಪಕ್ಷಗಳ ನಾಯಕರು ಸೇರಿದಂತೆ ಸಂಬಂಧಿಸಿದ ಎಲ್ಲರ ಜತೆ ಬುಧವಾರ ಸಭೆ ನಡೆಸಲಾಗುವುದು' ಎಂದು ಅವರು ತಿಳಿಸಿದರು.

ಕಾನೂನು ಸಚಿವರ ಭರವಸೆ ಆಧರಿಸಿ ಕಾಂಗ್ರೆಸ್ ಮತ್ತು ಜೆಡಿಎಸ್ ಶಾಸಕರು ಧರಣಿ ಮುಕ್ತಾಯಗೊಳಿಸಿದರು.

ಕೆರೆ ಚಂದಮ್ಮ ಅವರಿಗೆ 'ಶಾಂತವೇರಿ ಪ್ರಶಸ್ತಿ'

ಬೆಂಗಳೂರು: ಕನ್ನಡ ಜನಶಕ್ತಿ ಕೇಂದ್ರ ವತಿಯಿಂದ ನೀಡಲಾಗುವ 2022ನೇ ಸಾಲಿನ 'ಶಾಂತವೇರಿ ಗೋಪಾಲಗೌಡ ಪ್ರಶಸ್ತಿ'ಗೆ ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನ 'ಕೆರೆ ಚಂದಮ್ಮ' ಅವರನ್ನು ಆಯ್ಕೆ ಮಾಡಲಾಗಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ಅಧ್ಯಕ್ಷ ಸಿ.ಕೆ.ರಾಮೇಗೌಡ, 'ಚಂದಮ್ಮ ವೃತ್ತಿಯಲ್ಲಿ ಅಂಗನವಾಡಿ ಸಹಾಯಕಿ. ಕಲಬುರಗಿ ಜಿಲ್ಲೆಯ ಅಜಾದಪುರ ಕೆರೆಯು ಇವರಿಂದಾಗಿ ಇಂದು ನಳನಳಿಸುತ್ತಿದೆ. ಅಜಾದಪುರದ ಸುತ್ತಲಿನ ಕೆರೆಕಟ್ಟೆಗಳ ಹೂಳು ತೆಗೆಸಿ, ನೀರನ್ನು ಬಳಕೆಗೆ ಯೋಗ್ಯವನ್ನಾಗಿ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಹಾಗಾಗಿ, ಇವರನ್ನು 'ಕೆರೆ ಚಂದಮ್ಮ' ಎಂಬ ಹೆಸರಿನಿಂದ ಕರೆಯುತ್ತಾರೆ' ಎಂದರು.

'ಪ್ರಶಸ್ತಿ ₹25 ಸಾವಿರ ನಗದು, ಕಂಚಿನ ಫಲಕ ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿವೆ. ಏಪ್ರಿಲ್ ಮೂರನೇ ವಾರದಲ್ಲಿ ಕಲಬುರಗಿಯಲ್ಲಿ ನಡೆಯಲಿರುವ ಶಾಂತವೇರಿ ಗೋಪಾಲಗೌಡರ ಜನ್ಮಶತಮಾನೋತ್ಸವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ' ಎಂದು ಮಾಹಿತಿ ನೀಡಿದರು.

ಎಚ್‌ಎಸ್‌ಆರ್‌ಪಿ: ವಿಳಂಬಕ್ಕೆ ಕಾರಣವಾದ ರಾಜಕೀಯ ಒತ್ತಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2019ರ ಏಪ್ರಿಲ್‌ಗೂ ಮೊದಲು ಖರೀದಿಸಿದ ವಾಹನಗಳ ನಂಬರ್ ಪ್ಲೇಟ್‌ಗಳನ್ನು ಹೈಸೆಕ್ಯುರಿಟಿ ರಿಜಿಸ್ಟ್ರೇಷನ್ ನಂಬರ್ ಪ್ಲೇಟ್ (ಎಚ್‌ಎಸ್‌ಆರ್‌ಪಿ) ಆಗಿ ಪರಿವರ್ತಿಸುವ ಗುತ್ತಿಗೆ ಪಡೆಯಲು ಹೆಚ್ಚಾದ ರಾಜಕೀಯ ಒತ್ತಡವು ಟೆಂಡರ್ ಪ್ರಕ್ರಿಯೆ ಅಂತಿಮಗೊಳಿಸಲು ಐದು ತಿಂಗಳಿಂದ ತೊಡಕಾಗಿ ಕಾಡುತ್ತಿದೆ.

2021ರ ಅಕ್ಟೋಬರ್‌ನಲ್ಲಿ ಪ್ರಾದೇಶಿಕ ಸಾರಿಗೆ ಕಚೇರಿ ಟೆಂಡರ್ ಪ್ರಕ್ರಿಯೆ ಆರಂಭಿಸಿದೆ. ರಾಜ್ಯದಲ್ಲಿ 1.7 ಕೋಟಿ ಹಳೆಯ ವಾಹನಗಳು ಎಚ್‌ಎಸ್‌ಆರ್‌ಪಿ ಆಗಿ ಬದಲಾಗಬೇಕಿದ್ದು, ಸುಮಾರು ₹600 ಕೋಟಿ ಮೊತ್ತದ ವ್ಯವಹಾರ ಇದಾಗಿದೆ. ₹100 ಕೋಟಿಗೂ ಕಡಿಮೆ ವಹಿವಾಟು ಹೊಂದಿರುವ ಕಂಪನಿಗಳು ಭಾಗವಹಿಸದಂತೆ ನಿರ್ಬಂಧಿಸಿದ್ದ ಷರತ್ತಿನ ವಿರುದ್ಧ ನಂಬರ್ ಪ್ಲೇಟ್ ಮಾರಾಟಗಾರ ಕಂಪನಿಗಳು ದೂರು ನೀಡಿದ್ದವು. ಇವುಗಳ ಪರಿಶೀಲನೆ ನಡೆಸುವ ಹಂತ ದಲ್ಲೇ ಷರತ್ತು ಉಳಿಸಿಕೊಳ್ಳುವಂತೆ ಅಧಿಕಾರಿಗಳ ಮೇಲೆ ರಾಜಕೀಯ ಒತ್ತಡ ಎದುರಾಗಿತ್ತು.

'ಷರತ್ತು ವಿಧಿಸಿದರೆ ದೊಡ್ಡ ಕಂಪನಿಗಳು ಈ ಮಾರುಕಟ್ಟೆ ಮೇಲೆ ಹಿಡಿತ ಸಾಧಿಸುತ್ತವೆ. ನಂಬರ್ ಪ್ಲೇಟ್‌ಗಳಿಗೆ ಹೆಚ್ಚಿನ ದರ ನಿಗದಿ ಮಾಡುತ್ತವೆ. ಇದರಿಂದ ಜನರಿಗೆ ಅನಾನುಕೂಲವಾಗಲಿದೆ. ಆದ್ದರಿಂದ ಇದರ ವಿರುದ್ಧ ಕೆಲವು ಕಂಪನಿಗಳು ಹೈಕೋರ್ಟ್ ಮೆಟ್ಟಿಲೇರಿವೆ. ಅರ್ಜಿ 5 ತಿಂಗಳಿಂದ ವಿಚಾರಣೆ ಹಂತದಲ್ಲಿದೆ' ಎಂದು ಅಧಿಕಾರಿಯೊಬ್ಬರು ಹೇಳಿದರು.

'ಜ.25ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಡೆಸಿದ ಸಭೆಯಲ್ಲಿ ರಾಜಕೀಯ ಒತ್ತಡದ ವಿಷಯ ಮುನ್ನೆಲೆಗೆ ಬಂದಿತ್ತು. ಎಚ್‌ಎಸ್‌ಆರ್‌ಪಿ ಗುತ್ತಿಗೆಯನ್ನು ಶ್ರೀಮಂತ ಕಂಪನಿಗೆ ವಹಿಸಿದರೆ, ಆ ಕಂಪನಿ ದುಬಾರಿ ದರಕ್ಕೆ ಅವುಗಳನ್ನು ಮಾರಾಟ ಮಾಡುವ ಅಪಾಯ ಇದೆ ಎಂಬುದನ್ನು ಅವರ ಗಮನಕ್ಕೆ ತರಲಾಗಿದೆ. ಸ್ಪರ್ಧಾತ್ಮಕ ದರ ಇರುವಂತೆ ಏಳಕ್ಕೂ ಹೆಚ್ಚು ಕಂಪನಿಗಳನ್ನು ಪಟ್ಟಿಯಲ್ಲಿ ಉಳಿಸಿಕೊಳ್ಳಲು ಅಧಿ ಕಾರಿಗಳಿಗೆ ಮುಖ್ಯಮಂತ್ರಿ ನಿರ್ದೇಶನ ನೀಡಿದ್ದಾರೆ' ಎಂದು ಹಿರಿಯ ಅಧಿಕಾರಿಯೊಬ್ಬರು ವಿವರಿಸಿದರು.

'ರಾಜಕೀಯ ಒತ್ತಡದ ಪ್ರಶ್ನೆಯೇ ಇಲ್ಲ. ಎಲ್ಲ ಕಂಪನಿಗಳು ಭಾಗವಹಿಸಬೇಕು ಎಂದು ನಾವು ಬಯಸುತ್ತೇವೆ. ಇದರಿಂದ ಕಡಿಮೆ ದರದಲ್ಲಿ ಜನ ನಂಬರ್ ಪ್ಲೇಟ್ ಪಡೆಯಬಹುದು' ಎಂದು ಸಾರಿಗೆ ಸಚಿವ ಬಿ. ಶ್ರೀರಾಮುಲು ಸ್ಪಷ್ಟಪಡಿಸಿದರು.

'ಗುರುವಾರ ನಿಗದಿಯಾಗಿದ್ದ ಬಿಡ್ದಾರರ ತಾಂತ್ರಿಕ ಮೌಲ್ಯಮಾಪನ ರದ್ದುಗೊಳಿಸಲಾಗಿದ್ದು, ಏಳು ಕಂಪನಿಗಳನ್ನು ಸ್ಪರ್ಧೆಗೆ ಇಳಿಸಲಾಗುವುದು ಎಂಬ ಮಾಹಿತಿ ಯನ್ನು ಹೈಕೋರ್ಟ್‌ಗೆ ಸಲ್ಲಿಸಲಾಗಿದೆ' ಎಂದು ಇಲಾಖೆ ಮೂಲಗಳು ತಿಳಿಸಿವೆ.

ಶ್ರೀಕಂಠೇಶ್ವರಸ್ವಾಮಿ ತೆಪ್ಪೋತ್ಸವ ಸಂಭ್ರಮ

ನಂಜನಗೂಡು: ಇಲ್ಲಿನ ಪ್ರಸಿದ್ಧ ಶ್ರೀಕಂಠೇಶ್ವರಸ್ವಾಮಿ ಜಾತ್ರಾ ಮಹೋತ್ಸವದ ಅಂಗವಾಗಿ ಕಪಿಲಾ ನದಿಯಲ್ಲಿ ಶುಕ್ರವಾರ ರಾತ್ರಿ ತೆಪ್ಪೋತ್ಸವ ನಡೆಯಿತು.

ತೇಲುವ ದೇವಾಲಯದಲ್ಲಿ ಶ್ರೀಕಂಠೇಶ್ವರಸ್ವಾಮಿ ಉತ್ಸವಮೂರ್ತಿ ಪ್ರತಿಷ್ಠಾಪಿಸಿ ತೆಪ್ಪೋತ್ಸವ ನಡೆಸಲಾಯಿತು. ಇದಕ್ಕೂ ಮುನ್ನ ಶ್ರೀಕಂಠೇಶ್ವರಸ್ವಾಮಿ ಉತ್ಸವ ಮೂರ್ತಿಗೆ ಧಾರ್ಮಿಕ ಪೂಜಾ ವಿಧಿ ವಿಧಾನಗಳನ್ನು ಪ್ರಧಾನ ಅರ್ಚಕ ಜೆ.ನಾಗಚಂದ್ರ ದೀಕ್ಷಿತ್ ನೇತೃತ್ವದಲ್ಲಿ ನೆರವೇರಿಸಲಾಯಿತು. ನಂತರ ಉತ್ಸವ ಮೂರ್ತಿಯನ್ನು ಪಲ್ಲಕ್ಕಿ ಮೆರವಣಿಗೆ ಮೂಲಕ ಕಪಿಲಾ ಸ್ನಾನಘಟ್ಟಕ್ಕೆ ಹೊತ್ತು ತರಲಾಯಿತು. ಸಿಂಗಾರಗೊಂಡಿದ್ದ ತೆಪ್ಪದಲ್ಲಿ ಉತ್ಸವಮೂರ್ತಿಯನ್ನು ಪ್ರತಿಷ್ಠಾಪಿಸಿದ ಬಳಿಕ ದೇವಾಲಯದ ಕಾರ್ಯನಿರ್ವಹಣಾಧಿಕಾರಿ ಎಂ.ಎಚ್.ರವೀಂದ್ರ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಿದರು.

ಶತಾವಧಾನಿ ಗಣೇಶ್ ಅವರ ಚೊಚ್ಚಲ ಕಾದಂಬರಿ

'ಮಣ್ಣಿನ ಕನಸು' ಕೃತಿ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾವಿರದ ಐನೂರು ವರ್ಷಗಳಿಗೂ ಹಳೆಯ ಕಾಲಘಟ್ಟದ ಕಥಾಹಂದರವೊಂದನ್ನು ಕಾದಂಬರಿಯ ರೂಪದಲ್ಲಿ ಹಿಡಿದಿಟ್ಟಿರುವ ಶತಾವಧಾನಿ ಡಾ.ಆರ್. ಗಣೇಶ್ ಅವರ ಮೊದಲ ಕಾದಂಬರಿ 'ಮಣ್ಣಿನ ಕನಸು' ಶುಕ್ರವಾರ ಲೋಕಾರ್ಪಣೆಗೊಂಡಿತು.

ನಾಡೋಜ ಎಸ್.ಆರ್. ರಾಮಸ್ವಾಮಿ ಕಾದಂಬರಿ ಲೋಕಾರ್ಪಣೆಗೊಳಿಸಿ, 'ಭಾಸನ ಸ್ವಪ್ನ ವಾಸವದತ್ತಾ ಹಾಗೂ ಶೂದ್ರಕನ ಮೃಚ್ಛಕಟಿಕಂ ನಾಟಕಗಳ ಪಾತ್ರಗಳನ್ನು ಮೇಳೈಸಿದ ಈ ಕಾದಂಬರಿ ಗಣೇಶ್ ಅವರ ಸೃಜನಶೀಲತೆಗೆ ಮತ್ತೊಂದು ಮೈಲಿಗಲ್ಲು' ಎಂದು ಬಣ್ಣಿಸಿದರು.

'ಅಂದಿನ ಸಾಂಸ್ಕೃತಿಕ ಮತ್ತು ರಾಜಕೀಯ ಜೀವನದ ಸಾಕಷ್ಟು ವಿವರಗಳು ಈ ಕೃತಿಯಲ್ಲಿವೆ. ಇದರ ಕಥೆ ಮತ್ತು ಪಾತ್ರಗಳು ಸಾಹಿತ್ಯ ರಸಾನುಭೂತಿಯಲ್ಲಿ ಮಿಂದೆದ್ದಿವೆ. ಈ ಐತಿಹಾಸಿಕ ಕಾದಂಬರಿಯುದ್ದಕ್ಕೂ; ರಾಜಕೀಯ ತಂತ್ರ-ಪ್ರತಿತಂತ್ರಗಳ , ಕಲೆ-ತತ್ವಗಳ ಬಣ್ಣಗಳನ್ನು ಒಳಗೊಂಡ ಚಿತ್ರಣಗಳಿವೆ. ಓದುಗರ ಮನಸ್ಸನ್ನು ಕಾಡುವ ದಟ್ಟವಾದ ಪಾತ್ರಗಳನ್ನು ಆಪ್ತವಾಗಿ ಹೆಣೆಯಲಾಗಿದೆ' ಎಂದರು.

ಸಾಹಿತ್ಯ ಪ್ರಕಾಶನ, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಆಯೋಜಿಸಿದ ಶತಾವಧಾನಿ ಆರ್. ಗಣೇಶ್ ಅವರ 'ಮಣ್ಣಿನ ಕನಸು' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಎ.ಆರ್. ರಾಮಸ್ವಾಮಿ ಅವರು ಪುಸ್ತಕ ಬಿಡುಗಡೆ ಮಾಡಿದರು. ವಾಸುಕಿ, ಶಶಿಕಿರಣ್, ಎಸ್.ಆರ್. ರಾಮಸ್ವಾಮಿ ಹಾಗೂ ಇತರರು ಇದ್ದರು. ಪ್ರಜಾವಾಣಿ ಚಿತ್ರ

ಕಾದಂಬರಿಯ ಕುರಿತು ಮಾತನಾಡಿದ ಲೇಖಕ ಮತ್ತು ಸಾಫ್ಟ್‌ವೇರ್ ತಂತ್ರಜ್ಞ ಎಚ್.ಎ.ವಾಸುಕಿ, 'ಕಾದಂಬರಿಯ ಮಾಧ್ಯಮದಲ್ಲೂ ತಮ್ಮ ಸಾಹಿತ್ಯ ಕೃಷಿಯ ವಿಸ್ತರಣೆ ಮಾಡಿರುವ ಶತಾವಧಾನಿ ಗಣೇಶ್ ಎಲ್ಲ ಪಾತ್ರ, ಸನ್ನಿವೇಶ ಹಾಗೂ ಘಟನೆಗಳನ್ನು ರಮಣೀಯವಾಗಿ ಮತ್ತು ಆಕರ್ಷಣೀಯವಾಗಿ ಹಿಡಿದಿಟ್ಟಿದ್ದಾರೆ' ಎಂದರು. ಬಿ.ಎನ್. ಶಶಿಕಿರಣ್, ಅವರೂ ಕಾದಂಬರಿಯ ಕುರಿತು ವಿವರಿಸಿದರು.

ಕಾದಂಬರಿಯ ಮೊದಲ ಗೌರವ ಕೃತಿಯನ್ನು ಶತಾವಧಾನಿ ಗಣೇಶ್ ಅವರು ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಸುಧಾಮೂರ್ತಿ ಅವರಿಗೆ ನೀಡಿದರು. ಬಸವನಗುಡಿಯ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಡಿವಿಜಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಈ ಕಾರ್ಯಕ್ರಮದಲ್ಲಿ ಸಾಹಿತ್ಯಾಸಕ್ತರು ಕಿಕ್ಕಿರಿದು ನೆರೆದಿದ್ದರು.

ಅತೀ ವೇಗ, ಅಜಾಗರೂಕತೆ ಚಾಲನೆ ● ನಿರ್ಬಂಧಿತ ಸಮಯದಲ್ಲೂ ಓಡಾಟ ● ಹೆಚ್ಚುತ್ತಿರುವ ಅಪಘಾತಗಳು

ಭಾರಿ ವಾಹನಗಳ 'ಅಕ್ರಮ' ಸಂಚಾರ: ಜನರಿಗೆ 'ಜೀವ ಭಯ'

● ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ನಗರದಲ್ಲಿ ದಟ್ಟಣೆ ಹೆಚ್ಚಿರುವ ಹಾಗೂ ನಿರ್ಬಂಧಿತ ಸಮಯದಲ್ಲೂ ಭಾರಿ ವಾಹನಗಳು 'ಅಕ್ರಮ'ವಾಗಿ ಸಂಚರಿಸುತ್ತಿದ್ದು, ಕೆಲ ಚಾಲಕರ ಅಜಾಗರೂಕತೆ ಹಾಗೂ ಅತೀ ವೇಗದ ಚಾಲನೆಯಿಂದ ಅಪಘಾತಗಳು ಹೆಚ್ಚುತ್ತಿವೆ. ರಸ್ತೆಯಲ್ಲಿ ಭಾರಿ ವಾಹನಗಳು ಅಡ್ಡಾದಿಡ್ಡಿ ಸಂಚರಿಸುವುದನ್ನು ನೋಡಿದರೆ, ಜೀವ ಭಯ ಕಾಡುತ್ತಿರುವುದಾಗಿ ಜನರು ದೂರುತ್ತಿದ್ದಾರೆ.

ಸಿಲಿಕಾನ್ ಸಿಟಿ ಬೆಂಗಳೂರು, ಅತೀ ವೇಗವಾಗಿ ಬೆಳೆಯುತ್ತಿರುವ ನಗರ. ಟೆಂಡರ್‌ಶ್ಯೂರ್, ವೈಟ್‌ಟಾಪಿಂಗ್, ಸ್ಮಾರ್ಟ್‌ಸಿಟಿ ಸೇರಿ ಹಲವು ಕಾಮಗಾರಿಗಳು ಚಾಲ್ತಿಯಲ್ಲಿವೆ. ಇದಕ್ಕೆ ಬೇಕಾದ ಜಲ್ಲಿ, ಸಿಮೆಂಟ್, ಕಾಂಕ್ರೀಟ್, ಕಬ್ಬಿಣ ಸೇರಿ ವಿವಿಧ ವಸ್ತುಗಳನ್ನು ಹೊತ್ತು ಭಾರಿ ವಾಹನಗಳು ನಗರದಲ್ಲಿ ಸಂಚರಿಸುತ್ತಿವೆ.

ನಗರದಲ್ಲಿ ಜನಸಂಖ್ಯೆಯೂ ಹೆಚ್ಚಿದ್ದು, ಅವರಿಗೆ ಅಗತ್ಯವಿರುವ ಹಾಲು, ಹಾಲಿನ ಉತ್ಪನ್ನಗಳು, ಅಡುಗೆ ಅನಿಲ ಸಿಲಿಂಡರ್, ಔಷಧಿ, ವೈದ್ಯಕೀಯ ಸಲಕರಣೆ, ವೈದ್ಯಕೀಯ ತ್ಯಾಜ್ಯ, ಪೆಟ್ರೋಲ್–ಡೀಸೆಲ್ ತೈಲ ಸೇರಿ ಇತರೆ ವಸ್ತುಗಳನ್ನು ಭಾರಿ ವಾಹನಗಳು ಸಾಗಿಸುತ್ತಿವೆ.

ಹೊರ ರಾಜ್ಯ ಹಾಗೂ ಹೊರ ಜಿಲ್ಲೆಗಳಿಂದ ಬರುವ ಭಾರಿ ವಾಹನಗಳು, ಗಡಿಭಾಗದ ಮೂಲಕ ನಗರದೊಳಗೆ ಪ್ರವೇಶಿಸುತ್ತಿವೆ. ಸಾರ್ವಜನಿಕರ ಓಡಾಟ ಹೆಚ್ಚಿರುವ ಸಮಯದಲ್ಲೇ ಭಾರಿ ವಾಹನಗಳು ಸಂಚರಿಸುತ್ತಿದ್ದು, ಅಪಘಾತಗಳಿಗೆ ಕಾರಣವಾಗುತ್ತಿದೆ. ಇದರಿಂದ ಪ್ರಾಣ ಕಳೆದುಕೊಳ್ಳುವವರ ಸಂಖ್ಯೆಯೂ ಹೆಚ್ಚುತ್ತಿರುವುದಾಗಿ ಜನ ಆರೋಪಿಸುತ್ತಿದ್ದಾರೆ.

'ಗಾತ್ರದಲ್ಲೂ ದೊಡ್ಡದಾಗಿರುವ ಭಾರಿ ವಾಹನಗಳ ಚಾಲಕರು, ಅತೀ ವೇಗದಿಂದ ಚಾಲನೆ ಮಾಡುತ್ತಾರೆ. ಅಕ್ಕ–ಪಕ್ಕದಲ್ಲಿ ಹೋಗುವ ಬೈಕ್ ಸವಾರರಿಗೆ ಡಿಕ್ಕಿ ಹೊಡೆಸಿ, ಅವರ ಮೈ ಮೇಲೆ ಚಕ್ರ ಹರಿಸುತ್ತಾರೆ. ಇಂಥ ಅಪಘಾತಗಳು ಮೇಲಿಂದ ಮೇಲೆ ಸಂಭವಿಸುತ್ತಿದ್ದು, ಭಾರಿ ವಾಹನಗಳ ಅಕ್ರಮ ಓಡಾಟಕ್ಕೆ ಮಾತ್ರ ಲಗಾಮು ಬಿದ್ದಿಲ್ಲ. ಹಲವೆಡೆ ವಾಹನಗಳು ಮೈ ಮೇಲೆ ಬರುತ್ತವೆ. ಜೀವಕ್ಕೆ ಹಾನಿಯಾಗುತ್ತದೆಂಬ ಕನಿಕರವೂ ಚಾಲಕರಿಗಿಲ್ಲ' ಎಂದು ಅಪಘಾತದಲ್ಲಿ ಮೃತಪಟ್ಟ ವ್ಯಕ್ತಿಯೊಬ್ಬರ ಸಂಬಂಧಿ ನಾಗರಾಜ್ ಹೇಳಿದರು.

ನಗರದ ಚಾಮರಾಜಪೇಟೆ ಮುಖ್ಯರಸ್ತೆಯಲ್ಲಿ ಸರಕು ಹೊತ್ತು ಲಾರಿಯೊಂದು ಸಂಚರಿಸಿತು ಚಿತ್ರ: ಅನೂಪ್ ರಾಘ.ಟಿ.

ಪ್ರಯಾಣ ಪ್ರಯಾಸ

ಪಾಲನೆಯಾಗದ ಆದೇಶ: ಮಲ್ಟಿ ಆಕ್ಸಲ್, ಆರ್ಟಿಕ್ಯುಲೇಟೆಡ್, ಟ್ರಕ್ ಹಾಗೂ ಲಾರಿಗಳು ಭಾರೀ ವಾಹನ ಪಟ್ಟಿಯಲ್ಲಿವೆ. ನಾಲ್ಕು ಚಕ್ರ ಹಾಗೂ ಮೂರು ಚಕ್ರ ಗೂಡ್ಸ್ ವಾಹನಗಳು, ಲಘು ಸರಕು ವಾಹನಗಳಾಗಿವೆ. ಇಂಥ ವಾಹನಗಳಿಂದ ಅಪಘಾತ ಹೆಚ್ಚಳವಾಗುತ್ತಿರುವುದನ್ನು ಗಮನಿಸಿದ್ದ ಹೈಕೋರ್ಟ್, ನಿಯಮ ರೂಪಿಸಲು ಪೊಲೀಸರಿಗೆ ಸೂಚನೆ ನೀಡಿತ್ತು. 2014ರಲ್ಲಿ ಪೊಲೀಸ್ ಕಮಿಷನರ್ ಆಗಿದ್ದ ಎಂ.ಎನ್. ರೆಡ್ಡಿ, ನಿಯಮಾವಳಿ ರೂಪಿಸಿ ಭಾರಿ ವಾಹನಗಳ ವಿರುದ್ಧ ಕಾರ್ಯಾಚರಣೆ ಕೈಗೊಂಡಿದ್ದರು. ಈ ನಿಯಮಾವಳಿಗೆ 2015ರಲ್ಲಿ ಕೆಲ ತಿದ್ದುಪಡಿ ತಂದು ಹೊಸ ಆದೇಶ ಹೊರಡಿಸಲಾಗಿದೆ.

ಮೂರು ಟನ್‌ಗಿಂತ ಹೆಚ್ಚು ಭಾರ ಹೊರುವ ವಾಹನಗಳ ಸಂಚಾರಕ್ಕೆ ಬೆಳಿಗ್ಗೆ 11 ಗಂಟೆಯಿಂದ ಸಂಜೆ 4 ಗಂಟೆ ಹಾಗೂ ರಾತ್ರಿ 10 ಗಂಟೆಯಿಂದ ನಸುಕಿನ 7 ಗಂಟೆವರೆಗೆ ಮಾತ್ರ ಅವಕಾಶ ನೀಡಲಾಗಿದೆ. ಉಳಿದ ಅವಧಿಯಲ್ಲಿ ಭಾರಿ ವಾಹನಗಳ ಓಡಾಟಕ್ಕೆ ನಿರ್ಬಂಧವಿದೆ. ಜೊತೆಗೆ, ವಿಧಾನಸೌಧ ಸುತ್ತಮುತ್ತಲಿನ 2 ಕಿ.ಮೀ ವ್ಯಾಪ್ತಿ ಪ್ರದೇಶದಲ್ಲಿ ಭಾರಿ ವಾಹನಗಳ ಸಂಚಾರವನ್ನು ದಿನದ 24 ಗಂಟೆಯೂ ನಿಷೇಧಿಸಲಾಗಿದೆ. ಈ ಅಂಶ ಆದೇಶದಲ್ಲಿದ್ದು, ಇದರ ಪಾಲನೆ ಆಗುತ್ತಿಲ್ಲವೆಂಬ ಆರೋಪ ಕೇಳಿಬರುತ್ತಿದೆ. ನೀರು, ಕಸ, ಪೊಲೀಸ್, ಮಿಲಿಟರಿ ವಾಹನಗಳಿಗೆ ನಿರ್ಬಂಧದಿಂದ ವಿನಾಯಿತಿ ನೀಡಲಾಗಿದೆ.

ಗಡಿಭಾಗದ ಮೂಲಕ ಪ್ರವೇಶ: ಹೊರ ರಾಜ್ಯ ಹಾಗೂ ಹೊರ ಜಿಲ್ಲೆಯಿಂದ ಬರುವ ವಾಹನಗಳು, ಗಡಿಭಾಗದ ಪ್ರಮುಖ ರಸ್ತೆಗಳ ಮೂಲಕ ನಗರದೊಳಗೆ ಪ್ರವೇಶಿಸುತ್ತಿವೆ. ನಿರ್ಬಂಧಿತ ಸಮಯದಲ್ಲೂ ವಾಹನಗಳು ಒಳಪ್ರವೇಶಿಸುತ್ತಿದ್ದು, ಪೊಲೀಸರು ಕ್ರಮ ಕೈಗೊಳ್ಳುತ್ತಿಲ್ಲವೆಂಬ ದೂರುಗಳಿವೆ.

'ಮೈಸೂರು ರಸ್ತೆ, ಬಳ್ಳಾರಿ ರಸ್ತೆ, ಹೊಸೂರು ರಸ್ತೆ, ತುಮಕೂರು ರಸ್ತೆ, ಮಾಗಡಿ ರಸ್ತೆ, ಸರ್ಜಾಪುರ ರಸ್ತೆ, ಹಳೇ ಮದ್ರಾಸ್ ರಸ್ತೆ ಹಾಗೂ ಇತರೆ ರಸ್ತೆಗಳ ಮೂಲಕ ಭಾರಿ ವಾಹನಗಳು ನಗರದೊಳಗೆ ಬರುತ್ತಿವೆ. 2015ರ ಆದೇಶವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕಾದ ಸಂಚಾರ ಪೊಲೀಸರು, ಕಾಟಾಚಾರಕ್ಕೆ ಒಂದೆರೆಡು ವಾಹನಗಳಿಗೆ ತಲಾ ₹ 500 ದಂಡ ವಿಧಿಸುತ್ತಿದ್ದಾರೆ. ಬಹುತೇಕ ವಾಹನಗಳನ್ನು ಒಳಗೆ ಬಿಟ್ಟು, ಅಪಘಾತ ಸಂಭವಿಸಲು ಪರೋಕ್ಷವಾಗಿ ಕಾರಣರಾಗುತ್ತಿದ್ದಾರೆ' ಎಂದು ಬೈಕ್ ಸವಾರ ಸುಧೀಂದ್ರ ಎಂ.ಕೆ. ಆರೋಪಿಸಿದ್ದಾರೆ.

'ದಂಡ ಪಾವತಿಸುವ ಚಾಲಕರು, ರಶೀದಿ ಬಳಸಿಯೇ ನಗರದೆಲ್ಲೆಡೆ ವಾಹನಗಳನ್ನು ಚಲಾಯಿಸಿಕೊಂಡು ಹೋಗುತ್ತಿದ್ದಾರೆ. ವಾಹನ ತಡೆದು ನಿಲ್ಲಿಸುವ ಗೋಜಿಗೆ ಪೊಲೀಸರು ಹೋಗುತ್ತಿಲ್ಲ' ಎಂದು ಬೈಕ್ ಸವಾರ ವೆಂಕಟೇಶ್ ದೂರಿದ್ದಾರೆ.

ರಾಜ್ಯದಲ್ಲಿ ನೋಂದಣಿಯಾದ ವಾಹನಗಳು
(2021ರ ಡಿಸೆಂಬರ್‌ವರೆಗೆ)
5.11 ಲಕ್ಷ ಭಾರಿ ವಾಹನಗಳು
7.70 ಲಕ್ಷ ಲಘು ಸರಕು ವಾಹನಗಳು

ಬೆಂಗಳೂರಿನಲ್ಲಿ ನೋಂದಣಿಯಾದ ವಾಹನಗಳು
(2021ರ ಡಿಸೆಂಬರ್‌ವರೆಗೆ)
1.88 ಲಕ್ಷ ಭಾರಿ ವಾಹನಗಳು
2.35 ಲಕ್ಷ ಲಘು ಸರಕು ವಾಹನಗಳು

ಭಾರಿ ವಾಹನಗಳಿಂದ ನಗರದಲ್ಲಿ ಸಂಭವಿಸಿದ ಪ್ರಮುಖ ಅಪಘಾತಗಳು

- **2021ರ ಅಕ್ಟೋಬರ್ 26:** ಎಚ್‌ಎಎಲ್ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಟಿಪ್ಪರ್ ಲಾರಿಯೊಂದು ರಾಯಲ್ ಎನ್‌ಫೀಲ್ಡ್ ಬೈಕ್‌ಗೆ ಡಿಕ್ಕಿ ಹೊಡೆದಿತ್ತು. ಬೈಕ್‌ನಿಂದ ಬಿದ್ದಿದ್ದ ಶ್ರೀದೇವಿ ಹಾಗೂ ಅವರ ಒಂದು ವರ್ಷದ ಮಗು ದಕ್ಷಿತ್ ಮೇಲೆಯೇ ಲಾರಿಯ ಚಕ್ರ ಹರಿದಿತ್ತು. ಇಬ್ಬರೂ ಸ್ಥಳದಲ್ಲೇ ಮೃತಪಟ್ಟಿದ್ದರು.
- **2022ರ ಜನವರಿ 4:** ಅಶೋಕನಗರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನಕ್ಕೆ ಟಿಪ್ಪರ್ ಲಾರಿಯೊಂದು ಡಿಕ್ಕಿ ಹೊಡೆದಿತ್ತು. ಬೈಕ್‌ನಲ್ಲಿದ್ದ ಆರ್.ಎಸ್.ಪಾಳ್ಯ ನಿವಾಸಿಯೂ ಆಗಿದ್ದ ಎಂಜಿನಿಯರಿಂಗ್ ವಿದ್ಯಾರ್ಥಿ ಸಂಜನಾ ಪ್ರಿಯಾ (21) ಮೃತಪಟ್ಟಿದ್ದರು.
- **ಜ. 8:** ಬನ್ನೇರುಘಟ್ಟ- ತುಮಕೂರು ನೈಸ್ ರಸ್ತೆಯಲ್ಲಿ ಲಾರಿಯೊಂದು ಕಾರು ಹಾಗೂ ಬೈಕ್‌ಗಳಿಗೆ ಡಿಕ್ಕಿ ಹೊಡೆದಿತ್ತು. ಸರಣಿ ಅಪಘಾತದಲ್ಲಿ ಕೇರಳದ ಫಾದಿಲ್, ಅಭಿಲಾಶ್, ಶಿಲ್ಪಾ ಹಾಗೂ ಜೀನಾ ಎಂಬುವರು ಮೃತಪಟ್ಟಿದ್ದರು.
- **ಜ. 11:** ಕೆಂಗೇರಿ ಸಂಚಾರ ಠಾಣೆ ವ್ಯಾಪ್ತಿಯ ದೊಡ್ಡಬೆಲೆ ವೃತ್ತದ ಬಳಿ ಕ್ಯಾಂಟರ್ ವಾಹನವೊಂದು ಬೈಕ್‌ಗೆ ಡಿಕ್ಕಿ ಹೊಡೆದಿತ್ತು. ಬೈಕ್‌ನಲ್ಲಿದ್ದ ದಂತ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿ ಅಲ್ವಿನ್ (23) ಮೃತಪಟ್ಟಿದ್ದರು.
- **ಜ. 13:** ಕೋಣನಕುಂಟೆ ಬಳಿಯ ವಾಜರಹಳ್ಳಿ ಮುಖ್ಯರಸ್ತೆಯಲ್ಲಿ ಟಿವಿಎಸ್ ಸ್ಕೂಟರ್‌ಗೆ ಲಾರಿ ಡಿಕ್ಕಿ ಹೊಡೆದಿತ್ತು. ಕಲರ್ಸ್ ಕನ್ನಡ ವಾಹಿನಿಯ 'ನನ್ನಮ್ಮ ಸೂಪರ್ ಸ್ಟಾರ್' ರಿಯಾಲಿಟಿ ಶೋ ಸ್ಪರ್ಧಿ ಸಮನ್ವಿ (6) ಮೃತಪಟ್ಟಿದ್ದರು.
- **ಜ. 21:** ಹೆಬ್ಬಾಳ ಮೇಲ್ಸೇತುವೆಯಲ್ಲಿ ಬೈಕ್‌ನಿಂದ ಆಯತಪ್ಪಿ ಬಿದಿದ್ದ ಬಿಬಿಎ ವಿದ್ಯಾರ್ಥಿನಿ ಮಹಶ್ರೀ (20) ಅವರ ಮೈ ಮೇಲೆ ಲಾರಿ ಚಕ್ರ ಹರಿದಿತ್ತು. ಹುಟ್ಟುಹಬ್ಬದ ದಿನವೇ ಸಂಭವಿಸಿದ್ದ ಅಪಘಾತದಲ್ಲಿ ವಿದ್ಯಾರಣ್ಯಪುರದ ಮಹಶ್ರೀ ಮೃತಪಟ್ಟಿದ್ದರು.
- **ಜ. 23:** ಹಲಸೂರು ಗೇಟ್ ಸಂಚಾರ ಠಾಣೆ ವ್ಯಾಪ್ತಿಯ ಪುರಭವನ ಬಳಿ ಲಾರಿಯೊಂದು ರಸ್ತೆ ವಿಭಜಕಕ್ಕೆ ಗುದ್ದಿ, ದ್ವಿಚಕ್ರ ವಾಹನವೊಂದಕ್ಕೆ ಡಿಕ್ಕಿ ಹೊಡೆದಿತ್ತು. ದ್ವಿಚಕ್ರ ವಾಹನದಲ್ಲಿ ಹೊರಟಿದ್ದ ಪತ್ರಕರ್ತ ಎಸ್.ಎಸ್. ಗಂಗಾಧರಮೂರ್ತಿ (49) ಮೃತಪಟ್ಟಿದ್ದರು.
- **ಜ. 23:** ರಾಜಾಜಿನಗರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಬೈಕ್‌ಗೆ ಕ್ಯಾಂಟರ್ ವಾಹನವೊಂದು ಡಿಕ್ಕಿ ಹೊಡೆದಿತ್ತು. ಬೈಕ್‌ನಲ್ಲಿದ್ದ ಅಸ್ಸಾಂನ ಕುಮಾರ್ ಲಂಬಾ (25) ಮತ್ತು ಸುನೀಲ್ ಚೆಟ್ರ (24) ಮೃತಪಟ್ಟಿದ್ದರು.
- **ಜ. 30:** ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ರಸ್ತೆ ಗುಂಡಿಯಿಂದಾಗಿ ಬೈಕ್ ಉರುಳಿಬಿದ್ದಿದ್ದರಿಂದ ಶಿಕ್ಷಕಿ ಶರ್ಮಿಳಾ ರಸ್ತೆಗೆ ಬಿದ್ದಿದ್ದರು. ಅದೇ ರಸ್ತೆಯಲ್ಲಿ ಹೊರಟಿದ್ದ ಗೂಡ್ಸ್ ವಾಹನ, ಶರ್ಮಿಳಾ ಅವರ ಮೈಮೇಲೆ ಹರಿದು ಹೋಗಿತ್ತು. ತೀವ್ರ ಗಾಯಗೊಂಡು ಶರ್ಮಿಳಾ ಮೃತಪಟ್ಟಿದ್ದರು.
- **ಫೆ. 8:** ಕುಮಾರಸ್ವಾಮಿ ಲೇಔಟ್ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನಕ್ಕೆ ಟ್ಯಾಂಕರ್ ಡಿಕ್ಕಿ ಹೊಡೆದಿತ್ತು. ಬೈಕ್‌ನಲ್ಲಿದ್ದ 'ಶುಭೋದಯ' ಪ್ರಿಂಟಿಂಗ್ ಪ್ರೆಸ್ ಮಾಲೀಕ ಗಿರೀಶ್ (50) ಮೃತಪಟ್ಟಿದ್ದರು.
- **ಮಾ. 14:** ಕುಮಾರಸ್ವಾಮಿ ಲೇಔಟ್ ಸಂಚಾರ ಠಾಣೆ ವ್ಯಾಪ್ತಿಯ ನೈಸ್ ರಸ್ತೆಯ ಕನಕಪುರ ಟೋಲ್ ಗೇಟ್ ಬಳಿ ಬೈಕ್‌ಗೆ ಟಿಪ್ಪರ್ ಲಾರಿ ಡಿಕ್ಕಿ ಹೊಡೆದಿತ್ತು. ಬೈಕ್‌ನಲ್ಲಿದ್ದ ಸಂಧ್ಯಾ (21) ಎಂಬುವರು ಮೃತಪಟ್ಟಿದ್ದರು.

'ದುಡ್ಡು ವಸೂಲಿಗಾಗಿ ಎಲ್ಲೆಂದರಲ್ಲಿ ತಡೆ'

'ಸರಕು ಸಾಗಣೆ ವಾಹನಗಳು ಕಡಿಮೆ ವೇಗದಲ್ಲಿ ಸಂಚರಿಸುತ್ತವೆ. ನಗರಕ್ಕೆ ಸಂಪರ್ಕ ಕಲ್ಪಿಸುವ 110 ರಸ್ತೆಗಳಲ್ಲಿ ಪೊಲೀಸರು ಎಲ್ಲೆಂದರಲ್ಲಿ ನಿಂತು, ದುಡ್ಡು ವಸೂಲಿಗಾಗಿ ವಾಹನಗಳನ್ನು ನಿಲ್ಲಿಸುತ್ತಾರೆ. ನಿಗದಿತ ಸಮಯದಲ್ಲಿ ನಗರದೊಳಗೆ ಸಂಚರಿಸಬೇಕು ಎಂದುಕೊಂಡರೂ ಅದು ಸಾಧ್ಯವಾಗುವುದಿಲ್ಲ' ಎಂದು ರಾಜ್ಯ ಲಾರಿ ಮಾಲೀಕರ ಮತ್ತು ಏಜೆಂಟರ ಒಕ್ಕೂಟದ ಅಧ್ಯಕ್ಷ ಜಿ.ಆರ್.ಷಣ್ಮುಗಪ್ಪ ಹೇಳಿದರು.

'ಸರಕು ಸಾಗಣೆ ಸಂಚಾರಕ್ಕೆ ಪೊಲೀಸರೇ ಸಮಯ ನಿಗದಿ ಮಾಡಿದ್ದಾರೆ. ಈ ಬಗ್ಗೆ ನಮ್ಮೊಂದಿಗೆ ಯಾವುದೇ ಚರ್ಚೆ ಮಾಡಿಲ್ಲ. ಎಲ್ಲೆಂದರಲ್ಲಿ ವಾಹನಗಳನ್ನು ತಡೆಯುವ ಪೊಲೀಸರ ಭಯದಲ್ಲೇ ಕೆಲವೆಡೆ ಅಪಘಾತಗಳು ಸಂಭವಿಸಿವೆ. ದಟ್ಟಣೆ ಮಧ್ಯೆ ವಾಹನ ನಿಲ್ಲಿಸಿದಾಗಲೂ ಅಕ್ಕ–ಪಕ್ಕದ ವಾಹನಗಳಿಗೆ ಹಾನಿಯಾಗುತ್ತಿದೆ' ಎಂದೂ ತಿಳಿಸಿದರು

'₹ 10.90 ಲಕ್ಷ ದಂಡ'

'ನಿಯಮ ಉಲ್ಲಂಘಿಸಿ ಸಂಚರಿಸಿದ್ದ ಭಾರಿ ವಾಹನಗಳ ವಿರುದ್ಧ 2,127 ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ₹ 10.90 ಲಕ್ಷ ದಂಡ ವಸೂಲಿ (2022ರ ಜನವರಿಯಿಂದ ಮಾ. 18ರವರೆಗೆ) ಮಾಡಲಾಗಿದೆ' ಎಂದು ಸಂಚಾರ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.





ಪುರಭವನ ಬಳಿ ಜನವರಿ 23ರಂದು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು, ನಂತರ ದ್ವಿಚಕ್ರ ವಾಹನಕ್ಕೆ ಗುದ್ದಿ ಅಪಘಾತವನ್ನುಂಟು ಮಾಡಿ ಉರುಳಿಬಿದ್ದಿದ್ದ ಲಾರಿ – ಪ್ರಜಾವಾಣಿ ಚಿತ್ರ

'2015ರ ಆದೇಶದಂತೆ ಕ್ರಮ'

'ಜನರ ಜೀವ ಅಮೂಲ್ಯವಾದದ್ದು. ಅದರ ರಕ್ಷಣೆಗೆ ಸಂಚಾರ ಪೊಲೀಸರು ನಿತ್ಯವೂ ಕೆಲಸ ಮಾಡುತ್ತಿದ್ದಾರೆ. ಭಾರಿ ವಾಹನಗಳ ಸಂಚಾರದ ಮೇಲೆ ಸಾಕಷ್ಟು ನಿರ್ಬಂಧಗಳನ್ನು ವಿಧಿಸಲಾಗಿದ್ದು, 2015ರ ಆದೇಶದನ್ವಯ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ಸಂಚಾರ ವಿಭಾಗದ (ಪೂರ್ವ) ಡಿಸಿಪಿ ಶಾಂತರಾಜು ಹೇಳಿದರು.

'ನಗರದೊಳಗೆ ಪ್ರವೇಶಿಸುವ ಭಾರಿ ವಾಹನಗಳ ಮೇಲೆ ನಿಗಾ ಇರಿಸಲಾಗಿದೆ. ನಿಯಮ ಉಲ್ಲಂಘಿಸುವ ವಾಹನಗಳ ಮೇಲೆ ಆಯಾ ಠಾಣೆ ಸಿಬ್ಬಂದಿ ದಂಡ ವಿಧಿಸಿ, ಎಚ್ಚರಿಕೆ ನೀಡುತ್ತಿದ್ದಾರೆ' ಎಂದೂ ತಿಳಿಸಿದರು.

6 ಮಂದಿ ಎಲ್‌ಇಟಿ ಸಹಚರರ ಬಂಧನ

ಶ್ರೀನಗರ: ದಕ್ಷಿಣ ಕಾಶ್ಮೀರದ ಪುಲ್ವಾಮ ಜಿಲ್ಲೆಯಲ್ಲಿ ಶುಕ್ರವಾರ ನಿಷೇಧಿತ ಸಂಘಟನೆ ಎಲ್‌ಇಟಿಯೊಂದಿಗೆ ಸಂಪರ್ಕ ಹೊಂದಿದ್ದ ಜಾಲವನ್ನು ಜಮ್ಮು ಮತ್ತು ಕಾಶ್ಮೀರ ಪೊಲೀಸರು ಭೇದಿಸಿದ್ದು, ಉಗ್ರ ಚಟುವಟಿಕೆಯಲ್ಲಿ ತೊಡಗಿದ್ದ ಆರು ಮಂದಿಯನ್ನು ಬಂಧಿಸಿದ್ದಾರೆ.

ರೂಫ್ ಅಹ್ಮದ್ ಲೋನ್, ಆಕಿಬ್ ಮಕ್ಬೂಲ್ ಭಟ್, ಜಾವೇದ್ ಅಹ್ಮದ್ ದಾರ್, ಸಜಾದ್ ಅಹ್ಮದ್ ದಾರ್, ಅರ್ಷಿದ್ ಅಹ್ಮದ್ ಮಿರ್, ರಮೀಜ್ ರಾಜಾ ಬಂಧಿತರು.

'ಬಂಧಿತ ಸಹಚರರು ಉಗ್ರರಿಗೆ ಆಶ್ರಯ, ಸಾಗಣೆ, ಹಣಕಾಸು ನಿರ್ವಹಣೆ ಹಾಗೂ ವರ್ಗಾವಣೆ ಮಾಡುತ್ತಿದ್ದಲ್ಲದೇ ಯುವ ಸಮೂಹವನ್ನು ಉಗ್ರ ಚಟುವಟಿಕೆಗೆ ಸೆಳೆಯುತ್ತಿದ್ದರು ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ. ಎಲ್‌ಇಟಿಯ ಕಮಾಂಡರ್ ರಿಯಾಜ್ ಅಹ್ಮದ್ ದಾರ್ ನಿರ್ದೇಶನದಂತೆ ಭಯೋತ್ಪಾದನಾ ಚಟುವಟಿಕೆಯಲ್ಲಿ ತೊಡಗಿದ್ದರು ಎಂಬುದು ತನಿಖೆ ವೇಳೆ ಕಂಡು ಬಂದಿದೆ' ಎಂದು ಪೊಲೀಸರು ತಿಳಿಸಿದರು.

ಚಿತ್ರಾವಳಿ

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ರೋಬೋಟಿಕ್ ಶಸ್ತ್ರಚಿಕಿತ್ಸೆ ತರಬೇತಿ ಕಾರ್ಯಕ್ರಮಕ್ಕೆ ಸಂಸ್ಥೆ ನಿರ್ದೇಶಕ ಡಾ.ಸಿ. ರಾಮಚಂದ್ರ ಚಾಲನೆ ನೀಡಿದರು. ಮಣಿಪಾಲ್ ಹೆಲ್ತ್ ಎಂಟರ್‌ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸರ್ಜಿಕಲ್ ಅಂಕಾಲಜಿ ಅಧ್ಯಕ್ಷ ಡಾ.ಎಸ್.ಪಿ. ಸೋಮಶೇಖರ್ ಹಾಗೂ ವಿಕ್ಟೋರಿಯಾ ಆಸ್ಪತ್ರೆ ನಿವೃತ್ತ ಅಧೀಕ್ಷಕ ಡಾ.ಅಶೋಕ್ ಕುಮಾರ್ ಇದ್ದರು –ಪ್ರಜಾವಾಣಿ ಚಿತ್ರ

ಕೆ.ಆರ್‌.ಪುರದ ವಾಸವಿ ಮಹಲ್ ರಸ್ತೆಯಲ್ಲಿ ಹೋಳಿ ಹಬ್ಬದ ಅಂಗವಾಗಿ ನಾರದ, ಮುನೇಂದ್ರ ಮತ್ತು ಮನ್ಮಥರಿಂದ ಈಶ್ವರನ ತಪೋ ಭಂಗ ಮಾಡುವ ಸನ್ನಿವೇಶ ಹೇಳುವ ಬೊಂಬೆಗಳನ್ನು ಪ್ರತಿಷ್ಠಾಪಿಸಲಾಗಿದ್ದು, ಜನರ ಆಕರ್ಷಣೆಯ ಕೇಂದ್ರವಾಗಿತ್ತು

ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಹೆಗ್ಗನಹಳ್ಳಿ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಶುಕ್ರವಾರ ಆಯೋಜಿಸಿದ್ದ ಮಾತೃವಂದನಾ ಕಾರ್ಯಕ್ರಮದಲ್ಲಿ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳು ತಮ್ಮ ಪೋಷಕರಿಗೆ ಪಾದಪೂಜೆ ಮಾಡುವ ಮೂಲಕ ಆಶೀರ್ವಾದ ಪಡೆದರು. ಶಾಸಕ ಆರ್‌.ಮಂಜುನಾಥ್ ಇದ್ದಾರೆ.

ಬಿಎಸ್‌ಪಿ ವಿಭಾಗೀಯ ಮಟ್ಟದ ಸಮಾವೇಶದಲ್ಲಿ ಮಾರಸಂದ್ರ ಮುನಿಯಪ್ಪ ಪ್ರಶ್ನೆ

'ಮಾಯಾವತಿ ಜತೆ ಮಾತನಾಡಲು ಬಿಜೆಪಿಗೆ ತಾಕತ್ತೆಲ್ಲಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉತ್ತರ ಪ್ರದೇಶದಲ್ಲಿ ಬಿಜೆಪಿ ಜತೆ ಬಿಎಸ್‌ಪಿ ಹೊಂದಾಣಿಕೆ ಮಾಡಿಕೊಂಡಿದೆ ಎಂಬುದು ಮಾಧ್ಯಮಗಳ ಅಪಪ್ರಚಾರ. ಮಾಯಾವತಿ ಎದುರು ನಿಂತು ಮಾತನಾಡುವ ತಾಕತ್ತು ಬಿಜೆಪಿಯವರಿಗೆ ಎಲ್ಲಿದೆ' ಎಂದು ಬಿಎಸ್‌ಪಿ ರಾಜ್ಯ ಸಂಯೋಜಕ ಮಾರಸಂದ್ರ ಮುನಿಯಪ್ಪ ಪ್ರಶ್ನಿಸಿದರು.

ಕಾನ್ಶಿರಾಮ್ ಅವರ 89ನೇ ಜಯಂತಿ ಅಂಗವಾಗಿ ಸಂವಿಧಾನದ ಮತ್ತು ಬಹುಜನರ ಹಕ್ಕುಗಳ ಸಂರಕ್ಷಣೆಗಾಗಿ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಬಿಎಸ್‌ಪಿ ವಿಭಾಗೀಯ ಮಟ್ಟದ ಸಮಾವೇಶದಲ್ಲಿ ಅವರು ಮಾತನಾಡಿದರು.

'ಬಿಜೆಪಿ ಮತ್ತು ಕಾಂಗ್ರೆಸ್ ಬಿಟ್ಟರೆ ದೇಶದ ಮೂರನೇ ದೊಡ್ಡ ರಾಷ್ಟ್ರೀಯ ಪಕ್ಷ ಎಂದರೆ ಬಿಎಸ್‌ಪಿ. 1.25 ಕೋಟಿ ಮತಗಳನ್ನು ಉತ್ತರ ಪ್ರದೇಶದಲ್ಲಿ ಪಡೆದುಕೊಂಡಿದೆ. ನಾಲ್ಕು ಬಾರಿ ಮುಖ್ಯಮಂತ್ರಿ ಆಗಿದ್ದ ಮಾಯಾವತಿ ಅವರು ಬಿಜೆಪಿ ಜತೆ ಹೊಂದಾಣಿಕೆ ಮಾಡಿಕೊಳ್ಳುತ್ತಾರೆ ಎಂದರೆ ನಂಬಲು ಸಾಧ್ಯವೇ' ಎಂದು ಪ್ರಶ್ನಿಸಿದರು.

ಸಮಾವೇಶದಲ್ಲಿ ಬಿ.ಆರ್. ಅಂಬೇಡ್ಕರ್ ಮತ್ತು ಕಾನ್ಶಿರಾಮ್ ಅವರ ಭಾವಚಿತ್ರಗಳಿಗೆ ಪ್ರಸನ್ನಾನಂದ ಸ್ವಾಮೀಜಿ ಪುಷ್ಪ ನಮನ ಸಲ್ಲಿಸಿದರು. ಸುರೇಂದ್ರ ಸಿಂಗ್ ಕಲೋರಿಯಾ, ಎಂ.ಕೃಷ್ಣಮೂರ್ತಿ, ಮಾರಸಂದ್ರ ಮುನಿಯಪ್ಪ ಇದ್ದರು –ಪ್ರಜಾವಾಣಿ ಚಿತ್ರ

'ನಮ್ಮ ಬಳಿ ಮಾಧ್ಯಮ ಇಲ್ಲ ಎಂಬ ಕಾರಣಕ್ಕೆ ಈ ರೀತಿ ಅಪಪ್ರಚಾರ ನಡೆಸುವುದು ತರವಲ್ಲ. ಡಾ.ಬಿ.ಆರ್. ಅಂಬೇಡ್ಕರ್, ಕಾನ್ಶಿರಾಮ್ ಅವರಿಗೂ ಅಂದಿನ ಮಾಧ್ಯಮಗಳು ಅವಮಾನ ಮಾಡಿದ್ದವು. ಇದಕ್ಕೆ ಉತ್ತರ ನೀಡುವ ಕಾಲ ದೂರ ಇಲ್ಲ' ಎಂದರು.

'ಮೀಸಲಾತಿ ಪ್ರಮಾಣ ಹೆಚ್ಚಳಕ್ಕೆ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ವರದಿ ಜಾರಿಗೆ ಆಗ್ರಹಿಸಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ಅವರು ನಿರಂತರ ಹೋರಾಟ ನಡೆಸುತ್ತಿದ್ದಾರೆ. ಅವರಿಗೆ ಎಲ್ಲರೂ ಒಗ್ಗಟ್ಟಿನಿಂದ ಬೆಂಬಲ ನೀಡಬೇಕಿದೆ' ಎಂದು ಹೇಳಿದರು.

'ಬಿ.ಎಸ್.ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಇಳಿಸಿದಾಗ ಆ ಸಮುದಾಯದ ಮಠಾಧೀಶರು ಬೀದಿಗೆ ಇಳಿದರು. ಅವರೆಲ್ಲರು ಜಗದ್ಗುರುಗಳಲ್ಲ, ಜಾತಿ ಗುರುಗಳು. ಯಡಿಯೂರಪ್ಪ ನಂತರ ಆ ಸ್ಥಾನಕ್ಕೆ ಶ್ರೀರಾಮುಲು ಅಥವಾ ಗೋವಿಂದ ಕಾರಜೋಳ ಅವರ ಹೆಸರು ಏಕೆ ಬರಲಿಲ್ಲ. ಆ ಮಠಾಧೀಶರು ಮಾಡುತ್ತಿರುವುದು ರಾಜಕೀಯ ಅಲ್ಲವೇ? ರಾಜ್ಯದಲ್ಲಿ 1.50 ಕೋಟಿ ಜನಸಂಖ್ಯೆ ಹೊಂದಿರುವ ಪರಿಶಿಷ್ಟ ಜಾತಿ ಮತ್ತು ಪಂಗಡದ ಎಲ್ಲ ಉಪಜಾತಿಗಳು ಒಂದಾದರೆ ರಾಜಕೀಯ ಅಧಿಕಾರ ತಾನಾಗಿಯೇ ಬರಲಿದೆ. ಆ ಕಡೆಗೆ ಸಮುದಾಯ ಚಿಂತಿಸಬೇಕು' ಎಂದರು.

ಆಶೀರ್ವಚನ ನೀಡಿದ ಪ್ರಸನ್ನಾನಂದ ಸ್ವಾಮೀಜಿ ಮಾತನಾಡಿ, 'ಚುನಾವಣೆ ಸಂದರ್ಭದಲ್ಲಿ ₹500, ₹1000ಕ್ಕೆ ಮತಗಳನ್ನು ಮಾರಾಟ ಮಾಡಿಕೊಳ್ಳಬಾರದು. ಒಂದು ಮತದ ಮೌಲ್ಯ ₹770 ಕೋಟಿ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಸ್ವಾಭಿಮಾನ ಬೆಳಸಿಕೊಂಡು ರಾಜಕೀಯ ಅಧಿಕಾರ ಹಿಡಿಯಬೇಕು' ಎಂದು ಹೇಳಿದರು.

ಬಿಎಸ್‌ಪಿ ರಾಜ್ಯ ಸಂಯೋಜಕರಾದ ಸುರೇಂದ್ರ ಸಿಂಗ್ ಕಲೋರಿಯಾ, ದಿನೇಶ್ ಗೌತಮ್, ರಾಜ್ಯ ಘಟಕದ ಅಧ್ಯಕ್ಷ ಎಂ.ಕೃಷ್ಣಮೂರ್ತಿ, ಉಪಾಧ್ಯಕ್ಷ ಕೆ.ಬಿ.ವಾಸು, ಪ್ರಧಾನ ಕಾರ್ಯದರ್ಶಿ ಆರ್.ಮುನಿಯಪ್ಪ ಮಾತನಾಡಿದರು.

'ಡಿಸಿಸಿ ಬ್ಯಾಂಕ್ ವಿಲೀನ: ಕೇರಳಕ್ಕೆ ಅಧ್ಯಯನ ತಂಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಲ್ಲಾ ಕೇಂದ್ರ ಸಹಕಾರ (ಡಿಸಿಸಿ) ಬ್ಯಾಂಕ್‌ಗಳನ್ನು ಅಪೆಕ್ಸ್ ಬ್ಯಾಂಕ್‌ಗಳ ಜತೆ ವಿಲೀನಗೊಳಿಸುವ ಕೇಂದ್ರ ಸರ್ಕಾರದ ಸಲಹೆ ಕುರಿತು ಅಧ್ಯಯನ ನಡೆಸಲು ಕೇರಳಕ್ಕೆ ಅಧಿಕಾರಿಗಳ ತಂಡವೊಂದನ್ನು ಕಳುಹಿಸಲಾಗುವುದು ಎಂದು ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್ ತಿಳಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಪ್ರತಿಕ್ರಿಯಿಸಿದ ಅವರು, 'ಈಗ ರಾಜ್ಯದಲ್ಲಿ ಮೂರು ಹಂತದ ಸಹಕಾರಿ ವ್ಯವಸ್ಥೆ ಇದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳು, ಡಿಸಿಸಿ ಬ್ಯಾಂಕ್ ಮತ್ತು ಅಪೆಕ್ಸ್ ಬ್ಯಾಂಕ್‌ಗಳಿವೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಬ್ಯಾಂಕ್ ಮತ್ತು ಅಪೆಕ್ಸ್ ಬ್ಯಾಂಕ್‌ಗಳನ್ನು ಮಾತ್ರ ಉಳಿಸಿಕೊಂಡರೆ ಉತ್ತಮ ಎಂಬ ಸಲಹೆ ಕೇಂದ್ರ ಸಹಕಾರ ಸಚಿವಾಲಯದಿಂದ ಬಂದಿದೆ' ಎಂದರು.

ಈಗ ಎಲ್ಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಶೇಕಡ 1ರಷ್ಟು ಮೊತ್ತವನ್ನು ಡಿಸಿಸಿ ಬ್ಯಾಂಕ್‌ಗಳಿಗೆ ನಿರ್ವಹಣಾ ವೆಚ್ಚವಾಗಿ ಪಾವತಿಸಬೇಕಿದೆ. ಎರಡು ಹಂತದ ವ್ಯವಸ್ಥೆಯಾದರೆ ಆ ಹಣ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಬಳಿಯೇ ಉಳಿಯುತ್ತದೆ. ಆಡಳಿತಾತ್ಮಕ ವೆಚ್ಚ ಕಡಮೆಯಾಗುತ್ತದೆ. ಕಡತಗಳ ಚಲನೆಯ ಹಂತಗಳು ಕಡಿಮೆಯಾಗಿ, ಪಾರದರ್ಶಕತೆಯನ್ನೂ ತರಬಹುದು ಎಂಬ ಸಲಹೆ ಕೇಂದ್ರದಿಂದ ಬಂದಿದೆ ಎಂದು ಹೇಳಿದರು.



ಎಸ್‌ಟಿ. ಸೋಮಶೇಖರ್

'ಜಾರ್ಖಂಡ್ ಮತ್ತು ಕೇರಳ ರಾಜ್ಯಗಳು ಈಗಾಗಲೇ ಡಿಸಿಸಿ ಬ್ಯಾಂಕ್‌ಗಳನ್ನು ಅಪೆಕ್ಸ್ ಬ್ಯಾಂಕ್‌ನಲ್ಲಿ ವಿಲೀನಗೊಳಿಸಿವೆ. ಅಲ್ಲಿ ಯಾವ ಬದಲಾವಣೆ ಆಗಿದೆ? ಇದರ ಅನುಕೂಲ ಮತ್ತು ಅನಾನುಕೂಲಗಳು ಏನು ಎಂಬುದರ ಕುರಿತು ಅಧ್ಯಯನ ನಡೆಸಲಾಗುವುದು. ವಿಧಾನಮಂಡಲ ಅಧಿವೇಶನ ಮುಗಿದ ಬಳಿಕ ಹಿರಿಯ ಅಧಿಕಾರಿಗಳ ತಂಡವೊಂದನ್ನು ಕೇರಳಕ್ಕೆ ಕಳುಹಿಸಲಾಗುವುದು' ಎಂದು ಸೋಮಶೇಖರ್ ತಿಳಿಸಿದರು.

ಕರ್ನಾಟಕದಲ್ಲಿ ಡಿಸಿಸಿ ಬ್ಯಾಂಕ್‌ಗಳಲ್ಲಿ ಹೆಚ್ಚಿನವು ಆರ್ಥಿಕವಾಗಿ ಸಶಕ್ತವಾಗಿವೆ. ವಿಲೀನಗೊಳಿಸಲೇಬೇಕೆಂಬ ಕಡ್ಡಾಯವೇನೂ ಇಲ್ಲ. ಈಗ ಅಧ್ಯಯನ ಮಾತ್ರ ನಡೆಯಲಿದೆ. ಅಧಿಕಾರಿಗಳು ಸಲ್ಲಿಸುವ ವರದಿಯನ್ನು ಪರಾಮರ್ಶಿಸಿದ ಬಳಿಕ ಮುಂದಿನ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ವಿಮಾನದಲ್ಲಿ ಬಂದು ಕಳ್ಳತನ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮ ಬಂಗಾಳದಿಂದ ವಿಮಾನದಲ್ಲಿ ನಗರಕ್ಕೆ ಬಂದು ಕಳ್ಳತನ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಬಾಣಸವಾಡಿ ಪೊಲೀಸರು ಬಂಧಿಸಿದ್ದಾರೆ.

'ಪಶ್ಚಿಮ ಬಂಗಾಳದ ನದಿಯಾ ಜಿಲ್ಲೆಯ ಹರಿದಾಸ್ ಬರಾಯಿ (37), ಪಾರ್ಥ್ ಹಲ್ದಾರ್ ಅಲಿಯಾಸ್ ರಾಕೇಶ್ (32) ಹಾಗೂ ರತನ್ ಸಹಾ (52) ಬಂಧಿತರು. ಇವರಿಂದ ₹ 38 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೂರ್ವ ವಿಭಾಗದ ಡಿಸಿಪಿ ಭೀಮಾಶಂಕರ್ ಗುಳೇದ್ ಹೇಳಿದರು.

'ಆರೋಪಿಗಳು ಕಳ್ಳತನವನ್ನೇ ವೃತ್ತಿ ಮಾಡಿಕೊಂಡಿದ್ದರು. ಅವರು ಆಗಾಗ ವಿಮಾನದಲ್ಲಿ ಬೆಂಗಳೂರಿಗೆ ಬರುತ್ತಿದ್ದರು. ಅಂಗಳದಲ್ಲಿ ಕಸ ಹಾಗೂ ದಿನಪತ್ರಿಕೆಗಳು ಬಿದ್ದಿರುತ್ತಿದ್ದ ಮನೆಗಳನ್ನು ಗುರುತಿಸಿ ಕಳ್ಳತನಕ್ಕೆ ಸಂಚು ರೂಪಿಸುತ್ತಿದ್ದರು. ರಾತ್ರಿ ವೇಳೆ ಬಾಗಿಲು ಬೀಗ ಮುರಿದು ಮನೆಯೊಳಗೆ ನುಗ್ಗಿ ಚಿನ್ನಾಭರಣ ಕದ್ದುಕೊಂಡು ಪರಾರಿಯಾಗುತ್ತಿದ್ದರು' ಎಂದೂ ಅವರು ತಿಳಿಸಿದರು.

'ಬಾಣಸವಾಡಿ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಫೆ. 12ರಂದು ಕಳ್ಳತನ ಆಗಿತ್ತು. ಆರೋಪಿಗಳ ಸುಳಿವು ಸಿಗುತ್ತಿದ್ದಂತೆ ಪೊಲೀಸರ ತಂಡ, ಪಶ್ಚಿಮ ಬಂಗಾಳಕ್ಕೆ ಹೋಗಿ ಆರೋಪಿಗಳನ್ನು ಬಂಧಿಸಿ ಕರೆತಂದಿದೆ. ದೆಹಲಿ ಹಾಗೂ ತೆಲಂಗಾಣ ರಾಜ್ಯದಲ್ಲೂ ಆರೋಪಿಗಳು ಕೃತ್ಯ ಎಸಗಿರುವ ಮಾಹಿತಿ ಇದೆ' ಎಂದೂ ಡಿಸಿಪಿ ಭೀಮಾಶಂಕರ್ ಗುಳೇದ್ ಅವರು ಹೇಳಿದರು.

ವ್ಹೀಲಿಂಗ್ ಪ್ರಶ್ನಿಸಿದ್ದಕ್ಕೆ ಕೊಲೆ: ಆರು ಮಂದಿ ಬಂಧನ

ಬೆಂಗಳೂರು: ಕೆ.ಪಿ. ಅಗ್ರಹಾರ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಥಾಮಸ್ ಎಂಬುವರ ಕೊಲೆ ಪ್ರಕರಣವನ್ನು ಪೊಲೀಸರು ಭೇದಿಸಿದ್ದು, ಆರು ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ.

'ಸೂರ್ಯ, ಚಂದನ್, ಪ್ರಮೋದ್, ಯಶವಂತ್ ಹಾಗೂ ಚೇತನ್ ಬಂಧಿತರು. ಇವರೆಲ್ಲರೂ ಸೇರಿ ಥಾಮಸ್ ಅವರನ್ನು ಕೊಂದು ಪರಾರಿಯಾಗಿದ್ದರು' ಎಂದು ಪೊಲೀಸರು ಹೇಳಿದರು.

'ಪೈಪ್‌ಲೈನ್ ನಿವಾಸಿ ಥಾಮಸ್, ಸ್ವಿಗ್ಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಅವರ ಸ್ನೇಹಿತರೊಬ್ಬರ ಮನೆ ಎದುರು ಆರೋಪಿಗಳು ವ್ಹೀಲಿಂಗ್ ಮಾಡಿ ಸ್ಥಳೀಯರಿಗೆ ತೊಂದರೆ ನೀಡುತ್ತಿದ್ದರು. ಜೊತೆಗೆ, ಸ್ಥಳೀಯ ಯುವತಿಯರನ್ನು ಚುಡಾಯಿಸುತ್ತಿದ್ದರು. ಇದನ್ನು ಪ್ರಶ್ನಿಸಿದ್ದ ಥಾಮಸ್, ಆರೋಪಿಗಳ ಪೋಷಕರಿಗೆ ವಿಷಯ ತಿಳಿಸಿದ್ದರು. ಬುದ್ಧಿವಾದ ಹೇಳುವಂತೆ ಕೋರಿದ್ದರು.' 'ಕೋಪಗೊಂಡಿದ್ದ ಆರೋಪಿಗಳು, ಥಾಮಸ್ ಅವರ ಜೊತೆ ಜಗಳ ತೆಗೆದು ಡ್ರ್ಯಾಗರ್‌ನಿಂದ ಇರಿದು ಕೊಲೆ ಮಾಡಿದ್ದರು' ಎಂದೂ ತಿಳಿಸಿದರು.

ಅಪರಾಧ ಸುದ್ದಿ

ಮಹಿಳಾ ಕ್ರಿಕೆಟ್ ಬೆಟ್ಟಿಂಗ್: ಆರೋಪಿ ಬಂಧನ

ಬೆಂಗಳೂರು: ಮಹಿಳಾ ಏಕದಿನ ವಿಶ್ವಕಪ್ ಪಂದ್ಯಗಳ ಮೇಲೆ ಬೆಟ್ಟಿಂಗ್ ನಡೆಸುತ್ತಿದ್ದ ಆರೋಪಿ ಸಂಪತ್ ಎಂಬಾತನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ವಿದ್ಯಾರಣ್ಯಪುರ ಠಾಣೆ ವ್ಯಾಪ್ತಿಯ ದೇವಸ್ಥಾನವೊಂದರ ಬಳಿ ಆರೋಪಿ ಸುತ್ತಾಡುತ್ತಿದ್ದ. ಕ್ರಿಕೆಟ್ ಪಂದ್ಯಗಳ ಸೋಲು–ಗೆಲುವು ಲೆಕ್ಕಾಚಾರದಲ್ಲಿ ಜನರಿಂದ ಹಣ ಕಟ್ಟಿಸಿಕೊಳ್ಳುತ್ತಿದ್ದ. ದಾಳಿ ಮಾಡಿ ₹ 1.8 ಲಕ್ಷ ನಗದು ಹಾಗೂ ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ತಿಳಿಸಿದರು.

ಅಂಬೇಡ್ಕರ್ ಪ್ರತಿಮೆ ಸ್ಥಳಾಂತರ ವಿವಾದ

ಖುದ್ದು ಹಾಜರಿಗೆ ನಿರ್ದೇಶನ

ಬೆಂಗಳೂರು: 'ಸಾರ್ವಜನಿಕ ಸ್ಥಳದಲ್ಲಿ ಅನಧಿಕೃತವಾಗಿ ಅಂಬೇಡ್ಕರ್ ಪ್ರತಿಮೆ ಸ್ಥಾಪಿಸಲಾಗಿದೆ ಎಂದು ಆರೋಪಿಸಲಾದ ಅರ್ಜಿ ವಿಚಾರಣೆಗೆ ಖುದ್ದಾಗಿ ಅಥವಾ ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರಾಗಿ' ಎಂದು ಹರಪನಹಳ್ಳಿಯ 'ಡಾ. ಬಿ.ಆರ್. ಅಂಬೇಡ್ಕರ್ ಯುವ ಸಂಘಟನೆ' ಅಧ್ಯಕ್ಷ ರೇವಣಸಿದ್ದಪ್ಪ ಮತ್ತು ಅವರ ಪರ ವಕೀಲ ಹನುಮಂತಪ್ಪ ಬಿ. ಹರವಿಗೌಡರ್ ಅವರಿಗೆ ಹೈಕೋರ್ಟ್ ನಿರ್ದೇಶಿಸಿದೆ.

'ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನ ಸಾರ್ವಜನಿಕ ಸ್ಥಳದಲ್ಲಿ ಕಾನೂನು ಬಾಹಿರವಾಗಿ ಅಂಬೇಡ್ಕರ್ ಪ್ರತಿಮೆ ಸ್ಥಾಪಿಸಲಾಗಿದೆ' ಎಂದು ಆಕ್ಷೇಪಿಸಿ ಓ.ನೀಲಪ್ಪ ಸೇರಿದಂತೆ ಐವರು ಸ್ಥಳೀಯರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ಹೆಚ್ಚುವರಿ ವಕೀಲ ವಿಜಯ್ ಕುಮಾರ್ ಎ. ಪಾಟೀಲ್, 'ನ್ಯಾಯಾಲಯದ ಹಿಂದಿನ ನಿರ್ದೇಶನದಂತೆ ಹತ್ತನೇ ಪ್ರತಿವಾದಿಯಾದ ಸಂಘಟನೆ ಅಧ್ಯಕ್ಷ ರೇವಣಸಿದ್ದಪ್ಪ ಇಂದು ವಿಚಾರಣೆಗೆ ಹಾಜರಾಗಬೇಕಿತ್ತು. ಆದರೆ, ಅವರು ಗೈರಾಗಿದ್ದು ಪ್ರಮಾಣಪತ್ರ ಸಲ್ಲಿಸಿದ್ದಾರೆ. ಅದರಲ್ಲಿ ಕೋರ್ಟ್ ಆದೇಶ ಪಾಲನೆ ಮಾಡಿರುವ ಕುರಿತು ಎಲ್ಲೂ ಸ್ಪಷ್ಟವಾಗಿ ತಿಳಿಸಿಲ್ಲ' ಎಂಬ ಅಂಶದತ್ತ ನ್ಯಾಯಪೀಠದ ಗಮನ ಸೆಳೆದರು. ಆಗ ನ್ಯಾಯಪೀಠವು, ರೇವಣಸಿದ್ದಪ್ಪ ಮತ್ತು ಅವರ ಪರ ವಕೀಲರ ಹೆಸರನ್ನು ಕರೆಯಿತಾದರೂ, ಅವರು ವಿಚಾರಣೆಗೆ ಹಾಜರಾಗಿರಲಿಲ್ಲ.

'ಮುಂದಿನ ವಿಚಾರಣೆಗೆ ಹತ್ತನೇ ಪ್ರತಿವಾದಿ ಮತ್ತು ಅವರ ಪರ ವಕೀಲ ಹನುಮಂತಪ್ಪ ಬಿ. ಹರವಿಗೌಡರ್ ಖುದ್ದಾಗಿ ಅಥವಾ ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರಾಗಬೇಕು. ಇಲ್ಲವಾದಲ್ಲಿ, ಸೂಕ್ತ ಆದೇಶ ಹೊರಡಿಸಲಾಗುವುದು' ಎಂದು ಎಚ್ಚರಿಸಿದ ನ್ಯಾಯಪೀಠ, ವಿಚಾರಣೆಯನ್ನು ಇದೇ 24ಕ್ಕೆ ಮುಂದೂಡಿದೆ.

ಜಿಮ್‌ಗಳತ್ತ ಸುಳಿಯದ ಜನ: ದುಡಿಮೆ ಇಲ್ಲದೆ ಮಾಲೀಕರು ಕಂಗಾಲು

‘ಬಾಡಿಗೆ ಕಟ್ಟಲು ಸಾಲ ಮಾಡಬೇಕಾದ ಸ್ಥಿತಿ’

• ಜಿ.ಶಿವಕುಮಾರ

ಬೆಂಗಳೂರು: ಕೋವಿಡ್ ಕಡಿಮೆಯಾದ ನಂತರ ಜಿಮ್‌ಗಳ ಪುನರಾರಂಭಕ್ಕೆ ಅನುಮತಿ ಸಿಕ್ಕಿತ್ತು. ಆಗ ತುಸು ನಿರಾಳರಾಗಿದ್ದ ಮಾಲೀಕರು ಈಗ ಮತ್ತೆ ಸಂಕಷ್ಟಕ್ಕೆ ಸಿಲುಕಿದ್ದಾರೆ. ಪರಿಸ್ಥಿತಿ ಸಹಜತೆಯತ್ತ ಮರಳುತ್ತಿದ್ದರೂ ಜನರು ಜಿಮ್‌ಗಳತ್ತ ಸುಳಿಯುತ್ತಿಲ್ಲ. ಹೀಗಾಗಿ ದುಡಿಮೆ ಇಲ್ಲದೆ ಅವರ ಬದುಕು ದುಸ್ತರವಾಗಿದೆ.

ಕೋವಿಡ್‌ಗೂ ಮುನ್ನ ನಗರದಲ್ಲಿ ಸಾವಿರಾರು ಜಿಮ್‌ಗಳು ಕಾರ್ಯನಿರ್ವಹಿಸುತ್ತಿದ್ದವು. ಈ ಪೈಕಿ ಶೇ 40ರಷ್ಟು ಜಿಮ್‌ಗಳಿಗೆ ಈಗ ಬೀಗ ಬಿದ್ದಿದೆ. ಲಕ್ಷಗಟ್ಟಲೆ ಬಂಡವಾಳ ಹಾಕಿದ್ದವರು ಆದಾಯವೇ ಇಲ್ಲದೆ ಕಂಗಾಲಾಗಿದ್ದಾರೆ. ಜಿಮ್‌ಗಳನ್ನೇ ನಂಬಿ ಜೀವನ ಸಾಗಿಸುತ್ತಿದ್ದ ತರಬೇತುದಾರರೂ ದಿಕ್ಕು ತೋಚದಂತಾಗಿದ್ದಾರೆ.

‘ಮೂರು ವರ್ಷಗಳ ಹಿಂದೆ ₹40 ಲಕ್ಷ ಬಂಡವಾಳ ಹಾಕಿ ಜಿಮ್ ಆರಂಭಿಸಿದ್ದೆ. ಮೊದಲ ವರ್ಷ ದುಡಿಮೆ ಚೆನ್ನಾಗಿತ್ತು. ಕಾಲಿಡಲೂ ಜಾಗವಿಲ್ಲದಷ್ಟು ಜನರು ಸೇರುತ್ತಿದ್ದರು. ಎಲ್ಲವೂ ಅಂದುಕೊಂಡಂತೆ ನಡೆಯುತ್ತಿತ್ತು. ದರಿಂದ ಜೀವನವೂ ಸಂತಸಮಯವಾಗಿತ್ತು. ಕೋವಿಡ್ ನಮ್ಮೆಲ್ಲ ಖುಷಿ ಹಾಗೂ ಕನಸನ್ನು ಕಮರಿಸಿತು. ಸೋಂಕು ಪಸರಿಸುವ ಆತಂಕದಿಂದಾಗಿ ಜಿಮ್‌ಗಳನ್ನು ಮುಚ್ಚಿಸಿದಾಗ ಹೊತ್ತಿನ ಊಟಕ್ಕೂ ಪರದಾಡುವಂತಾಗಿತ್ತು’ ಎಂದು ಶ್ರೀನಿವಾಸನಗರದ ‘ಫಿಟ್ ಆ್ಯಂಡ್ ಫಿಟ್’ ಜಿಮ್ ಮಾಲೀಕ ನಾಗಭೂಷಣ್ ತಿಳಿಸಿದರು.

‘ಕೋವಿಡ್ ಕಡಿಮೆಯಾಗಿ ಜಿಮ್‌ಗಳ ಪುನರಾರಂಭಕ್ಕೆ ಸರ್ಕಾರ ಅನುಮತಿ ನೀಡಿದಾಗ ಬದುಕು ಸರಿದಾರಿಗೆ ಬರುವ ಆಸೆ ಚಿಗುರೊಡೆದಿತ್ತು. ಆ ನಿರೀಕ್ಷೆ ಹುಸಿಯಾಗಿದೆ. ಎರಡು ತಿಂಗಳಿಂದ ದುಡಿಮೆಯೇ ಇಲ್ಲ. ಜಿಮ್ ಬಾಡಿಗೆಯೂ ಕಟ್ಟಿಲ್ಲ. ಮಾಲೀಕರು ಪದೇ ಪದೇ ಕರೆ ಮಾಡಿ ಹಿಂಸಿಸುತ್ತಿದ್ದಾರೆ. ₹2 ಲಕ್ಷ ಹಣ ಎಲ್ಲಿಂದ ತರಬೇಕು ಎಂಬುದೇ ತಿಳಿಯುತ್ತಿಲ್ಲ. ಸಾಲಕ್ಕಾಗಿ ಬ್ಯಾಂಕ್‌ಗಳಿಗೆ ಅಲೆಯುವುದು ತಪ್ಪಿಲ್ಲ’ ಎಂದು ಅಳಲು ತೋಡಿಕೊಂಡರು.

ವೈಟ್‌ಫೀಲ್ಡ್‌ನ ಪೂರಂ ಮಾಲ್‌ನಲ್ಲಿರುವ ‘ಫ್ಲೆಕ್ಸ್ ಫಿಟ್ನೆಸ್’ನ ಮಾಲೀಕ ಬಾಲಕೃಷ್ಣ, ‘ಕೋವಿಡ್‌ಗೂ ಮುನ್ನ ಪ್ರತಿನಿತ್ಯ ಬೆಳಿಗ್ಗೆ 40 ರಿಂದ 50 ಮಂದಿ ತರಬೇತಿಗೆ ಬರುತ್ತಿದ್ದರು. ಈಗ ಇದು 10ಕ್ಕೆ ಇಳಿದಿದೆ. ಬಾಡಿಗೆ ಹೇಗೆ ಕಟ್ಟಬೇಕು, ಕುಟುಂಬದವರನ್ನು ಹೇಗೆ ಸಾಕಬೇಕು ಎಂಬ ಚಿಂತೆ ಶುರುವಾಗಿದೆ’ ಎಂದರು.

‘ಈ ತಿಂಗಳ ಅಂತ್ಯದಲ್ಲಿ ಪರೀಕ್ಷೆಗಳು ಶುರುವಾಗುತ್ತವೆ. ಬಳಿಕ ಬೇಸಿಗೆ ರಜೆ ಬರುತ್ತದೆ. ಆಗ ಎಲ್ಲರೂ ಪ್ರವಾಸ ಕೈಗೊಳ್ಳುತ್ತಾರೆ. ಹೀಗಾಗಿ ಇನ್ನೂ ಮೂರು ತಿಂಗಳು ದುಡಿಮೆಗೆ ಹೊಡೆತ ಬೀಳುವುದು ನಿಶ್ಚಿತ. ಜುಲೈ ನಂತರ ಪರಿಸ್ಥಿತಿ ಸುಧಾರಿಸಬಹುದು. ಅಲ್ಲಿಯವರೆಗೂ ಕಾದು ನೋಡಬೇಕಷ್ಟೆ’ ಎಂದು ತಿಳಿಸಿದರು.

ಪ್ರಜಾವಾಣಿ ವಿಶೇಷ

‘ಶೇ 70ರಷ್ಟು ಜಿಮ್‌ಗಳಿಗೆ ಬೀಗ ಸಾಧ್ಯತೆ’

‘ಜಿಮ್‌ಗಳ ಮೇಲೆ ಜನರಿಗೆ ಮೊದಲಿನಷ್ಟು ಒಲವಿಲ್ಲ. ಶುಲ್ಕ ಕಡಿಮೆ ಮಾಡಿದರೂ ಪ್ರವೇಶ ಪಡೆಯುತ್ತಿಲ್ಲ. ಹೀಗಾಗಿ ಮಾಲೀಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಹಲವರು ಬಾಡಿಗೆ ಹಾಗೂ ಬ್ಯಾಂಕ್ ಸಾಲ ತೀರಿಸಲಾಗದ ಸ್ಥಿತಿಗೆ ತಲುಪಿದ್ದಾರೆ. ಇದು ಹೀಗೆ ಮುಂದುವರಿದರೆ ನಗರದಲ್ಲಿ ಶೇ 70ರಷ್ಟು ಜಿಮ್‌ಗಳಿಗೆ ಬೀಗ ಬೀಳಬಹುದು’ ಎಂದು ಕರ್ನಾಟಕ ಜಿಮ್ ಮಾಲೀಕರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಎ.ವಿ. ರವಿ ಆತಂಕ ವ್ಯಕ್ತಪಡಿಸಿದರು.

‘ದೇಹ ಸದೃಢವಾಗಿಟ್ಟುಕೊಳ್ಳಬೇಕು. ಅದಕ್ಕಾಗಿ ಜಿಮ್‌ಗೆ ಹೋಗಬೇಕು ಎಂಬ ಉತ್ಸಾಹ ಜನರಲ್ಲಿ ಕಂಡುಬರುತ್ತಿಲ್ಲ. ಜನರಿಲ್ಲದೆ ಜಿಮ್ ನಡೆಸುವುದಾದರೂ ಹೇಗೆ? ಹೀಗಾಗಿ ಜಿಮ್ ಮಾರುವುದೋ ಬೇಡವೋ ಎಂಬ ಗೊಂದಲಕ್ಕೆ ಹಲವರು ಸಿಲುಕಿದ್ದಾರೆ’ ಎಂದರು.

‘ಸರ್ಕಾರವು ಜಿಮ್ ಉದ್ಯಮವನ್ನು ಸಣ್ಣ ಕೈಗಾರಿಕೆ ಎಂದು ಪರಿಗಣಿಸಬೇಕು. ಸಂಕಷ್ಟದಲ್ಲಿರುವ ಮಾಲೀಕರು ಹಾಗೂ ತರಬೇತುದಾರರಿಗೆ ವಿಶೇಷ ಪ್ಯಾಕೇಜ್ ಪ್ರಕಟಿಸಬೇಕು’ ಎಂದು ಮನವಿ ಮಾಡಿದರು.

ಮೇಕೆದಾಟು ಯೋಜನೆ: ಸಿಎಂ ಭರವಸೆ– ಡಿಕೆಶಿ

ಬೆಂಗಳೂರು: ‘ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಿ ಮೇಕೆದಾಟು ಯೋಜನೆಗೆ ಅನುಮತಿ ತರುತ್ತೇವೆ, ಸಾಧ್ಯವಾಗದಿದ್ದರೆ ಎಲ್ಲ ಪಕ್ಷಗಳ ನಾಯಕರನ್ನು ದೆಹಲಿಗೆ ಕರೆದುಕೊಂಡು ಹೋಗಲಾಗುವುದು ಎಂದು ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಅಂತರರಾಜ್ಯ ಜಲ ವಿವಾದಗಳ ಕುರಿತು ವಿಧಾನ ಮಂಡಲದ ಉಭಯ ಸದನಗಳ ನಾಯಕರು, ಜಲಸಂಪನ್ಮೂಲ ಇಲಾಖೆಯ ಮಾಜಿ ಸಚಿವರು ಮತ್ತು ಕಾನೂನು ತಜ್ಞರ ಜೊತೆ ಮುಖ್ಯಮಂತ್ರಿ ನಡೆಸಿದ ಸಭೆಯ ಬಳಿಕ ಸುದ್ದಿಗಾರರ ಜೊತೆ ಅವರು ಮಾತನಾಡಿದರು.

‘ಕುಡಿಯುವ ನೀರಿನ ವಿಚಾರವಾಗಿ ಬೇರೆ ರಾಜ್ಯಗಳ ಅನುಮತಿ ಬೇಡ ಎಂದು ಸುಪ್ರೀಂ ಕೋರ್ಟ್ ಈಗಾಗಲೇ ಹೇಳಿದೆ. ಕಾವೇರಿ ವಿವಾದದಲ್ಲಿ ತಮಿಳುನಾಡಿನ ಪಾಲಿನ 177 ಟಿಎಂಸಿ ನೀರು ಹರಿದು ಹೋದ ಬಳಿಕ ನೀರಿನ ಬಗ್ಗೆ ಪ್ರಶ್ನೆ ಮಾಡಲು ತಮಿಳುನಾಡಿಗೆ ಯಾವುದೇ ಅಧಿಕಾರ ಇಲ್ಲ. ಕಾನೂನು ತಂಡ ಮನವರಿಕೆ ಮಾಡಿದ ಬಳಿಕ ಈ ವಿಚಾರದಲ್ಲಿ ತಮಿಳುನಾಡಿನ ಅಡ್ಡಿಗೆ ಅವಕಾಶ ಇಲ್ಲ ಎಂದು ಮುಖ್ಯಮಂತ್ರಿ ಕೂಡ ಒಪ್ಪಿಕೊಂಡಿದ್ದಾರೆ’ ಎಂದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಾತನಾಡಿ, ‘ಕೃಷ್ಣ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯಾಗಿ ಪರಿಗಣಿಸಿ, ಅಧಿಸೂಚನೆ ಹೊರಡಿಸಬೇಕು’ ಎಂದರು.

‘ಮೇಕೆದಾಟು ಯೋಜನೆಗೆ ತಮಿಳುನಾಡಿಗೆ ತಕರಾರು ಮಾಡಲು ಯಾವ ಹಕ್ಕೂ ಇಲ್ಲ. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಐದು ಸಭೆಗಳು ನಡೆದಿದ್ದರೂ ನನ್ನ ಪ್ರಕಾರ ಮೇಕೆದಾಟು ಬಗ್ಗೆ ಚರ್ಚೆಯನ್ನೇ ಮಾಡಿಲ್ಲ. ತಕ್ಷಣ ಪರಿಸರ ಅನುಮತಿ ಪತ್ರ ಪಡೆಯಬೇಕು ಎಂದು ನಾನು, ಡಿ.ಕೆ. ಶಿವಕುಮಾರ್, ಎಂ.ಬಿ. ಪಾಟೀಲ ಹೇಳಿದ್ದೇವೆ’ ಎಂದರು.

‘ನದಿಗಳ ಜೋಡಣೆಯಿಂದ ರಾಜ್ಯಕ್ಕೆ ಎಷ್ಟು ಪ್ರಮಾಣದ ನೀರು ಹಂಚಿಕೆಯಾಗಲಿದೆ ಎನ್ನುವುದು ಗೊತ್ತಿಲ್ಲ. ಬಜೆಟ್‌ನಲ್ಲಿ ಯೋಜನೆ ಘೋಷಣೆಗೆ ಮೊದಲು ರಾಜ್ಯ ಸರ್ಕಾರವನ್ನು ಕೇಳಿಲ್ಲ. ಆದಕ್ಕೆ ಸರ್ಕಾರ ಈಗಾಗಲೇ ಮುಖ್ಯ ಕಾರ್ಯದರ್ಶಿ ಪತ್ರ ಬರೆದಿದ್ದು, ಈ ವಿಷಯವನ್ನು ಗಂಭೀರವಾಗಿ ಪರಿಗಣಿಸುತ್ತೇವೆ ಎಂದು ಹೇಳಿದೆ. ನದಿಗಳ ಜೋಡಣೆಯಿಂದ ರಾಜ್ಯಕ್ಕೆ ಭಾರಿ ಅನ್ಯಾಯವಾಗುತ್ತದೆ ಎಂಬುದನ್ನು ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟಿದ್ದೇವೆ’ ಎಂದರು.

ಒತ್ತಡ ತರುವೆವು: ‘ಎಲ್ಲರೂ ಒಂದಾಗಿ ಮುಖ್ಯಮಂತ್ರಿ ಬಳಿ ಅಭಿಪ್ರಾಯ ವ್ಯಕ್ತಪಡಿಸಿದ್ದೇವೆ. ಮುಖ್ಯಮಂತ್ರಿಗೆ ಪೂರ್ಣ ಅಧಿಕಾರ ನೀಡಿದ್ದೇವೆ. ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವೆವು’ ಎಂದು ಜೆಡಿಎಸ್ ನಾಯಕ ಬಂಡೆಪ್ಪ ಕಾಶೆಂಪೂರ ಹೇಳಿದರು.

ವಿಶ್ವಸಂಸ್ಥೆಯಲ್ಲಿ ರಷ್ಯಾ ವಿರುದ್ಧ ಆಕ್ರೋಶ

ವಿಶ್ವಸಂಸ್ಥೆ(ಎಪಿ, ರಾಯಿಟರ್ಸ್): ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಸುಳ್ಳು ಮಾಹಿತಿ ಮತ್ತು ತಪ್ಪು ಹಾಗೂ ಅಸಂಬದ್ಧ ಮಾಹಿತಿಗಳನ್ನು ಪಸರಿಸಿದೆ ಎಂದು ಆರೋಪಿಸಿ ಉಕ್ರೇನ್ ಮೇಲೆ ದಾಳಿ ಎಸಗಿದ ರಷ್ಯಾದ ವಿರುದ್ಧ ಅಮೆರಿಕ ಹಾಗೂ 6 ಪಾಶ್ಚಿಮಾತ್ಯ ದೇಶಗಳು ವಾಗ್ದಾಳಿ ನಡೆಸಿವೆ.

ಉಕ್ರೇನ್‌ನಲ್ಲಿ ಅಮೆರಿಕ ಜೈವಿಕ ಯುದ್ಧದ ಪ್ರಯೋಗಾಲಯಗಳನ್ನು ಹೊಂದಿದೆ ಎಂಬ ರಷ್ಯಾದ ಆರೋಪವು ಸುಳ್ಳು ಎಂದು ಅಮೆರಿಕ ಹೇಳಿದೆ. ಇಂಥ ಸುಳ್ಳುಗಳನ್ನು ಹಬ್ಬಿಸುವ ಕುರಿತಾಗಿ ರಷ್ಯಾಕ್ಕೆ ಕಟು ಎಚ್ಚರಿಕೆ ನೀಡಿದೆ.

ಜೈವಿಕ ಶಸ್ತ್ರಾಸ್ತ್ರಗಳ ನಿಷೇಧಕ್ಕೆ ಭಾರತ ಬೆಂಬಲ (ವಿಶ್ವಸಂಸ್ಥೆ): ಜೈವಿಕ ಶಸ್ತ್ರಾಸ್ತ್ರಗಳನ್ನು ನಿಷೇಧಿಸುವ ಮಹತ್ವದ ಬಗ್ಗೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತ ಮತ್ತೊಮ್ಮೆ ಒತ್ತಿ ಹೇಳಿದೆ. ಈಗಾಗಲೇ ಉಕ್ರೇನ್ ಮತ್ತು ರಷ್ಯಾ ನಡುವೆ ನಡೆಯುತ್ತಿರುವ ಯುದ್ಧದಲ್ಲಿ ಜೈವಿಕ ಶಸ್ತ್ರಾಸ್ತ್ರಗಳು ಬಳಕೆಯಾಗುವ ಸಾಧ್ಯತೆಯಿದೆ ಎಂಬ ಭೀತಿ ವ್ಯಕ್ತಪಡಿಸಿದೆ.

ಜೈವಿಕ ಮತ್ತು ವಿಷಕಾರಿ ಶಸ್ತ್ರಾಸ್ತ್ರಗಳ ಸಮಾವೇಶಕ್ಕೆ (ಬಿಟಿಎಂಸಿ) ಪ್ರಾಮುಖ್ಯತೆ ನೀಡುವುದಾಗಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ ಭಾರತ ತಿಳಿಸಿದೆ.

ಗಣಿಗಾರಿಕೆಯ ಪ್ರಭಾವಕ್ಕೆ ಒಳಗಾದ ವಲಯಗಳ ಸಮಗ್ರ ಪರಿಸರ ಯೋಜನೆ ಅನುಷ್ಠಾನ

‘ವಿಶೇಷ ಪೀಠ ಸ್ಥಾಪನೆಗೆ ‘ಸುಪ್ರೀಂ’ ನಿರ್ಧಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗಣಿಗಾರಿಕೆಯ ಪ್ರಭಾವಕ್ಕೆ ಒಳಗಾದ ವಲಯಗಳ ಸಮಗ್ರ ಪರಿಸರ ಯೋಜನೆ’ (ಸೆಪ್‌ಮಿಜ್) ಅನುಷ್ಠಾನಕ್ಕೆ ಸಂಬಂಧಿಸಿದ ಅರ್ಜಿಗಳ ವಿಚಾರಣೆಗೆ ವಿಶೇಷ ಪೀಠ ರಚಿಸುವ ನಿರ್ಧಾರವನ್ನು ಸುಪ್ರೀಂಕೋರ್ಟ್ ಕೈಗೊಂಡಿದೆ ಎಂದು ಗಣಿ ಮತ್ತು ಭೂ ವಿಜ್ಞಾನ ಸಚಿವ ಹಾಲಪ್ಪ ಆಚಾರ್ ತಿಳಿಸಿದರು.

ವಿಧಾನಸಭೆಯಲ್ಲಿ ಬಿಜೆಪಿಯ ಜಿ. ಸೋಮಶೇಖರ ರೆಡ್ಡಿ ಪ್ರಶ್ನೆಗೆ ಶುಕ್ರವಾರ ಉತ್ತರಿಸಿದ ಅವರು, ‘2018ರಲ್ಲೇ ಸೆಪ್‌ಮಿಜ್ ಕ್ರಿಯಾ ಯೋಜನೆಯನ್ನು ಸುಪ್ರೀಂಗೆ ಸಲ್ಲಿಸಲಾಗಿದೆ. ಸಂಬಂಧಿಸಿದ ಮೂಲ ಅರ್ಜಿ, ರಾಜ್ಯ ಸರ್ಕಾರ ಇತರರು ಸಲ್ಲಿಸಿರುವ ಎಲ್ಲ ಮಧ್ಯಂತರ ಅರ್ಜಿಗಳ ವಿಚಾರಣೆಗೆ ವಿಶೇಷ ಪೀಠ ರಚಿಸುವುದಾಗಿ 2022ರ ಫೆಬ್ರುವರಿ 16ರಂದು ಸುಪ್ರೀಂಕೋರ್ಟ್ ತಿಳಿಸಿದೆ’ ಎಂದರು.

2018ರ ಅಕ್ಟೋಬರ್ 11ರಿಂದ 2022ರ ಫೆಬ್ರುವರಿ 16ರವರೆಗೆ ಸುಪ್ರೀಂಕೋರ್ಟ್‌ನಲ್ಲಿ 31 ಬಾರಿ ವಿಚಾರಣೆ ನಡೆದಿದೆ. ಆದರೆ, ಇನ್ನೂ ಅಂತಿಮ ತೀರ್ಮಾನಕ್ಕೆ ಬರಲಾಗಿಲ್ಲ ಎಂದು ಹೇಳಿದರು.

ಸೆಪ್‌ಮಿಜ್ ಅಡಿಯಲ್ಲಿ ಒಟ್ಟು ₹ 24,996.71 ಕೋಟಿ ವೆಚ್ಚ ಮಾಡಲು ಕ್ರಿಯಾ ಯೋಜನೆ ರೂಪಿಸಲಾಗಿದೆ. ಇದರಲ್ಲಿ ಬಳ್ಳಾರಿ ಜಿಲ್ಲೆಗೆ ₹ 13,378.41 ಕೋಟಿ, ಚಿತ್ರದುರ್ಗ ಜಿಲ್ಲೆಗೆ ₹ 3,792.30 ಕೋಟಿ ಮತ್ತು ತುಮಕೂರು ಜಿಲ್ಲೆಗೆ ₹ 2,554.05 ಕೋಟಿ ವೆಚ್ಚ ಮಾಡುವುದು ಸೇರಿದೆ. ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮ (ಕೆಇಎಂಆರ್‌ಸಿ) ಮೂಲಕ ಈ ಯೋಜನೆ ಅನುಷ್ಠಾನಗೊಳಿಸಲಾಗುವುದು ಎಂದರು.

ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಮಾತನಾಡಿ, ‘ಸೆಪ್‌ಮಿಜ್ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್‌ನಲ್ಲಿರುವ ಪ್ರಕರಣ ಇತ್ಯರ್ಥಕ್ಕೆ ಪ್ರಯತ್ನ ಮುಂದುವರಿದಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ನಾನು ದೆಹಲಿಯಲ್ಲಿ ವಕೀಲರ ತಂಡದ ಜತೆ ಸಭೆ ನಡೆಸಿದ್ದೇವೆ. ಏಪ್ರಿಲ್ ಅಂತ್ಯದೊಳಗೆ ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆ ಪೂರ್ಣಗೊಳ್ಳುವ ವಿಶ್ವಾಸವಿದೆ’ ಎಂದು ಹೇಳಿದರು.

‘ಇಂದಿರಾ ಕ್ಯಾಂಟೀನ್ ಮುಚ್ಚಬೇಡಿ’

ಬೆಂಗಳೂರು: ‘ರಾಜ್ಯ ಸರ್ಕಾರ ಇಂದಿರಾ ಕ್ಯಾಂಟೀನ್‌ಗಳನ್ನು ಮುಚ್ಚಲು ಪ್ರಯತ್ನಿಸುತ್ತಿದೆ’ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ದೂರಿದರು.

ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ‘ಇಂದಿರಾ ಕ್ಯಾಂಟೀನ್‌ಗಳ ನಿರ್ವಹಣೆಗೆ ಸರ್ಕಾರ ಅನುದಾನ ನೀಡುತ್ತಿಲ್ಲ. ತಪ್ಪುಗಳಾಗಿದ್ದರೆ ಸರಿಪಡಿಸಬೇಕು. ಆದರೆ, ಬಡವರಿಗಾಗಿ ರೂಪಿಸಿರುವ ಯೋಜನೆಯನ್ನು ಸ್ಥಗಿತಗೊಳಿಸಬೇಡಿ’ ಎಂದು ಒತ್ತಾಯಿಸಿದರು. ಈ ಬಗ್ಗೆ ಪ್ರತಿಕ್ರಿಯಿಸಿದ ಸಚಿವ ಕೆ ಸಿ ನಾರಾಯಣಗೌಡ ಅವರು, ‘ಕೆಲವೇ ಆಯ್ದ ಜನರು ಮಾತ್ರ ನಿತ್ಯವೂ ಇಂದಿರಾ ಕ್ಯಾಂಟೀನ್‌ಗೆ ಹೋಗುತ್ತಿದ್ದಾರೆ. ಬಿಲ್‌ಗಳಲ್ಲೂ ಅಕ್ರಮ ನಡೆಯುತ್ತಿದೆ’ ಎಂದರು.

ವಿಧಾನ ಮಂಡಲದಲ್ಲಿ

ಅಂಗವಿಕಲರಿಗೆ ತ್ರಿಚಕ್ರ ವಾಹನ: ಹೆಚ್ಚಿನ ಅನುದಾನಕ್ಕೆ ಆಗ್ರಹ

ಬೆಂಗಳೂರು: ಅಂಗವಿಕಲರಿಗೆ ತ್ರಿಚಕ್ರ ವಾಹನಗಳನ್ನು ವಿತರಿಸಲು ಹೆಚ್ಚಿನ ಅನುದಾನ ಒದಗಿಸುವಂತೆ ಹಲವು ಶಾಸಕರು ವಿಧಾನಸಭೆಯಲ್ಲಿ ಶುಕ್ರವಾರ ಒತ್ತಾಯಿಸಿದರು.

ರಾಜ್ಯದಲ್ಲಿ 2018–19ರಿಂದ ಈವರೆಗೆ ಅಂಗವಿಕಲರಿಗೆ ತ್ರಿಚಕ್ರ ವಾಹನ ವಿತರಣೆ ಮಾಡಿರುವ ಕುರಿತು ಕಾಂಗ್ರೆಸ್ ಸಹ ಸದಸ್ಯ ಶರತ್ ಬಚ್ಚೇಗೌಡ ಪ್ರಶ್ನೆಗೆ ಉತ್ತರ ನೀಡಿದ ಅಂಗವಿಕಲರು ಮತ್ತು ಹಿರಿಯ ನಾಗರಿಕರ ಸಬಲೀಕರಣ ಖಾತೆ ಸಚಿವ ಹಾಲಪ್ಪ ಆಚಾರ್, ‘2018–19ರಲ್ಲಿ ಅಂಗವಿಕಲರಿಗೆ ತ್ರಿಚಕ್ರ ವಾಹನ ವಿತರಿಸಿಲ್ಲ. 2019–20ರಲ್ಲಿ 1,566 ಮತ್ತು 2020–21ರಲ್ಲಿ 1,467 ಜನರಿಗೆ ತ್ರಿಚಕ್ರ ವಾಹನ ವಿತರಿಸಲಾಗಿದೆ’ ಎಂದರು.

‘ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಬೆರಳೆಣಿಕೆಯಷ್ಟು ಮಂದಿಗೂ ತ್ರಿಚಕ್ರ ವಾಹನ ವಿತರಿಸಲು ಆಗುತ್ತಿಲ್ಲ. ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿ ಬಳಸಲು ಅವಕಾಶ ಲಭಿಸುತ್ತಿಲ್ಲ. ಸರ್ಕಾರ ನೀತಿ ಬದಲಿಸಬೇಕು. ಅಂಗವಿಕಲರಿಗೆ ಸೌಲಭ್ಯ ಒದಗಿಸಲು ಹೆಚ್ಚಿನ ಅನುದಾನ ನೀಡಬೇಕು’ ಎಂದು ಶರತ್ ಆಗ್ರಹಿಸಿದರು.

ಕಾಂಗ್ರೆಸ್‌ನ ಕೆ.ಆರ್.ರಮೇಶ್ ಕುಮಾರ್ ಅವರು, ‘ನನ್ನ ಕ್ಷೇತ್ರದಲ್ಲಿ 100 ಮಂದಿ ಅಂಗವಿಕಲರಿಗೆ ತ್ರಿಚಕ್ರ ವಾಹನ ಅಗತ್ಯವಿದೆ. ಪಟ್ಟಿ ಸಿದ್ಧಪಡಿಸಿ ಇರಿಸಿಕೊಂಡಿದ್ದೇನೆ. ಆದರೆ, ಅನುದಾನವೇ ಇಲ್ಲ. ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿ ಮೂಲಕವಾದರೂ ಹೆಚ್ಚು ನೆರವು ಒದಗಿಸಬೇಕು’ ಎಂದು ಒತ್ತಾಯಿಸಿದರು.

ಈ ಬೇಡಿಕೆಗೆ ದನಿಗೂಡಿಸಿದ ಹಲವು ಶಾಸಕರು, ಅನುದಾನ ಹೆಚ್ಚಿಸುವಂತೆ ಮನವಿ ಮಾಡಿದರು.

ಚುನಾವಣೆ ಎದುರಿಸಲು ಸಿದ್ಧ: ಎಚ್‌.ಡಿ. ದೇವೇಗೌಡ

ಹಾಸನ: ಡಿಸೆಂಬರ್‌ನಲ್ಲಿ ಗುಜರಾತ್ ವಿಧಾನಸಭೆ ಚುನಾವಣೆ ಇದೆ. ಅದರ ಜೊತೆಗೆ ಕರ್ನಾಟಕದ ಚುನಾವಣೆ ನಡೆಯಲಿದೆ ಎನ್ನಲಾಗುತ್ತಿದೆ. ಹೌದಾದರೆ ಎದುರಿಸಲು ಸಿದ್ಧರಿದ್ದೇವೆ ಎಂದು ರಾಜ್ಯಸಭಾ ಸದಸ್ಯ ಎಚ್. ಡಿ.ದೇವೇಗೌಡ ಹೇಳಿದರು.

ಹೊಳೆನರಸೀಪುರದಲ್ಲಿ ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಐದು ರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿ ಮೇಲುಗೈ ಸಾಧಿಸಿದೆ. ಲೋಕಸಭೆ ಚುನಾವಣೆಗೆ ಇನ್ನೂ ಎರಡು ವರ್ಷವಿದೆ. ಬಿಜೆಪಿ ಬಲ ಹೆಚ್ಚಬಹುದು ಅಥವಾ ಕುಗ್ಗಬಹುದು. ರಾಜ್ಯಗಳ ಚುನಾವಣೆಗೂ, ಸಂಸತ್ ಚುನಾವಣೆಗೂ ವ್ಯತ್ಯಾಸವಿದೆ ಎಂಬುದು ನನ್ನ ಅನುಭವದ ಮಾತು ಎಂದರು.

ಚುನಾವಣೆ ನಡೆದರೆ ಮನೆಯಲ್ಲಿ ಮಲಗಿಕೊಳ್ಳೋದಕ್ಕೆ ಆಗಲ್ಲ. ಸೋಲೋ, ಗೆಲುವೋ ನಾವೂ ಕೂಡ ಹೋರಾಟ ಮಾಡುತ್ತೇವೆ ಎಂದು ತಿಳಿಸಿದರು.

ಹಿಜಾಬ್ ವಿವಾದ ಕುರಿತು ಪ್ರತಿಕ್ರಿಯಿಸಿದ ಗೌಡರು, ಹೈಕೋರ್ಟ್ ತೀರ್ಪಿಗೆ ಎಲ್ಲರೂ ತಲೆಬಾಗಬೇಕು. ನಮ್ಮ ಪಕ್ಷ ಪರವಾಗಿಯೂ ಇಲ್ಲ, ವಿರೋಧವಾಗಿಯೂ ಇಲ್ಲ. ಇದು ಕಾಂಗ್ರೆಸ್ ಮತ್ತು ಬಿಜೆಪಿ ತಿಕ್ಕಾಟ. ಇದೇ ವಿಚಾರವಾಗಿ ಅನೇಕ ರಾಜಕೀಯ ಪ್ರಸಂಗ ನಡೆಯುತ್ತಿರುವುದನ್ನು ನೋಡಿದ್ದೇನೆ. ಡ್ರೆಸ್‌ಕೋಡ್ ವಿಚಾರವಾಗಿ ಹೈಕೋರ್ಟ್ ತೀರ್ಪು ಒಪ್ಪೋದು ಒಂದು ಭಾಗ. ಒಂದು ಸಮುದಾಯದ ಮಕ್ಕಳು ಕಪ್ಪು ಬಟ್ಟೆಯನ್ನ ತಲೆ ಮೇಲೆ ಹಾಕಲು ವಿರೋಧವಿದೆ. ಅದರ ಬದಲಾಗಿ ಶಾಲಾ-ಕಾಲೇಜು ಸಮವಸ್ತ್ರಗಳ ವೇಲ್ ಅನ್ನೇ ತಲೆ ಮೇಲೆ ಹಾಕಿಕೊಳ್ಳಬಹುದು. ಆದರೆ, ಕಪ್ಪುಬಟ್ಟೆ ಇಸ್ಲಾಂ ಧರ್ಮದ್ದು ಎಂದು ವಿವಾದವಾಗಿದೆ ಎಂದರು.

ಹಿಜಾಬ್ ಬಗ್ಗೆ ಸರ್ಕಾರ, ಪ್ರತಿಪಕ್ಷ ಮತ್ತು ಪೋಷಕರು ಕುಳಿತು ಚರ್ಚಿಸಿ ಒಂದು ತೀರ್ಮಾನಕ್ಕೆ ಬರುವುದು ಉತ್ತಮ ಎಂದು ಸಲಹೆ ನೀಡಿದರು.

ಉಕ್ರೇನ್-ರಷ್ಯಾ ಯುದ್ಧ ವಿಚಾರವಾಗಿ ಮಾತನಾಡಿ, ರಷ್ಯಾ, ಚೀನಾ ಜೊತೆ ಚೆನ್ನಾಗಿದೆ. ಪಾಕಿಸ್ತಾನ ಚೀನಾ ಜೊತೆ ಚೆನ್ನಾಗಿದೆ. ಈ ಯುದ್ಧ ಎಲ್ಲಿಗೆ ಹೋಗಿ ನಿಲ್ಲುತ್ತೋ ಗೊತ್ತಿಲ್ಲ ಎಂದು ಕಳವಳ ವ್ಯಕ್ತಪಡಿಸಿದರು.

ಉತ್ತರ ಪ್ರದೇಶ ಸಿ.ಎಂ ಆಗಿ ಯೋಗಿ 25ರಂದು ಪದಗ್ರಹಣ

ಲಖನೌ(ಪಿಟಿಐ): ಆಡಳಿತ ವಿರೋಧಿ ಅಲೆಯನ್ನು ಮೆಟ್ಟಿನಿಂತು ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರುವಲ್ಲಿ ಯಶಸ್ವಿಯಾಗಿರುವ ಯೋಗಿ ಆದಿತ್ಯನಾಥ್ ಅವರು ಮಾರ್ಚ್ 25ರಂದು ಉತ್ತರ ಪ್ರದೇಶ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ತನ್ಮೂಲಕ ಯೋಗಿ ಅವರು 2ನೇ ಅವಧಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಈ ಸಂದರ್ಭದಲ್ಲಿ ಎಷ್ಟು ಮಂದಿ ಸಚಿವರಾಗಿ ಪದಗ್ರಹಣ ಮಾಡಲಿದ್ದಾರೆ ಎಂಬ ಮಾಹಿತಿಗಳು ಲಭ್ಯವಾಗಿಲ್ಲ.

ಮಾ.25ರಂದು ರಾಜ್ಯ ರಾಜಧಾನಿ ಲಖನೌನಲ್ಲಿರುವ ಅಟಲ್ ಬಿಹಾರಿ ವಾಜಪೇಯಿ ಇಕಾನ ಕ್ರೀಡಾಂಗಣದಲ್ಲಿ ಸಂಜೆ 4 ಗಂಟೆಗೆ ಪ್ರಮಾಣವಚನ ಕಾರ್ಯಕ್ರಮ ನಿಗದಿಯಾಗಿದೆ. ಇದಕ್ಕೂ ಮುನ್ನ ಯೋಗಿ ಆದಿತ್ಯನಾಥ್ ಅವರನ್ನು ಶಾಸಕಾಂಗ ಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡಲಾಗುತ್ತದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಯೋಗಿ ಆದಿತ್ಯನಾಥ್

ಪದಗ್ರಹಣ ಕಾರ್ಯಕ್ರಮಕ್ಕೆ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ ನಡ್ಡಾ ಸೇರಿದಂತೆ ಇನ್ನಿತರ ಪ್ರಮುಖ ನಾಯಕರು ಭಾಗವಹಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ಅಲ್ಲದೆ ಬಿಜೆಪಿ ಆಡಳಿತದ ಮುಖ್ಯಮಂತ್ರಿ ಹಾಗೂ ಪ್ರಮುಖ ಪಕ್ಷಗಳ ನಾಯಕರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿದೆ.

403 ವಿಧಾನಸಭೆ ಕ್ಷೇತ್ರಗಳ ಉತ್ತರ ಪ್ರದೇಶ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ 255 ಮತ್ತು ಅದರ ಮಿತ್ರ ಪಕ್ಷಗಳು 18 ಕ್ಷೇತ್ರಗಳನ್ನು ಜಯಿಸಿದ್ದವು.

ಜಮ್ಮು ಕಾಶ್ಮೀರ ಮಾಜಿ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ

‘ಕಾಶ್ಮೀರ ಪಂಡಿತರಷ್ಟೇ ವಲಸೆ ಹೋಗಿಲ್ಲ’

ಪ್ರಜಾವಾಣಿ ವಾರ್ತೆ

ಶ್ರೀನಗರ: ‘1990ರ ದಶಕದಲ್ಲಿ ಕಾಶ್ಮೀರ ಕಣಿವೆಯನ್ನು ತೊರೆದು ಹೋದವರು ಕಾಶ್ಮೀರ ಪಂಡಿತರಷ್ಟೇ ಅಲ್ಲ. ಇಲ್ಲಿನ ಹಲವು ಮುಸ್ಲಿಮರು ಹಾಗೂ ಸಿಖ್ಖರು ಕೂಡ ವಲಸೆ ಹೋಗಿದ್ದು, ಅವರಿನ್ನೂ ಕಾಶ್ಮೀರದತ್ತ ಮರಳಿ ಬಂದಿಲ್ಲ’ ಎಂದು ರಾಜ್ಯದ ಮಾಜಿ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ತಿಳಿಸಿದರು.

ಕುಲ್ಗಾಂನಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ದಿ ಕಾಶ್ಮೀರ ಫೈಲ್ಸ್’ ಸಿನಿಮಾದಲ್ಲಿ ಸಾಕಷ್ಟು ಸುಳ್ಳುಗಳನ್ನು ತೋರಿಸಲಾಗಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ 1990ರಲ್ಲಿ ನ್ಯಾಷನಲ್ ಕಾನ್ಫರೆನ್ಸ್ ಸರ್ಕಾರ ಅಧಿಕಾರದಲ್ಲಿತ್ತು ಎಂದು ಹೇಳಿರುವುದು ಬಹುದೊಡ್ಡ ಸುಳ್ಳು. ಈ ವೇಳೆ ರಾಜ್ಯದಲ್ಲಿ ರಾಜ್ಯಪಾಲರ ಆಡಳಿತವಿದ್ದು, ಕೇಂದ್ರದಲ್ಲಿ ಬಿಜೆಪಿ ಬೆಂಬಲಿತ ವಿ.ಪಿ.ಸಿಂಗ್ ನೇತೃತ್ವದ ಸರ್ಕಾರ ಅಧಿಕಾರದಲ್ಲಿತ್ತು’ ಎಂದರು.

‘ದಿ ಕಾಶ್ಮೀರ ಫೈಲ್ಸ್’ ಚಿತ್ರವನ್ನು ಸತ್ಯ ಘಟನೆಗಳ ಆಧಾರಿತ ಸಿನಿಮಾ ಎಂದು ಹೇಳಿ ಸುಳ್ಳುಗಳನ್ನು ತೋರಿಸಲಾಗಿದೆ. ಕಾಶ್ಮೀರದಲ್ಲಿ ಭಯೋತ್ಪಾದಕರು ಕಾಶ್ಮೀರ ಪಂಡಿತರಷ್ಟೇ ಅಲ್ಲದೇ ಮುಸ್ಲಿಮರು ಹಾಗೂ ಸಿಖ್ಖರನ್ನು ಕೊಂದಿದ್ದಾರೆ. ಆದರೆ ಸಿನಿಮಾದಲ್ಲಿ ಭಯೋತ್ಪಾದಕ ಚಟುವಟಿಕೆಗಳಿಂದ ತೊಂದರೆಗೆ ಒಳಗಾದ ಮುಸ್ಲಿಂ ಮತ್ತು ಸಿಖ್ಖರ ತ್ಯಾಗವನ್ನು ಮರೆಮಾಚಲಾಗಿದೆ. ಈ ಸತ್ಯವನ್ನು ಯಾಕೆ ಹೇಳಿಲ್ಲ’ ಎಂದು ಪ್ರಶ್ನಿಸಿದರು.

‘ಕಾಶ್ಮಿರ ಪಂಡಿತರು ವಲಸೆ ಹೋಗಿದ್ದು ಕಾಶ್ಮೀರತನಕ್ಕೆ ದೊಡ್ಡ ಕಪ್ಪುಚುಕ್ಕೆ. ಇದಕ್ಕೆ ವಿಷಾದವಿದೆ. ಆದರೆ ನ್ಯಾಷನಲ್ ಕಾನ್ಫರೆನ್ಸ್ ಪಕ್ಷವು ಅಂದಿನಿಂದಲೂ ಅವರನ್ನು ಮರಳಿ ಸುರಕ್ಷಿತವಾಗಿ ಕರೆತರಲು ಪ್ರಯತ್ನ ನಡೆಸುತ್ತಲೇ ಇದೆ. ಆದರೆ ‘ದಿ ಕಾಶ್ಮೀರ ಫೈಲ್ಸ್’ ಚಿತ್ರದಿಂದ ನಮ್ಮ ಯೋಜನೆಗಳಿಗೆ ಹಿನ್ನಡೆಯಾಗಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

ಫೇಕ್ ಲಿಂಕ್; ವೈರಸ್ ದಾಳಿ ಸಾಧ್ಯತೆ

ಮಂಗಳೂರು: ‘ದಿ ಕಾಶ್ಮೀರ್ ಫೈಲ್ಸ್’ ಚಲನಚಿತ್ರವು ಎಲ್ಲೆಡೆ ಸದ್ದು ಮಾಡುತ್ತಿದ್ದರೆ, ಸೈಬರ್ ಕಳ್ಳರು ಅದನ್ನೇ ಬಂಡವಾಳ ಮಾಡಿಕೊಂಡು ಸೈಬರ್ ದಾಳಿ ಮಾಡುತ್ತಿದ್ದಾರೆ. ಚಿತ್ರದ ಫ್ರೀ ಡೌನ್‌ಲೋಡ್ ಲಿಂಕ್ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, ಇದನ್ನು ಕ್ಲಿಕ್ ಮಾಡಿದರೆ, ವೈರಸ್ ದಾಳಿಗೆ ಒಳಗಾಗುವ ಸಾಧ್ಯತೆ ಇರುತ್ತದೆ ಎಂದು ಸೈಬರ್ ತಜ್ಞ ಡಾ. ಅನಂತ ಪ್ರಭು ಎಚ್ಚರಿಸಿದ್ದಾರೆ.

ಡೌನ್‌ಲೋಡ್ ಲಿಂಕ್ ಹೆಸರಲ್ಲಿ ಸೈಬರ್ ಹ್ಯಾಕರ್ಸ್ ವೈರಸ್ ಕಳುಹಿಸುತ್ತಿದ್ದು, ಅದರ ಮೂಲಕ ಆಂಡ್ರಾಯ್ಡ್ ಫೋನ್ ಅಥವಾ ಲ್ಯಾಪ್‌ಟಾಪ್‌ನಲ್ಲಿರುವ ಮಾಹಿತಿಗಳನ್ನು ಕದಿಯಬಹುದು. ವೈರಸ್ ಮೂಲಕ ಸ್ಮಾರ್ಟ್ ಫೋನ್ ಅನ್ನು ಹ್ಯಾಕ್ ಮಾಡುವ ಸೈಬರ್ ಕಳ್ಳರು, ಅರಿವಿಲ್ಲದಂತೆ ಮೊಬೈಲ್ ಜೊತೆಗೆ ಲಿಂಕ್ ಆಗಿರುವ ಬ್ಯಾಂಕ್ ಮಾಹಿತಿ ಪಡೆಯುತ್ತಾರೆ. ಮೊಬೈಲ್ ಒಳಗಿರುವ ಇತರ ಮಾಹಿತಿಗಳನ್ನು ದುರ್ಬಳಕೆ ಮಾಡಿಕೊಳ್ಳಬಹುದು. ಸುಲಭದಲ್ಲಿ ಸಿನಿಮಾ ನೋಡಬಹುದು ಎಂದು ಲಿಂಕ್ ಒತ್ತಿ ಅಪಾಯಕ್ಕೆ ಸಿಲುಕಬಾರದು ಎಂದು ಅವರು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

‘ದಲಿತ ಪ್ರಜ್ಞೆಯ ಮರು ನಿರೂಪಣೆಯಾಗಲಿ’

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ಪ್ರೊ.ಬಿ. ಕೃಷ್ಣಪ್ಪ ಹುಟ್ಟು ಹಾಕಿದ ದಲಿತ ಸಂಘರ್ಷ ಸಮಿತಿಯ ಹೋರಾಟದ ಈ ಸಂದರ್ಭದಲ್ಲಿ ದಲಿತ ಪ್ರಜ್ಞೆಯ ಮರು ನಿರೂಪಣೆಯಾಗಬೇಕು ಹಾಗೂ ಒಳಗೊಳ್ಳುವಿಕೆಯಾಗಬೇಕಿದೆ’ ಎಂದು ಸಾಹಿತಿ ಪ್ರೊ.ಬರಗೂರು ರಾಮಚಂದ್ರಪ್ಪ ಅಭಿಪ್ರಾಯಪಟ್ಟರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ) ಯಿಂದ ನಗರದಲ್ಲಿ ಶುಕ್ರವಾರ ನಡೆದ ರಾಜ್ಯಮಟ್ಟದ ಪದಾಧಿಕಾರಿಗಳ ಹಾಗೂ ಕಾರ್ಯಕರ್ತರ ಸಮಾವೇಶ ‘ದಾವಣಗೆರೆ ಚಲೋ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘70–80ರ ದಶಕದಲ್ಲಿ ದಲಿತಪರ ಸಂಘಟನೆ ಕಟ್ಟುವುದೇ ಮುಖ್ಯ ಗುರಿಯಾಗಿತ್ತು. ಆನಂತರ ದಲಿತ ಸಂಘಟನೆಗಳ ಹೋರಾಟದ ಜೊತೆಗೆ ಅಸ್ಮಿತೆಯ ಹುಡುಕಾಟ ಆರಂಭವಾಯಿತು. ಬದಲಾದ ಸನ್ನಿವೇಶ ಎದುರಿಸುವುದು ಹೇಗೆ ಎಂಬುದನ್ನು ಯೋಚಿಸದಿದ್ದರೆ ದಲಿತ ಪ್ರಜ್ಞೆ ಸೋಲುತ್ತದೆ’ ಎಂದು ವಿಶ್ಲೇಷಿಸಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ ದಾವಣಗೆರೆಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸಮಾವೇಶದಲ್ಲಿ ಸಾಹಿತಿ ಪ್ರೊ.ಬರಗೂರು ರಾಮಚಂದ್ರಪ್ಪ ಮಾತನಾಡಿದರು.

‘ಹೈಕೋರ್ಟ್ ತೀರ್ಪು ಕಾನೂನು ಬಾಹಿರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿಜಾಬ್ ವಿವಾದದ ಬಗ್ಗೆ ಹೈಕೋರ್ಟ್ ನೀಡಿರುವ ತೀರ್ಪು ಕಾನೂನು ಬಾಹಿರವಾದುದು’ ಎಂದು ವಕೀಲೆ ಅವನಿ ಚೋಕ್ಷಿ ಅಭಿಪ್ರಾಯಪಟ್ಟರು.

ಬಹುತ್ವ ಕರ್ನಾಟಕ ಆಯೋಜಿಸಿದ್ದ ‘ಹೈಕೋರ್ಟ್ ತೀರ್ಪು ವಿದ್ಯಾರ್ಥಿಗಳ ಮೇಲೆ ಹೇಗೆ ಪರಿಣಾಮ ಬೀರುತ್ತದೆ’ ವಿಷಯದ ಕುರಿತ ಟ್ವಿಟರ್ ಸಂವಾದದಲ್ಲಿ ಶುಕ್ರವಾರ ಮಾತನಾಡಿದರು.

‘ಹೈಕೋರ್ಟ್ ತೀರ್ಪು ಮುಸ್ಲಿಂ ವಿದ್ಯಾರ್ಥಿನಿಯರ ಮೂಲಭೂತ ಹಾಗೂ ಶೈಕ್ಷಣಿಕ ಹಕ್ಕುಗಳನ್ನು ಕಸಿದುಕೊಳ್ಳಲಿದೆ. ಹೀಗಾಗಿ ಸುಪ್ರೀಂಕೋರ್ಟ್ ಕೂಡಲೇ ಮಧ್ಯಪ್ರವೇಶಿಸಬೇಕು’ ಎಂದು ಆಗ್ರಹಿಸಿದರು.

ಫಾರ್ವರ್ಡ್ ಟ್ರಸ್ಟ್‌ನ ಫಿರ್ದೋಷ್ ಖಾನ್, ‘ಈ ಆದೇಶದಿಂದ ಮುಸ್ಲಿಂ ವಿದ್ಯಾರ್ಥಿಗಳು ತಮ್ಮ ನಂಬಿಕೆಯ ಹಕ್ಕು ಹಾಗೂ ಶಿಕ್ಷಣದ ಹಕ್ಕುಗಳ ನಡುವೆ ಯಾವುದನ್ನು ಆಯ್ಕೆಮಾಡಿಕೊಳ್ಳಬೇಕು ಎಂಬ ಗೊಂದಲಕ್ಕೆ ಸಿಲುಕಿದ್ದಾರೆ. ಮೊದಲೆಲ್ಲಾ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿಯೇ ತರಗತಿಗಳಿಗೆ ಹಾಜರಾಗುತ್ತಿದ್ದರು. ಆಗ ಇಲ್ಲದ ವಿರೋಧ ಈಗೇಕೆ’ ಎಂದು ಪ್ರಶ್ನಿಸಿದರು.

‘ಹಿಜಾಬ್ ಮುಸ್ಲಿಮರ ಅತ್ಯಗತ್ಯ ಧಾರ್ಮಿಕ ಆಚರಣೆಯಲ್ಲ ಎಂದು ಹೈಕೋರ್ಟ್ ಯಾವ ಆಧಾರದಲ್ಲಿ ಹೇಳಿದೆ. ಹಿಜಾಬ್‌ಗಾಗಿ ಹೋರಾಡುತ್ತಿರುವ ವಿದ್ಯಾರ್ಥಿನಿಯರು ಸಮವಸ್ತ್ರ ಧರಿಸುವುದಿಲ್ಲ ಎಂದು ಎಲ್ಲೂ ಹೇಳಿಲ್ಲ. ಸಮವಸ್ತ್ರದ ಜೊತೆ ನೀಡುವ ದುಪ್ಪಟ್ಟವನ್ನೇ ತಲೆಗೆ ಸುತ್ತಿಕೊಳ್ಳುವುದಾಗಿ ಹೇಳುತ್ತಿದ್ದಾರೆ. ಇದರಲ್ಲಿ ತಪ್ಪೇನು. ಅದರಿಂದ ಬೇರೆಯವರ ಧಾರ್ಮಿಕ ಭಾವನೆಗೆ ಹೇಗೆ ಧಕ್ಕೆಯಾಗುತ್ತದೆ’ ಎಂದು ಕೇಳಿದರು.

ವಕೀಲ ವಿನಯ್ ಶ್ರೀನಿವಾಸ, ‘ಹೈಕೋರ್ಟ್ ತೀರ್ಪಿನಿಂದ ಮುಸ್ಲಿಂ ಯುವತಿಯರ ಶಿಕ್ಷಣ, ಘನತೆ ಹಾಗೂ ಜೀವಿಸುವ ಹಕ್ಕುಗಳ ಉಲ್ಲಂಘನೆಯಾಗಿವೆ. ಉಡುಪಿಯ ಕಾಲೇಜಿನಲ್ಲಿ ಮೊದಲು ಈ ವಿವಾದ ಹುಟ್ಟಿಕೊಂಡಿದ್ದು, ಶಾಸಕ ರಘುಪತಿ ಭಟ್ ಅವರು ಅದನ್ನು ಸೌಹಾರ್ದಯುತವಾಗಿಯೇ ಬಗೆಹರಿಸಬಹುದಿತ್ತು’ ಎಂದರು.

‘ನಾಗರಿಕರ ಮೂಲಭೂತ ಹಕ್ಕು ಉಲ್ಲಂಘನೆಯಾಗದಂತೆ ರಕ್ಷಿಸುವುದು ನ್ಯಾಯಾಲಯದ ಜವಾಬ್ದಾರಿ. ಆ ಬಗ್ಗೆ ಸರ್ಕಾರಕ್ಕೆ ಪ್ರಶ್ನಿಸಬೇಕಿತ್ತು. ನ್ಯಾಯಾಲಯದ ಆದೇಶದಿಂದ ರಾಜ್ಯದಲ್ಲಿ ನೆಲೆಸಿರುವ ಎಲ್ಲರ ಹಕ್ಕುಗಳಿಗೂ ಧಕ್ಕೆಯಾಗಿದೆ’ ಎಂದು ತಿಳಿಸಿದರು.

ಮುಖ್ಯಾಂಶಗಳು

- ಹಿಜಾಬ್ ವಿವಾದ: ತೀರ್ಪು ಬೀರುವ ಪರಿಣಾಮ ಕುರಿತು ಸಂವಾದ
- ನಂಬಿಕೆಯ ಹಕ್ಕು –ಶಿಕ್ಷಣದ ಹಕ್ಕುಗಳ ನಡುವೆ ಗೊಂದಲ

51 ವರ್ಷದ ವ್ಯಕ್ತಿಯೊಬ್ಬರಿಗೆ ಅಂಗಾಂಗ ವೈಫಲ್ಯ ಸಮಸ್ಯೆ

ಮಿದುಳು ನಿಷ್ಕ್ರಿಯ: 6 ಮಂದಿಗೆ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಿದುಳು ನಿಷ್ಕ್ರಿಯಗೊಂಡ ಬೆಳಗಾವಿಯ 51 ವರ್ಷದ ವ್ಯಕ್ತಿಯೊಬ್ಬರು ಅಂಗಾಂಗ ವೈಫಲ್ಯ ಸಮಸ್ಯೆ ಎದುರಿಸುತ್ತಿದ್ದ ಆರು ಮಂದಿಗೆ ನೆರವಾಗಿದ್ದಾರೆ. ಅವರ ಯಕೃತ್ತನ್ನು ಹಸಿರು ಕಾರಿಡಾರ್ ಮೂಲಕ ಸಾಗಿಸಿ, ಇಲ್ಲಿನ ಸ್ಪರ್ಶ್ ಆಸ್ಪತ್ರೆಯಲ್ಲಿ ರೋಗಿಯೊಬ್ಬರಿಗೆ ಕಸಿ ಮಾಡಲಾಗಿದೆ.

ಆಕಸ್ಮಿಕವಾಗಿ ಬಿದ್ದು ಗಾಯಗೊಂಡಿದ್ದ ಉಮೇಶ ದಂಡಗಿ ಎಂಬುವವರಿಗೆ ತಲೆಗೆ ಬಲವಾದ ಪೆಟ್ಟು ಬಿದ್ದಿತ್ತು. ಅವರನ್ನು ಬೆಳಗಾವಿಯ ಕೆಎಲ್‌ಇಎಸ್ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ಒದಗಿಸಲಾಗಿತ್ತು. ವ್ಯಕ್ತಿ ಚಿಕಿತ್ಸೆಗೆ ಸ್ಪಂದಿಸದಿದ್ದರಿಂದ ಮಿದುಳು ನಿಷ್ಕ್ರಿಯಗೊಂಡಿರುವುದಾಗಿ ವೈದ್ಯರು ಘೋಷಿಸಿದ್ದರು. ಕುಟುಂಬದ ಒಪ್ಪಿಗೆ ಮೇರೆಗೆ ಜೀವಸಾರ್ಥಕತೆ ಸಂಸ್ಥೆ ಅಡಿಯಲ್ಲಿ ಅಂಗಾಂಗ ದಾನ ಪ್ರಕ್ರಿಯೆ ನಡೆಸಿ, ಅಂಗಾಂಗ ವೈಫಲ್ಯ ಸಮಸ್ಯೆ ಇದ್ದವರಿಗೆ ಕಸಿ ನಡೆಸಲಾಗಿದೆ.

ಅವರ ಮೂತ್ರಪಿಂಡಗಳನ್ನು ಧಾರವಾಡದ ಎಸ್‌ಡಿಎಂ ಮತ್ತು ಹುಬ್ಬಳ್ಳಿಯ ತತ್ವದರ್ಶ ಆಸ್ಪತ್ರೆಗೆ ಹಸಿರು ಕಾರಿಡಾರ್ ಮೂಲಕ ಕಳುಹಿಸಿ, ಕಸಿ ಮಾಡಲಾಗಿದೆ. ಅವರ ಕಣ್ಣಿನ ಕಾರ್ನಿಯಾ ಮತ್ತು ಚರ್ಮವನ್ನು ಕೆಎಲ್‌ಇ ನೇತ್ರ ಬ್ಯಾಂಕ್ ಮತ್ತು ಚರ್ಮ ಬ್ಯಾಂಕ್‌ಗೆ ದಾನ ಮಾಡಲಾಗಿದೆ. ಯಕೃತ್ತನ್ನು ವಿಮಾನದ ಮೂಲಕ ಬೆಳಗಾವಿಯಿಂದ ಬೆಂಗಳೂರಿಗೆ ತಂದು, ಸಂಚಾರ ಪೊಲೀಸರ ನೆರವಿನಿಂದ ಸ್ಪರ್ಶ್ ಆಸ್ಪತ್ರೆಗೆ ಹಸಿರು ಕಾರಿಡಾರ್ ಮೂಲಕ ಸಾಗಿಸಲಾಗಿದೆ. ಅಲ್ಲಿ ದಾಖಲಾಗಿದ್ದ ರೋಗಿಯೊಬ್ಬರಿಗೆ ಕಸಿ ನಡೆಸಲಾಗಿದೆ.

‘ಅಂಗಾಂಗ ಕಸಿ ಪ್ರಕ್ರಿಯೆ ನಿಗದಿತ ಅವಧಿಯಲ್ಲಿ ನಡೆಯಬೇಕಾಗುತ್ತದೆ. ಹೀಗಾಗಿ, ಹಸಿರು ಕಾರಿಡಾರ್ ನಿರ್ಮಿಸಿ, ಆಂಬುಲೆನ್ಸ್‌ಗೆ ಅನುವು ಮಾಡಿಕೊಡಲಾಯಿತು. 47 ಕಿ.ಮೀ. ದೂರವನ್ನು 40 ನಿಮಿಷಗಳಲ್ಲಿ ಕ್ರಮಿಸಲಾಗಿದೆ’ ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ತಿಳಿಸಿದ್ದಾರೆ.

ಸ್ಪರ್ಶ್ ಆಸ್ಪತ್ರೆಯ ಅಧ್ಯಕ್ಷ ಡಾ.ಶರಣ ಶಿವರಾಜ್ ಪಾಟೀಲ, ‘ಅಂಗಾಂಗ ದಾನದಿಂದ ವ್ಯಕ್ತಿ ಮರಣದಲ್ಲಿಯೂ ಸಾರ್ಥಕತೆ ಕಾಣಬಹುದಾಗಿದೆ. ಅಂಗಾಂಗ ದಾನ ಹಾಗೂ ಕಸಿ ಬಗ್ಗೆ ಜನರಿಗೆ ಜಾಗೃತಿ ಮೂಡಬೇಕು’ ಎಂದು ಹೇಳಿದ್ದಾರೆ.

ಕೊಲ್ಲೂರು: ಜಾತ್ರೋತ್ಸವಕ್ಕೆ ಚಾಲನೆ

ಕುಂದಾಪುರ: ಕೊಲ್ಲೂರಿನ ಮೂಕಾಂಬಿಕಾ ದೇವಸ್ಥಾನದಲ್ಲಿ ಶುಕ್ರವಾರ ಬೆಳಿಗ್ಗೆ ಅರ್ಚಕ ಕೆ.ರಾಮಚಂದ್ರ ಅಡಿಗ ಅವ ನೇತೃತ್ವದಲ್ಲಿ ಗಣಪತಿ ಪ್ರಾರ್ಥನೆ, ನಾಂದಿ ಪುಣ್ಯಾಹ, ಅಂಕುರಾವಾಸ ಸಿಂಹ ಯಾಗವನ್ನು ನಡೆಸಿ, ಧ್ವಜಾರೋಹಣ ನೆರವೇರಿಸುವ ಮೂಲಕ ಜಾತ್ರಾ ಮಹೋತ್ಸವಕ್ಕೆ ಚಾಲನೆ ನೀಡಿದರು.

ಜಾತ್ರೆ ಶುಕ್ರವಾರ ಆರಂಭವಾಗಿದ್ದು, 27 ರವರೆಗೆ ನಡೆಯಲಿದೆ. ಸಂಜೆ ಯಾಗಶಾಲಾ ಪ್ರವೇಶ, ರಜ್ಜು ಬಂಧನ, ಮುಹೂರ್ತಬಲಿ, ಭೇರಿತಾಡನ, ಕೌತುಕ ಬಂಧನ, ನಗರೋತ್ಸವ ನಡೆಸಲಾಯಿತು. ಕೋವಿಡ್ ಮಾರ್ಗಸೂಚಿಯಂತೆ ಭಕ್ತರು ಸಹಕರಿಸಬೇಕು ಎಂದು ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿ ಎಸ್.ಪಿ.ಬಿ. ಮಹೇಶ್ ತಿಳಿಸಿದರು.

ಚಿತ್ರಾವಳಿ

ರಾಜರಾಜೇಶ್ವರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ನಗರದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಮೂತ್ರಪಿಂಡ ದಿನ ಕಾರ್ಯಕ್ರಮದಲ್ಲಿ ಚಂಡೀಗಡದ ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ಮೂತ್ರಪಿಂಡ ಶಾಸ್ತ್ರ ವಿಭಾಗದ ವಿಶ್ರಾಂತ ಪ್ರಾಧ್ಯಾಪಕ ಡಾ.ಕೆ.ಎಲ್. ಗುಪ್ತಾ ಅವರನ್ನು ಸನ್ಮಾನಿಸಲಾಯಿತು. ಕಾಲೇಜಿನ ಸಂಸ್ಥಾಪಕ ಡಾ.ಎ.ಸಿ. ಷಣ್ಮುಗಂ, ಮೂತ್ರಪಿಂಡ ಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಎಂ.ಎಸ್. ಪ್ರಕಾಶ್, ಪ್ರಾಧ್ಯಪಕಾರದ ಡಾ. ಪ್ರೀತಿ ಕುಮಾರ್, ಡಾ.ಎಸ್. ಎಂ. ಪ್ರಸಾದ್ ಇದ್ದರು.

ಕರ್ನಾಟಕ ಪ್ರದೇಶ ಬಲಿಜ ಸಂಘದ ವತಿಯಿಂದ ಕೈವಾರ ತಾತಯ್ಯನವರ 296ನೇ ಜಯಂತಿ ಪ್ರಯುಕ್ತ ಚಾಮರಾಜಪೇಟೆಯಲ್ಲಿ ಶುಕ್ರವಾರ ಮೆರವಣಿಗೆ ಹಮ್ಮಿಕೊಳ್ಳಲಾಗಿತ್ತು. ಸಂಘದ ಅಧ್ಯಕ್ಷ ಪೆರಿಕಲ್ ಎಂ.ಸುಂದರ್, ಉಪಾಧ್ಯಕ್ಷ ಬಳೇಪೇಟೆ ವೆಂಕಟೇಶ್, ಕಾರ್ಯದರ್ಶಿ ಜಗದೀಶ್, ಮುಖಂಡರಾದ ಸಂಪಂಗಿ, ತ್ಯಾಗರಾಜು, ಲಕ್ಷ್ಮಣ್ ಹಾಗೂ ಮಹಿಳಾ ಸಂಘದ ಅಧ್ಯಕ್ಷೆ ವಿದ್ಯಾರಾಣಿ ಇದ್ದರು.

ಬೆಂಗಳೂರು ವಿಶ್ವವಿದ್ಯಾಲಯದ ಯುಜಿಸಿ ಮಹಿಳಾ ಅಧ್ಯಯನ ಕೇಂದ್ರದ ವತಿಯಿಂದ ಶುಕ್ರವಾರ ಅಂತರ್ ರಾಷ್ಟ್ರೀಯ ಮಹಿಳಾ ದಿನಾಚಾರಣೆಯ ಅಂಗವಾಗಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ತುಳಸಿ ಗೌಡ ಅವರನ್ನು ಸನ್ಮಾನಿಸಲಾಯಿತು. ಕುಲಪತಿ ಪ್ರೊ. ಕೆ.ಆರ್. ವೇಣುಗೋಪಾಲ್ ಮತ್ತು ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎಲ್. ಗೋಮತಿ ದೇವಿ, ಕುಲಸಚಿವ ಪ್ರೊ. ಎಂ. ಕೊಟ್ರೇಶ್, ಮಹಿಳಾ ಅಧ್ಯಯನ ಕೇಂದ್ರದ ಸಂಯೋಜಕ ಪ್ರೊ. ಸಿ.ಡಿ. ವೆಂಕಟೇಶ್, ಪ್ರೊ. ಆರ್. ಇಂದಿರಾ, ಲೇಖಕಿ ಡಾ.ಎನ್. ಗಾಯತ್ರಿ ಇದ್ದರು.

ಮತ್ತೆ ರಕ್ತಪಾತ ಬೇಡ: ಎಚ್‌ಡಿಕೆ

ಹಾಸನ: 'ದೇಶದ ಇತಿಹಾಸವನ್ನು ನೋಡಿದರೆ ಮತ್ತೆ ರಕ್ತಪಾತವನ್ನು ಮಾಡುವಂಥ ಅವಶ್ಯಕತೆ ಇಲ್ಲ' ಎಂದು ಜೆಡಿಎಸ್ ಶಾಸಕಾಂಗ ಪಕ್ಷ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಹೊಳೆನರಸೀಪುರ ತಾಲ್ಲೂಕಿನ ಟಿ. ಮಾಯಗೌಡನಹಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸ್ಥಳಾಂತರಗೊಂಡ ಕಾಶ್ಮೀರಿ ಹಿಂದೂಗಳ ಕಥೆಯನ್ನು ಆಧರಿಸಿ 'ದಿ ಕಾಶ್ಮೀರ್ ಫೈಲ್ಸ್' ಚಿತ್ರ ತೆಗೆಯಲಾಗಿದೆ. ಅಲ್ಲಿ ಎಷ್ಟರ ಮಟ್ಟಿಗೆ ಘಟನೆ ನಡೆದಿದೆ ಎಂಬುದನ್ನು ನೋಡಿಲ್ಲ. ಸಿನಿಮಾದ ಯಶಸ್ಸಿಗಾಗಿ ಭಾವನಾತ್ಮಕವಾಗಿ ಚಿತ್ರಿಸಿ ಜನರ ಹೃದಯದ ಹತ್ತಿರಕ್ಕೆ ತೆಗೆದುಕೊಂಡು ಹೋಗುತ್ತೇವೆ. ದೇಶದಲ್ಲಿ ಹಲವು ಅನಾಹುತಗಳಾಗಿವೆ. ಬ್ರಿಟಿಷರು ನಮಗೆ ಒಳ್ಳೆಯ ರೀತಿಯಲ್ಲಿ ಸ್ವಾತಂತ್ರ್ಯ ಕೊಟ್ಟಿಲ್ಲ. ಆಗ 20 ಲಕ್ಷ ಕುಟುಂಬಗಳು ಬಲಿಯಾದವು' ಎಂದರು.

ಪಠ್ಯದಲ್ಲಿ ಭಗವದ್ಗೀತೆ ಸೇರ್ಪಡೆಗೊಳಿಸುವ ಸರ್ಕಾರದ ಚಿಂತನೆ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ನಮ್ಮ ಸಂಸ್ಕೃತಿಯಲ್ಲಿ ಭಗವದ್ಗೀತೆಯನ್ನು ಕುಟುಂಬದಲ್ಲೇ ಹೇಳಿಕೊಡುತ್ತಾರೆ. ಮಕ್ಕಳ ಭವಿಷ್ಯ ನಿರ್ಮಾಣ ಮಾಡುವಂಥ ವಿಚಾರಗಳು ಪಠ್ಯಗಳಲ್ಲಿರಬೇಕು' ಎಂದು ಹೇಳಿದರು.

'ರಾಜ್ಯದಲ್ಲಿ ಕೇವಲ ಮತಬ್ಯಾಂಕ್‌ಗಾಗಿ ಇಂತಹ ಸೂಕ್ಷ್ಮ ವಿಚಾರಗಳು ಮುನ್ನೆಲೆಗೆ ಬರುತ್ತಿವೆ' ಎಂದು ಎಚ್. ಡಿ. ಕುಮಾರಸ್ವಾಮಿ ಅವರು ಬೇಸರ ವ್ಯಕ್ತಪಡಿಸಿದರು.

ನಾಗಮಂಗಲ ತಾಲ್ಲೂಕು, ಆದಿಚುಂಚನಗಿರಿ ಮಠದ ಆವರಣದಲ್ಲಿ ಶುಕ್ರವಾರ ನಸುಕಿನ ಬ್ರಾಹ್ಮಿ ಮುಹೂರ್ತದಲ್ಲಿ ಗಂಗಾಧರೇಶ್ವರ ಸ್ವಾಮಿ ಮಹಾರಥೋತ್ಸವ ನೆರವೇರಿತು. ಭಕ್ತ ಸಮೂಹವು ಉತ್ಸವದಲ್ಲಿ ಪಾಲ್ಗೊಂಡು ಸಂಭ್ರಮದ ಕ್ಷಣಕ್ಕೆ ಸಾಕ್ಷಿಯಾಯಿತು

ಮಹಾ ರಥೋತ್ಸವ... ಬಳ್ಳಾರಿ ಜಿಲ್ಲೆ ಕುರುಗೋಡು ತಾಲ್ಲೂಕಿನಲ್ಲಿ ಶುಕ್ರವಾರ ಜರುಗಿದ ದೊಡ್ಡ ಬಸವೇಶ್ವರ ಸ್ವಾಮಿ ಮಹಾರಥೋತ್ಸವದಲ್ಲಿ ಅಪಾರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು. 60 ಅಡಿ ಎತ್ತರದ ಈ ರಥವನ್ನು ವಿವಿಧ ಬಣ್ಣದ ಹೂಗಳು ಮತ್ತು ಗೊಂಬೆಗಳಿಂದ ಅಲಂಕರಿಸಲಾಗಿತ್ತು

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಹಾಸನ

ಪ್ರಕಟಣೆ

ಮಗುವಿನ ಹೆಸರು: ಶುಭ (ಸಂಸ್ಥೆಯಲ್ಲಿ ಇಟ್ಟಿರುವ ಹೆಸರು) ಲಿಂಗ: ಹೆಣ್ಣು ಮುಖ: ದುಂಡು ಮುಖ ವಯಸ್ಸು: 5 ತಿಂಗಳು ಬಣ್ಣ: ಬಿಳಿ. ಪತ್ತೆಯಾದ ದಿನಾಂಕ: 23.11.2021 ಮಗುವು ದೊರೆತ ಸ್ಥಳ: ಮಕ್ಕಳ ಕಲ್ಯಾಣ ಸಮಿತಿ. ಈ ಮಗುವಿನ ವಾರಸುದಾರರು ಯಾರಾದರೂ ಇದ್ದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಛೇರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಅಥವಾ ಮಕ್ಕಳ ಕಲ್ಯಾಣ ಸಮಿತಿ, ಹಾಸನ ಇವರನ್ನು ಸಂಪರ್ಕಿಸಬಹುದಾಗಿದೆ.

ಸಹಿ/–ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಹಾಸನ

ವಾಸಾಸಂಇ/ಹಿಸನಿ/ಹಾಸನ/ಎಂಸಿಎ/854/2021–22

ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ರಿ), ಕೊಪ್ಪಳ

ನೊಂದಣಿ ಸಂಖ್ಯೆ: KOL-S243-2012-13 ದಿನಾಂಕ: 15–03–2013

(ಕರ್ನಾಟಕ ಸರಕಾರದ ಸ್ವಾಯತ್ತ ಸಂಸ್ಥೆ)

Website : www.kimskoppal.karnataka.gov.in email :directorkimskoppal@gmail.com

Office : 08539 225522 Office : 08539-225523

ಸಂ.ಕಿಮ್ಸ್/ಕೊಪ್ಪಳ/ಸರಬರಾಜು/ಟೆಂಡರ್/22/2021–22 ದಿನಾಂಕ: 19/03/2022

ಇ–ಟೆಂಡರ್ ಅಧಿಸೂಚನೆ

ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಹಾಗೂ ಬೋಧಕ ಆಸ್ಪತ್ರೆಯ ವಿವಿಧ ವಿಭಾಗಗಳಿಗೆ 02 ವರ್ಷದ ಅವಧಿಗೆ (ದರಗುತ್ತಿಗೆ ಆಧಾರದ ಮೇಲೆ) ಅವಶ್ಯವಿರುವ ಲೇಖನ ಸಾಮಾಗ್ರಿ (ಸ್ಟೇಷನರಿ) ಮತ್ತು ಹೆಚ್.ಎನ್.ಎಸ್ ಸಾಮಾಗ್ರಿಗಳನ್ನು ಖರೀದಿಸಲು ಕೆಟಿಪಿಪಿ ಕಾಯ್ದೆ 1999 ನಿಯಮ 2000 ರನ್ವಯ ಕರ್ನಾಟಕ ಸರ್ಕಾರದ ಇ–ಸಂಗ್ರಹಣ ಕೋಶದ ಪೋರ್ಟಲ್ ಮೂಲಕ **ಎರಡು ಲಕೋಟೆ ಪದ್ಧತಿಯಲ್ಲಿ** 15 ದಿನ ಕಾಲಾವಕಾಶ ನೀಡಿ ಇ–ಟೆಂಡರ್ ಆಹ್ವಾನಿಸಲಾಗಿದೆ. 1) ಟೆಂಡರ್‌ಗಳನ್ನು ದಿನಾಂಕ: **19/03/2022** ರಿಂದ ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **05/04/2022 ಸಾಯಂಕಾಲ 05:30 ಗಂಟೆ** ವರೆಗೆ. 3) ತಾಂತ್ರಿಕ ಲಕೋಟೆ (ಮೊದಲನೆಯ ಕವರ್) ತೆರೆಯುವ ದಿನಾಂಕ : **07/04/2022 ಬೆಳಿಗ್ಗೆ 11:30 ಗಂಟೆಗೆ.** 4) ಟೆಂಡರ್ ಅಂದಾಜು ಮೊತ್ತ **ರೂ.57.83 ಲಕ್ಷ**. 5) ಇ.ಎಂ.ಡಿ ಮೊತ್ತ **ರೂ.144500/–** ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ಕೋಶದ ವೆಬ್‌ಸೈಟ್ http://eproc.karnataka.gov.inನಲ್ಲಿ ಹಾಗೂ ಈ ಸಂಸ್ಥೆಯ ವೆಬ್‌ಸೈಟ್ http//www.kimskoppal.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ನಿರ್ದೇಶಕರು
ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಪ್ಪಳ.

ವಾ.ಸಾ.ಇ./ಕೊಪ್ಪಳ/612/2021–22/ದೇಶಪಾಂಡೆ ಪಬ್ಲಿಸಿಟಿ

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಅಭಿಯಂತರ ಕಚೇರಿ

ಪಂಚಾಯತ ರಾಜ ಇಂಜಿನೀಯರಿಂಗ್ ವಿಭಾಗ ಹಾವೇರಿ

ನಂ. ಪಂರಾಇಂ.ವಿ/ಹಾವೇರಿ/ಪಿಬಿ–2/ಟೆಂಡರ್/2021–22/6455 ದಿನಾಂಕ: 16–03–2022

ಟೆಂಡರ್ ಪ್ರಕಟಣೆ ನಂ: 39/2021–22 (2ನೇ ಕರೆ)

(E-GOK ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಲೆಕ್ಕ ಶಿರ್ಷಿಕೆ 5054 ಯೋಜನೆಯಡಿ ಸವಣೂರ ತಾಲೂಕಿನ ರಸ್ತೆ ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ.

1) ಸವಣೂರ ತಾ॥ ತೆವರಮೆಳ್ಳಿಹಳ್ಳಿ–ಹೊಸಹಲಸೂರ–ಹರವಿ ರಸ್ತೆ ಅಭಿವೃದ್ಧಿ (INDENT 89029/Call-2)

1) ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡುವ ದಿನಾಂಕ: **16–03–2022** 2) ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **23–03–2022ರ 16:00 ಗಂಟೆಯವರೆಗೆ** 3) ಇ–ಪ್ರೊಕ್ಯೂರ್‌ಮೆಂಟ್ ತಾಂತ್ರಿಕ ಮತ್ತು ಆರ್ಥಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ) **ದಿನಾಂಕ: 24–03–2022 ರ 17:00 ಗಂಟೆಗೆ** 4) ಇ–ಪ್ರೊಕ್ಯೂರ್‌ಮೆಂಟ್ ಆರ್ಥಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ) ದಿನಾಂಕ: **28–03–2022 ರ 10:20 ಗಂಟೆಗೆ**

ಟೆಂಡರ್‌ನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E-GOK ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ www.eproc.karnataka.gov.in ರಲ್ಲಿ ಪಡೆಯಬಹುದು ಹಾಗೂ ವಿಭಾಗ ಕಚೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು

ಸಹಿ/– ಕಾರ್ಯಪಾಲಕ ಇಂಜಿನೀಯರ್
ಪಂ.ರಾ.ಇಂ. ವಿಭಾಗ, ಹಾವೇರಿ

ವಾಸಾಇ/ಹಾವೇರಿ/542/2021–22 ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕನೀನಿನಿ, ನಂ.5, ಭದ್ರಾ ನಾಲಾ ವಿಭಾಗ, ದಾವಣಗೆರೆ. ಫೋ: 08192–264669

ಇ–ಮೇಲ್: eebcddvg@yahoo.co.in

No: EE/ KNNL/ BCD-5/DVG/JE-1/4701(C)SCP-TSP/ 3639/10: 2021-22: Dated: 11.03.2022

ಅಲ್ಪಾವಧಿ ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

(ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ, ನಂ.5 ಭದ್ರಾ ನಾಲಾ ವಿಭಾಗ, ದಾವಣಗೆರೆ ರವರು, ಲೆಕ್ಕ ಶೀರ್ಷಿಕೆ 4701 ಎಸ್.ಸಿ.ಪಿ & ಟಿ.ಎಸ್.ಪಿ ಅಡಿಯಲ್ಲಿ ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಡಿ ಇ–ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಅರ್ಹ ಗುತ್ತಿಗೆದಾರರಿಂದ, ಶೇಕಡಾವಾರು ಟೆಂಡರ್‌ನ್ನು ಇ–ಪ್ರೋಕ್ಯೂರ್‌ಮೆಂಟ್‌ನ ವೆಬ್‌ಸೈಟ್ (http://eproc.karnataka.gov.in) ಮುಖಾಂತರವೇ ಡೌನಲೋಡ್ ಮಾಡಿಕೊಳ್ಳಲು ದಿನಾಂಕ: 17.03.2022 ರಿಂದ 24.03.2022. ರ ಸಂಜೆ 5.30 ಘಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಪ್ರೀ–ಬಿಡ್ ಸಭೆ ದಿನಾಂಕ:23.03.2022..ರಂದು ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ, ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ:25.03.2022 ರಂದು ಬೆಳಗ್ಗೆ 12.00 ಘಂಟೆಗೆ, ಕಾಮಗಾರಿಯ ಮೊತ್ತ – ರೂ 125.00 ಲಕ್ಷಗಳು(2 ಕಾಮಗಾರಿಗಳು). ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗಿಕರೀಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಅಥವಾ ಕಛೇರಿ ವೇಳೆಯಲ್ಲಿ ಕೆಳಗೆ ಸಹಿ ಮಾಡಿದವರ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

ವಾಸಾಇ/ಡಿವಿಜಿ/879/ಎಂಸಿಎ/2021–22 ಸಹಿ/– ಕಾರ್ಯಪಾಲಕ ಇಂಜಿನಿಯರ್

ಪತ್ರಿಕಾ ಪ್ರಕಟಣೆ

ದಿನಾಂಕ: 17–03–2022 ರಂದು ಕಂಕನಾಡಿ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಪಂಪ್ ವೆಲ್ ಫ್ಲೈ ಓವರ್ ಕೆಳಗಡೆ ಸುಮಾರು 50–55 ವರ್ಷ ಪ್ರಾಯದ ಅಪರಿಚಿತ ಗಂಡಸಿನ ಮೃತ ದೇಹವು ಪತ್ತೆಯಾಗಿದ್ದು, ಮೃತಪಟ್ಟ ಗಂಡಸು ಬಿಳಿ ಬಣ್ಣದ ಉದ್ದ ತೋಳಿನ ಶರ್ಟ್ ಹಾಗೂ ಖಾವಿ ಬಣ್ಣದ ಪಂಚೆ ದರಿಸಿರುತ್ತಾರೆ. ಕಪ್ಪು ಮೈಬಣ್ಣ, ಸಪೂರ ಶರೀರ, ಬಿಳಿ ಗಡ್ಡ ಹಾಗೂ ಬಿಳಿ ಮೀಸೆ ಇರುತ್ತದೆ. ಹಣೆಯ ಎಡಭಾಗದಲ್ಲಿ ಹಳೆಯ ಗಾಯದ ಗುರುತು ಇರುತ್ತದೆ. ಈ ಬಗ್ಗೆ ಕಂಕನಾಡಿ ನಗರ ಪೊಲೀಸ್ ಠಾಣೆಯಲ್ಲಿ ಠಾಣಾ ಯುಡಿಆರ್ ನಂಬರ್ 13/2022 ಕಲಂ: 174 ಸಿಆರ್‌ಪಿಸಿ ರೀತ್ಯ ಪ್ರಕರಣ ದಾಖಲು ಮಾಡಿಕೊಂಡು ಪ್ರಕರಣವು ತನಿಖೆಯಲ್ಲಿರುತ್ತದೆ.



ಮೃತ ಗಂಡಸಿನ ಚಹರೆ ಗುರುತು:

1. ಹೆಸರು	ಅಪರಿಚತ ಗಂಡಸು
2. ಪ್ರಾಯ	ಸುಮಾರು 50–55 ವರ್ಷ
3. ಎತ್ತರ	ಸುಮಾರು 5.7 ಅಡಿ ಎತ್ತರ
4. ಮೈಬಣ್ಣ	ಕಪ್ಪು ಮೈ ಬಣ್ಣ
5. ಚಹರೆ	ಸಪೂರ ಶರೀರ, ಹಣೆಯ ಎಡಭಾಗದಲ್ಲಿ ಹಳೆಯ ಗಾಯದ ಗುರುತು ಇರುತ್ತದೆ.
6. ಬಟ್ಟೆ ಬರೆ	ಮೃತ ಗಂಡಸು ಬಿಳಿ ಬಣ್ಣದ ಉದ್ದ ತೋಳಿನ ಶರ್ಟ್ ಹಾಗೂ ಖಾವಿ ಬಣ್ಣದ ಪಂಚೆ ಧರಿಸಿರುವುದು ಕಂಡುಬರುತ್ತದೆ.

ಮೃತ ಗಂಡಸಿನ ಸಂಬಂಧಿಕರು ಯಾ ವಾರೀಸುದಾರರು ಇದುವರೆಗೂ ಪತ್ತೆಯಾಗದೇ ಇದ್ದು, ಮೃತರ ಸಂಬಂಧಿಕರು ಯಾ ವಾರೀಸುದಾರರು ಪತ್ತೆಯಾಗುವ ತನಕ ಮೃತದೇಹವನ್ನು ಸರಕಾರಿ ವೆನ್ಲಾಕ್ ಆಸ್ಪತ್ರೆಯ ಶೈತ್ಯಾಗಾರದಲ್ಲಿ ಇರಿಸಲಾಗಿರುತ್ತದೆ. ಆದುದರಿಂದ ಸದ್ರಿ ಮೃತ ಗಂಡಸಿನ ವಾರೀಸುದಾರರು ಯಾ ಸಂಬಂಧಿಕರು ಪತ್ತೆಯಾದಲ್ಲಿ ಅಥವಾ ಗಂಡಸು ಕಾಣೆ ಪ್ರಕರಣ ದಾಖಲಾಗಿದ್ದಲ್ಲಿ ಕಂಕನಾಡಿ ನಗರ ಪೊಲೀಸ್ ಠಾಣಾ ಪೊಲೀಸ್ ನಿರೀಕ್ಷಕರ ಮೊ ನಂಬರ್: 9480805354, ಠಾಣಾ ಮೊ. ನಂಬರ್ 08242220529ನ್ನು ಸಂಪರ್ಕಿಸಲು ಕೋರಿದೆ.

ಸಹಿ/– ಕಂಕನಾಡಿ ನಗರ ಠಾಣೆ ಸಹಿ/– ಪೊಲೀಸ್ ಉಪ ನಿರೀಕ್ಷಕರು
ದಿನಾಂಕ: 17–03–2022 ಕಂಕನಾಡಿ ನಗರ ಪೊಲೀಸ್ ಠಾಣೆ, ಮಂಗಳೂರು.

ಕಾಪು ಪುರಸಭೆ ಮುಖ್ಯಾಧಿಕಾರಿಗೆ, ದೇವಸ್ಥಾನ ಆಡಳಿತ ಮಂಡಳಿಗೆ ಮನವಿ

ಮಾರಿಗುಡಿ ಪೂಜೆ: ಮುಸ್ಲಿಂ ವ್ಯಾಪಾರಿಗಳಿಗೆ ನಿರಾಕರಣೆ

ಪ್ರಜಾವಾಣಿ ವಾರ್ತೆ

ಕಾಪು (ಉಡುಪಿ ಜಿಲ್ಲೆ): ಕಾಪುವಿನ ಮೂರು ಮಾರಿಗುಡಿಗಳಲ್ಲಿ ಮಾ.22 ಹಾಗೂ 23ರಂದು ನಡೆಯುವ ಸುಗ್ಗಿ ಮಾರಿ ಪೂಜೆಯಲ್ಲಿ ಮುಸ್ಲಿಮರಿಗೆ ವ್ಯಾಪಾರಕ್ಕೆ ಅಂಗಡಿಗಳನ್ನು ನೀಡಬಾರದು ಎಂದು ಹಿಂದೂ ಕಾರ್ಯಕರ್ತರು ಕಾಪು ಪುರಸಭೆ ಮುಖ್ಯಾಧಿಕಾರಿಗೆ ಮನವಿ ಮಾಡಿದ್ದಾರೆ.

'ಸುಗ್ಗಿ ಮಾರಿ ಪೂಜೆಯ ಸಂದರ್ಭದಲ್ಲಿ ಮುಸ್ಲಿಂ ಸಮುದಾಯದವರಿಗೆ ಅಂಗಡಿ, ಸ್ಟಾಲ್‌ಗಳನ್ನು ಹಾಕಲು ಅವಕಾಶ ಕೊಟ್ಟರೆ ಮುಂದೆ ಎದುರಾಗುವ ತೊಂದರೆ ಹಾಗೂ ಅನಾಹುತಗಳಿಗೆ ನೀವೇ ಜವಾಬ್ದಾರರು' ಎಂದು ಮನವಿಯಲ್ಲಿ ಎಚ್ಚರಿಕೆ ನೀಡಲಾಗಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಪುರಸಭೆ ಮುಖ್ಯಾಧಿಕಾರಿ ವೆಂಕಟೇಶ್ ನಾವಡ, 'ಮುಸ್ಲಿಮರಿಗೆ ವ್ಯಾಪಾರಕ್ಕೆ ಅವಕಾಶ ನೀಡದಂತೆ ಕೆಲವು ಹಿಂದೂ ಕಾರ್ಯಕರ್ತರು ಮನವಿ ನೀಡಿದ್ದಾರೆ. ಆದರೆ, ಸರ್ಕಾರದ ನೀತಿ ನಿಯಮಗಳು ಹಾಗೂ ಸಂವಿಧಾನಕ್ಕೆ ಬದ್ಧವಾಗಿ ನಡೆದುಕೊಳ್ಳಬೇಕಿದೆ. ಸುಗ್ಗಿ ಮಾರಿ ಪೂಜೆಯಲ್ಲಿ ನಿರ್ದಿಷ್ಟ ಸಮುದಾಯದವರಿಗೆ ಮಾತ್ರ ವ್ಯಾಪಾರಕ್ಕೆ ಅವಕಾಶ ನೀಡಬೇಕು ಎಂಬ ನಿಯಮವಿಲ್ಲ. ಯಾವುದೇ ಸಮುದಾಯದವರು ವ್ಯಾಪಾರ ಮಾಡಬಹುದು. ವ್ಯಾಪಾರಿಗಳಿಂದ ಶುಚಿತ್ವ ಶುಲ್ಕ ಮಾತ್ರ ಪಡೆದು ಅನುಮತಿ ನೀಡಲಾಗುತ್ತಿದೆ. ಈ ವರ್ಷವೂ ಅದೇ ಪದ್ಧತಿ ಮುಂದುವರಿಸಲಾಗುತ್ತದೆ' ಎಂದು ಸ್ಪಷ್ಟಪಡಿಸಿದರು.

ಹಿಂದೂಗಳಿಗೆ ಮಾತ್ರ ಅನುಮತಿ: 'ಸುಗ್ಗಿ ಮಾರಿ ಪೂಜೆಯಲ್ಲಿ ಹಿಂದೂಗಳಿಗೆ ಮಾತ್ರ ವ್ಯಾಪಾರ ಮಾಡಲು ಅವಕಾಶ ನೀಡಬೇಕು ಎಂದು ಹಿಂದೂ ಸಂಘಟನೆಗಳು ದೇವಸ್ಥಾನದ ಆಡಳಿತ ಮಂಡಳಿಗೆ ಮನವಿ ಸಲ್ಲಿಸಿವೆ. ಇಲಾಖೆಯ ಕಾಯ್ದೆಯ ಪ್ರಕಾರ ದೇವಸ್ಥಾನಕ್ಕೆ ಸೇರಿದ ಕಟ್ಟಡ ಹಾಗೂ ನಿವೇಶನಗಳನ್ನು ಹಿಂದೂಗಳಲ್ಲದವರಿಗೆ ಗುತ್ತಿಗೆ ನೀಡುವಂತಿಲ್ಲ. ಅದರಂತೆ ಸುಗ್ಗಿ ಮಾರಿ ಜಾತ್ರೆಯಲ್ಲಿ ಕೇವಲ ಹಿಂದೂಗಳಿಗೆ ಮಾತ್ರ ವ್ಯಾಪಾರಕ್ಕೆ ಅಂಗಡಿಗಳನ್ನು ನೀಡಲು ದೇವಸ್ಥಾನದ ಆಡಳಿತ ಮಂಡಳಿ ಸಭೆಯಲ್ಲಿ ನಿರ್ಧರಿಸಲಾಗಿದೆ' ಎಂದು ಕಾಪು ಹೊಸ ಮಾರಿಗುಡಿ ದೇವಸ್ಥಾನದ ಕಾರ್ಯ ನಿರ್ವಹಣಾಧಿಕಾರಿ ಪ್ರಶಾಂತ್ ಶೆಟ್ಟಿ ತಿಳಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಅಭಿಯಾನ: ಹೈಕೋರ್ಟ್ ತೀರ್ಪು ವಿರೋಧಿಸಿ ಮುಸ್ಲಿಂ ವರ್ತಕರು ಗುರುವಾರ ಅಂಗಡಿಗಳನ್ನು ಬಂದ್ ಮಾಡಿದ್ದರ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಅಭಿಯಾನ ನಡೆಸಲಾಗುತ್ತಿದೆ ವ್ಯಾಪಾರ ಸ್ಥಗಿತಗೊಳಿಸಿದವರ ಜೊತೆ ವ್ಯವಹಾರ ಬೇಡ ಎಂಬ ಸಂದೇಶಗಳು ಹರಿದಾಡುತ್ತಿವೆ.

ಮಂಗಳೂರಿನಲ್ಲಿ ಗುರುವಾರ ಬಂದ್ ಆಗಿದ್ದ ವ್ಯಾಪಾರ ಕೇಂದ್ರಗಳ ಫೋಟೊಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿ 'ಈ ಅಂಗಡಿಗಳಲ್ಲಿ ವ್ಯಾಪಾರ ನಡೆಸುವುದು ಬೇಡ' ಎನ್ನುವ ಸಂದೇಶಗಳನ್ನು ಹಾಕಲಾಗುತ್ತಿದೆ.

ಶಿವಮೊಗ್ಗ ಮಾರಿಕಾಂಬಾ ಜಾತ್ರೆಯಲ್ಲೂ ನಿರ್ಬಂಧ!

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಹಲವು ದಶಕಗಳಿಂದ ಸೌಹಾರ್ದಕ್ಕೆ ಹೆಸರಾಗಿದ್ದ ಮಾರಿಕಾಂಬಾ ಜಾತ್ರೆಗೂ ಈ ಬಾರಿ ಕೋಮುದ್ವೇಷದ ಕರಿನೆರಳು ಆವರಿಸಿದ್ದು, ಜಾತ್ರೆಯಲ್ಲಿ ಮುಸ್ಲಿಮರು ಅಂಗಡಿ ಹಾಕುವುದನ್ನು ತಡೆಯುವಲ್ಲಿ ಬಿಜೆಪಿ ಹಾಗೂ ಬಜರಂಗದಳದ ಮುಖಂಡರು ಯಶಸ್ವಿಯಾಗಿದ್ದಾರೆ.

ಕೋಟೆ ರಸ್ತೆಯ ಮಾರಿಕಾಂಬಾ ದೇವಿಯ ಜಾತ್ರೆ ಮಾರ್ಚ್ 22ರಿಂದ ಆರಂಭವಾಗಲಿದೆ. ಈ ಬಾರಿಯ ಜಾತ್ರಾ ಮಹೋತ್ಸವದಲ್ಲಿ ಚನ್ನಯ್ಯ ಎಂಬುವವರು ಮಳಿಗೆಗಳ ವಿತರಣೆ, ನಿರ್ವಹಣೆಯ ಗುತ್ತಿಗೆ ಪಡೆದಿದ್ದರು. ಎರಡು ದಿನಗಳ ಹಿಂದೆ ಅವರ ಬಳಿ ತೆರಳಿದ್ದ ಬಿಜೆಪಿ, ಬಜರಂಗ ದಳದ ಮುಖಂಡರು ಮುಸ್ಲಿಮರಿಗೆ ಮಳಿಗೆ ಹಾಕಲು ಅವಕಾಶ ನೀಡದಂತೆ ತಾಕೀತು ಮಾಡಿದರು. ಇದರಿಂದ ಗುತ್ತಿಗೆದಾರ ಜವಾಬ್ದಾರಿಯಿಂದ ಹಿಂದೆ ಸರಿದರು. ಘಟನೆ ಬೆಳಕಿಗೆ ಬರುತ್ತಿದ್ದಂತೆ ಮಾರಿಕಾಂಬಾ ದೇವಸ್ಥಾನ ಸಮಿತಿಯ ಅಧ್ಯಕ್ಷ ಎಸ್.ಕೆ.ಮರಿಯಪ್ಪ ತುರ್ತು ಸಭೆ ನಡೆಸಿದರು. ಬಜರಂಗ ದಳದ ಜಿಲ್ಲಾ ಸಂಚಾಲಕ ದೀನ ದಯಾಳ್, ಪ್ರಸಾದ್, ಅರ್ಚಕ ರಾಜು, ಬಿಜೆಪಿ ಮುಖಂಡ ಎಸ್.ಎನ್. ಚನ್ನಬಸಪ್ಪ ಅವರ ಜೊತೆ ಚರ್ಚಿಸಿದರು.

ಟೆಂಡರ್ ಹಣ ಕಟ್ಟಲು ಬಜರಂಗದಳದ ಮುಖಂಡರು ಒಪ್ಪಿದ್ದಾರೆ. ಮಳಿಗೆಗಳನ್ನು ಯಾರಿಗೆ ಕೊಡಬೇಕು ಎನ್ನುವುದು ಅವರಿಗೆ ಬಿಟ್ಟ ವಿಷಯ.

ಎಸ್.ಮಂಜುನಾಥ್, ಕಾರ್ಯದರ್ಶಿ, ಮಾರಿಕಾಂಬಾ ದೇವಸ್ಥಾನ ಸಮಿತಿ

ಈ ಸಮಯದಲ್ಲಿ ಮುಸ್ಲಿಮರಿಗೆ ಮಳಿಗೆ ಕೊಡಬಾರದು ಎಂದು ಪಟ್ಟು ಹಿಡಿದರು. ಜಾತ್ರೆಗೆ ಅಗತ್ಯವಾದ ಹಣ ಸಂಗ್ರಹಿಸಿ ಕೊಡುವ ಭರವಸೆಯನ್ನೂ ನೀಡಿದರು. ಆದರೆ, ದೇವಸ್ಥಾನ ಸಮಿತಿಯು ಪ್ರತಿವರ್ಷದ ಸಂಪ್ರದಾಯದಂತೆ ಎಲ್ಲರಿಗೂ ಅವಕಾಶ ನೀಡಬೇಕಿದೆ. ಟೆಂಡರ್ ಮೂಲಕವೇ ಹಣ ಸಂಗ್ರಹಿಸುವುದಾಗಿ ಪಟ್ಟು ಹಿಡಿಯಿತು. ಕೊನೆಗೆ ಟೆಂಡರ್ ಹಣ ₹ 9 ಲಕ್ಷ ನೀಡಿ, ತಾವೇ ಮಳಿಗೆ ಹಂಚಿಕೆ ಮಾಡುವುದಾಗಿ ಬಜರಂಗದಳದ ಮುಖಂಡರು ಒಪ್ಪಿದರು. ಅದಕ್ಕೆ ದೇವಸ್ಥಾನ ಸಮಿತಿ ಸಮ್ಮತಿಸಿದೆ. ಸಭೆಯಲ್ಲಿ ಹಲವರು 'ಜೈ ಶ್ರೀರಾಮ್' ಘೋಷಣೆ ಕೂಗುತ್ತಿದ್ದಂತೆ, ಕೆಲವರು 'ಜೈ ಮಾರಮ್ಮ' ಘೋಷಣೆ ಮೊಳಗಿಸಿದರು.

ಹಿಜಾಬ್: ಪರೀಕ್ಷೆ ಬಹಿಷ್ಕರಿಸಿದ ವಿದ್ಯಾರ್ಥಿಗಳು

ಉಪ್ಪಿನಂಗಡಿ (ದಕ್ಷಿಣ ಕನ್ನಡ): ಹಿಜಾಬ್ ಧರಿಸಿ ತರಗತಿಯೊಳಗೆ ಕುಳಿತುಕೊಳ್ಳಲು ಅವಕಾಶ ನೀಡದಿರುವುದನ್ನು ಖಂಡಿಸಿ, ಇಲ್ಲಿನ ಸರ್ಕಾರಿ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿಯರು, ಪರೀಕ್ಷೆ ಬರೆಯದೇ ಮನೆಗೆ ತೆರಳಿದರು.

ಶುಕ್ರವಾರ ಹಿಜಾಬ್ ಧರಿಸಿ ತರಗತಿ ಪ್ರವೇಶಿಸಲು ಮುಂದಾಗಿದ್ದ ವಿದ್ಯಾರ್ಥಿನಿಯರನ್ನು ಉಪನ್ಯಾಸಕರು ತಡೆದರು. ಇದನ್ನು ವಿರೋಧಿಸಿದ ವಿದ್ಯಾರ್ಥಿನಿಯರು ಪ್ರತಿಭಟನೆ ಆರಂಭಿಸಿದರು. ಇವರಿಗೆ ಬೆಂಬಲವಾಗಿ ಕೆಲ ವಿದ್ಯಾರ್ಥಿಗಳೂ ತರಗತಿ ಬಹಿಷ್ಕರಿಸಿದರು.

ಪರೀಕ್ಷೆಗೆ ಗೈರು: 'ಜಿಲ್ಲೆಯ 197 ದ್ವಿತೀಯ ಪಿಯುಸಿ ಕಾಲೇಜುಗಳಲ್ಲಿ ಪರೀಕ್ಷೆಗಳು ಸುಗಮವಾಗಿ ನಡೆಯುತ್ತಿವೆ. ಹಿಜಾಬ್‌ಗೆ ಅವಕಾಶ ನೀಡದ್ದರಿಂದ ಹಲವು ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರು ಪರೀಕ್ಷೆಗೆ ಗೈರಾಗಿರಬಹುದು' ಎಂದು ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಸಿ.ಡಿ. ಜಯಣ್ಣ ತಿಳಿಸಿದ್ದಾರೆ.

'ಪರೀಕ್ಷೆಯ ಗೈರು ಹಾಜರಿಯನ್ನು ಆಯಾ ಕಾಲೇಜು ಮಟ್ಟದಲ್ಲಿ ದಾಖಲಿಸಲಾಗುತ್ತದೆ' ಎಂದರು.

ಅರಾಜಕತೆ ಸೃಷ್ಟಿ: ಕ್ರಮಕ್ಕೆ ಆಗ್ರಹ

ಹುಬ್ಬಳ್ಳಿ: 'ಹಿಜಾಬ್ ತೀರ್ಪಿನ ಕುರಿತ ನ್ಯಾಯಾಲಯದ ಆದೇಶ ಪಾಲಿಸದೆ ರಾಜ್ಯದಲ್ಲಿ ಅರಾಜಕತೆ ಸೃಷ್ಟಿಸಲು ಯತ್ನಿಸುತ್ತಿರುವವರ ವಿರುದ್ಧ ಕಠಿಣ ಕ್ರಮಕೈಗೊಳ್ಳಬೇಕು' ಎಂದು ಶಾಸಕ ಜಗದೀಶ ಶೆಟ್ಟರ್ ಒತ್ತಾಯಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನ್ಯಾಯಾಲಯದ ಆದೇಶ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲಿ. ಬೀದಿಯಲ್ಲಿ ನಿಂತು ಪ್ರತಿಭಟನೆ, ಬಂದ್ ಮಾಡುವುದನ್ನು ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ. ನ್ಯಾಯಾಲಯದ ಮೇಲೆಯೇ ಒತ್ತಡ ಹಾಕುವಂತಹ ಕೆಲಸ ನಡೆಯುತ್ತಿದೆ ಎಂದು ಟೀಕಿಸಿದರು.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಸೆಲೆಬ್ರಿಟಿ LIVE
ಸಂಗೀತದ ಕೋಟೆ
ಅತಿಥಿಗಾಯಕ, ಸಂಗೀತ ನಿರ್ದೇಶಕ, ನಟ
ಶಶಿಧರ ಕೋಟೆ
ಬೆಳಿಗ್ಗೆ 11 ರಿಂದ 12
ಪಿಯು ವಿದ್ಯಾರ್ಥಿಗಳಿಗಾಗಿ
ಆನ್‌ಲೈನ್ ಬೋಧನಾ ಸರಣಿ
ಗಣಿತಶಾಸ್ತ್ರ ಟಿಪ್ಸ್
ಮಂದಾರ್ ಹುಕ್ಕೇರಿ
ಗಣಿತಶಾಸ್ತ್ರ ಉಪನ್ಯಾಸಕರು, ಕಲಬುರಗಿ
ಸಂಜೆ 4 ರಿಂದ 6 ರವರೆಗೆ
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9,
ಸಂಪಾದಕೀಯ: ಬೆಳಿಗ್ಗೆ 9.30,
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಮಳೆ: ಶಿರಸಿ ಜಾತ್ರೆ ಅಸ್ತವ್ಯಸ್ತ

ಹುಬ್ಬಳ್ಳಿ: ಹುಬ್ಬಳ್ಳಿ ನಗರ, ಗದಗದ ಲಕ್ಷ್ಮೇಶ್ವರ, ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ, ಮುಂಡಗೋಡ, ಶಿರಸಿ ಸೇರಿದಂತೆ ಹಲವೆಡೆ ಶುಕ್ರವಾರ ಮಳೆಯಾಗಿದೆ. ಏಕಾಏಕಿ ಸುರಿಯಲಾರಂಭಿಸಿದ ಮಳೆಯಿಂದಾಗಿ ಶಿರಸಿಯ ಪ್ರಸಿದ್ಧ ಮಾರಿಕಾಂಬಾ ದೇವಿ ಜಾತ್ರೆಪೇಟೆ ಅಸ್ತವ್ಯಸ್ತವಾಗಿದೆ.

ಹಾವೇರಿ ಜಿಲ್ಲೆ ಹಾನಗಲ್ ಕೊಂಡೋಜಿ ಗ್ರಾಮದಲ್ಲಿ ರೈತ ರವಿ ನೀಲಪ್ಪ ಬೋಳಮ್ಮನವರ (48) ಎಂಬುವವರು ಸಿಡಿಲು ಬಡಿದು ಸಾವನ್ನಪ್ಪಿದ್ದಾರೆ.

ಶಿರಸಿಯ ದೇವಿ ಗದ್ದುಗೆಯ ಎದುರು ಜಾತ್ರೆ ವೇಳೆ ನಿರ್ಮಿಸಿದ ಮುಂಭಾಗದ ಮಂಟಪದ ಗೋಪುರ ಗಾಳಿಯ ರಭಸಕ್ಕೆ ಕಳಚಿ ಬಿದ್ದಿದೆ. ಮಂಟಪದ ಒಳಭಾಗದಲ್ಲಿ ದೇವಿದರ್ಶನಕ್ಕೆ ಕಾದಿದ್ದ ಭಕ್ತರನ್ನು ಮುನ್ನೆಚ್ಚರಿಕೆಗಾಗಿ ಹೊರಕ್ಕೆ ಕಳಿಸಲಾಯಿತು. ಸಂಜೆ 5.50ರ ಸುಮಾರಿಗೆ ಜೋರಾದ ಗಾಳಿ ಬೀಸುವ ಜತೆಗೆ ಮಳೆ ಸುರಿಯಲಾರಂಭಿಸಿತು. ತಾತ್ಕಾಲಿಕ ಅಂಗಡಿಮುಂಗಟ್ಟುಗಳ ಚಾವಣಿಗಳು ಹಾರಿಬಿದ್ದವು.

ಗಾಳಿ–ಮಳೆಗೆ ಶುಕ್ರವಾರ ಹಾನಿಗೀಡಾದ ಶಿರಸಿ ಜಾತ್ರೆಪೇಟೆಯ ಅಂಗಡಿಯನ್ನು ವ್ಯಾಪಾರಿಯೊಬ್ಬರು ಸರಿಪಡಿಸುವ ಯತ್ನದಲ್ಲಿದ್ದರು

ಕಳಸದಲ್ಲಿ ಭಾರಿ ಗಾಳಿ, ಮಳೆ

ಕರಾವಳಿ ಹಾಗೂ ಮಲೆನಾಡಿನಲ್ಲಿ ಶುಕ್ರವಾರ ಮಳೆಯಾಗಿದೆ. ಕಳಸ ತಾಲ್ಲೂಕಿನಲ್ಲಿ ಗಾಳಿ ಸಹಿತ ಮಳೆಯಾಗಿದ್ದು, ಕೆಲವೆಡೆ ಅಡಿಕೆ ಮರಗಳು ಮುರಿದು ಬಿದ್ದಿವೆ. ವಿದ್ಯುತ್ ತಂತಿಯ ಮೇಲೂ ಮರಗಳು ಉರುಳಿವೆ.

ಕೊಡಗು ಜಿಲ್ಲೆಯ ವಿವಿಧೆಡೆ ಮಳೆಯಾಗಿದ್ದು, ಕಾಫಿ ಬೆಳೆಗಾರರ ಮೊಗದಲ್ಲಿ ನೆಮ್ಮದಿ ತರಿಸಿದೆ. ಮಾರ್ಚ್‌ನಲ್ಲಿ ಸುರಿಯುವ ಮಳೆಗೆ 'ಹೂವಿನ ಮಳೆ' ಎಂದೇ ಕಾಫಿ ಬೆಳೆಗಾರರು ಕರೆಯುತ್ತಾರೆ. ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿ ಆನವಟ್ಟಿ ಮತ್ತು ಸುತ್ತಲಿನ ಹಲವು ಗ್ರಾಮಗಳಲ್ಲಿ ಬಿರುಗಾಳಿ ಸಹಿತ ಭಾರಿ ಮಳೆಯಾಗಿದೆ.

'ಧ್ರುವನಾರಾಯಣ ಮೇಕೆ ಮೇಯಿಸಲು ಲಾಯಕ್'

ಪ್ರಜಾವಾಣಿ ವಾರ್ತೆ

ವಿ.ಶ್ರೀನಿವಾಸ ಪ್ರಸಾದ್

ತಿ.ನರಸೀಪುರ: 'ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ ಮೇಕೆ ಮೇಯಿಸಲು ಮಾತ್ರ ಲಾಯಕ್. ಅವರನ್ನು ಸಂಸದರನ್ನಾಗಿ ಮಾಡಿ ತಪ್ಪು ಮಾಡಿದೆ' ಎಂದು ಸಂಸದ ವಿ.ಶ್ರೀನಿವಾಸಪ್ರಸಾದ್ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, '40 ವರ್ಷಗಳ ನನ್ನ ರಾಜಕೀಯ ಜೀವನದಲ್ಲಿ ಏನು ಮಾಡಿದ್ದೇನೆ ಎಂಬುದು ಜನರಿಗೆ ಗೊತ್ತಿದೆ. ನನ್ನ ಸಾಧನೆ ಏನೂ ಇಲ್ಲ ಎಂದು ಹೇಳುವ ನೈತಿಕತೆ ಅವರಿಗಿಲ್ಲ. ಅವರನ್ನು ಸಂಸದರನ್ನಾಗಿ ಮಾಡಿದ್ದು ಯಾರು ಎಂಬುದನ್ನು ನೆನಪಿಸಿಕೊಳ್ಳಲಿ. ಕರ್ನಾಟಕದಲ್ಲಿದ್ದಾಗ ಸಿದ್ದರಾಮಯ್ಯ ಜತೆ, ದೆಹಲಿಗೆ ಹೋದಾಗ ಮಲ್ಲಿಕಾರ್ಜುನ ಖರ್ಗೆ ಜತೆ, ಹೊರಗಿದ್ದಾಗ ಡಿ.ಕೆ.ಶಿವಕುಮಾರ್ ಜತೆ ಗುರುತಿಸಿಕೊಳ್ಳುವ ಧ್ರುವನಾರಾಯಣ ಅವರಿಗೆ ಯಾವ ನೈತಿಕತೆ ಇದೆ' ಎಂದು ಪ್ರಶ್ನಿಸಿದರು.

'ಪಂಚ ರಾಜ್ಯಗಳ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಜನ ತಿರಸ್ಕರಿಸಿದ್ದಾರೆ. ಕಾಂಗ್ರೆಸ್ ಈಗಾಗಲೇ ನೆಲ ಕಚ್ಚಿದೆ. ತಿ.ನರಸೀಪುರ ವಿಧಾನಸಭಾ ಚುನಾವಣೆಯಲ್ಲಿ 10 ಸಾವಿರ ಮತ ಪಡೆದಿದ್ದ ಬಿಜೆಪಿಗೆ, ಲೋಕಸಭಾ ಚುನಾವಣೆಯಲ್ಲಿ ಹೆಚ್ಚು ಮತಗಳು ಬಂದಿದ್ದವು. ಮುಖ್ಯಮಂತ್ರಿಯಾಗಿದ್ದವರ ಕ್ಷೇತ್ರದಲ್ಲಿ ಬಿಜೆಪಿಗೆ ಹೆಚ್ಚು ಮತಗಳು ಬಂದಿವೆ ಎಂದರೆ ಅವರ ಯೋಗ್ಯತೆ ಏನು ಎಂಬುದು ತಿಳಿಯುತ್ತದೆ' ಎಂದು ವಾಗ್ದಾಳಿ ನಡೆಸಿದರು.

ಚಿಕ್ಕಮಗಳೂರು ತಾಲ್ಲೂಕಿನ ಬಾಬಾಬುಡನ್‌ಗಿರಿಯಲ್ಲಿ ಶುಕ್ರವಾರ ಜರುಗಿದ ಸಂದಲ್ ಉರುಸ್ ಮೆರವಣಿಗೆಯಲ್ಲಿ ಭಾಗವಹಿಸಿದ ಮುಸ್ಲಿಂ ಭಕ್ತರು ಪ್ರಜಾವಾಣಿ ಚಿತ್ರ

ಬಾಬಾಬುಡನ್‌ಗಿರಿ ಉರುಸ್: ಸಂದಲ್ ಮೆರವಣಿಗೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ತಾಲ್ಲೂಕಿನ ಶ್ರೀಗುರುದತ್ತಾತ್ರೇಯ ಬಾಬಾಬುಡನ್‌ಸ್ವಾಮಿ ದರ್ಗಾದಲ್ಲಿ ಸಂದಲ್ ಉರುಸ್ ಶುಕ್ರವಾರ ಆರಂಭವಾಯಿತು. ನಾಡಿನ ವಿವಿಧೆಡೆಗಳಿಂದ ಮುಸ್ಲಿಂ ಭಕ್ತರು ಗಿರಿಗೆ ಬಂದಿದ್ದು, ದರ್ಗಾದ ಮುಂಭಾಗದ ರಸ್ತೆಯಲ್ಲಿ ಸಂಜೆ ಮೆರವಣಿಗೆ ನಡೆಯಿತು.

ಶಾಖಾದ್ರಿ ಪ್ರತಿಭಟನೆ: ಶಾಖಾದ್ರಿ ಸಯ್ಯದ್ ಗೌಸ್ ಮೊಯುದ್ದೀನ್ ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿಲ್ಲ. ದರ್ಗಾ ಪಕ್ಕದ ಶಾಖಾದ್ರಿ ಕೊಠಡಿ ಬಳಿ ಸಮುದಾಯದವರೊಂದಿಗೆ ಕುಳಿತಿದ್ದರು.

ಶಾಖಾದ್ರಿ ಅವರು ಗುಹೆಯೊಳಗೆ ಹೋಗಿ ಸಾಂಪ್ರದಾಯಿಕ ವಿಧಿ ನಡೆಸಲು ಅನುಮತಿ ನೀಡುವಂತೆ ಜಿಲ್ಲಾಡಳಿತವನ್ನು ಕೋರುವ ಪರಿಪಾಟ ಕೆಲ ವರ್ಷಗಳಿಂದ ಇತ್ತು. ಶಾಖಾದ್ರಿ ಅವರು ದರ್ಗಾ ಪ್ರವೇಶ ದ್ವಾರದ ಗೇಟಿನವರೆಗೂ ಮೆರವಣಿಗೆಯಲ್ಲಿ ತೆರಳಿ, ಅಲ್ಲಿ ಸ್ವಲ್ಪಹೊತ್ತು ಕಾಯ್ದು ಕೊಠಡಿಗೆ ಮರಳುತ್ತಿದ್ದರು.

'ಪ್ರತಿ ವರ್ಷವೂ ಅದೇ ಉತ್ತರ ಹೇಳುತ್ತಾರೆ. ಮನವಿಯಿಂದ ಯಾವುದೇ ಉಪಯೋಗ ಆಗಿಲ್ಲ. ಈ ವರ್ಷ ಪ್ರತಿಭಟನೆ ಮಾರ್ಗ ಹಿಡಿದಿದ್ದೇನೆ' ಎಂದು ಶಾಖಾದ್ರಿ ಸಯ್ಯದ್ ಗೌಸ್ ಮೊಯುದ್ದೀನ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಮೈಸೂರು ಪೇಯಿಂಟ್ಸ್ & ವಾರ್ನಿಷ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಅಧೀನ ಉದ್ಯಮ)

ಹೊಸ ಬನ್ನಿಮಂಟಪ ಬಡಾವಣೆ, ಮೈಸೂರು – 570 015, ಕರ್ನಾಟಕ.

Paints with Royal Legacy SINCE 1937

ದೂರವಾಣಿ ಸಂಖ್ಯೆ : 91–821–2493831/2497469/2499340

ಇಮೇಲ್ ವಿಳಾಸ : e-mail : accts-mpvl@karnataka.gov.in

ಉಲ್ಲೇಖ: MPVL/2021-22/ AUCTION 26&27 ದಿನಾಂಕ: 17.03.2022

ಸ್ಥಿರ ಠೇವಣಿಗಳಿಗಾಗಿ ಇ– ಬಿಡ್ಡಿಂಗ್ ಆಹ್ವಾನ

ಮೈಸೂರು ಪೇಯಿಂಟ್ಸ್ & ವಾರ್ನಿಷ್ ಲಿ., (ಮೈಪೇವಾಲಿ.,) ಸಾರ್ವಜನಿಕ ವಲಯದ ಬ್ಯಾಂಕ್ (PSU)/ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಗಳಲ್ಲಿ (RRB) ಮತ್ತು ಖಾಸಗಿ ವಲಯದ ಬ್ಯಾಂಕ್ ಗಳಲ್ಲಿ (Pvt.SCB) ತನ್ನ ಹೆಚ್ಚುವರಿ ಹಣವನ್ನು 366 ದಿನಗಳಿಗೆ ವಿನಿಯೋಗಿಸಲು ಉದ್ದೇಶಿಸಿದೆ. ನಿಗದಿತ ಮೊತ್ತ ಮತ್ತು ಅವಧಿ ಮತ್ತು ಇತರೇ ವಿವರಗಳು ಈ ಕೆಳಕಂಡಂತಿವೆ.

ಕ್ರ.ಸಂ.	ವಿವರಗಳು	ಹೂಡಿಕೆಯ ಮೊತ್ತ (ರೂ)	ದಿನಗಳು
01.	ಸಾರ್ವಜನಿಕ ವಲಯದ ಬ್ಯಾಂಕ್/ಪ್ರಾಧೇಶಿಕ ಗ್ರಾಮೀಣ ಬ್ಯಾಂಕ್	23.40 ಕೋಟಿ	366 ದಿನಗಳು
02.	ಖಾಸಗಿ ವಲಯದ ಬ್ಯಾಂಕ್	2.60 ಕೋಟಿ	366 ದಿನಗಳು

ಇ–ಹರಾಜಿಗೆ ಸಂಬಂಧಿಸಿದ ಸಂಪೂರ್ಣ ವಿವರಗಳನ್ನು ಕರ್ನಾಟಕ ಸರ್ಕಾರದ ಇ– ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ ಹರಾಜಿಗೆ ಸಂಬಂಧಿಸಿದ ವೇಳಾಪಟ್ಟಿ ಈ ಕೆಳಗಿನಂತಿದೆ.

1) ಇ ಹರಾಜು ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾದ ದಿ: 17.03.2022 **2)** ಅನುಬಂಧ–ಎ ಮತ್ತು ಬಿ, ಇ–ಪೋರ್ಟಲ್ ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿ: 24.03.2022 ಮಧ್ಯಾಹ್ನ 4.00 ಗಂಟೆ ಒಳಗೆ. **3)** ನೇರ ಹರಾಜು: 29.03.2022 ಬೆಳಗ್ಗೆ 11.00 ಕ್ಕೆ ಪ್ರಾರಂಭವಾಗಿ ಮಧ್ಯಾಹ್ನ 1.00 ಗಂಟೆಗೆ ಮುಕ್ತಾಯಗೊಳ್ಳಲಿದೆ.

ಮೈಸೂರು ಪೇಯಿಂಟ್ಸ್ & ವಾರ್ನಿಷ್ ಲಿಮಿಟೆಡ್ ಪರವಾಗಿ
ಸಹಿ/–
TIA / ಪ್ರಧಾನ ವ್ಯವಸ್ಥಾಪಕರು (ಆಡಳಿತ)

ಮುಧೋಳ ತಹಶೀಲ್ದಾರ್ ನಿಧನ

ಬಾಗಲಕೋಟೆ: ಮುಧೋಳದ ತಹಶೀಲ್ದಾರ್ ಸಂಗಮೇಶ ಬಾಡಗಿ (38) ಶುಕ್ರವಾರ ನಿಧನರಾಗಿದ್ದಾರೆ. ಬಾಡಗಿ ಅವರು ಪತ್ನಿ ಹಾಗೂ ಪುತ್ರಿಯನ್ನು ತಮ್ಮ ಸ್ವಂತ ಊರಾದ ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನ ಜನವಾಡದಲ್ಲಿ ಬಿಟ್ಟು ಗುರುವಾರ ತಡರಾತ್ರಿ ಮನೆಗೆ ಬಂದು ಮಲಗಿದ್ದರು. ಜೊತೆಗೆ ಸ್ನೇಹಿತರೊಬ್ಬರು ಮನೆಯಲ್ಲಿ ಇದ್ದರು. ಬೆಳಿಗ್ಗೆ ಎಬ್ಬಿಸಲು ಹೋದಾಗ ಸಾವಿಗೀಡಾಗಿರುವುದು ಗೊತ್ತಾಗಿದೆ.

ದೇಹವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಿದ್ದು, ವರದಿ ನಂತರ ಸಾವಿಗೆ ಕಾರಣ ತಿಳಿದುಬರಲಿದೆ.

ಸಂಗಮೇಶ ಬಾಡಗಿ ಅವರಿಗೆ ತಂದೆ, ತಾಯಿ ಇದ್ದಾರೆ. 2014ರ ಬ್ಯಾಚ್‌ನ ಕೆಎಎಸ್ ಅಧಿಕಾರಿ. ಅದಕ್ಕೂ ಮುನ್ನ ಮುಧೋಳ ತಾಲ್ಲೂಕಿನ ಕುಳಲಿಯಲ್ಲಿ ಪ್ರೌಢಶಾಲೆ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು. ಸರಳತೆಯ ಗುಣದಿಂದ ಮುಧೋಳದಲ್ಲಿ ಜನರ ಪ್ರೀತಿಗೆ ಪಾತ್ರರಾಗಿದ್ದರು.

12–14 ವರ್ಷ: 68,321 ಮಕ್ಕಳಿಗೆ ಲಸಿಕೆ

ಬೆಂಗಳೂರು: ರಾಜ್ಯದಲ್ಲಿ ಮೂರು ದಿನಗಳ ಅವಧಿಯಲ್ಲಿ 12–14 ವರ್ಷ ವಯೋಮಾನದ 68,321 ಮಕ್ಕಳು 'ಕೊರ್ಬೆವ್ಯಾಕ್ಸ್' ಕೋವಿಡ್ ಲಸಿಕೆ ಪಡೆದುಕೊಂಡಿದ್ದಾರೆ.

ಕಳೆದ ಬುಧವಾರದಿಂದ ಈ ವಯೋಮಾನದವರಿಗೆ ಲಸಿಕೆ ವಿತರಣೆ ಪ್ರಾರಂಭವಾಗಿದೆ. 20 ಲಕ್ಷ ಮಕ್ಕಳು 12–14 ವರ್ಷದವರಾಗಿದ್ದಾರೆ.

ಪ್ರಜಾವಾಣಿ ಶನಿವಾರ, 19 ಮಾರ್ಚ್ 2022

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ

ಮಿತವಿರಲಿ ನೀರಿನ ಬಳಕೆಯಲಿ

ನೂರಾರು ಕಿಲೋಮೀಟರ್ ದೂರದಿಂದಲೋ, ನೂರಾರು ಅಡಿ ಆಳದಲ್ಲಿರುವ ಜಲಮೂಲಗಳಿಂದಲೋ ಮನೆ ಮನೆಗೆ ಕುಡಿಯುವ ನೀರು ಪೂರೈಕೆಯಾಗುತ್ತಿದೆ. ಇಷ್ಟೆಲ್ಲ ಪರಿಶ್ರಮದೊಂದಿಗೆ ಲಭ್ಯವಾಗುವ ಜೀವ ಜಲವನ್ನು 'ಬಡವರ ತುಪ್ಪದಂತೆ' ಮಿತವಾಗಿ ಬಳಸುವುದು ಎಲ್ಲರ ಜವಾಬ್ದಾರಿ ಹಾಗೂ ಈ ಹೊತ್ತಿನ ತುರ್ತು. 'ಮನೆಯಿಂದಲೇ ನೀರಿನ ಮಿತ ಬಳಕೆ ಆರಂಭವಾಗಲಿ' ಎಂಬುದು ಜಲಸಂರಕ್ಷಣೆಯ ಸಾರ್ವತ್ರಿಕ ಘೋಷವಾಕ್ಯ. ಮನೆ ಮನೆಯಲ್ಲಿ ನೀರಿನ ಪೋಲು ಇನ್ನೂ ತಪ್ಪಿಲ್ಲ ಎನ್ನುವ ಕಳವಳವನ್ನೂ ಈ ಮಾತು ಧ್ವನಿಸುತ್ತದೆ. ಆದರೆ, ನಾಡಿನ ಅನೇಕ ಗೃಹಿಣಿಯರು ನೀರಿನ ಮಿತ ಬಳಕೆಯನ್ನು ಸದ್ದಿಲ್ಲದೆ ಸಾಧಿಸುತ್ತಾ ಬಂದಿದ್ದಾರೆ. 'ಮಾ. 22, ವಿಶ್ವ ಜಲ ದಿನ' ದ ನೆಪದಲ್ಲಿ ಅಂತಹ ಕೆಲ ಗೃಹಿಣಿಯರು ಅನುಸರಿಸುತ್ತಿರುವ ವಿಧಾನಗಳನ್ನು ಅವರ ನುಡಿಗಳಲ್ಲೇ ಓದಿ..

ನೀರಿದ್ದರಲ್ಲವೇ ಬದುಕು..

ನಾನು ಹುಟ್ಟಿ ಬೆಳೆದಿದ್ದು ಪಟ್ಟಣವೇ ಆದರೂ ಬೇರು ಮಾತ್ರ ಹಳ್ಳಿಯದು. ನಾನು ಹೈಸ್ಕೂಲ್‌ನಲ್ಲಿದ್ದಾಗ ಅಪ್ಪನ ಊರಿನಲ್ಲಿ ತೆರೆದ ಬಾವಿಯಿಂದ ನೀರು ಸೇದಿಕೊಂಡು, ಸೊಂಟದಲ್ಲೊಂದು, ತಲೆಯ ಮೇಲೊಂದು ಬಿಂದಿಗೆ ಇಟ್ಟುಕೊಂಡು ನೀರು ತರುವ ಸಾಹಸ ಮಾಡಿದ್ದೆ. ಆಗ, ಪಟ್ಟಣದಲ್ಲಿ ನಲ್ಲಿ ತಿರುಗಿಸಿದರೆ ಬರುವ ನೀರಿಗೆ ಹಳ್ಳಿಯಲ್ಲಿ ಎಷ್ಟೊಂದು ಕಷ್ಟಪಡಬೇಕಲ್ಲ ಎನಿಸುತ್ತಿತ್ತು. ಇನ್ನು ಮದುವೆಯಾಗಿ ಹಳ್ಳಿ ವಾಸಕ್ಕೆ ಕಾಯಂ ಆಗಿ ಬಂದಾಗ ಗಂಡನ ಮನೆಯಲ್ಲಿ ನೀರಿನ ಮಿತವ್ಯಯದ ಪಾಠ ರೂಢಿಸಿಕೊಳ್ಳಲಾರಂಭಿಸಿದೆ.

ನಯನಾ ಆನಂದ್

- ಮಳೆ ನೀರು ಸಂಗ್ರಹ ನಮ್ಮ ಕನಸು. ಹಾಗಾಗಿ ನೆಲತೊಟ್ಟಿ ಸ್ವಲ್ಪ ದೊಡ್ಡದು ಮಾಡಿಕೊಂಡೆವು. ಫಿಲ್ಟರ್ ನಿಂದ ಶೋಧಿಸಿ ತೊಟ್ಟಿಗೆ ಬಿಡುತ್ತೇವೆ. ಕಾಟನ್ ಬಟ್ಟೆಯಲ್ಲಿ ಸೋಸಿ ಮಿತವಾಗಿ ಕೇವಲ ಅಡುಗೆ ಹಾಗೂ ಕುಡಿಯಲಷ್ಟೆ ಬಳಕೆ. ಇತರೆ ಅಗತ್ಯಕ್ಕೆ ಕೊಳವೆಬಾವಿ ನೀರು.
- ಸೊಪ್ಪು-ತರಕಾರಿ ತೊಳೆದ ನೀರೆಲ್ಲವೂ ನೆಲ ಒರೆಸಲು ಮತ್ತು ಗಿಡಗಳಿಗೆ.
- ಅಕ್ಕಿ ತೊಳೆದ ನೀರನ್ನು ಗಿಡಗಳಿಗೆ ಹಾಕುತ್ತೇನೆ. ಈ ನೀರು ಗಿಡಗಳ ಬೆಳವಣಿಗೆಗೆ ಅಗತ್ಯವಾದ ಪೂರಕ ಪೋಷಕಾಂಶ ನೀಡುತ್ತದೆ.
- ಮನೆಯಿಂದ ಹೊರಗೆ ನೀರು ಬಿಟ್ಟುಕೊಳ್ಳಲು ದಪ್ಪ ಪೈಪ್ ಬದಲಿಗೆ ಡ್ರಿಪ್ ಪೈಪ್ ಬಳಕೆ.
- ಬಟ್ಟೆ ಒಗೆಯುವಾಗ ಒಮ್ಮೆಗೆ ಒಗೆದು ಒಮ್ಮೆಗೆ ಜಾಲಾಡುವುದಿಲ್ಲ. ಬದಲಿಗೆ ಒಂದು ಟಬ್ ನೀರು ಖಾಲಿಯಾಗುವವರೆಗೆ ಒಗೆದು, ನಂತರ ಬಿಟ್ಟುಕೊಳ್ಳುವ ಹೊಸ ನೀರಿನಲ್ಲಿ ಒಗೆದದ್ದನ್ನು ಜಾಲಿಸುವೆ. ಜಾಲಿಸಿದ ನೀರು ಇತರೆ ಬಟ್ಟೆ ಒಗೆಯಲು ಬಳಸುವೆ. ಹೀಗಾದಾಗ ಜಾಲಿಸಲು ಸುಮ್ಮನೆ ಎರಡು-ಮೂರು ಬಾರಿ ನೀರು ಚೆಲ್ಲುವುದು ಉಳಿಯುತ್ತದೆ.
- ಅಗತ್ಯಬಿದ್ದಾಗ ಅಷ್ಟೇ ವಾಹನಗಳಿಗೆ ಸ್ನಾನ.
- ಎಲ್ಲ ಪಾತ್ರೆಗಳನ್ನು ಒಮ್ಮೆಗೆ ಉಜ್ಜಿಟ್ಟು(ಬೆಳಗಿ), ನೀರಿನಲ್ಲಿ ತೊಳೆಯಲು ಹೋದರೆ ಮೊದಲು ಬೆಳಗಿಟ್ಟ ಪಾತ್ರೆಗಳು ಒಣಗುತ್ತವೆ. ಆಗ ಅದನ್ನು ತೊಳೆಯಲು ಹೆಚ್ಚು ನೀರು ಬೇಕಾಗುತ್ತದೆ. ಬದಲಿಗೆ ಸ್ವಲ್ಪ ಸ್ವಲ್ಪ ಪಾತ್ರೆಯನ್ನು ಬೆಳಗುತ್ತ, ತೊಳೆದರೆ ಪಾತ್ರೆಗಳು ಬೂದುಗಾಗುವುದನ್ನು ತಪ್ಪಿಸಬಹುದು.
- ಅತಿಥಿಗಳಿಗೆ ಕುಡಿಯಲು ಸಣ್ಣ ಲೋಟದಲ್ಲಿ ನೀರು ಕೊಡುತ್ತೇವೆ. ಬೇಕಿದ್ದರೆ ಮತ್ತೆ ಕೇಳಿದರಾಯಿತು. ಹೀಗಾದಾಗ ಹೆಚ್ಚು ನೀಡಿ ಮಿಕ್ಕಿದ್ದು ಚೆಲ್ಲುವ ಸಾಧ್ಯತೆ ಇರುವುದಿಲ್ಲ.
- ಓವರ್ ಹೆಡ್ ಟ್ಯಾಂಕ್ ತುಂಬಿ ಮೋಟಾರ್ ಆಫ್ ಮಾಡಿದಾಗಲೂ ಸ್ವಲ್ಪ ನೀರು ಹೊರ ಹೋಗುತ್ತಿರುತ್ತದೆ. ಆಗ ತಕ್ಷಣ ಬಕೆಟ್‌ಗೆ ಒಂದಿಷ್ಟು ನೀರು ಬಿಟ್ಟು ವ್ಯರ್ಥವಾಗುವ ನೀರನ್ನು ಸಂಗ್ರಹಿಸುವೆ ಅಥವಾ ವ್ಯರ್ಥವಾಗಿ ಹರಿಯುವ ನೀರನ್ನಾದರೂ ಸಂಗ್ರಹಿಸಿ ಬೇರೆಯದಕ್ಕೆ ಉಪಯೋಗಿಸುವೆ.

ಎಷ್ಟೇ ನೀರಿರಲಿ, ಬಳಕೆ ಮಿತವಾಗಿರಲಿ. ನೀರಿದ್ದರಲ್ಲವೇ ಬದುಕು..!

ನಯನಾ ಆನಂದ್, ಮತ್ತಿಕಟ್ಟೆ

ನೀರಿನ ಮಿತ ಬಳಕೆಯ ಧ್ಯಾನ

ಧಾರವಾಡದ ಹೊಯ್ಸಳನಗರದಲ್ಲಿದೆ ನಮ್ಮನೆ 'ಬಯಲು'. ಈ ಮನೆಗೆ ಮಳೆ ನೀರು ಸಂಗ್ರಹ ವಿಧಾನ ಅಳವಡಿಸಿದ್ದೇವೆ. ಮನೆಯ ಕಾಂಪೌಂಡ್‌ನಿಂದ ಹನಿ ಮಳೆ ನೀರು ಹೊರಗೆ ಹರಿಯದಂತೆ ಎರಡು ಇಂಗುಗುಂಡಿಗಳಲ್ಲಿ ಇಂಗಿಸುತ್ತೇವೆ. ಈ ಮೂಲಕ ಬಳಸುವಷ್ಟು ನೀರನ್ನು ಮತ್ತೆ ಭೂಮಿಗೆ ಸೇರಿಸುತ್ತೇವೆ.

ಮಳೆ ನೀರು ಹಿಡಿಯುವಾಗ ತೋರುವಷ್ಟೇ ಕಾಳಜಿಯನ್ನು ನೀರನ್ನು ಮಿತವಾಗಿ ಬಳಸುವಲ್ಲೂ ತೋರುತ್ತೇವೆ. ಅದರ ಮೊದಲ ಹೆಜ್ಜೆ ತ್ಯಾಜ್ಯ ನೀರು ಮರುಬಳಕೆ. ಹೇಗೆಂದರೆ, ನಮ್ಮ ಮನೆಯ ಸಿಂಕ್ ಹಾಗೂ ವಾಶ್ ಬೇಸಿನ್ ಗಳಲ್ಲಿ ಬೀಳುವ ನೀರು, ತೆಂಗು ಹಾಗೂ ಬಾಳೆಯ ಗಿಡಗಳಿಗೆ ಹೋಗುವ ವ್ಯವಸ್ಥೆ ಮಾಡಿದ್ದೇವೆ. ಹಾಗಾಗಿ, ನೀರು ವ್ಯರ್ಥವಾಗಿ ಹೊರಗೆ ಹರಿದು ಹೋಗುವುದಿಲ್ಲ.

ಸುನಂದಾ ಪ್ರಕಾಶ

ನಮ್ಮ ಮನೆಯಲ್ಲಿ ಕಮೋಡ್ ಶೈಲಿ ಹಾಗೂ ಭಾರತೀಯ ಶೈಲಿಯ ಶೌಚಾಲಯಗಳಿವೆ. ಆದರೂ ನಾವು ಬಳಸುವುದು ಇಂಡಿಯನ್ ಶೈಲಿಯದ್ದು. ಅನಿವಾರ್ಯ, ಅಪರೂಪಕ್ಕೊಮ್ಮೆ ಕಮೋಡ್ ಬಳಸುತ್ತೇವೆ. ಇಲ್ಲೇ ಅರ್ಧದಷ್ಟು ನೀರು ಉಳಿತಾಯ.

ಸ್ನಾನಕ್ಕೆ ಶವರ್ ಬಳಕೆ ಇಲ್ಲ. ಬಕೆಟ್‌ನಲ್ಲಿ ನೀರು ಹಿಡಿದಿಟ್ಟುಕೊಂಡೇ ಸ್ನಾನ ಮಾಡುವುದು. ಒಬ್ಬರು ಒಂದು ಬಕೆಟ್‌ಗಿಂತ ಹೆಚ್ಚು ಬಳಸದಂತೆ ನಾವೇ ನಿಬಂಧನೆ ಹಾಕಿಕೊಂಡಿದ್ದೇವೆ.

ಬಟ್ಟೆ ತೊಳೆದ ನೀರು ಆದಷ್ಟು ನಮ್ಮ ಮನೆಯ ಅಂಗಳದ ಗಿಡಗಳಿಗೆ ಹೋಗುತ್ತದೆ. ಹೆಚ್ಚಾದರೆ ಮಾತ್ರ ಹೊರಗೆ ಹರಿಯುವಂತೆ ವ್ಯವಸ್ಥೆ ಮಾಡಿದ್ದೇವೆ.

ಅನಿವಾರ್ಯ (ಹೊದಿಕೆ, ಚಾದರ ಕಂಬಳಿಗಳನ್ನು ಒಗೆಯುವ ವೇಳೆ) ಸಂದರ್ಭಗಳಲ್ಲಿ ಮಾತ್ರ ವಾಷಿಂಗ್ ಮಷಿನ್ ಬಳಸುತ್ತೇವೆ. ಉಳಿದಂತೆ ಕೈಯಿಂದಲೇ ಬಟ್ಟೆ ಒಗೆಯುತ್ತೇನೆ. ಮಷಿನ್ ಬಳಸದಿದ್ದರೆ, ಸಾಕಷ್ಟು ನೀರು ಉಳಿಯುತ್ತದೆ.

ಅಡುಗೆ ಮನೆಗೆ ಹೊಂದಿಕೊಂಡಂತೆ, ಮನೆಯೊಳಗೆ ಒಂದು ಕೈತೋಟ ಮಾಡಿಕೊಂಡಿದ್ದೇವೆ. ಅಡುಗೆ ಮನೆಯ ತ್ಯಾಜ್ಯ ನೀರು, ಅಡುಗೆಯ ನಂತರ ಪಾತ್ರೆಯಲ್ಲಿ ಉಳಿಯುವ ನೀರು, ಅಕ್ಕಿ ತೊಳೆದ ನೀರು ಇದೆಲ್ಲ ಮನೆಯೊಳಗಿನ ಕೈತೋಟದ ಗಿಡಗಳಿಗೆ ಹಾಕುತ್ತೇವೆ. ಕುಡಿಯುವ ನೀರಿಗೆ 'ಆರ್‌ಓ ಫಿಲ್ಟರ್' ಬಳಸುವುದಿಲ್ಲ. ಇದರಲ್ಲಿ ಹೆಚ್ಚು ನೀರು ವ್ಯರ್ಥವಾಗುತ್ತದೆ. ಹಳೆಯ ಕ್ಯಾಂಡಲ್ ಫಿಲ್ಟರ್ ಬಳಕೆ ಮಾಡುತ್ತೇವೆ. ಲೋಟದ ತುಂಬಾ ನೀರು ತುಂಬಿಸಿ, ನೀರು ಕುಡಿಯುವುದಿಲ್ಲ. ಅಗತ್ಯವಿದ್ದಷ್ಟು ಮಾತ್ರ ನೀರು ತುಂಬಿಸಿಕೊಂಡು ಕುಡಿಯುತ್ತೇವೆ.

ಈ ಎಲ್ಲ ಕಾರಣಗಳಿಂದ, ನಮಗೆ ನಿತ್ಯದ ನೀರಿನ ಬೇಡಿಕೆ ಪ್ರಮಾಣ ತೀರಾ ಕಡಿಮೆ.

ಸುನಂದಾ ಪ್ರಕಾಶ, ಧಾರವಾಡ

'ಪರಿಸ್ಥಿತಿ' ಕಲಿಸಿದ ನೀರಿನ ಪಾಠ

ನಮ್ಮದು ಮಲೆನಾಡು. ಮನೆಯವರು ಬ್ಯಾಂಕ್ ಉದ್ಯೋಗಿಯಾದ ಕಾರಣ ಊರಿಂದ ಊರಿಗೆ ವರ್ಗಾವಣೆ ಸಾಮಾನ್ಯ. ಹೀಗಾಗಿ ಉತ್ತರ ಕರ್ನಾಟಕದ ಕೆಲವು ಊರುಗಳಲ್ಲಿ ನೆಲೆಸುವ ಅವಕಾಶ. ಬೇಸಿಗೆ ಕಾಲದಲ್ಲಿ ಇಲ್ಲಿನ ಊರುಗಳಲ್ಲಿ ನೀರಿನ ಸಮಸ್ಯೆ ಹೆಚ್ಚು. ವಾರಕ್ಕೆ, 15 ದಿನಕ್ಕೊಮ್ಮೆ, ತಿಂಗಳಿಗೊಮ್ಮೆ ಮನೆಗಳಿಗೆ ನೀರು ಬಂದ ಉದಾಹರಣೆಗಳಿವೆ. ಮಲೆನಾಡಿನವಳಾದ ನನಗೆ ಇದೆಲ್ಲ ಹೊಸದು. ಆದರೂ, ವಾರಕ್ಕೆ ಒಮ್ಮೆ ಬರುವ ನೀರನ್ನು ಹಿಡಿದಿಟ್ಟು, ವಾರವಿಡೀ ಮಿತವಾಗಿ ಬಳಸುವುದನ್ನು ಈ ಊರುಗಳು ಕಲಿಸಿದವು. ಅದನ್ನೇ ನಾನು ರೂಢಿಸಿಕೊಂಡಿದ್ದೇನೆ.

- ಮನೆಯಲ್ಲಿ ನಿತ್ಯ ಎಲ್ಲರಿಗೂ ನೀರು ಕುಡಿಯಲು ಪ್ರತ್ಯೇಕ ಲೋಟ ಇಡುತ್ತೇನೆ. ಇಡೀ ದಿನ ಅದೇ ಲೋಟ ಬಳಸುತ್ತಾರೆ. ಅತಿಥಿಗಳಿಗೆ ಸಣ್ಣ ಲೋಟದಲ್ಲಿ ನೀರು ಕೊಡುತ್ತೇನೆ. ದೊಡ್ಡ ಲೋಟವಾದರೆ, ಅರ್ಧ ಕೊಡುತ್ತೇನೆ. ದೊಡ್ಡ ಗ್ಲಾಸಿನ ತುಂಬಾ ನೀರು ಕೊಟ್ಟರೆ, ಒಮ್ಮೊಮ್ಮೆ ಅರ್ಧ ಕುಡಿದು, ಇನ್ನರ್ಧ ಉಳಿಸಿ, ವ್ಯರ್ಥವಾಗಬಹುದಲ್ಲವಾ. ಎಷ್ಟು ಸಾರಿ ನೀರು ಕೇಳಿದರೂ ಕೊಡಬಹುದು. ಅದರೆ, ನೀರು ವ್ಯರ್ಥವಾಗಬಾರದು.
- ಅಕ್ಕಿ ತೊಳೆದ ನೀರಿನಲ್ಲಿ, ಚಹಾ, ಹಾಲು ಕಾಯಿಸಿದ ಪಾತ್ರೆಗಳನ್ನು ಸ್ವಚ್ಛಮಾಡುತ್ತೇನೆ. ಈ ಪಾತ್ರೆಗಳನ್ನು ತೊಳೆದ ನೀರನ್ನೂ ಸೊಪ್ಪು, ತರಕಾರಿ ಗಿಡಗಳಿಗೆ ಹಾಕುತ್ತೇನೆ.
- ಪಲ್ಯ, ಸಾಂಬಾರುಗಳಿಗೆ ಕತ್ತರಿಸಿದ ತರಕಾರಿಗಳನ್ನು ಬೇಯಿಸುವ ಪಾತ್ರೆಯಲ್ಲೇ ಇರಿಸುವುದರಿಂದ, ಬೇರೆ ಪಾತ್ರೆಗಳ ಬಳಕೆ ಕಡಿಮೆಯಾಗುತ್ತದೆ.

ಜಾನಕಿ ಎಸ್.

ತೊಳೆಯುವ ಪಾತ್ರೆಗಳೂ ಕಡಿಮೆಯಾಗುತ್ತವೆ.

- ಮನೆ ಸಹಾಯಕರು ಪಾತ್ರೆ ತೊಳೆಯುವ ಮುನ್ನ, ಆ ಪಾತ್ರೆಗಳಿಗೆ ಸ್ವಲ್ಪ ನೀರು ಬಳಸಿ ಮುಸುರೆ ಹೋಗುವಂತೆ ಕೈಯ್ಯಾಡಿ ಇಡುತ್ತೇನೆ. ಹೀಗೆ ಮಾಡಿದರೆ, ಅವರು ಪಾತ್ರೆ ತೊಳೆವಾಗ ಹೆಚ್ಚು ನೀರು ಬೇಕಾಗುವುದಿಲ್ಲ.
- ಅಡುಗೆ ಮನೆಯ ವಾಷ್ ಬೇಸಿನ್ ಪಕ್ಕದಲ್ಲೇ ಒಂದು ಚಿಕ್ಕ ಬಕೆಟ್‌ನಲ್ಲಿ ನೀರು ತುಂಬಿಸಿಟ್ಟಿರುತ್ತೇನೆ. ಅದನ್ನು ಆಗಾಗ ಕೈ ತೊಳೆಯಲು ಬಳಸುತ್ತೇನೆ. ಇದರಿಂದ ನೀರಿನ ಉಳಿತಾಯವೂ ಆಗುತ್ತದೆ.
- ಬೇಸಿಗೆ ಅಥವಾ ನೀರಿನ ಕೊರತೆಯಿದ್ದಾಗ ಅಟ್ಯಾಚ್ಡ್ ಬಾತ್ ರೂಂ ಬಳಸುವುದಿಲ್ಲ. ಎಲ್ಲರೂ ಒಂದೇ ಸ್ನಾನದ ಕೋಣೆ ಬಳಸುತ್ತೇವೆ. ಇದರಿಂದ ಎಲ್ಲಾ ಸ್ನಾನದ ಕೋಣೆಗಳನ್ನು ಸ್ವಚ್ಛ ಗೊಳಿಸುವುದೂ ತಪ್ಪುತ್ತದೆ. ನೀರು ಉಳಿತಾಯವಾಗುತ್ತದೆ.
- ಸ್ನಾನಕ್ಕೆ ಶವರ್ ಬಳಸುವುದಿಲ್ಲ. ಇದನ್ನು ಬಳಸಿದರೆ, ನೀರಿನ ಬಳಕೆ ಮಿತಿ ತಿಳಿಯುವುದಿಲ್ಲ. ಹಾಗಾಗಿ ನಾವು ಬಕೆಟ್ ನೀರು ಇಟ್ಟುಕೊಂಡೇ ಸ್ನಾನ ಮಾಡುತ್ತೇವೆ.
- ಪ್ರತಿ ದಿನ ವಾಷಿಂಗ್ ಮಷಿನ್ ಬಳಸುವುದಿಲ್ಲ. ಬದಲಿಗೆ ಮೂರು ದಿನ ಅಥವಾ ವಾರಕ್ಕೆ ಎರಡು ಬಾರಿ ಬಳಸುತ್ತೇನೆ. ಇದರಿಂದ ಹೆಚ್ಚು ನೀರು ಉಳಿಯುತ್ತದೆ.
- ಕಾಲು ಒರೆಸುವ ಮ್ಯಾಟ್, ನೆಲ ಒರೆಸುವ ಬಟ್ಟೆ ಇವುಗಳನ್ನು ಈ ಮೊದಲೇ ಬಟ್ಟೆ-ಪಾತ್ರೆಗಳನ್ನು ಜಾಲಿಸಿದ ನೀರಿನಲ್ಲಿ ನೆನೆಸುತ್ತೇನೆ. ನಂತರ ಒಳ್ಳೆ ನೀರು ಬಳಸಿ ತೊಳೆಯುವುದರಿಂದ, ಇದಕ್ಕೆ ಸ್ವಲ್ಪ ನೀರು ಸಾಕಾಗುತ್ತದೆ.
- ಬಕೆಟ್ ನೀರಿನಲ್ಲಿ ಬಟ್ಟೆ ನೆನೆಸಿ ವಾಹನಗಳನ್ನು ಸ್ವಚ್ಛ ಮಾಡುತ್ತೇನೆ. ಪೈಪ್ ಬಳಸುವುದಿಲ್ಲ.

ಬೇಸಿಗೆಯಲ್ಲಿ ಅಥವಾ ನೀರಿನ ಕೊರತೆಯಿದ್ದಾಗ ಮಾತ್ರವಲ್ಲ, ಯಾವಾಗಲೂ ಈ ಎಲ್ಲ ವಿಧಾನಗಳನ್ನು ಅನುಸರಿಸುತ್ತಾ ನೀರನ್ನು ಮಿತವಾಗಿ ಬಳಸುತ್ತೇನೆ.

ಜಾನಕಿ ಎಸ್., ನವನಗರ, ಬಾಗಲಕೋಟೆ

ಚಿತ್ರ: ಮಂಜುನಾಥ ಗೊಡೆಪ್ಪನವರ್

ಲೈಂಗಿಕತೆಯ ಬಗ್ಗೆ ತಪ್ಪು ತಿಳಿವಳಿಕೆ ಸಲ್ಲ

ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

● ನನಗೆ ಸಂಗಾತಿ ಇದ್ದಾಳೆ. ಮಿಲನದಲ್ಲಿ ಗಂಡಸರಿಗೆ ಆಗುವಂತೆ ನನಗೆ ಸ್ಖಲನವಾಗುವುದಿಲ್ಲ, ಹಾಗಾಗಿ ತನಗೆ ಸುಖ ಸಿಗುತ್ತಿಲ್ಲ ಎಂದು ಆಗಾಗ ಹೇಳುತ್ತಿರುತ್ತಾಳೆ. ಪುರುಷರಂತೆ ಮಹಿಳೆಯರಿಗೂ ಸ್ಖಲವನವಾಗುತ್ತದೆಯೇ? ಅವರಿಗೆ ತೃಪ್ತಿಯಾಗಿದೆ ಎಂದು ತಿಳಿದುಕೊಳ್ಳುವುದು ಹೇಗೆ?

ಹೆಸರು ಊರು ತಿಳಿಸಿಲ್ಲ.

ಇಂತಹ ಪ್ರಶ್ನೆ ಕೇಳುವ ನಿಮ್ಮ ಮುಕ್ತಮನೋಭಾವ ಮತ್ತು ಪ್ರಾಮಾಣಿಕತೆಯನ್ನು ಮೆಚ್ಚುತ್ತೇನೆ. ಹಾಗೆಯೇ ಯುವಜನರಲ್ಲಿ ಲೈಂಗಿಕತೆಯ ಕುರಿತಾಗಿ ಇರುವ ಅಜ್ಞಾನ ಮತ್ತು ತಪ್ಪುತಿಳಿವಳಿಕೆಗಳ ಬಗೆಗೆ ನಾವೇನು ಮಾಡಬಹುದು ಎಂದು ಸಮಾಜದ ಹಿರಿಯರೆಲ್ಲರೂ ಯೋಚಿಸಿ ಕ್ರಿಯಾಶೀಲರಾಗಬೇಕಾಗಿ ಮನವಿ ಮಾಡುತ್ತಿದ್ದೇನೆ.

ಪುರುಷರಿಗೆ ಸ್ಖಲನವಾಗುವುದು ಸಂತಾನದ ಉದ್ದೇಶಕ್ಕೆ ಮಾತ್ರ. ವೀರ್ಯವನ್ನು ಗರ್ಭಾಶಯದ ಒಳಗೆ ಕಳಿಸುವುದಕ್ಕಾಗಿ ಪಿಚಕಾರಿಯಂತಹ ವ್ಯವಸ್ಥೆಯಿದೆ. ಸ್ಖಲನದ ಸಮಯದಲ್ಲಿ ಪುರುಷರಿಗೆ ವಿಶಿಷ್ಟ ಅನುಭವವಾಗುತ್ತದೆ. ಸ್ತ್ರೀಯರಲ್ಲಿಯೂ ಇದೇ ರೀತಿಯ ಲೈಂಗಿಕ ಸುಖದ ತೀವ್ರ ಅನುಭವವಾಗುತ್ತದೆ. ಉದ್ರೇಕವಾದಾಗ ಸರಾಗವಾದ ಚಲನೆಗೆ ಅನುಕೂಲವಾಗುವಂತೆ ಜಾರುಕದಂತಹ ದ್ರವ ಹೊರಬರುತ್ತದೆ. ಆದರೆ ಪುರುಷರಂತೆ ಸ್ಖಲನವಾಗುವುದಿಲ್ಲ.

ಸ್ಖಲನದಲ್ಲೇ ಪುರುಷರ ಲೈಂಗಿಕ ಸುಖವಿದೆ ಎನ್ನುವುದು ಹಿಂದಿನಿಂದ ಬಂದ ತಪ್ಪುತಿಳಿವಳಿಕೆ. ಇಂತಹ ತಪ್ಪುತಿಳಿವಳಿಕೆಯಿಂದ ಹೆಣ್ಣು ಗಂಡಿನ ಸಂಬಂಧ ಕೇವಲ ಸಂಭೋಗ ಮತ್ತು ಸ್ಖಲನಕ್ಕೆ ಸೀಮಿತವಾಗುತ್ತದೆ. ಆಗ ಆತ್ಮೀಯತೆಯ ಅನುಭವವಾಗುವುದಿಲ್ಲ. ಪರಸ್ಪರ ಸ್ಪರ್ಶ, ಅಪ್ಪುಗೆ, ಚುಂಬನ, ಪ್ರೀತಿಯ ಮಾತುಗಳು, ಒಟ್ಟಾಗಿ ಕಳೆಯುವ ಮಧುರವಾದ ಸಮಯ.. ಇತ್ಯಾದಿಗಳು, ಸಂಭೋಗಕ್ಕೂ ಮೊದಲು ನಡೆಯುವ ಕ್ರಿಯೆಗಳು. ಇವು ಇಬ್ಬರ ನಡುವಿನ ಆಕರ್ಷಣೆಯನ್ನು ಹೆಚ್ಚಿಸಿ ದೇಹವನ್ನು ಪೂರ್ಣ ಲೈಂಗಿಕ ಅನುಭವಕ್ಕೆ ಸಿದ್ಧಪಡಿಸುತ್ತವೆ. ಈ ಎಲ್ಲಾ ಕ್ರಿಯೆಗಳನ್ನು ಸಂಭೋಗದ ಸಮಯದಲ್ಲಿಯೂ ಮುಂದುವರೆಸಿದಾಗ ಇಬ್ಬರಿಗೂ ತೃಪ್ತಿಕರ ಅನುಭವವಾಗುತ್ತದೆ. ನಿಮ್ಮ ಸಂಗಾತಿ ತನಗೆ ಸ್ಖಲನವಾಗುತ್ತಿಲ್ಲ ಎನ್ನುವಾಗ, ತೃಪ್ತಿಕರ ಲೈಂಗಿಕ ಅನುಭವವಾಗುತ್ತಿಲ್ಲ ಎಂದೂ ಹೇಳುತ್ತಿದ್ದಾರೆ. ಹಾಗಾಗಿ ಲೈಂಗಿಕತೆಯ ಬಗೆಗಿನ ನಿಮ್ಮಿಬ್ಬರ ಆಸೆ ನಿರೀಕ್ಷೆ ಕಲ್ಪನೆಗಳೇನು ಎನ್ನುವುದನ್ನು ಮುಕ್ತವಾಗಿ ಚರ್ಚೆಮಾಡಿ. ನಿಮ್ಮ ಮನವನ್ನೂ ಅವರೆದುರಿಗೆ ತೆರೆದಿಡಿ. ನಿಧಾನವಾಗಿ ಪರಸ್ಪರ ಪರಿಚಯ, ಆತ್ಮೀಯತೆ ಹೆಚ್ಚಿದಂತೆ ಲೈಂಗಿಕ ಅನುಭವದ ಗುಣಮಟ್ಟವೂ ಹೆಚ್ಚುತ್ತದೆ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ.

bhoomika@prajavani.co.in

*AVAIL ATTRACTIVE GIFTS ON UPI PAYMENTS.

KR PURAM: No: 44/2, JCMS COMPLEX, OLD MADRAS ROAD-NH 75 (NEAR SUB REGISTRAR OFFICE), KRISHNARAJAPURAM (KR PURAM), BENGALURU - 560 036. PH: 080 - 2990 1515

RR NAGAR: No: 32 & 33, JAWAHARLAL NEHRU ROAD, BEML 3RD STAGE, (NEAR BEML COMPLEX, NEXT TO GANESHA TEMPLE) RAJA RAJESWARI NAGAR (RR NAGAR), BENGALURU - 560 060. PH: 080 - 2334 1515.

Shop online at: www.oriana.com | mail@grtjewels.com

GRT LIVE VIDEO SHOPPING Shop from the comfort of your home

❦ ಸುಭಾಷಿತ ❦

ಓದಿ ಮರುಳಾಗಬಾರದು, ಓದದೆಯೂ ಮರುಳಾಗಬಾರದು. ಓದಿ ಹುರುಳಾಗಬೇಕು.

–ವಿ.ಕೃ.ಗೋಕಾಕ

ರಾಜ್ಯದ ಅಪಾಯಕಾರಿ ರಸ್ತೆಗಳು ಸಿಎಜಿ ವರದಿ ಕಣ್ತೆರೆದು ನೋಡಿ

‘ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯ ರಸ್ತೆಗಳು ಅತ್ಯಂತ ಅಪಾಯಕಾರಿ’ ಎಂಬ ಅಂಶವನ್ನು ವಿಧಾನಮಂಡಲದಲ್ಲಿ ಮೊನ್ನೆಯಷ್ಟೇ ಮಂಡಿಸಲಾದ ಮಹಾಲೇಖಪಾಲರ (ಸಿಎಜಿ) ವರದಿಯಲ್ಲಿ ಎತ್ತಿ ತೋರಲಾಗಿದೆ. ರಾಜ್ಯದ ಕೆಲವು ಹೆದ್ದಾರಿಗಳು, ಪ್ರಮುಖ ಜಿಲ್ಲಾ ರಸ್ತೆಗಳ ಸ್ಥಿತಿ ಕೂಡ ಇದಕ್ಕಿಂತ ಭಿನ್ನವಾಗಿಯೇನೂ ಇಲ್ಲ ಎನ್ನುವುದು ವರದಿಯ ಮೇಲೆ ಕಣ್ಣಾಡಿಸಿದಾಗ ಗೊತ್ತಾಗುತ್ತದೆ. ‘ಅಂಗೈ ಹುಣ್ಣಿಗೆ ಕನ್ನಡಿ ಬೇಕೇ’ ಎನ್ನುವಂತೆ ರಾಜಧಾನಿಯ ಜನರಿಗೆ ಇಲ್ಲಿನ ರಸ್ತೆಗಳ ದುಃಸ್ಥಿತಿ ಕುರಿತು ಚೆನ್ನಾಗಿಯೇ ತಿಳಿದಿದೆ. ರಸ್ತೆ ಗುಂಡಿಗಳ ಕಾರಣದಿಂದ ಕಳೆದ ಏಳು ತಿಂಗಳುಗಳಲ್ಲಿ ಸಂಭವಿಸಿರುವ ದುರ್ಘಟನೆಗಳಲ್ಲಿ ಐವರು ತಮ್ಮ ಅಮೂಲ್ಯ ಜೀವವನ್ನು ಕಳೆದುಕೊಂಡಿದ್ದಾರೆ. ಕಳೆದ ವಾರವಷ್ಟೇ 27ರ ಹರೆಯದ ಯುವಕನೊಬ್ಬ ರಸ್ತೆಗುಂಡಿಗೆ ಬಲಿಯಾದ ಸುದ್ದಿ ಇನ್ನೂ ಕಾಡುತ್ತಿದೆ. ಯುವಕನ ಈ ದುರಂತದ ಸಾವಿಗಾಗಿ ಹೈಕೋರ್ಟ್ ಸಹ ಸಂತಾಪ ವ್ಯಕ್ತಪಡಿಸಿದೆ. ಹಾಗೆ ನೋಡಿದರೆ, ರಸ್ತೆಗಳ ದುಃಸ್ಥಿತಿ ವಿಷಯದಲ್ಲಿ ಜನರ ಕೊರಳ ಧ್ವನಿಯಾಗಿ ನಿಂತಿರುವ ಹೈಕೋರ್ಟ್, ಬಿಬಿಎಂಪಿಯನ್ನು ಮೇಲಿಂದ ಮೇಲೆ ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡಿದೆ. ಆದರೆ, ದಪ್ಪಚರ್ಮದ ಆಡಳಿತ ವ್ಯವಸ್ಥೆಗೆ ಅದು ತಾಗಿಯೇ ಇಲ್ಲ. ಪಟ್ಟುಬಿಡದ ಕೋರ್ಟ್, ಬಿಬಿಎಂಪಿ ಮುಖ್ಯ ಎಂಜಿನಿಯರ್ (ರಸ್ತೆ ಮೂಲಸೌಕರ್ಯ) ಬಿ.ಎಸ್. ಪ್ರಹ್ಲಾದ್ ಅವರನ್ನು ಉದ್ದೇಶಿಸಿ, ‘ಈಗಿಂದೀಗಲೇ ನಿಮ್ಮನ್ನು ಸೇವೆಯಿಂದ ಅಮಾನತು ಮಾಡಿ ಜೈಲಿಗೆ ಅಟ್ಟುವಂತೆ ಆದೇಶಿಸಬೇಕಾಗುತ್ತದೆ’ ಎಂದು ಕಡು ಕೋಪದಿಂದ ಎಚ್ಚರಿಕೆಯನ್ನೂ ನೀಡಿದೆ. ರಸ್ತೆಗುಂಡಿಗಳ ಕುರಿತು ಎರಡೇ ವಾರಗಳಲ್ಲಿ ಸಮೀಕ್ಷೆ ನಡೆಸಿ ವರದಿ ನೀಡಬೇಕು, ದುರಸ್ತಿಗೆ ಕ್ರಮವನ್ನೂ ಕೈಗೊಳ್ಳಬೇಕು ಎಂದು ಕೂಡ ತಾಕೀತು ಮಾಡಿದೆ. ರಸ್ತೆಗುಂಡಿಗಳನ್ನು ಸಮರೋಪಾದಿಯಲ್ಲಿ ಮುಚ್ಚುವಂತೆ ಮುಖ್ಯಮಂತ್ರಿ, ಸಚಿವರಿಂದ ಆಗಾಗ ಆದೇಶ ಪಡೆಯುವುದು, ಗಡುವನ್ನು ಮುಂದಕ್ಕೆ ಹಾಕುತ್ತಾ ಹೋಗುವುದು ಬಿಬಿಎಂಪಿ ಅಧಿಕಾರಿಗಳ ಪಾಲಿಗೆ ಒಂದು ರೀತಿಯಲ್ಲಿ ಚಾಳಿಯಾಗಿಬಿಟ್ಟಿದೆ.

ಅಧಿಕಾರಿಗಳು, ಗುತ್ತಿಗೆದಾರರ ವಿರುದ್ಧ ಕಠಿಣ ಕ್ರಮಗಳಿಗೆ ಮುಂದಾಗದಿದ್ದರೆ ರಸ್ತೆ ಗುಂಡಿಗಳಿಂದ ಆಗುವ ಅನಾಹುತಗಳಿಗೆ ಕೊನೆ ಎಂಬುದೇ ಇರುವುದಿಲ್ಲ

ರಸ್ತೆ ವಿನ್ಯಾಸದಲ್ಲಿನ ದೋಷಗಳು, ಕಣ್ಣಿಗೆ ರಾಚುವ ಫಲಕಗಳು ಮತ್ತು ಎಲ್ಲೆಂದರಲ್ಲಿ ಅಳವಡಿಸಿರುವ ವೇಗ ನಿಯಂತ್ರಕಗಳು ರಾಜ್ಯದ ವಿವಿಧ ರಸ್ತೆಗಳಲ್ಲಿ ಅಪಘಾತಕ್ಕೆ ಕಾರಣವಾಗುತ್ತಿವೆ. ಗುಂಡಿ ಗಳ ಸೃಷ್ಟಿ ಮತ್ತು ಅವ್ಯವಸ್ಥೆಯಿಂದ ಕೂಡಿರುವ ಪಾದಚಾರಿ ಮಾರ್ಗ, ಅಸಮರ್ಪಕ ಒಳಚರಂಡಿ ವ್ಯವಸ್ಥೆ– ಇವು ರಸ್ತೆಗಳ ದುಃಸ್ಥಿತಿಗೆ ಕಾರಣವಾಗಿವೆ ಎಂದೂ ಸಿಎಜಿ ವರದಿ ಹೇಳಿದೆ. ಬೆಂಗಳೂರಿನಲ್ಲಿ 1,400 ಕಿ.ಮೀ. ಉದ್ದದ ಮುಖ್ಯ ರಸ್ತೆಗಳಿದ್ದು, ಅದರಲ್ಲಿ ಶೇ 43ರಷ್ಟು ರಸ್ತೆಗಳಲ್ಲಿ ಸರಿಯಾದ ಪಾದಚಾರಿ ಮಾರ್ಗಗಳೇ ಇಲ್ಲ ಎನ್ನುವುದರತ್ತಲೂ ವರದಿ ಬೊಟ್ಟುಮಾಡಿ ತೋರಿದೆ. ಈ ಪಾದಚಾರಿ ಮಾರ್ಗಗಳನ್ನು ಅಂಗಡಿಗಳು, ಹೋಟೆಲ್‌ಗಳು, ಪಾರ್ಕಿಂಗ್ ತಾಣಗಳು, ತ್ಯಾಜ್ಯ ಸಂಗ್ರಹ ತೊಟ್ಟಿಗಳು ಹಾಗೂ ವಿದ್ಯುತ್ ಪರಿವರ್ತಕಗಳ ಕಂಬಗಳು ಆಕ್ರಮಿಸಿರುವುದನ್ನು ಪತ್ತೆ ಮಾಡಲು ಯಾವ ದುರ್ಬೀನೂ ಬೇಕಾಗಿಲ್ಲ. ಅವುಗಳನ್ನು ತೆರವುಗೊಳಿಸಿ, ಪಾದಚಾರಿ ಮಾರ್ಗಗಳನ್ನು ಅಡೆತಡೆ ಮುಕ್ತವಾಗಿಸಲು ಅಧಿಕಾರಿಗಳಿಗೆ ಮನಸ್ಸಿಲ್ಲ ಅಷ್ಟೆ.

ಕಡತಗಳಲ್ಲಿ ಮಾತ್ರ ರಸ್ತೆ ‘ಸುಧಾರಣೆ’ಯಾದ ಹಲವು ಹಗರಣಗಳನ್ನು ಲೋಕಾಯುಕ್ತ ತನಿಖೆಗಳು, ಸಿಎಜಿ ವರದಿಗಳು ಈ ಹಿಂದೆ ಹಲವು ಬಾರಿ ಬಯಲು ಮಾಡಿವೆ. ಬೆಂಗಳೂರಿನ ರಸ್ತೆಗಳಿಗೆ ಕಳೆದ ಹತ್ತು ವರ್ಷಗಳಲ್ಲಿ ಮಾಡಿರುವ ಖರ್ಚಿನ ಲೆಕ್ಕ ನೋಡಿದರೆ ಅವುಗಳ ಮೇಲ್ಮೈ ನುಣ್ಣಗಾಗಿ ಫಳಫಳ ಹೊಳೆಯಬೇಕಿತ್ತು. ಆದರೆ, ಅವು ಗುಂಡಿಮಯವಾಗಿರುವುದು ಎಲ್ಲ ಕಥೆಯನ್ನು ಹೇಳುತ್ತವೆ. ಗುತ್ತಿಗೆ ನಿರ್ವಹಣೆ ಅವಧಿಯಲ್ಲಿ ಮತ್ತೆ ಗುಂಡಿ ಕಾಣಿಸಿಕೊಂಡರೆ ಗುತ್ತಿಗೆದಾರರಿಂದಲೇ ಅದನ್ನು ದುರಸ್ತಿ ಮಾಡಿಸಬೇಕು. ಆದರೆ, ಗುತ್ತಿಗೆದಾರರ ಜತೆ ಎಂಜಿನಿಯರ್‌ಗಳದ್ದು ಎಂತಹ ‘ಮೈತ್ರಿ’ ಎಂದರೆ, ಗುಂಡಿ ಬಿದ್ದಾಗ ಅವರಿಂದ ದುರಸ್ತಿ ಮಾಡಿಸುವ ಗೋಜಿಗೇ ಹೋಗುವುದಿಲ್ಲ. ಸಾರ್ವಜನಿಕ ಒತ್ತಡ ತೀರಾ ಹೆಚ್ಚಾದಾಗ ಸರ್ಕಾರವೇ ಬಿಡುಗಡೆ ಮಾಡುವ ದುಡ್ಡಿನಿಂದ ದುರಸ್ತಿ ಕೆಲಸ ನಡೆಯುತ್ತದೆ. ಗುತ್ತಿಗೆದಾರರು ಹೊಣೆಯಿಂದ ನುಣುಚಿಕೊಳ್ಳಲು ಇದರಿಂದ ಆಸ್ಪದ ಮಾಡಿಕೊಟ್ಟಂತಾಗುತ್ತದೆ. ರಸ್ತೆಗಳ ಅವ್ಯವಸ್ಥೆಗೆ ಸಂಬಂಧಿಸಿದಂತೆ ಶಾಶ್ವತವಾದ ಪರಿಹಾರ ಕಂಡುಕೊಳ್ಳಲು ‘ರಸ್ತೆ ಇತಿಹಾಸ’ ನಿರ್ವಹಣೆ ವ್ಯವಸ್ಥೆಯೊಂದನ್ನು ಈ ಹಿಂದೆ ರೂಪಿಸಲಾಗಿತ್ತು. ಆದರೆ, ಕಾರ್ಪೊರೇಟರ್‌ಗಳು ಅದನ್ನು ಜಾರಿಗೊಳಿಸಲು ಬಿಟ್ಟಿರಲಿಲ್ಲ. ಮುಂದೆ ಜಾರಿಗೆ ಬಂತಾದರೂ ಅದು ಸಮರ್ಪಕವಾಗಿರಲಿಲ್ಲ. ‘ರಸ್ತೆ ಇತಿಹಾಸ’ ನಿರ್ವಹಣೆ ವ್ಯವಸ್ಥೆ ಸರಿಯಾಗಿ ಅನುಷ್ಠಾನಕ್ಕೆ ಬಂದಿದ್ದರೆ ಯಾವ ರಸ್ತೆ ಯಾವಾಗ ದುರಸ್ತಿಯಾಗಿದೆ, ಅದನ್ನು ನಿರ್ವಹಣೆ ಮಾಡಬೇಕಾದವರು ಯಾರು, ಗುಂಡಿಗಳು ಎಷ್ಟಿವೆ, ಅವುಗಳನ್ನು ಯಾವಾಗ ಮುಚ್ಚಲಾಗಿದೆ, ಯಾವ ಎಂಜಿನಿಯರ್ ಆ ರಸ್ತೆಯ ಉಸ್ತುವಾರಿಯಲ್ಲಿದ್ದಾರೆ ಎಂಬೆಲ್ಲ ವಿವರಗಳು ಭೌಗೋಳಿಕ ಮಾಹಿತಿ ವ್ಯವಸ್ಥೆಯ (ಜಿಐಎಸ್) ಮೂಲಕ ದಾಖಲಾಗುತ್ತಿದ್ದವು. ಆಗ ಹೊಣೆಯಿಂದ ನುಣುಚಿಕೊಳ್ಳಲು ಯಾರಿಗೂ ಅವಕಾಶವೇ ಇರುತ್ತಿರಲಿಲ್ಲ. ಪ್ರತಿಯೊಂದು ರಸ್ತೆಯ ಇತಿಹಾಸವನ್ನೂ ನಿರ್ವಹಣೆ ಮಾಡುವಂತೆ ನೋಡಿಕೊಳ್ಳುವುದು ಮುಖ್ಯಮಂತ್ರಿಯವರ ಹೊಣೆ. ಬೆಂಗಳೂರು ನಗರದ ರಸ್ತೆಗಳು ಮಾತ್ರವಲ್ಲದೆ ರಾಜ್ಯದ ಎಲ್ಲ ರಸ್ತೆಗಳು ಸದಾ ಸುಸ್ಥಿತಿಯಲ್ಲಿ ಇರುವಂತೆ ಎಚ್ಚರವನ್ನೂ ವಹಿಸಬೇಕು. ಪ್ರತೀ ರಸ್ತೆಯ ದುಃಸ್ಥಿತಿಗೆ ಸಂಬಂಧಿಸಿದಂತೆ ನಿರ್ದಿಷ್ಟ ಅಧಿಕಾರಿಯನ್ನು ಹೊಣೆಯಾಗಿಸಬೇಕು. ಗುತ್ತಿಗೆ ಅವಧಿಯಲ್ಲಿ ರಸ್ತೆಯನ್ನು ಸರಿಯಾಗಿ ನಿರ್ವಹಿಸದ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಂಡು, ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು. ಇಂತಹ ಕಠಿಣ ಕ್ರಮಗಳಿಗೆ ಮುಂದಾಗದಿದ್ದರೆ ರಸ್ತೆಗುಂಡಿಗಳಿಂದ ಆಗುವ ಅನಾಹುತಗಳಿಗೆ ಕೊನೆ ಎಂಬುದೇ ಇರುವುದಿಲ್ಲ.

ದಿನದ ಟ್ವೀಟ್

ವಿಶ್ವಸಂಸ್ಥೆ ವೈಫಲ್ಯ

ಉಕ್ರೇನ್‌ನಲ್ಲಿ ರಕ್ತದೋಕುಳಿ ಹರಿಯುತ್ತಿರುವಾಗ ಹೋಳಿ ಹಬ್ಬ ಆಚರಿಸುವುದು ತುಂಬಾ ಕಷ್ಟವಾಗುತ್ತಿದೆ. ಅಮಾಯಕರ ಮೇಲೆ ಎಂತಹ ಅರ್ಥಹೀನವಾದ ಹಿಂಸಾಚಾರ. ಸ್ವಾಭಿಮಾನಿ ದೇಶವೊಂದು ಕೆಲವೇ ವಾರಗಳಲ್ಲಿ ಶಿಥಿಲಾವಸ್ಥೆ ತಲುಪಿತು. ನಿಜವಾಗಿಯೂ ನಮ್ಮ ಅತ್ಯಂತ ಕೆಟ್ಟ ಶತ್ರುಗಳು ನಾವೇ ಆಗಿರುತ್ತೇವೆ. ವಿಶ್ವಸಂಸ್ಥೆಯು ಹೀನಾಯ ಸ್ಥಿತಿಯಲ್ಲಿದೆ ಮತ್ತು ಸಂಪೂರ್ಣ ವಿಫಲವಾಗಿದೆ. ಅದು ಯಾವುದಕ್ಕೂ ಪ್ರಯೋಜನವಿಲ್ಲ ಎನ್ನುವುದಾದರೆ ಅದನ್ನು ವಿಸರ್ಜಿಸುವುದೇ ಸೂಕ್ತ.

ಸುಧೀರ್ ಮೆಹ್ತಾ, ಉದ್ಯಮಿ

ಕಿಡಿನುಡಿ



ದೇಶದ ಮರಗಳು ಮತ್ತು ಅರಣ್ಯಗಳಿಗೆ ಸಂಬಂಧಿಸಿದ ಸಮಸ್ಯೆಗಳ ಕುರಿತು ಸಂಸತ್ತಿನಲ್ಲಿ ನಾನು ಅರ್ಧ ಡಜನ್‌ನಷ್ಟು ಪ್ರಶ್ನೆಗಳನ್ನು ಕೇಳಿದ್ದೆ– ಉತ್ತರಕ್ಕೆ ಒಂದೂ ಪರಿಗಣಿತವಾಗಿಲ್ಲ.

ಜವಾಹರ್ ಸರ್ಕಾರ್, ರಾಜ್ಯಸಭಾ ಸದಸ್ಯ, ತೃಣಮೂಲ ಕಾಂಗ್ರೆಸ್ ಮುಖಂಡ

25 ವರ್ಷಗಳ ಹಿಂದೆ

ಬುಧವಾರ, 19-3-1997

● ಸರ್ಚಾರ್ಜ್ ರದ್ದು; ರೈತರಿಗೆ ರಿಯಾಯಿತಿ; ಸಿಮೆಂಟ್, ಸಿಗರೇಟು ತುಟ್ಟಿ

ಬೆಂಗಳೂರು, ಮಾರ್ಚ್ 18– ರೈತರಿಗೆ ಹೆಚ್ಚು ರಿಯಾಯಿತಿಗಳನ್ನು ಪ್ರಕಟಿಸಿ, ಎಲ್ಲ ವಸ್ತುಗಳ ಮೇಲಿನ ಸರ್ಚಾರ್ಜನ್ನು ರದ್ದುಗೊಳಿಸುವ ಮೂಲಕ ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ರಾಜ್ಯ ವಿಧಾನಸಭೆಯಲ್ಲಿ ಜನಸಾಮಾನ್ಯರಿಗೆ ಹೆಚ್ಚು ಹೊರೆಯಾಗದ ಮುಂಗಡ ಪತ್ರವನ್ನು ಮಂಡಿಸಿದರು.

ಕೃಷಿ ಸಲಕರಣೆಗಳು, ರಸಗೊಬ್ಬರಗಳಿಗೆ ರಿಯಾಯಿತಿ; ಮದ್ಯ, ಸಿಗರೇಟಿನ ಮೇಲೆ ತೆರಿಗೆ ಏರಿಕೆ; ಎಲೆಕ್ಟ್ರಾನಿಕ್ಸ್ ವಸ್ತುಗಳ ಕರಭಾರ ಇಳಿತ; ತೆರಿಗೆ ಹಂತಗಳ ಸರಳೀಕರಣ– ಇವು ಇಂದು ವಿರೋಧಪಕ್ಷಗಳ ಪ್ರತಿಭಟನೆಯ ನಡುವೆ ಮಂಡಿಸಲಾದ ರಾಜ್ಯ ಮುಂಗಡ ಪತ್ರದ ಮುಖ್ಯಾಂಶಗಳು.

● ಇನ್ನೊಬ್ಬ ಲೇಖಕರಿಂದ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನಿರಾಕರಣೆ

ಮೈಸೂರು, ಮಾರ್ಚ್ 18– ‘ಸಹಲೇಖಕರೊಬ್ಬರು ಮನಸ್ಸು ನೊಂದು ಬಹುಮಾನವನ್ನು ತಿರಸ್ಕರಿಸಿರುವಾಗ, ಆ ಬಹುಮಾನವನ್ನು ಸ್ವೀಕರಿಸಲು ನನ್ನ ಮನಸ್ಸು ಒಪ್ಪುತ್ತಿಲ್ಲ’ ಎಂಬ ಕಾರಣವನ್ನು ನೀಡಿ ಪ್ರೊ. ಜೆ.ಆರ್.ಲಕ್ಷ್ಮಣರಾವ್ ಅವರು ತಮಗೆ ನೀಡಲಾಗಿರುವ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ನಿರಾಕರಿಸಿದ್ದಾರೆ.

‘ಧರ್ಮಕಾರಣ’ ಕಾದಂಬರಿಯ ಕರ್ತೃ ಡಾ. ಪಿ.ವಿ.ನಾರಾಯಣ ಅವರು, ಈ ಕೃತಿಯ ಸಂಬಂಧದಲ್ಲಿ ಎದ್ದಿರುವ ವಿವಾದದ ಹಿನ್ನೆಲೆಯಲ್ಲಿ ಮನನೊಂದು, ಅಕಾಡೆಮಿಯ ಪ್ರಶಸ್ತಿಯನ್ನು ತಿರಸ್ಕರಿಸಿದ್ದನ್ನು ತಿಳಿದ ಪ್ರೊ.ರಾವ್ ಈ ತೀರ್ಮಾನಕ್ಕೆ ಬಂದಿದ್ದಾರೆ.

50 ವರ್ಷಗಳ ಹಿಂದೆ

ಭಾನುವಾರ, 19-3-1972

● ದೇವರಾಜ ಅರಸು ರಾಜ್ಯದ ನೂತನ ಮುಖ್ಯಮಂತ್ರಿ

ಬೆಂಗಳೂರು, ಮಾರ್ಚ್ 18– ಪಕ್ಷದಲ್ಲಿ ಅಪಾರ ಬಹುಮತದ ಬೆಂಬಲವಿರುವ ಶ್ರೀ ಡಿ. ದೇವರಾಜ ಅರಸು ಅವರನ್ನು ಇಂದು ನಡೆದ ವಿಧಾನಮಂಡಲದ ಕಾಂಗ್ರೆಸ್ ಪಕ್ಷದ ಸಭೆ ಪ್ರಧಾನಿ ಅವರ ಆಶೀರ್ವಾದದೊಡನೆ, ತನ್ನ ನಾಯಕನನ್ನಾಗಿ ಸರ್ವಾನುಮತದಿಂದ ಚುನಾಯಿಸಿತು.

ಪ್ರದೇಶ ಸಮಿತಿ ಅಧ್ಯಕ್ಷರಾದ ಶ್ರೀ ಅರಸು ಅವರು ರಾಜ್ಯದಲ್ಲಿ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಪ್ರಥಮ ಮುಖ್ಯಮಂತ್ರಿಯಾಗಲಿದ್ದಾರೆ.

ಸದ್ಯದಲ್ಲಿ ಢಾಕಾದಲ್ಲಿರುವ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರು ಪಕ್ಷದ ನಾಯಕ ಸ್ಥಾನಕ್ಕೆ ಶ್ರೀ ಅರಸು ಅವರನ್ನು ಸೂಚಿಸುವ ಮುನ್ನ ಬೆಳಿಗ್ಗೆ ಸೇರಿದ್ದ ಪಕ್ಷದ ಸಭೆ, ‘ಪಕ್ಷದ ನಾಯಕ ಸ್ಥಾನಕ್ಕೆ ನಾಮಕರಣ ಮಾಡಬೇಕು’ ಎಂದು ಪ್ರಧಾನಿ ಅವರನ್ನು ಪ್ರಾರ್ಥಿಸಿ, ಅವರಿಗೆ ಆ ಅಧಿಕಾರ ನೀಡಿ ಒಮ್ಮತದಿಂದ ನಿರ್ಣಯ ಮಾಡಿತು.

ಮಾರುಕಟ್ಟೆಗಳ ವಿವೇಚನೆಗೆ ಎಲ್ಲವನ್ನೂ ಬಿಡುವುದರ ಹಿಂದಿನ ವಿವೇಕವನ್ನು ಅರ್ಥಶಾಸ್ತ್ರಜ್ಞರು ಪ್ರಶ್ನಿಸುತ್ತಿದ್ದಾರೆ

ಮುಕ್ತ ಮಾರುಕಟ್ಟೆಗೆ ಪರ್ಯಾಯ ಯಾವುದು?

ವಿಶ್ಲೇಷಣೆ

ಸ್ಟೀವ್ ಲೊಹರ್

ಅಮೆರಿಕದ ಹೆಚ್ಚಿನ ಜನರ ಪಾಲಿಗೆ ವೇತನದ ಮೊತ್ತ ಹೆಚ್ಚೂಕಡಿಮೆ ಒಂದೇ ಮಟ್ಟದಲ್ಲಿ ಉಳಿದು ದಶಕಗಳು ಸಂದಿವೆ. ಅಸಮಾನತೆಯು ತೀವ್ರ ಮಟ್ಟದಲ್ಲಿ ಏರಿಕೆ ಆಗಿದೆ. ಜಾಗತೀಕರಣ ಮತ್ತು ತಂತ್ರಜ್ಞಾನವು ಕೆಲವರನ್ನು ಶ್ರೀಮಂತಗೊಳಿಸಿದೆ. ಆದರೆ, ಇದೇ ಸಂದರ್ಭದಲ್ಲಿ ಉದ್ಯೋಗ ನಷ್ಟಕ್ಕೆ ಅವು ಇಂಬು ಕೊಟ್ಟಿವೆ. ಸಮುದಾಯಗಳನ್ನು ಬಡವಾಗಿಸಿವೆ.

ಮುಕ್ತ ಮಾರುಕಟ್ಟೆಗಳು, ಮುಕ್ತ ವ್ಯಾಪಾರ ಮತ್ತು ಸರ್ಕಾರದ ಪಾತ್ರವು ಮಾರುಕಟ್ಟೆಯಲ್ಲಿ ಹೆಚ್ಚಿರಬಾರದು ಎಂದು ಹೇಳುವ ಚಿಂತನಾ ಕ್ರಮದಿಂದ ಹುಟ್ಟಿಕೊಂಡ ಸರ್ಕಾರದ ನೀತಿಗಳು, ಕಾರ್ಪೊರೇಟ್ ಆಚರಣೆಗಳು ಈ ಸಮಸ್ಯೆಗಳಿಗೆ ಒಂದಿಷ್ಟು ಕೊಡುಗೆ ನೀಡಿವೆ ಎಂದು ಹಲವು ಅರ್ಥಶಾಸ್ತ್ರಜ್ಞರು ವಾದಿಸುತ್ತಿದ್ದಾರೆ. ಅರ್ಥವ್ಯವಸ್ಥೆಯನ್ನು ಈಗ ಹೊಸ ಆಲೋಚನೆಗಳು ಮುನ್ನಡೆಸಬೇಕು ಎಂದು ಒಂದಿಷ್ಟು ಜನ ದಾನಿಗಳು ಹಾಗೂ ಅಕಾಡೆಮಿಕ್ ವಲಯದ ಪ್ರಮುಖರು ಪ್ರತಿಪಾದಿಸುತ್ತಿದ್ದಾರೆ. ದಿ ವಿಲಿಯಂ ಆ್ಯಂಡ್ ಫ್ಲೋರಾ ಹ್ಯೂಲೆಟ್ ಫೌಂಡೇಷನ್ ಮತ್ತು ಒಮಿದ್ಯಾರ್ ನೆಟ್‌ವರ್ಕ್ ಈಚೆಗೆ, ಪರ್ಯಾಯ ಆರ್ಥಿಕ ವ್ಯವಸ್ಥೆಗಳ ಬಗ್ಗೆ ಸಂಶೋಧನೆಗೆ 41 ಮಿಲಿಯನ್ ಡಾಲರ್‌ಗೂ (ಸುಮಾರು ₹ 312 ಕೋಟಿ) ಹೆಚ್ಚು ಹಣ ಒದಗಿಸುವುದಾಗಿ ಘೋಷಿಸಿವೆ.

‘ನವ ಉದಾರವಾದವು ಸತ್ತಿದೆ. ಆದರೆ, ಅದಕ್ಕೆ ಪರ್ಯಾಯವಾಗಿ ಯಾವುದೇ ವ್ಯವಸ್ಥೆಯನ್ನು ನಾವು ಬೆಳೆಸಿಲ್ಲ’ ಎಂದು ಹೇಳುತ್ತಾರೆ ಹ್ಯೂಲೆಟ್ ಪ್ರತಿಷ್ಠಾನದ ಅಧ್ಯಕ್ಷ ಲ್ಯಾರಿ ಕ್ರೇಮರ್. ಸಂಶೋಧನಾ ಕಾರ್ಯಕ್ರಮಗಳನ್ನು ಆರಂಭಿಸಲು ಮೊದಲ ಹಂತದಲ್ಲಿ ಅನುದಾನ ಪಡೆದುಕೊಂಡ ಸಂಸ್ಥೆಗಳ ಸಾಲಿನಲ್ಲಿ ಹಾರ್ವರ್ಡ್ ವಿಶ್ವವಿದ್ಯಾಲಯದ ಕೆನಡಿ ಸ್ಕೂಲ್, ಹೋವಾರ್ಡ್ ವಿಶ್ವವಿದ್ಯಾಲಯ, ಜಾನ್ ಹಾಪ್ಕಿನ್ಸ್ ವಿಶ್ವವಿದ್ಯಾಲಯ, ಮೆಸಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಎಂಐಟಿ) ಮತ್ತು ಸಾಂತಾ ಫೆ ಇನ್‌ಸ್ಟಿಟ್ಯೂಟ್ ಸೇರಿವೆ.

ಫೋರ್ಡ್ ಪ್ರತಿಷ್ಠಾನ ಹಾಗೂ ಓಪನ್ ಸೊಸೈಟಿ ಪ್ರತಿಷ್ಠಾನ ಕೂಡ ಈ ಕಾರ್ಯಕ್ರಮಗಳಲ್ಲಿ ತಾವು ಕೈಜೋಡಿಸುವುದಾಗಿ ಘೋಷಿಸಿವೆ. ಇದೇ ವರ್ಷದಲ್ಲಿ ವಿದೇಶಗಳಲ್ಲಿ ಸಂಶೋಧನೆಗೆ ಉತ್ತೇಜನ ನೀಡಲು ಅನುದಾನ ನೀಡುವುದಾಗಿ ಹೇಳಿವೆ ಎಂದು ಕ್ರೇಮರ್ ತಿಳಿಸಿದರು. ಸಂಶೋಧನಾ ಕೇಂದ್ರಗಳಿಗೆ ಜಾಗ ಒದಗಿಸಲು, ವಿದ್ವಾಂಸರನ್ನು ಒಂದೆಡೆ ಸೇರಿಸಲು ಮತ್ತು ಬೇರೆ ಬೇರೆ ಜ್ಞಾನಶಾಖೆಗಳನ್ನು ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಕರೆತರಲು, ಅವರು ಸಂಶೋಧನೆಯ ಮೂಲಕ ಕಂಡುಕೊಂಡಿದ್ದನ್ನು ಪಸರಿಸಲು ಈ ವಿಶ್ವವಿದ್ಯಾಲಯಗಳು ಒಪ್ಪಿಕೊಂಡಿವೆ.

ಇನ್ನೂ ಬೇರೆ ಬೇರೆ ದಾನಿಗಳು ಹಾಗೂ ವಿಶ್ವವಿದ್ಯಾಲಯಗಳಿಂದಲೂ ಇದೇ ಬಗೆಯ ಸ್ಪಂದನ ದೊರೆಯುವ ಭರವಸೆ ಇದೆ. ‘ಹೊಸ ಬೆಳೆಗೆ ಅಗತ್ಯವಿರುವ ನೀರು ಮತ್ತು ಗೊಬ್ಬರ ಪೂರೈಸುವುದು ನಮ್ಮ ಕೆಲಸ’ ಎಂದು ಕ್ರೇಮರ್ ಹೇಳಿದರು.

ಸಾರ್ವಜನಿಕ ನೀತಿಗಳು ಮತ್ತು ಸಾರ್ವಜನಿಕ ಚರ್ಚೆಗಳಿಗೆ ಅಗತ್ಯವಿರುವ ಚೌಕಟ್ಟನ್ನು ಹೊಸ ಆಲೋಚನೆಗಳ ಮೂಲಕ ರೂಪಿಸಬಹುದು ಎಂಬ ನಂಬಿಕೆ ಈ ಸಂಶೋಧನೆಯ ಯತ್ನಗಳ ಹಿಂದೆ ಇದೆ. ಮುಕ್ತ ಮಾರುಕಟ್ಟೆ ವ್ಯವಸ್ಥೆಯ ದೃಷ್ಟಿಕೋನವನ್ನು 1960, 1970ರ ದಶಕದಲ್ಲಿ ಬಹಳ ಗಟ್ಟಿಯಾಗಿ ಪ್ರಚುರಪಡಿಸಲಾಯಿತು. ಷಿಕಾಗೊ ವಿಶ್ವವಿದ್ಯಾಲಯದ ಅರ್ಥಶಾಸ್ತ್ರಜ್ಞರು ಹೀಗೆ ಪ್ರಚುರಪಡಿಸುವ ಕೆಲಸದಲ್ಲಿ ಮುಂಚೂಣಿಯಲ್ಲಿ ಇದ್ದರು.

1980ರ ದಶಕದಲ್ಲಿ ಅಮೆರಿಕದ ರೊನಾಲ್ಡ್ ರೇಗನ್ ನೇತೃತ್ವದ ಸರ್ಕಾರ, ಬ್ರಿಟನ್ನಿನ ಮಾರ್ಗರೇಟ್ ಥ್ಯಾಚರ್ ನೇತೃತ್ವದ ಸರ್ಕಾರ ಮುಕ್ತ ಮನಸ್ಸಿನಿಂದ ನವ–ಉದಾರವಾದಿ ವ್ಯವಸ್ಥೆಯನ್ನು ಅಪ್ಪಿಕೊಂಡವು. ಮುಕ್ತ ವ್ಯಾಪಾರ ಒಪ್ಪಂದ, ಹಣಕಾಸಿನ ನಿಯಂತ್ರಣ ಸಡಿಲಿಕೆಯ ವಿಚಾರಗಳಲ್ಲಿ ಬಿಲ್ ಕ್ಲಿಂಟನ್ ಆಡಳಿತ ಅವಧಿಯಲ್ಲಿಯೂ ಇದೇ ತತ್ವವು ಪ್ರಭಾವ ಬೀರಿತು. ಆದರೆ ಜೋ ಬೈಡನ್ ಆಡಳಿತದಲ್ಲಿ ಪರಿಸ್ಥಿತಿ ಹೀಗಿಲ್ಲ.

ಮಾರುಕಟ್ಟೆಗಳ ವಿವೇಚನೆಗೆ ಎಲ್ಲವನ್ನೂ ಬಿಡುವುದರ ಹಿಂದಿನ ವಿವೇಕವನ್ನು ಈಚಿನ ವರ್ಷಗಳಲ್ಲಿ ಪ್ರಮುಖ ಅರ್ಥಶಾಸ್ತ್ರಜ್ಞರ ಪೈಕಿ ಹಲವರು ಪ್ರಶ್ನಿಸುತ್ತಿದ್ದಾರೆ. ಅರ್ಥಶಾಸ್ತ್ರಜ್ಞರು ಅಸಮಾನತೆಯ ಬಗ್ಗೆ ಸಂಶೋಧನೆಯನ್ನು ಹೆಚ್ಚಿಸಿದ್ದಾರೆ. ಈಗ ಅನುದಾನ ಪಡೆಯಲಿರುವ ವಿಶ್ವವಿದ್ಯಾಲಯಗಳ ಗಮನ ಕೂಡ ಇದರ ಮೇಲೆಯೇ ಇರಲಿದೆ. ‘ಆರ್ಥಿಕ ಪ್ರಗತಿಯ ಗುರಿಯು ಅಸಮಾನತೆಯನ್ನು ತಗ್ಗಿಸುವುದಾಗಿರಬೇಕು’ ಎಂದು ಕೆನಡಿ ಸ್ಕೂಲ್‌ನ ಅರ್ಥಶಾಸ್ತ್ರಜ್ಞ ಡ್ಯಾನಿ ರೋಡ್ರಿಕ್ ಹೇಳುತ್ತಾರೆ. ಅನುದಾನಕ್ಕೆ ಆಯ್ಕೆಯಾಗಿರುವ ಸಂಸ್ಥೆಗಳೆಲ್ಲವೂ ಮಾರುಕಟ್ಟೆಯ ಬಗ್ಗೆ ಆಸಕ್ತಿ ಹೊಂದಿರುವವು. ‘ಮಾರುಕಟ್ಟೆಗಳ ವ್ಯಾಪ್ತಿ ಅಗಾಧ. ಆದರೆ, ಮಾರುಕಟ್ಟೆಗಳು ಬಹಳ ಸ್ವಾಯತ್ತವಾಗಿ ಕೆಲಸ ಮಾಡುತ್ತವೆ; ಎಲ್ಲವನ್ನೂ ಮಾರುಕಟ್ಟೆಗಳ ವಿವೇಚನೆಗೆ ಬಿಟ್ಟುಬಿಡಬೇಕು ಎಂಬ ಆಲೋಚನೆಯಿಂದ ನಾವು ಹೊರಬರಬೇಕು’ ಎಂದು ಎಂಐಟಿಯಲ್ಲಿ ಕಾರ್ಮಿಕ ಅರ್ಥಶಾಸ್ತ್ರಜ್ಞ ಆಗಿರುವ ಡೇವಿಡ್ ಆಟರ್ ಪ್ರತಿಪಾದಿಸುತ್ತಾರೆ.

ಕಾಲೇಜು ಪದವಿ ಇಲ್ಲದ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ, ಅವರು ಹೆಚ್ಚಿನ ವೇತನ ಪಡೆಯುವ ಸ್ಥಾನಕ್ಕೆ ಏರಬೇಕಾದರೆ ಏನೆಲ್ಲ ಮಾಡಬೇಕು ಎಂಬ ಬಗ್ಗೆ ಎಂಐಟಿಯ ಯೋಜನೆಯು ಗಮನ ನೀಡಲಿದೆ. ಒಬ್ಬ ಕಾರ್ಮಿಕನ ಜಾಗಕ್ಕೆ ಇನ್ನೊಬ್ಬ ಕಾರ್ಮಿಕನನ್ನು ತಂದು ಕೂರಿಸುವ ಬದಲು, ಮೊದಲು ಇದ್ದ ಕಾರ್ಮಿಕನ ಉತ್ಪಾದಕತೆಯನ್ನು ಹೆಚ್ಚಿಸುವ ಮಾರ್ಗದ ಬಗ್ಗೆಯೂ ಇದು ಗಮನಹರಿಸಲಿದೆ.

ಸಂಶೋಧನೆಗೆ ಆಯ್ಕೆಯಾಗಿರುವ ಪ್ರತೀ ಕೇಂದ್ರವೂ ಬೇರೆ ಬೇರೆ ಮಾರ್ಗಗಳಲ್ಲಿ ಮುನ್ನಡೆಯಲಿದೆ. ಹೋವಾರ್ಡ್‌ನಲ್ಲಿನ ಸಂಶೋಧನೆಯು ಜನಾಂಗೀಯ ತಾರತಮ್ಯ ಹಾಗೂ ಆರ್ಥಿಕ ಅಸಮಾನತೆ ಬಗ್ಗೆ ಪರಿಶೀಲನೆ ನಡೆಸಲಿದೆ.

ಜಾನ್ ಹಾಪ್ಕಿನ್ಸ್ ಕೇಂದ್ರವು ನವ ಉದಾರವಾದದ ಬೆಳವಣಿಗೆ ಹಾಗೂ ಪ್ರಸರಣ ಮತ್ತು ಅದರಿಂದ ಕಲಿತ ಪಾಠಗಳ ಬಗ್ಗೆ ಗಮನ ನೀಡಲಿದೆ. ಸಾಂತಾ ಫೆ ಇನ್‌ಸ್ಟಿಟ್ಯೂಟ್‌ನ ಸಂಶೋಧಕರು ಹೊಸ ಆರ್ಥಿಕ ಮಾದರಿಗಳನ್ನು ಅಭಿವೃದ್ಧಿಪಡಿಸಲಿದ್ದಾರೆ. ಈ ಕಾರ್ಯಕ್ಕೆ ಹ್ಯೂಲೆಟ್ ಕಂಪನಿಯು ₹ 266 ಕೋಟಿ ಅನುದಾನವನ್ನು ನಾಲ್ಕು ವಿಶ್ವವಿದ್ಯಾಲಯಗಳಿಗೆ ಒದಗಿಸಲಿದೆ. ಒಮಿದ್ಯಾರ್ ನೆಟ್‌ವರ್ಕ್ ಕಡೆಯಿಂದ ಸಾಂತಾ ಫೆ ಇನ್‌ಸ್ಟಿಟ್ಯೂಟ್‌ಗೆ ಒಟ್ಟು ₹ 49 ಕೋಟಿ ಅನುದಾನ ದೊರೆಯಲಿದೆ.

ಹ್ಯೂಲೆಟ್ ಪ್ರತಿಷ್ಠಾನವನ್ನು 1966ರಲ್ಲಿ, ಹ್ಯೂಲೆಟ್ ಪ್ಯಾಕರ್ಡ್ ಕಂಪನಿ ಸಹಸಂಸ್ಥಾಪಕರಲ್ಲಿ ಒಬ್ಬರು ಮತ್ತು ಅವರ ಪತ್ನಿ ಜೊತೆಯಾಗಿ ಆರಂಭಿಸಿದರು. ಅದು ಈಗ ಅಮೆರಿಕದಲ್ಲಿ ಅತಿದೊಡ್ಡ ಪ್ರಮಾಣದಲ್ಲಿ ಅನುದಾನ ನೀಡುವ ಸಂಸ್ಥೆಗಳಲ್ಲಿ ಒಂದು. ಇ–ಬೇ ಸ್ಥಾಪಕ ಪಿಯೆರ್ ಒಮಿದ್ಯಾರ್ ಮತ್ತು ಅವರ ಪತ್ನಿ ಪಾಮ್ 2004ರಲ್ಲಿ ಒಮಿದ್ಯಾರ್ ನೆಟ್‌ವರ್ಕ್ ಆರಂಭಿಸಿದರು. ಇದರಲ್ಲಿ ಒಂದು ಪ್ರತಿಷ್ಠಾನ ಹಾಗೂ ಒಂದು ಹೂಡಿಕೆ ವಿಭಾಗ ಇವೆ.

ಈ ಎರಡೂ ಪ್ರತಿಷ್ಠಾನಗಳು ಎಡಪಂಥದ ಜೊತೆ ಒಲವು ಹೊಂದಿರುವ ಸಂಸ್ಥೆಗಳಾಗಿ ಗುರುತಿಸಿಕೊಂಡಿವೆ. ಏಕೆಂದರೆ, ಇವು ಹವಾಮಾನ ಬದಲಾವಣೆ, ಲಿಂಗ ಸಮಾನತೆ, ಆರ್ಥಿಕ ನೆಲೆಗಳಲ್ಲಿ ಸಮಾನತೆಯಂತಹ ವಿಚಾರಗಳಿಗೆ ಬೆಂಬಲ ನೀಡುತ್ತ ಬಂದಿವೆ. ‘ಸಾಂಪ್ರದಾಯಿಕ ಆರ್ಥಿಕ ಚಿಂತನೆಗಳ ಚಲಾವಣೆಯ ಅವಧಿ ಮುಗಿದಿದೆ ಎಂಬ ವಿಚಾರದಲ್ಲಿ ಬಹುತೇಕರು ಸಹಮತ ಹೊಂದಿದ್ದಾರೆ ಎಂಬುದು ನನ್ನ ಭಾವನೆ’ ಎಂದು ಹೇಳುತ್ತಾರೆ ಒಮಿದ್ಯಾರ್ ನೆಟ್‌ವರ್ಕ್‌ನ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಮೈಕ್ ಕುಬ್‌ಜಾನ್‌ಸ್ಕಿ.

ದಿ ನ್ಯೂಯಾರ್ಕ್ ಟೈಮ್ಸ್

ಚುರುಮುರಿ

ಸಚಿವ ಸಂಕಟ!

● ಎಸ್.ಬಿ.ರಂಗನಾಥ್

‘ಈ ಹೋಳಿ ಸಂಭ್ರಮದಲ್ಲಿ ಯಾಕ್ರೀ ಸಪ್ಪಗಿದೀರ? ನಿಮ್ಮ ಸಂಬಳ-ಭತ್ಯೆ ಡಬಲ್ ಮಾಡಿ-ಕೊಂಡದ್ದಕ್ಕೆ ಬಂದ ಪಬ್ಲಿಕ್ ಟೀಕೆಗೆ ಬೇಜಾರಾ?’ ಕೇಳಿದರು ಮಂತ್ರಿಗಳ ಮಡದಿ. ‘ಅಲ್ಲ, ಅದಕ್ಕಲ್ಲ’ ಎಂದ ಸಚಿವರು ಮುಗಿಲು ನೋಡಿದರು.

‘ಮತ್ತೆ ಫ್ರೀಡಂ ಪಾರ್ಕ್‌ನಲ್ಲಿ ನಿಮ್ಮ ಇಲಾಖೆ ವಿರುದ್ಧ ನಡೀತಿರೋ ಸರಣಿ ಧರಣಿ ಮುಷ್ಕರ...?’

‘ಊ ಹ್ಞೂಂ ಸಿ.ಟಿ...’

‘ಸಿ.ಸಿ.ಟಿ.ವಿ.ಗಳನ್ನ ಎಂದಿನಂತೆ ಆಫ್ ಮಾಡಿಸಿದ್ರಾಯ್ತು’.

‘ಛೆ ಛೆ, ನಾನು ಹೇಳ್ತಿರೋದು ಅದಲ್ಲ. ಸಿ.ಟಿ.ರವಿ ಅವರು ಅಂಥ ಡ್ಯಾಮೇಜಿಂಗ್ ಸ್ಟೇಟ್‌ಮೆಂಟ್ ಯಾಕೆ ಕೊಡಬೇಕಾಗಿತ್ತೂಂತ. ಸಚಿವರ ಮೇಲೆ ಸೀಎಂ ನಿಗಾ ಇಡಬೇಕು, ನಿಷ್ಕ್ರಿ-ಯರನ್ನ, ಅಸಮರ್ಥರನ್ನ ಕೈಬಿಡಬೇಕಂತೆ. ನಾಕು ಜನ ಮಂತ್ರಿಗಳನ್ನ ಕೈಬಿಟ್ಟು ಎಂಟು ಜನರನ್ನು ಸೇರಿಸಿಕೊಳ್ಳೋಕೆ ಹೈಕಮಾಂಡ್ ಅನುಮತಿ ಕೇಳಿದಾರಂತೆ’.

‘ಇದು ಹಳೇ ಸುದ್ದಿ. ನಮ್ಮ ವಿಧಾನಸಭೆ ಚುನಾವಣೆ ಮುಗಿಯೋವರೆಗೂ ಮಂತ್ರಿ ಮಂಡಲ ವಿಸ್ತರಣೇನೂ ಇಲ್ಲ, ಪುನರ್ ರಚನೇನೂ ಇಲ್ಲ ಅನ್ನೋದು ಹೈಕಮಾಂಡ್‌ನ ಈಗಿನ ನಿರ್ಧಾರ ಅಂತೆ. ಅಷ್ಟಕ್ಕೂ ನೀವೇನು ನಿಷ್ಕ್ರಿಯರಲ್ವಲ್ಲಾ. ವರ್ಷಾಂತ್ಯಕ್ಕೆ ಮೊದಲೇ ನಿಮ್ಮ ಇಲಾಖೆಗೆ ನಿಗದಿಪಡಿಸಿದ ಹಣ ಖರ್ಚು ಮಾಡಿದೀರಿ. ಕ್ಷೇತ್ರಾಭಿವೃದ್ಧಿ ನಿಧೀನ ಡಿಸೆಂಬರ್‌ಗೇ ಮುಗಿಸಿದೀರಿ. ಚಿಂತಿಸದೆ ಕಾನ್‌ಸ್ಟಿ-ಟ್ಯುಯೆನ್ಸಿ ಟೂರಿಗೆ ಹೊರಡಿ. ಹೈಕಮಾಂಡ್ ಅದನ್ನೇ ತಾನೇ ಹೇಳ್ತಿರೋದು’.

‘ಹಾಗೇ ಮಾಡೋಣಾಂತಿದ್ದೆ. ಆದ್ರೆ ನಮ್ಮ ಪಕ್ಷದ ಗೌಡರೇ ಕೆಲವ್ರನ್ನ ಖಾಲಿ ಕುರ್ಚಿ ಸಚಿವರೂಂತ ಗೇಲಿ ಮಾಡ್ತಾರೆ’.

‘ಅವ್ರು ವಿರೋಧಿಗಳ ಕಾಲನ್ನೂ ಎಳೆದಿದಾರಲ್ರೀ. ಸೀಎಂ ಮೇಕೆದಾಟು ಯೋಜನೆಗೆ ಸಾವಿರ ಕೋಟಿ ರೂಪಾಯಿ ಕೊಡ್ತೀವೀಂತ ಹೇಳಿರೋದರಿಂದ ಅವರು ಬೆಂಗಳೂರಿಂದ ಮರುಪಾದಯಾತ್ರೆ ಮಾಡಬೇಕಂತೆ. ಅಸೆಂಬ್ಲೀಲೆ ಹೇಳಿದ್ರಲ್ಲ ಕೇಳಿಸಿಕೊಳ್ಲಿಲ್ವೇ?’

‘ನಾನು ಹೊರಗೆ ಹೋಗಿದ್ದೆ’.

‘ಓ, ಹಾಗಾದ್ರೆ ಖಾಲಿ ಕುರ್ಚಿ ಸಚಿವರು!’ ಎಂದು ನಗೆಚಟಾಕಿ ಹಾರಿಸಿ, ಮಂತ್ರಿಗಳ ಮೇಡಂ ಪರಿಸ್ಥಿತಿ ತಿಳಿಗೊಳಿಸಿದರು.

ಸಂಗತ

ಸಂಶೋಧನೆಗೆ ವಿನೂತನ ಮಾರ್ಗಸೂಚಿ

ಸಂಶೋಧನಾ ವಿದ್ಯಾರ್ಥಿಗಳು ಮತ್ತು ಸಂಶೋಧನಾ ಮಾರ್ಗದರ್ಶಕರಿಗೆ ಸಂಬಂಧಿಸಿದಂತೆ ಮಾರ್ಗಸೂಚಿಯಲ್ಲಿ ಕೆಲವು ಗಮನಾರ್ಹ ಅಂಶಗಳಿವೆ

● ಡಾ. ಜ್ಯೋತಿ

ರಾಜ್ಯದ ಉನ್ನತ ಶಿಕ್ಷಣ ಇಲಾಖೆಯು ರಾಷ್ಟ್ರೀಯ ಶಿಕ್ಷಣ ನೀತಿ- 2020ಕ್ಕೆ ಅನ್ವಯಿಸಿ ಪ್ರಥಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ ನೂತನ ಪಠ್ಯಕ್ರಮವನ್ನು ಈಗಾಗಲೇ ಜಾರಿಗೆ ತಂದಿದ್ದು, ಸದ್ಯದಲ್ಲೇ ಈ ವಿದ್ಯಾರ್ಥಿಗಳು ತಮ್ಮ ಮೊದಲ ಸೆಮಿಸ್ಟರ್ ಪರೀಕ್ಷೆ ಬರೆಯಲಿದ್ದಾರೆ. ಈ ನಡುವೆ, ವಿಶ್ವವಿದ್ಯಾಲಯ ಅನುದಾನ ಆಯೋಗವು (ಯುಜಿಸಿ) ಇತ್ತೀಚೆಗೆ ನಡೆದ ಸಭೆಯಲ್ಲಿ, ಪಿಎಚ್.ಡಿ ಪದವಿಗೆ ಸಂಬಂಧಿಸಿದಂತೆ ಕನಿಷ್ಠ ಮಾನದಂಡಗಳು ಮತ್ತು ಕಾರ್ಯವಿಧಾನಗಳ ಮಾರ್ಗಸೂಚಿಯೊಂದನ್ನು ಅನುಮೋದಿಸಿದೆ. ಈ ನಿಯಮಾವಳಿಗಳು ಯುಜಿಸಿ ವೆಬ್‌ಸೈಟ್‌ನಲ್ಲಿ ಸಾರ್ವಜನಿಕ ಸಲಹೆಗಳಿಗಾಗಿ ಸದ್ಯದಲ್ಲೇ ಪ್ರಕಟಗೊಳ್ಳಲಿವೆ.

ಉನ್ನತ ಶಿಕ್ಷಣದ ಹೆಚ್ಚಿನ ಪಾಲುದಾರರಿಗೆ ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಾಥಮಿಕ ಅರಿವು ಈಗಾಗಲೇ ಸ್ವಲ್ಪಮಟ್ಟಿಗೆ ಇದ್ದರೂ, ವಿಶೇಷವಾಗಿ ಸಂಶೋಧನಾಸಕ್ತ ವಿದ್ಯಾರ್ಥಿಗಳಿಗೆ ಹೊಸ ಮಾರ್ಗಸೂಚಿಗಳ ಸ್ಪಷ್ಟ ಅರಿವು ಅತ್ಯಗತ್ಯವಾಗಿದೆ.

ಈ ಪರಿಷ್ಕೃತ ಮಾನದಂಡಗಳ ಪ್ರಕಾರ, ಇನ್ನು ಮುಂದೆ ವಿದ್ಯಾರ್ಥಿಗಳಲ್ಲಿ ಪಿಎಚ್.ಡಿ ಸಂಶೋಧನೆ ಪ್ರವೇಶಕ್ಕೆ, ತಮ್ಮ ನಾಲ್ಕು ವರ್ಷಗಳ ಪದವಿಯಲ್ಲಿ ಕನಿಷ್ಠ 7.5 ಸಿಜಿಪಿಎ (ಸರಾಸರಿ ಅಂಕ) ಪಡೆದಿರುವವರು ಅರ್ಹರಾಗಿರುತ್ತಾರೆ. ಜೊತೆಗೆ, ಯುಜಿಸಿ ತನ್ನ 2016ರ ನಿಯಮಗಳನ್ನು ತಿದ್ದುಪಡಿ ಮಾಡಿ, ರಾಷ್ಟ್ರೀಯ ಅರ್ಹತಾ ಪರೀಕ್ಷೆ (ಎನ್‌ಇಟಿ) ಅಥವಾ ಜೂನಿಯರ್ ರಿಸರ್ಚ್ ಫೆಲೋಶಿಪ್‌ನಲ್ಲಿ (ಜೆಆರ್‌ಎಫ್) ಆಯ್ಕೆಯಾದವರಿಗೆ, ಲಭ್ಯವಿರುವ ಸೀಟುಗಳಲ್ಲಿ ಶೇ 60ರಷ್ಟನ್ನು ಕಾಯ್ದಿರಿಸಲು ತೀರ್ಮಾನಿಸಿದೆ. ಈ ಪ್ರಸ್ತಾವಗಳನ್ನು ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ ಮತ್ತು ದೆಹಲಿ ವಿಶ್ವವಿದ್ಯಾಲಯ ಈ ಶೈಕ್ಷಣಿಕ ವರ್ಷದಿಂದಲೇ ಅಳವಡಿಸಿಕೊಳ್ಳಲು ನಿರ್ಧರಿಸಿವೆ.

ಶೈಕ್ಷಣಿಕ ವರ್ಷದ ಒಟ್ಟು ಖಾಲಿ ಸೀಟುಗಳಲ್ಲಿ ಶೇ 60ರಷ್ಟನ್ನು ಎನ್‌ಇಟಿ/ಜೆಆರ್‌ಎಫ್ ಹೊಂದಿದ ವಿದ್ಯಾರ್ಥಿಗಳಿಗೆ ಮೀಸಲಿಟ್ಟರೆ, ಉಳಿದ ಶೇ 40ರಷ್ಟನ್ನು ಆಯಾಯ ಶಿಕ್ಷಣ ಸಂಸ್ಥೆಗಳು ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳ ಆಯ್ಕೆಯನ್ನು ಲಿಖಿತ ಪರೀಕ್ಷೆ (70) ಮತ್ತು ಸಂದರ್ಶನದ (30) ಅನುಪಾತದಲ್ಲಿ ಮೌಲ್ಯಮಾಪನ ಮಾಡಿ ನಿರ್ಧರಿಸಲಾಗುತ್ತದೆ. ಸಂದರ್ಶನದಲ್ಲಿ ಅಭ್ಯರ್ಥಿಯು ಸಂಶೋಧನಾ ಸಮಿತಿಯ ಮುಂದೆ ತನ್ನ ಸಂಶೋಧನಾ ಆಸಕ್ತಿ ಮತ್ತು ಕ್ಷೇತ್ರದ ಕುರಿತು ವಿವರವಾಗಿ ಚರ್ಚಿಸಬೇಕಾಗುತ್ತದೆ. ಹಾಗೆಯೇ ಅಭ್ಯರ್ಥಿಯು ಉದ್ದೇಶಿತ ಸಂಶೋಧನೆಗೆ ಸಮರ್ಥನಿದ್ದಾನೆಯೇ, ವಿಷಯ ಪ್ರಸ್ತುತವಾಗಿದೆಯೇ ಎನ್ನುವುದನ್ನು ಸಮಿತಿ ಪರಿಶೀಲಿಸಬೇಕಾಗುತ್ತದೆ.

ಪಿಎಚ್.ಡಿ ಪೂರ್ಣಗೊಳಿಸಲು ಕನಿಷ್ಠ ಅವಧಿಯನ್ನು ಇಲ್ಲಿಯವರೆಗೆ ಇದ್ದ ಮೂರು ವರ್ಷಗಳ ಬದಲಾಗಿ ಎರಡು ವರ್ಷಗಳಿಗೆ ನಿಗದಿಗೊಳಿಸಲಾಗಿದೆ. ಆದರೆ, ಆರು ವರ್ಷಗಳ ಗರಿಷ್ಠ ಅವಧಿಯಲ್ಲಿ ಯಾವುದೇ ಬದಲಾವಣೆ ತರಲಾಗಿಲ್ಲ. ಹಾಗೆಯೇ, ಸಂಶೋಧಕರಿಗೆ ತಮ್ಮ ವಿಷಯಾಧಾರಿತ ಅಧ್ಯಯನ ಮತ್ತು ಕ್ಷೇತ್ರಕಾರ್ಯಕ್ಕೆ ಅನುಕೂಲವಾಗುವಂತೆ ರಜೆ ಗಳನ್ನು ಪಡೆಯುವ ಅವಕಾಶವನ್ನು ಕೂಡ ಮಾರ್ಗಸೂಚಿ ಪ್ರಸ್ತಾಪಿಸಿದೆ.

ಇನ್ನುಳಿದಂತೆ, ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಅರ್ಹತಾ ಮಾನದಂಡದಲ್ಲಿ ಶೇ 5ರಷ್ಟು ಸಡಿಲಿಕೆಯನ್ನು ಪ್ರಸ್ತಾಪಿಸಲಾಗಿದೆ. ಮುಖ್ಯವಾಗಿ, ಸಂಶೋಧನೆಯು ಕ್ಷೇತ್ರಕಾರ್ಯ, ಸಮಾಜಕ್ಕೆ ಅನುಕೂಲವಾಗುವಂತಹ ಮಾಹಿತಿ ಸಂಗ್ರಹ, ಸ್ಥಳೀಯ ಸಮಸ್ಯೆಗಳಿಗೆ ಸ್ಪಂದನೆ, ಜಾಗತಿಕ ಮಹತ್ವ, ಸಮಾಜಮುಖಿ ಮೌಲ್ಯಸೃಷ್ಟಿ, ಹೆಚ್ಚುವರಿ ಜ್ಞಾನಕ್ಕೆ ಕೊಡುಗೆ ಹಾಗೂ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಹೆಚ್ಚಿನ ಒತ್ತು ನೀಡುತ್ತದೆ.

ಸಂಶೋಧನಾ ಮಾರ್ಗದರ್ಶಕರಿಗೆ ಸಂಬಂಧಿಸಿದಂತೆ ಕೆಲವು ಗಮನಾರ್ಹ ಸಂಗತಿಗಳೆಂದರೆ, ನಿಗದಿತ ಸಮಯದೊಳಗೆ ಸಂಶೋಧನೆ ಸಾಧ್ಯವೇ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಈ ಸಂಶೋಧನೆಯ ಪರಿಣಾಮದ ಸಾಧ್ಯತೆಯೇನು ಎಂಬ ಬಗ್ಗೆ ಸಂಶೋಧನಾರ್ಥಿಯೊಂದಿಗೆ ಚರ್ಚಿಸಬೇಕಾಗುತ್ತದೆ. ಹಾಗೆಯೇ, ಸಂಶೋಧನಾರ್ಥಿಯೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ವಿಷಯಾಧಾರಿತ ಕೋರ್ಸ್‌ಗಳು ಮತ್ತು ಸಮ್ಮೇಳನಗಳ ಕುರಿತು ಮಾಹಿತಿ ಹಂಚಿಕೊಳ್ಳುವುದು ಹಾಗೂ ಸಂಬಂಧಿತ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕೇಂದ್ರಗಳೊಂದಿಗೆ ಸಂಪರ್ಕವನ್ನು ಸ್ಥಾಪಿಸಲು ವಿದ್ಯಾರ್ಥಿಗೆ ಸಹಾಯ ಮಾಡುವುದು ಮಾರ್ಗದರ್ಶಕರ ಜವಾಬ್ದಾರಿಯಾಗಿರುತ್ತದೆ. ಹೆಚ್ಚುವರಿಯಾಗಿ ಇಬ್ಬರು ವಿದೇಶಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವ ಅವಕಾಶವನ್ನು ಕಲ್ಪಿಸಲಾಗಿದೆ.

ಒಟ್ಟಿನಲ್ಲಿ, ಪಿಎಚ್.ಡಿ ಪದವಿಗಳ ಗುಣಮಟ್ಟವನ್ನು ಹೆಚ್ಚಿಸುವ ಜವಾಬ್ದಾರಿ ಮತ್ತು ಯುಜಿಸಿಯ ಪ್ರಸ್ತಾವಿತ ಮಾರ್ಗಸೂಚಿಯಲ್ಲಿ ಮೌಲ್ಯಾಧಾರಿತ ಅಂಶಗಳನ್ನು ಅಳವಡಿಸುವ ಮುಕ್ತತೆಯು ಸಂಬಂಧಿತ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಇದೆ ಎನ್ನುವುದು ಈ ತಿದ್ದುಪಡಿಯ ಪ್ರಧಾನ ಅಂಶ.

ಇದರೊಂದಿಗೆ, ವಿವಿಧ ಉದ್ಯಮಗಳ ತಜ್ಞರು ಮತ್ತು ವೃತ್ತಿಪರರನ್ನು ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿ ಬೋಧನೆಗೆ ಸೆಳೆಯುವ ಸಲುವಾಗಿ, ಪಿಎಚ್.ಡಿ ಕಡ್ಡಾಯವಲ್ಲ ಎನ್ನುವ ಯುಜಿಸಿ ನಿರ್ಧಾರ ಕೂಡ ಸ್ವಾಗತಾರ್ಹವಾದುದು. ಬಹಳಷ್ಟು ಅನುಭವ ಹೊಂದಿರುವ ಹಲವಾರು ವಿಷಯ ತಜ್ಞರು ಮತ್ತು ಕಲಾಕಾರರು ಪ್ರಸ್ತುತ ನಿಯಮಗಳಿಗೆ ಅನುಸಾರವಾಗಿ ವಿಶ್ವವಿದ್ಯಾಲಯಗಳಲ್ಲಿ ಬೋಧಿಸುವ ಅವಕಾಶಗಳಿಂದ ವಂಚಿತರಾಗಿದ್ದಾರೆ.

ವಾಚಕರ ವಾಣಿ

ಇ-ಖಾತೆಗೆ ವ್ಯವಸ್ಥೆ ಎಂದು?

ರಾಜ್ಯದ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ 14.6.2013ರಿಂದ ಈಚೆಗೆ ನೋಂದಣಿಯಾದ ನಿವೇಶನಗಳಿಗೆ ಇ- ಖಾತೆ ಮಾಡಲಾಗುತ್ತಿಲ್ಲ. ಇದರಿಂದ ನಿವೇಶನದ ಪರಭಾರೆ ಸಾಧ್ಯವಾಗುತ್ತಿಲ್ಲ. ಮನೆ ನಿರ್ಮಿಸಿಕೊಳ್ಳಲು ಬ್ಯಾಂಕಿನಿಂದ ಸಾಲ ಸೌಲಭ್ಯ ಸಹ ಲಭಿಸುತ್ತಿಲ್ಲ. ನಿವೇಶನದಾರರು ಇತ್ತೀಚಿನ ಮಾಹಿತಿಗೆ ಪಂಚಾಯಿತಿ ಕಚೇರಿಗೆ ಪದೇ ಪದೇ ಅಲೆಯುವಂತಾಗಿದೆ. ಆದ್ದರಿಂದ ಸಂಬಂಧಿಸಿದ ಇಲಾಖೆ ಈ ಕುರಿತು ಶೀಘ್ರ ಕ್ರಮ ಕೈಗೊಂಡರೆ, ವಿಶೇಷವಾಗಿ ಇಳಿವಯಸ್ಸಿನಲ್ಲಿ ಒಂದು ಗೂಡು ಕಟ್ಟಿಕೊಳ್ಳಲು ಹಂಬಲಿಸುವ ಹಿರಿಯ ನಾಗರಿಕರಿಗೆ ಸಹಾಯವಾಗುತ್ತದೆ.

ಬಿಂಡಿಗನವಿಲೆ ಭಗವಾನ್, ಬೆಂಗಳೂರು

ಮಾಯವಾಗಿದೆ ಹಿಂದಿ ಕಾರ್ಯಕ್ರಮ

ಸುಮಾರು ಅರವತ್ತು ವರ್ಷಗಳಿಂದಲೂ ಧಾರವಾಡ ಆಕಾಶವಾಣಿಯ ಮೂಲಕ ಮುಂಬೈ ವಿವಿಧಭಾರತಿಯ ಹಿಂದಿ ಚಿತ್ರಗೀತೆಗಳು, ಸಂಗೀತ್ ಸಾರಿಕಾ, ಆಪ್ ಕೀ ಫರ್‌ಮಾಯಿಶ್ ಸೇರಿದಂತೆ ಅನೇಕ ಮನರಂಜನೆಯ ಕಾರ್ಯಕ್ರಮಗಳನ್ನು ಆಲಿಸುತ್ತಿದ್ದೆವು. ಈಗ ಸುಮಾರು ಒಂದು ವಾರದಿಂದ ಇವೆಲ್ಲ ಕಾರ್ಯಕ್ರಮಗಳು ಮಾಯವಾಗಿವೆ! ಇದು ಹಿಂದಿ ಹೇರಿಕೆಗೆ ವಿರುದ್ಧದ ಕ್ರಮವೇ? ನಿಖರ ಕಾರಣ ಏನು ಎಂಬುದನ್ನು ಬಲ್ಲವರು ತಿಳಿಸುತ್ತಾರೆಯೇ? ಸಂಬಂಧಪಟ್ಟವರು ಈ ಎಲ್ಲ ಕಾರ್ಯಕ್ರಮಗಳನ್ನೂ ದಯಮಾಡಿ ಪುನರಾರಂಭಿಸಬೇಕು.

ಮುರುಗೇಶ್ ಹನಗೋಡಿಮಠ, ಹುಬ್ಬಳ್ಳಿ

ಇಬ್ಬರ ಜಗಳ ಜಗತ್ತಿಗೇ ನಷ್ಟ!

ಕೆಲವೇ ದಿನಗಳ ಹಿಂದೆ ಕಟ್ಟಡ ನಿರ್ಮಾಣದ ಉಕ್ಕು ಪ್ರತೀ ಟನ್‌ಗೆ ₹ 60 ಸಾವಿರದಿಂದ 65 ಸಾವಿರ ಇದ್ದದ್ದು ಈಗ ₹ 80 ಸಾವಿರದಿಂದ 85 ಸಾವಿರಕ್ಕೆ ಏರಿದೆ. ಅಂದರೆ ಸರಿಸುಮಾರು ₹ 20 ಸಾವಿರದಷ್ಟು ಭಾರಿ ಪ್ರಮಾಣದ ಏರಿಕೆ. ಈ ಏರಿಕೆಗೆ ಅಂಗಡಿಯವರು ಹೇಳುವ ಕಾರಣ ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧ.

ಆದರೆ ಅದಕ್ಕೂ ಬೆಲೆ ಏರಿಕೆಗೂ ಯಾವುದೇ ನೇರ ಸಂಬಂಧವಿಲ್ಲ ಎಂಬುದು ಜನಸಾಮಾನ್ಯರಿಗೂ ತಿಳಿದ ವಿಚಾರ. ಭಾರತದಲ್ಲಿ ಇಂಧನದ ಬೆಲೆ ಕೂಡಾ ಸ್ಥಿರವಾಗಿದ್ದು ಉಕ್ಕಿನ ಬೆಲೆ ಏರಲು ಕಾರಣವೇ ಇಲ್ಲ. ಇದರೊಟ್ಟಿಗೆ ಸಿಮೆಂಟು ಮತ್ತು ಇತರ ಸಾಮಗ್ರಿಗಳೂ ನಾವೇನು ಕಡಿಮೆ ಎಂಬಂತೆ ಮೇಲೇರಿ ಕೂತಿವೆ. ಸಕಾರಣವಿಲ್ಲದೆ ಈ ಪಾಟಿ ಬೆಲೆ ಏರಿಕೆಯು ವ್ಯಾಪಾರಿಗಳ ಕುತಂತ್ರವೇ ಹೌದು. ಸರ್ಕಾರ ಈ ಕೂಡಲೇ ಮಧ್ಯಪ್ರವೇಶಿಸಿ ನಿಯಂತ್ರಣಕ್ಕೆ ತಾರದಿದ್ದಲ್ಲಿ ಜನಸಾಮಾನ್ಯರು ಹೈರಾಣಾಗುವುದರಲ್ಲಿ ಸಂದೇಹವೇ ಇಲ್ಲ. ಈಗಾಗಲೇ ಕಟ್ಟಡದ ಗುತ್ತಿಗೆ ದಾರರು ಮತ್ತು ಮಾಲೀಕರ ನಡುವೆ ವೈಮನಸ್ಯ ಉಂಟಾಗಿ ಕೆಲಸಗಳು ನಿಂತುಹೋಗಿವೆ. ಸರ್ಕಾರಿ ಕೆಲಸಗಳ ಗುತ್ತಿಗೆದಾರರೂ ಕಣ್ಣುಕಣ್ಣು ಬಿಡುವಂತಾಗಿದೆ. ಈ ರೀತಿಯ ಅನವಶ್ಯಕ ಬೆಲೆ ಏರಿಕೆಗೆ ಕಡಿವಾಣ ಹಾಕಿ ಜನರಿಗೆ ನೆಮ್ಮದಿ ಮೂಡಿಸಲಿ. ಜನರ ಸ್ವಂತ ಸೂರಿನ ಕನಸು ಕಮರದಿರಲಿ. ‘ಇಬ್ಬರ ಜಗಳ ಮೂರನೆಯವರಿಗೆ ಲಾಭ’ ಎಂಬ ಗಾದೆ ಈಗ ‘ಎರಡು ದೇಶಗಳ ನಡುವಿನ ಯುದ್ಧ, ಜಗತ್ತಿಗೆಲ್ಲಾ ನಷ್ಟ’ ಎಂಬಂತಾಗಿದೆ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಹಾರ– ಆಹಾರ

ಅಂದು ನಮ್ಮ ಪೂರ್ವಿಕರು
‘ಕೆರೆಗೆ ಹಾರ’ವಾಗಿದ್ದರಂತೆ,
ಇಂದು ಕೆಲವರು ಕೆರೆಗಳನ್ನೇ
ಆಹಾರವಾಗಿಸಿಕೊಂಡು
ನುಂಗುತ್ತಿದ್ದಾರೆ!
(ರಾಜ್ಯದಲ್ಲಿ 3 ಸಾವಿರ ಕೆರೆಗಳ ಒತ್ತುವರಿ– ಪ್ರ.ವಾ., ಮಾರ್ಚ್ 16)

ಮಹೇಶ್ವರ ಹುರುಕಡ್ಲಿ
ಬಾಚಿಗೊಂಡನಹಳ್ಳಿ

ಬೆಟ್ಟದ ನವಿಲಿಗೆ ಕಣ್ಣೀರು ಬಂದರೆ...

ಉಕ್ರೇನ್‌ನಲ್ಲಿ ವೃದ್ಧರು, ಗರ್ಭಿಣಿಯರು, ಬಾಣಂತಿಯರು, ಮಕ್ಕಳು ಸೇರಿದಂತೆ ಸಾವಿರಕ್ಕೂ ಅಧಿಕ ಜನರು ತಮ್ಮ ಜೀವ ಉಳಿಸಿಕೊಳ್ಳಲು ಆಶ್ರಯ ಪಡೆದಿದ್ದ ರಂಗಮಂದಿರದ ಮೇಲೆ ರಷ್ಯಾ ಮಾಡಿರುವ ದಾಳಿ ತೀವ್ರ ಅಮಾನವೀಯ. ದಿನದಿಂದ ದಿನಕ್ಕೆ ರಷ್ಯಾ ತನ್ನ ದಾಳಿ ತೀವ್ರಗೊಳಿಸುತ್ತಿರುವುದನ್ನು ನೋಡಿದರೆ ‘ಬೆಟ್ಟದ ನವಿಲಿಗೆ ಕಣ್ಣೀರು ಬಂದರೆ ಬೇಟೆಗಾರನಿಗೆ ದಯೆ ಹುಟ್ಟೀತೆ’ ಎಂಬ ಪುರಂದರದಾಸರ ಸಾಲುಗಳು ನೆನಪಾಗುತ್ತವೆ.

ಬಿ.ಎಸ್.ಚೈತ್ರ, ಚಿತ್ರದುರ್ಗ

ಜಾತಿ ಹೆಸರಿನ ಗ್ರಾಮ ಬೇಡವೇಕೆ?

‘ಕಂದಾಯ ಗ್ರಾಮಗಳಿಗೆ ಜಾತಿಯ ಹೆಸರುಗಳನ್ನು ಇಡುವುದು ಸರಿಯಲ್ಲ’ ಎಂಬ ಶಾಸಕ ಕೆ.ಆರ್.ರಮೇಶ್ ಕುಮಾರ್ ಅವರ ಅಭಿಪ್ರಾಯಕ್ಕೆ ಸಚಿವ ಅಶೋಕ ಅವರು ಯಾವುದೇ ಚರ್ಚೆಯಿಲ್ಲದೆ ಅಂಥ ಹೆಸರುಗಳನ್ನು ಬದಲಿಸುವ ಬಗ್ಗೆ ಭರವಸೆ ನೀಡಿದ್ದಾರೆ (ಪ್ರ.ವಾ., ಮಾರ್ಚ್ 15). ಇದು ಒಪ್ಪುವ ವಿಚಾರವೇ? ಉದ್ದೇಶಿತ ಹೊಸ ಹೆಸರುಗಳಾದರೂ ಯಾವ ರೀತಿಯಾಗಿ ಇರುತ್ತವೆ ಎಂಬ ಬಗ್ಗೆ ಸಾರ್ವಜನಿಕರ ಅಭಿಪ್ರಾಯ ಬೇಕಲ್ಲವೇ?

ಗ್ರಾಮಗಳು ಹೋಗಲಿ, ನಗರಗಳಲ್ಲೂ ಜಾತಿಯ ಹೆಸರಿನಲ್ಲಿ ಬೀದಿಗಳು, ರಸ್ತೆಗಳು, ಬಡಾವಣೆಗಳು, ಹೋಟೆಲುಗಳು, ಬೇಕರಿಗಳು, ಶಿಕ್ಷಣ ಸಂಸ್ಥೆಗಳು, ಮಠ ಮಂದಿರಗಳು, ಕಲ್ಯಾಣ ಮಂಟಪಗಳು ಹಾಗೂ ಸ್ಮಶಾನಗಳಿವೆ. ಹೀಗೆ ತಮ್ಮ ಜಾತಿಯ ಹೆಸರುಗಳನ್ನು ಇಡುವುದು ಸರಿಯೆನಿಸುವುದಾದರೆ ಉಳಿದವರಿಗೆ ತಮ್ಮ ಜಾತಿಯ ಹೆಸರಿನ ಗ್ರಾಮಗಳು ಬೇಡವೇ? ತಮ್ಮ ಜಾತಿಯ ಹೆಸರಿನಲ್ಲಿ ಒಂದು ಗ್ರಾಮವಿರುವುದು ಹೆಮ್ಮೆಯೆನಿಸುವುದು ಬೇಡವೇ? ಜಾತಿಗಳ ಮಧ್ಯೆ ಮೇಲುಕೀಳು ಎಂಬ ಮನೋಭಾವ ಬೆಳೆಸಿಕೊಳ್ಳದೆ ಎಲ್ಲ ಜಾತಿಗಳೂ ಸಮಾನ ಎಂದು ತಿಳಿಯಲು ಸಾಧ್ಯವಾದರೆ ಜಾತಿಯ ಹೆಸರು ಇಡುವುದರಲ್ಲಿ ತಪ್ಪೇನಿದೆ? ಅಷ್ಟಕ್ಕೂ ಇಂದಿನ ವೈಜ್ಞಾನಿಕ ಕಾಲದಲ್ಲಿ ಜಾತಿಗಳೇ ಬೇಡ ಎನ್ನುವ ನಿರ್ಧಾರಕ್ಕೆ ಬರುವ ವಾತಾವರಣ ಅನಿವಾರ್ಯವಾಗುವುದಿಲ್ಲ ಏಕೆ? ನಾವು ಯಾವ ಜಾತಿಯಲ್ಲಿ ಹುಟ್ಟುತ್ತೇವೆ ಎಂದು ನಿರ್ಧರಿಸಲು ಸಾಧ್ಯವಿಲ್ಲ. ಬದಲಾಗಿ ಯಾವ ಜಾತಿಯಲ್ಲಿ ಹುಟ್ಟಿದ್ದೇವೆಯೋ ಅದರ ಬಗ್ಗೆ ಗೌರವ, ಅಭಿಮಾನ ಇರುವುದು ಸಹಜ ನಡೆಯಾಗಬೇಕು. ಗ್ರಾಮಗಳ ಹೆಸರು ಒಂದು ಸಂಸ್ಕೃತಿ, ಪರಂಪರೆಗೆ ಸೇರಿದ್ದು. ಇಂಥ ಮಹತ್ವದ ವಿಚಾರಗಳ ಬಗ್ಗೆ ನಾಡಿನ ಜಾನಪದ ಮತ್ತು ಇತಿಹಾಸ ತಜ್ಞರು ಅಭಿಪ್ರಾಯ ತಿಳಿಸಿದರೆ ಸಾಮಾನ್ಯ ಜನರಿಗೆ ಉತ್ತಮ ಮಾಹಿತಿಯಾಗುತ್ತದೆ.

ಡಾ. ಜಿ.ಬೈರೇಗೌಡ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

'ದಿ ಕಾಶ್ಮೀರ್ ಫೈಲ್ಸ್' ಸಿನಿಮಾಕ್ಕೆ ಸರ್ಕಾರ ಉತ್ತೇಜನ, ಪ್ರೋತ್ಸಾಹ ನೀಡುವುದು ಸರಿಯೇ?

ಯಾಕೀ ಸಿನಿಮಾ ಸನ್ನಿ?!



ಎಲ್ಲೋ ಒಂದು ಕಡೆ 'ಕಾಶ್ಮೀರ್ ಫೈಲ್ಸ್' ಚಿತ್ರ ಪ್ರದರ್ಶನ ಪೂರೈಸಿದ ಕೂಡಲೇ ಸಭಿಕರೆಲ್ಲ ಎದ್ದು ಆರ್‌ಎಸ್‌ಎಸ್‌ನ ಗೀತೆ 'ನಮಸ್ತೆ ಸದಾ ವತ್ಸಲೆ' ಹಾಡುತ್ತ ನಿಂತ ವಿಡಿಯೊವನ್ನು ಸಂಸದ ಪ್ರತಾಪ ಸಿಂಹ ಟ್ವೀಟ್ ಮಾಡಿ 'ಇದು ಸಂಘ ಪರಿವಾರದ ಶಕ್ತಿ' ಎಂದು ಬರೆದುಕೊಂಡಿದ್ದಾರೆ! ಅಲ್ಲಿಗೆ ಉದ್ದೇಶ ಸ್ಪಷ್ಟವಾಯಿತಲ್ಲ? 'ಸಂಘ ಪರಿವಾರದ ಶಕ್ತಿ'ಯನ್ನು ಸಾರುವುದಕ್ಕೆ ಈ ಸಿನಿಮಾ ಒಂದು ಅಸ್ತ್ರ ಮಾತ್ರ; ಮಾನವ ಲೋಕದ ಅನಂತ ದುಃಖದ, ಇತಿಹಾಸದ ಪಾಠಗಳ, ಕಣ್ಣೀರಿನ ಪರಂಪರೆಯ ಅನಾವರಣವಲ್ಲ. ಅದಕ್ಕೇ ಇಡೀ ಬಿಜೆಪಿ ಪರಿವಾರಕ್ಕೆ ಈ ಪರಿ ಸಿನಿಮಾದ ಸನ್ನಿ ಹಿಡಿದಿರುವುದು

ಪ್ರಜಾವಾಣಿ ಚರ್ಚೆ

● ಎನ್.ಎಸ್. ಶಂಕರ್



'ದಿ ಕಾಶ್ಮೀರ್ ಫೈಲ್ಸ್' ಸಿನಿಮಾ ನಾನಿನ್ನೂ ನೋಡಿಲ್ಲ. ಯಾವಾಗ ನೋಡುವೆನೋ ಗೊತ್ತಿಲ್ಲ. ಆದರೆ ಅದರ ಬಗ್ಗೆ ಚರ್ಚಿಸಲು ಸಿನಿಮಾ ನೋಡುವುದು ಕಡ್ಡಾಯ ಎಂದು ನನಗೆ ಮನವರಿಕೆಯಾಗಿಲ್ಲ. ಯಾಕೆಂದರೆ 'ಕಾಶ್ಮೀರ್ ಫೈಲ್ಸ್' ಬಗ್ಗೆ ಮಾತನಾಡುವಾಗ ಯಾರೂ ಸಿನಿಮಾ ಬಗ್ಗೆಯೋ, ಅದರ ತಾಂತ್ರಿಕ ಉತ್ಕೃಷ್ಟತೆಯ ಬಗ್ಗೆಯೋ, ಭಾವಸ್ಪಂದನದ ಬಗ್ಗೆಯೋ, ಹೃದಯಂಗಮ ಸನ್ನಿವೇಶಗಳ ಬಗ್ಗೆಯೋ, ಕಲಾವಿದರ ಅಭಿನಯದ ಬಗ್ಗೆಯೋ ಮಾತನಾಡುವುದಿಲ್ಲ. ನಾವು ಕಂಡಂತೆ, ಆ ಸಿನಿಮಾವನ್ನು ಹಬ್ಬಾವಿಸಿಕೆ ಸುತ್ತುವರಿದಿರುವ ರಾಜಕೀಯ ಲೆಕ್ಕಾಚಾರವೇ ಎಲ್ಲರಿಗೂ ಮುಖ್ಯವಾಗಿದೆ.

ಒಂದು ಕಡೆ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ 'ಕಾಶ್ಮೀರ್ ಫೈಲ್ಸ್' ಸಿನಿಮಾ ನೋಡದವರು ದೇಶದ್ರೋಹಿಗಳು ಎಂದು ಅಪ್ಪಣೆ ಕೊಡಿಸಿದರೆ, ಸದನದಲ್ಲಿ ಸಭಾಪತಿಗಳೇ ಎಲ್ಲ ಎಂಎಲ್‌ಎಗಳಿಗೆ ಚಿತ್ರವೀಕ್ಷಣೆಗೆ ಆಹ್ವಾನ ನೀಡಿದರು. ಇನ್ನು ಮುಖ್ಯಮಂತ್ರಿಗಳು ಸಿನಿಮಾಗೆ ಏಕಾಏಕಿ ಮನರಂಜನಾ ತೆರಿಗೆ ವಿನಾಯ್ತಿ ಘೋಷಿಸಿದರು. (ಬಿಜೆಪಿ ಆಡಳಿತದ ಇನ್ನೂ ಹಲವು ರಾಜ್ಯಗಳು ತೆರಿಗೆ ವಿನಾಯ್ತಿ ಘೋಷಿಸಿವೆ) ಕೇಂದ್ರ ಮಂತ್ರಿ ಪ್ರಲ್ಹಾದ ಜೋಷಿಯವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹುಬ್ಬಳ್ಳಿ ಧಾರವಾಡಗಳಲ್ಲಿ ಸಿನಿಮಾದ ನಿತ್ಯ ಉಚಿತ ಪ್ರದರ್ಶನ ಏರ್ಪಡಿಸಿದ್ದಾರೆ. ಸ್ವತಃ ಪ್ರಧಾನಿ ನರೇಂದ್ರ ಮೋದಿ ಚಿತ್ರದ ಪ್ರಶಂಸೆ ಮಾಡಿ ಚಿತ್ರತಂಡದೊಂದಿಗೆ ಫೋಟೋ ತೆಗೆಸಿಕೊಂಡಿದ್ದಾರೆ....

ಕೇವಲ ಒಂದು ಸಿನಿಮಾ ಬಗ್ಗೆ ಇಡೀ ಸರ್ಕಾರ- ಸರ್ಕಾರವಿರಲಿ, ದೇಶದ ಒಂದು ವರ್ಗವೇ- ಯಾಕೆ ಈ ಮಟ್ಟಿಗೆ ಉನ್ಮತ್ತವಾಗಿ ಓಲಾಡುತ್ತಿದೆ? ಸಾಮಾಜಿಕ ಮಾಧ್ಯಮಗಳಲ್ಲಿ 'ಕಾಶ್ಮೀರ್ ಫೈಲ್ಸ್' ಚಿತ್ರವನ್ನು ಅಟ್ಟಕ್ಕೇರಿಸುವ ಅಸಂಖ್ಯ ಪೋಸ್ಟ್‌ಗಳು ನಿತ್ಯ ಇಣುಕಾಡುತ್ತಿವೆ. ಒಂದು ಮಲ್ಟಿಪ್ಲೆಕ್ಸ್‌ನ ಆವರಣದಲ್ಲಿ ಪ್ರದರ್ಶನದ ಮುಂಚೆಯೋ ನಂತರವೋ ಜನರೆಲ್ಲ 'ವಂದೇ ಮಾತರಂ' ಘೋಷಣೆ ಕೂಗುತ್ತಿರುವ ವಿಡಿಯೊ ಎಲ್ಲೆಡೆ ಹರಿದಾಡುತ್ತಿದೆ.

ಯಾಕೆ? ಯಾಕಾಗಿ ಈ ಹಯಿಲು?... ಸಿನಿಮಾ ತಂಡವೇನೋ 'ಕಾಶ್ಮೀರ್ ಫೈಲ್ಸ್' ಇತಿಹಾಸದಲ್ಲಿ ಈವರೆಗೆ ಯಾರೂ ತೋರಿಸಿರದ ಸುಡು ಸತ್ಯವನ್ನು ತೆರೆ ಮೇಲೆ ತರುತ್ತಿರುವುದಾಗಿ ಘೋಷಿಸುತ್ತಿದೆ. ಆದರೆ ಈ ಚಿತ್ರಕ್ಕೂ, ಕಾಶ್ಮೀರಿ ಪಂಡಿತರು ಇತಿಹಾಸದಲ್ಲಿ ಕಂಡುಂಡ ರೌರವ ನರಕಕ್ಕೂ ತಳುಕು ಹಾಕುವ ತಪ್ಪು ಮಾಡುವುದು ಬೇಡ. ಹತ್ಯೆ, ಅತ್ಯಾಚಾರ, ದೌರ್ಜನ್ಯ, ಕಡೆಗೆ ಹುಟ್ಟಿ ಬೆಳೆದ ನೆಲವನ್ನು ತೊರೆದು, ಕಾಣದ ನಾಡಿಗೆ, ದಿಕ್ಕಿರದ ನಾಳೆಗಳಿಗೆ ವಲಸೆ... ಅವರ್ಣನೀಯ ಹಿಂಸೆಗೆ ಸಿಕ್ಕು ನೆಲೆ ತಪ್ಪಿದ ಈ ಪಂಡಿತರಿಗೆ ನಿಜಕ್ಕೂ ನ್ಯಾಯ, ನಿರಾತಂಕ ಬದುಕು ಸಿಗಲೇಬೇಕು. ಸಂಶಯವಿಲ್ಲ. ಆದರೆ ಕಾಶ್ಮೀರ್ ಫೈಲ್ಸ್ ಎಂಬ ಸಿನಿಮಾ ನಿಜಕ್ಕೂ ಸತ್ಯ- ಸಂಪೂರ್ಣ ಸತ್ಯ- ಹೇಳುತ್ತಿದೆಯೇ?

ಉತ್ತರ ಅರಸುವ ಮುನ್ನ ಇಲ್ಲಿ ಕೆಲವು ಮಹತ್ವದ ಪ್ರಶ್ನೆಗಳಿವೆ:

- ಕಾಶ್ಮೀರದ ದಂಗೆ ದೊಂಬಿಗಳಲ್ಲಿ ದೌರ್ಜನ್ಯಕ್ಕೆ ಈಡಾದವರು ಪಂಡಿತರು ಮಾತ್ರವೇ?
- ಅವರ ದಾರುಣ ಅವಸ್ಥೆಯ ಹೊಣೆ ಹೊರಬೇಕಾದವರು ಯಾರು? ಒಂದು ವರ್ಗ ಪ್ರಚಾರ ಮಾಡುತ್ತಿರುವ ಹಾಗೆ ಕಾಂಗ್ರೆಸ್ ಪಕ್ಷ ಮತ್ತು 'ಜಾತ್ಯತೀತ' ಎನಿಸಿಕೊಳ್ಳುವ ಬುದ್ಧಿಜೀವಿಗಳು ಈ ದಿಕ್ಕೆಟ್ಟಿಗೆ ಹೊಣೆಯೇ?
- 1990ರಿಂದ ಈವರೆಗೆ ಪಂಡಿತರ ಪಾಡು ಏನಾಗಿದೆ?

ಕಾಶ್ಮೀರಿ ಪಂಡಿತರು ತಮ್ಮ ನೆಲ ತೊರೆಯಲು ಕಾರಣವಾದದ್ದು ಯಾವುದೇ ಹಿಂದೂ ಮುಸ್ಲಿಂ ಘರ್ಷಣೆಯಲ್ಲ. ಕಾಶ್ಮೀರದ ಪಂಡಿತರು ಹಾಗೂ ಅಲ್ಲಿನ ಮುಸ್ಲಿಮರ ನಡುವಣ ಬಾಂಧವ್ಯ ಈಗಲೂ ತಂಪಾಗಿಯೇ ಇದೆ. ಅಲ್ಲಿನ ಪಂಡಿತರೂ ಸೇರಿದಂತೆ ಹಿಂದೂಗಳಷ್ಟೇ ಅಲ್ಲ, ಮುಸ್ಲಿಮರನ್ನೂ ಗುರಿಯಾಗಿಸಿ ದಾಳಿ ಮಾಡಿದವರು ಉಗ್ರಗಾಮಿಗಳು. ಉಗ್ರರಿಗೆ ಪಾಕಿಸ್ತಾನದ ಬೆಂಬಲವೂ ಇತ್ತು. ದಾಳಿ ಕಾಶ್ಮೀರಿ ಪಂಡಿತರಿಗೆ ಸೀಮಿತವಾಗಿರಲಿಲ್ಲ. ಪಂಡಿತರ ವಲಸೆಗೆ ಮುನ್ನವೇ ಉಗ್ರರು ಅಲ್ಲಿನ 15 ಸಾವಿರ ಮುಸ್ಲಿಮರನ್ನು ಕೊಂದಿದ್ದರು. 300ಕ್ಕೂ ಹೆಚ್ಚು ಹಿಂದೂಗಳ ಮಾರಣಹೋಮ ಮಾಡಿದ್ದರು. ಗೃಹ ಇಲಾಖೆ ಅಂಕಿ ಅಂಶಗಳ ಪ್ರಕಾರ ಗಲಭೆಯಲ್ಲಿ ಬಲಿಯಾದ ಪಂಡಿತರ ಸಂಖ್ಯೆ 219. (ಆದರೆ ಈ ಸಂಖ್ಯೆ ಕಾಶ್ಮೀರ್ ಫೈಲ್ಸ್ ನಿರ್ದೇಶಕರಿಗೆ ಸಮಾಧಾನ ತಂದಿಲ್ಲ. ಅವರು ತಮ್ಮ ಸಿನಿಮಾದಲ್ಲಿ ಒಟ್ಟು ನಾಲ್ಕು ಸಾವಿರ ಪಂಡಿತರ ಹತ್ಯೆಯಾಯಿತು ಎಂದು ಸಂಖ್ಯೆ ಕೊಟ್ಟು ಸಂಭ್ರಮಪಟ್ಟಿದ್ದಾರೆ! ಅವರ ಪಾಲಿನ 'ಸಂಪೂರ್ಣ ಸತ್ಯ' ಇದು!) ಆ ಗಲಭೆಯ ಸಂದರ್ಭದಲ್ಲಿ ಸುಮಾರು 24 ಸಾವಿರ ಪಂಡಿತ ಕುಟುಂಬಗಳು ಆ ಪ್ರಾಂತ್ಯದಿಂದ ಪಲಾಯನಗೈದವೆಂದು ಅಂದಾಜಿದೆ. ಅವರಿಗೆಲ್ಲ ರಕ್ಷಣೆ ನೀಡಿ, ಧೈರ್ಯ ತುಂಬಿ ಕಾಶ್ಮೀರದಲ್ಲೇ ಉಳಿಸಿಕೊಳ್ಳಲಾಗುತ್ತಿರಲಿಲ್ಲವೇ? ಇದಕ್ಕೆ ಉತ್ತರ ಇನ್ನೂ ಕೌತುಕಮಯವಾಗಿದೆ. ಈ ದುರ್ಘಟನೆ ನಡೆದಾಗ ಕೇಂದ್ರದಲ್ಲಿದ್ದದ್ದು ವಿ.ಪಿ. ಸಿಂಗ್ ನೇತೃತ್ವದ ನ್ಯಾಷನಲ್ ಫ್ರಂಟ್ ಸರ್ಕಾರ. ನೆನಪಿಡಬೇಕಾದ ಅಂಶ: ಬಿಜೆಪಿ- ಈ ಸರ್ಕಾರದ ಪಾಲುದಾರ. ಕಾಶ್ಮೀರದಲ್ಲಿ ರಾಜ್ಯಪಾಲರ ಆಡಳಿತ ಜಾರಿಗೆ ಬಂದಿತ್ತು. ಆಗ ರಾಜ್ಯಪಾಲರಾಗಿದ್ದವರು, ವಾಜಪೇಯಿ ಮತ್ತು ಅಡ್ವಾಣಿಯವರಿಂದ ನೇಮಕಗೊಂಡ ಬಿಜೆಪಿ ಮನುಷ್ಯ ಜಗಮೋಹನ್. ಜಗಮೋಹನ್ ಸೃಷ್ಟಿಸಿದ ಅನಗತ್ಯ ಭೀತಿಯ ವಾತಾವರಣವೇ ಪಂಡಿತರ ವಲಸೆಗೆ ಕಾರಣವಾಯಿತೆಂಬ ವರದಿಗಳಿವೆ. ಆಗ ಸಂಸತ್ತಿನಲ್ಲಿ ಕಾಶ್ಮೀರಿ ಪಂಡಿತರ ವಲಸೆ ಬಗ್ಗೆ ಆತಂಕ ವ್ಯಕ್ತಪಡಿಸಿ ಕ್ರಮಕ್ಕೆ ಆಗ್ರಹಿಸಿದ್ದು ರಾಜೀವ್ ಗಾಂಧಿ. ಮಿಕ್ಕಂತೆ ಲೋಕಸಭೆಯ ಎಲ್ಲ 89 ಬಿಜೆಪಿ ಸದಸ್ಯರೂ ಬಾಯಿಗೆ ಬೀಗ ಹಾಕಿಕೊಂಡು ಕುಳಿತಿದ್ದರೆ, ಅವರ ಮುಖಂಡ ಎಲ್.ಕೆ. ಅಡ್ವಾಣಿ, ನಾಡಿನ ಸೌಹಾರ್ದದ ಕನ್ನಡಿಯನ್ನು ಚೂರು ಚೂರು ಮಾಡಿದ ರಥಯಾತ್ರೆಯಲ್ಲಿ ಮಗ್ನರಾಗಿದ್ದರು! ಇದು ಇತಿಹಾಸ.

ವಲಸೆ ಬಂದ ಕಾಶ್ಮೀರಿ ಪಂಡಿತರಿಗೆ ಎಲ್ಲ ರಾಜ್ಯಗಳಲ್ಲಿ ನೌಕರಿ ನೀಡಿ ಎಲ್ಲ ಬಗೆಯ ಸೌಕರ್ಯ ಒದಗಿಸಲಾಯಿತು. ಯಾರೊಬ್ಬರೂ ಬೀದಿಗೆ ಬೀಳುವ ಪ್ರಸಂಗ ಬರಲಿಲ್ಲ. ಯಾಕೆಂದರೆ ಅವರೆಲ್ಲ ಕಲಿತ ಪಂಡಿತರಾಗಿದ್ದರು! ಆದರೆ ಈಗಲೂ ನಮ್ಮ ದೇಶದಲ್ಲಿ ಅನೇಕ ಬೃಹತ್ ನೀರಾವರಿ ಅಥವಾ ವಿದ್ಯುತ್ ಯೋಜನೆಗಳಿಗಾಗಿ ಮನೆ ಮಾರು ಕಳೆದುಕೊಂಡು ಬೀದಿಗೆ ಬಿದ್ದ ಲಕ್ಷಾಂತರ ದುರ್ಬಲರಿಗೆ ಯಾವ ಪುನರ್ವಸತಿಯೂ ಸಿಕ್ಕಿಲ್ಲ; ಆ ನಿರ್ಗತಿಕರು ಈಗಲೂ ನ್ಯಾಯದ ಬಾಗಿಲು ಬಡಿಯುತ್ತಲೇ ಇದ್ದಾರೆ ಎಂಬುದು ನಮ್ಮ ಗಮನದಲ್ಲಿರಲಿ. ಅದು ಇನ್ನೊಂದೇ ಭಾರತ....

ಆದರೆ ಈ ಯಾವ ಅಂಶವನ್ನೂ 'ಕಾಶ್ಮೀರ್ ಫೈಲ್ಸ್' ಸಿನಿಮಾ ಮುಟ್ಟಿದ ಹಾಗಿಲ್ಲ, ಆಯಿತು. ಕಾಶ್ಮೀರಿ ಪಂಡಿತರಿಗೆ ಈಗಲೂ ಪೂರ್ಣ ನ್ಯಾಯ ಸಿಕ್ಕಿಲ್ಲ ಎಂದೇ ಒಪ್ಪಿಕೊಳ್ಳೋಣ. ಮಾತೆತ್ತಿದರೆ ಪಂಡಿತರ ವಲಸೆ ಕಥೆ ಕೆದಕುವ ಬಿಜೆಪಿ ಈಗ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದೇ ಏಳು ವರ್ಷಗಳ ಮೇಲೆ ಆದುವಲ್ಲ? ಇದಕ್ಕೂ ಮುಂಚಿನ ವಾಜಪೇಯಿ ಆಡಳಿತದ ಮೊದಲ 13 ತಿಂಗಳು, ನಂತರದ ಐದು ವರ್ಷಗಳು? ಆ ಅವಧಿಯಲ್ಲಾದರೂ ಪಂಡಿತರಿಗೆ ಯಾವ ನ್ಯಾಯ ಸಿಕ್ಕಿದೆ?... ಆ ನತದೃಷ್ಟ ಪಂಡಿತರು ಈ 'ಕಾಶ್ಮೀರ್ ಫೈಲ್ಸ್' ಎಂಬ ಅಪಪ್ರಚಾರದ ದ್ವೇಷಪ್ರಚೋದಕ ಸಿನಿಮಾ ಒಂದರಿಂದಲೇ ತಮ್ಮ ಸಕಲ ಬವಣೆಗಳೂ ಪರಿಹಾರ ಆದವೆಂದು ತೃಪ್ತರಾಗಬೇಕೇ?

ಹೋಗಲಿ, ಈ ಸಿನಿಮಾದ ಅಂತಿಮ ಉದ್ದೇಶವಾದರೂ ಏನು? ಪಂಡಿತರ ದಾರುಣ ಅನುಭವವನ್ನು ಮಂಡಿಸಿ, ಎಂದೂ ಯಾವ ಜನಾಂಗವೂ ಮತ್ತೊಮ್ಮೆ ಇಂಥ ವೇದನೆಗೆ ಗುರಿಯಾಗದಿರಲಿ ಎಂಬ ಪಶ್ಚಾತ್ತಾಪಭರಿತ ಅನುಭೂತಿ ಸೃಷ್ಟಿಸುವುದೇ? ಅಥವಾ ಕಾಶ್ಮೀರದ ಹಿಂದೂಗಳ ದುರವಸ್ಥೆಗೆ ಮುಸ್ಲಿಮರು ಕಾರಣರೆಂದು ಹುಯಿಲೆಬ್ಬಿಸಿ ದೇಶದಾದ್ಯಂತ ಮತ್ತಷ್ಟು ಮತಿಹೀನ ಮುಸ್ಲಿಂ ದ್ವೇಷವನ್ನು ಬಿತ್ತುವುದು ಮಾತ್ರವೇ? ಎಲ್ಲೋ ಒಂದು ಕಡೆ 'ಕಾಶ್ಮೀರ್ ಫೈಲ್ಸ್' ಚಿತ್ರ ಪ್ರದರ್ಶನ ಪೂರೈಸಿದ ಕೂಡಲೇ ಸಭಿಕರೆಲ್ಲ ಎದ್ದು ಆರ್‌ಎಸ್‌ಎಸ್‌ನ ಗೀತೆ 'ನಮಸ್ತೆ ಸದಾ ವತ್ಸಲೆ' ಹಾಡುತ್ತ ನಿಂತ ವಿಡಿಯೊವನ್ನು ಸಂಸದ ಪ್ರತಾಪ ಸಿಂಹ ಟ್ವೀಟ್ ಮಾಡಿ 'ಇದು ಸಂಘ ಪರಿವಾರದ ಶಕ್ತಿ' ಎಂದು ಬರೆದುಕೊಂಡಿದ್ದಾರೆ! ಅಲ್ಲಿಗೆ ಉದ್ದೇಶ ಸ್ಪಷ್ಟವಾಯಿತಲ್ಲ? 'ಸಂಘ ಪರಿವಾರದ ಶಕ್ತಿ'ಯನ್ನು ಸಾರುವುದಕ್ಕೆ ಈ ಸಿನಿಮಾ ಒಂದು ಅಸ್ತ್ರ ಮಾತ್ರ; ಮಾನವ ಲೋಕದ ಅನಂತ ದುಃಖದ, ಇತಿಹಾಸದ ಪಾಠಗಳ, ಕಣ್ಣೀರಿನ ಪರಂಪರೆಯ ಅನಾವರಣವಲ್ಲ. ಅದಕ್ಕೇ ಇಡೀ ಬಿಜೆಪಿ ಪರಿವಾರಕ್ಕೆ ಈ ಪರಿ ಸಿನಿಮಾದ ಸನ್ನಿ ಹಿಡಿದಿರುವುದು.

ಲೇಖಕ: ಸಿನಿಮಾ ನಿರ್ದೇಶಕ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 72

ನಾರದನ ತಪೋಭಂಗ ವಿಫಲ

ಶ್ರೀ ಶಿವಮಹಾಪುರಾಣದ ಎರಡನೆ ಸಂಹಿತೆಯಾದ ರುದ್ರಸಂಹಿತೆಯ ಮೊದಲನೆ ಖಂಡವಾದ ಸೃಷ್ಟಿಖಂಡದ ಎರಡನೆಯ ಅಧ್ಯಾಯದಲ್ಲಿ ಸೂತಮುನಿಯು ಬ್ರಹ್ಮ-ನಾರದ ಸಂವಾದ ಪ್ರಸಂಗವನ್ನ ಪ್ರಯಾಗದ ಋಷಿಸಮೂಹಕ್ಕೆ ಹೇಳುತ್ತಾನೆ.

'ಒಂದಾನೊಂದು ಸಮಯದಲ್ಲಿ ಋಷಿಶ್ರೇಷ್ಠನಾದ ನಾರದಮಹರ್ಷಿ ತಪಸ್ಸು ಮಾಡಬೇಕೆಂದು ನಿಶ್ಚಯಿಸಿದ. ಹಿಮವತ್ ಪರ್ವತದ ತಪ್ಪಲಲ್ಲಿ ಬಹುಮನೋಹರವಾದ ಗುಹೆಯೊಂದರಲ್ಲಿ ದಿವ್ಯಕಾಂತಿಯುಕ್ತವಾದ ಆಶ್ರಮವಿತ್ತು. ಅದರ ಬಳಿ ಯಾವಾಗಲೂ ವೇಗದಿಂದ ಗಂಗಾನದಿ ಹರಿಯುತ್ತಿತ್ತು. ಆ ಗಂಗಾನದಿ ದಡದ ಗುಹಾಶ್ರಮದಲ್ಲಿ ದಿವ್ಯಜ್ಞಾನಿಯಾದ ನಾರದ ತಪಸ್ಸು ಮಾಡಲು ತೆರಳಿದ. ನಾರದ ಗುಹಾಶ್ರಮದಲ್ಲಿ ಕುಳಿತು, ಪ್ರಾಣಾಯಾಮಪುರಸ್ಸರವಾಗಿ ಬಹುದಿವಸಗಳವರೆಗೂ, ಶುದ್ಧಹೃದಯನಾಗಿ, ದೃಢಚಿತ್ತನಾಗಿ ತಪಸ್ಸನ್ನಾಚರಿಸಿದ.

'ನಾನೇ ಪರಬ್ರಹ್ಮನೆಂಬ ದಿವ್ಯವಾದ ಆತ್ಮಾನುಭವವಾಗುವಂತಹ ಪರಬ್ರಹ್ಮವಸ್ತುವನ್ನು ಸಾಕ್ಷಾತ್ಕರಿಸುವ ಸಮಾಧಿಸ್ಥಿತಿಯಲ್ಲಿ ನಾರದಮುನಿ ತಪೋಮಗ್ನನಾದ. ನಾರದ ತಪಸ್ಸನ್ನು ಮಾಡುತ್ತಿರುವುದನ್ನು ನೋಡಿ ಇಂದ್ರ ಆತಂಕಿತನಾದ. ಅಮರಾವತಿಯಲ್ಲಿರುವ ತನ್ನ ಇಂದ್ರ ಪದವಿಯನ್ನು ಕಿತ್ತುಕೊಳ್ಳಲು ನಾರದ ತಪಸ್ಸು ಮಾಡುತ್ತಿರಬೇಕೆಂದು ಕಳವಳಗೊಂಡ. ನಾರದ ತನ್ನ ರಾಜ್ಯವನ್ನು ಪಡೆದರೆ, ತಾನು ಕಾಲಕಸ ವಾಗುತ್ತೇನೆಂದು ಭಾವಿಸಿ, ನಾರದನ ತಪಸ್ಸು ಕೆಡಿಸಲು ಇಂದ್ರ ನಿರ್ಧರಿಸಿದ. ನಾರದನ ತಪಸ್ಸು ಕೆಡಿಸುವುದು ಹೇಗೆ? ಇಂದ್ರನಿಗೆ ಮನ್ಮಥನ ನೆನಪಾಯಿತು. ತಕ್ಷಣವೆ ಇಂದ್ರನ ಮುಂದೆ ಮನ್ಮಥ ಪ್ರತ್ಯಕ್ಷನಾದ.

'ಕುಟಿಲಮತಿಯಾದ ಸುರರಾಜ ಇಂದ್ರ, ಮನ್ಮಥನ ಮೂಲಕ ತನ್ನ ಸ್ವಾರ್ಥವನ್ನು ಸಾಧಿಸಲು ನಿರ್ಧರಿಸಿದ. ಹಿಮವತ್ಪರ್ವತದ ಗುಹೆಯೊಂದರಲ್ಲಿ ನಾರದಮಹರ್ಷಿ ಮಹಾಸಂಯಮಶೀಲನಾಗಿ ದೃಢಚಿತ್ತದಿಂದ ವಿಶ್ವೇಶ್ವರನಾದ ಶಿವನನ್ನು ಕುರಿತು ತಪಸ್ಸನ್ನಾಚರಿಸುತ್ತಿದ್ದಾನೆ. ಈ ತಪಸ್ಸಿನಿಂದ ಎಲ್ಲಿ ನನ್ನ ರಾಜ್ಯಕ್ಕೆ ಆಸೆಪಟ್ಟು, ಇಂದ್ರಪದವಿ ಬೇಡು ವನೋ ಎಂದು ಕಳವಳವಾಗಿದೆ. ಈಗಲೇ ನೀನು ಅವನಲ್ಲಿಗೆ ಹೋಗಿ, ಅವನ ತಪಸ್ಸಿಗೆ ವಿಘ್ನವನ್ನುಂಟುಮಾಡು – ಎಂದು ತಿಳಿಸಿದ.

'ಇಂದ್ರನ ಯೋಜನೆಯಂತೆ ಮನ್ಮಥ ತನ್ನ ಸ್ನೇಹಿತ ವಸಂತನೊಡನೆ ಹೋಗಿ, ನಾರದನ ತಪಸ್ಸು ಭಂಗ ಮಾಡುವ ಹಲವು ಚಮತ್ಕಾರಗಳನ್ನ ಮಾಡಿದ. ಮನ್ಮಥನೊಂದಿಗೆ ವಸಂತನೂ ಗರ್ವದಿಂದ ನಾನಾವಿಧ ವಾಗಿ ತನ್ನ ಪ್ರಭಾವವನ್ನು ಬೀರಿದ. ಆದರೂ ನಾರದನ ಮನಸ್ಸು ಸ್ವಲ್ಪವೂ ವಿಚಲಿತವಾಗಲಿಲ್ಲ. ಮನ್ಮಥ ಮತ್ತು ವಸಂತನ ಲೀಲೆಗೆ ನಾರದ ಆಕರ್ಷಿತನಾಗಲಿಲ್ಲ. ಮಹೇಶ್ವರನ ಅನುಗ್ರಹದಿಂದ ಆ ಮನ್ಮಥನ ಪ್ರಭಾವ ವ್ಯರ್ಥವಾಯಿತು. ಇದರಿಂದ ಅವರ ಗರ್ವವೆಲ್ಲ ಇಳಿಯಿತು.

'ಮನ್ಮಥನ ಪ್ರಭಾವ ನಾರದನ ಮೇಲೆ ಬೀರದಿರಲು ಕಾರಣ ಆ ಸ್ಥಳದ ಮಹಿಮೆ. ಈಶ್ವರಾನುಗ್ರಹದಿಂದ ಈ ಸ್ಥಳದಲ್ಲಿ ಮನ್ಮಥನ ಆಟವೇನೂ ನಡೆಯುತ್ತಿರಲಿಲ್ಲ. ಏಕೆಂದರೆ, ನಾರದ ತಪಸ್ಸು ಮಾಡುತ್ತಿದ್ದ ಇದೇ ಸ್ಥಳದಲ್ಲಿ ಈ ಹಿಂದೆ ಮದನಾಂತಕನಾದ ಶಿವನು ತಪಸ್ಸನ್ನಾ ಚರಿಸುತ್ತಿದ್ದ. ಆಗ ಶಿವನ ತಪೋಭಂಗಪಡಿಸಲು ಬಂದ ಮನ್ಮಥನನ್ನು ಕೋಪೋದ್ರಿಕ್ತನಾದ ಶಿವ ಕ್ಷಣಮಾತ್ರದಲ್ಲಿ ಫಾಲನೇತ್ರದಿಂದ ದಹಿಸಿ ಬಿಟ್ಟಿದ್ದ. ಶಿವನ ಕೋಪಕ್ಕೆ ಸುಟ್ಟುಹೋದ ತನ್ನ ಪತಿ ಮನ್ಮಥನನ್ನು ಹೇಗಾ ದರೂ ಮಾಡಿ ಬದುಕಿಸಬೇಕೆಂದು ದೇವತೆಗಳನ್ನು ರತಿ ಅಂಗಲಾಚಿ ಬೇಡಿಕೊಂಡಾಗ, ದೇವತೆಗಳೆಲ್ಲ ಶಂಕರನನ್ನು ಪ್ರಾರ್ಥಿಸಿ, ಮನ್ಮಥನನ್ನು ಬದುಕಿಸಿದ್ದರು. ಆಗ ಪ್ರತ್ಯಕ್ಷನಾದ ಶಿವ, ದೇವತೆಗಳನ್ನುದ್ದೇಶಿಸಿ, ಎಲೈ ದೇವತೆಗಳಿರಾ! ಕೆಲವು ಕಾಲ ಕಳೆದ ಮೇಲೆ ಮನ್ಮಥ ಪುನಃ ಬದುಕುತ್ತಾನೆ. ಆದರೆ ಈ ಸ್ಥಳಗಳಲ್ಲಿ ಮಾತ್ರ ಅವನ ಯಾವುದೊಂದು ಆಟವೂ ಯಾವ ಕಾಲದಲ್ಲೂ ನಡೆಯುವುದಿಲ್ಲ. ಜನಗಳ ಕಣ್ಣಿಗೆ ಎಲ್ಲಿಯವರೆಗೆ ಈ ಸ್ಥಳವು ಗೋಚರಿಸುತ್ತಿರುವುದೋ, ಅಲ್ಲಿಯವರೆಗೂ ಇಲ್ಲಿ ಮನ್ಮಥನ ಬಾಣಗಳು ತಮ್ಮ ಪ್ರಭಾವವನ್ನು ಬೀರಲಾರವು. ಈ ವಿಷಯದಲ್ಲಿ ಸ್ವಲ್ಪವೂ ಸಂದೇಹ ಬೇಡ – ಎಂದು ಹೇಳಿ ಅಂತರ್ಧಾನನಾಗಿದ್ದ. ಹೀಗೆ ಶಿವನ ಪ್ರಭಾವದಿಂದ, ನಾರದಮಹರ್ಷಿಯ ತಪೋಭಂಗ ಮಾಡಲು ಮನ್ಮಥನಿಗೆ ಸಾಧ್ಯವಾಗಲಿಲ್ಲ. ನಾರದನ ಮುಂದೆ ತನ್ನ ಆಟವೇನೂ ಸಾಗಲಿಲ್ಲ – ಎಂದು ಮನ್ಮಥ ತಾನು ಬಂದ ದಾರಿಹಿಡಿದು, ನೇರ ಇಂದ್ರನ ಬಳಿಗೆ ಹೋದ. ತನ್ನಿಂದ ನಾರದನ ತಪೋಭಂಗ ಮಾಡಲು ಆಗದಿದ್ದಕ್ಕೆ ವಿಷಾದಿಸಿ, ಅಲ್ಲಿಂದ ಹೊರಟುಹೋದ.'

ಮೋದಿ ಸರ್ಕಾರ ಇಲ್ಲದಿದ್ದರೆ ಸಿನಿಮಾ ಬಿಡುಗಡೆಯೇ ಆಗುತ್ತಿರಲಿಲ್ಲ

● ಪ್ರಕಾಶ್ ಬೆಳವಾಡಿ

ಚಿತ್ರಕಥೆಯಲ್ಲಿ ನಿರ್ದೇಶಕರು ಹೇಗೆ ಕಟ್ಟಿದ್ದಾರೆ, ಏನು ಬಿಟ್ಟಿದ್ದಾರೆ ಎಂಬ ಪ್ರಶ್ನೆಗೆ ಉತ್ತರ ಅವರೇ ಕೊಟ್ಟರೆ ಸರಿ. ಆದರೆ, ನಾನು ಒಂದು ಸಂವಾದದಲ್ಲಿ ಸಿನಿಮಾ ನೋಡಿ ಬಂದ ಕೆಲವು ಪ್ರೇಕ್ಷಕರ ಮುಂದೆ ನನ್ನದೊಂದು ಪ್ರಶ್ನೆಯಿಟ್ಟೆ: 'ನರೇಂದ್ರ ಮೋದಿಯವರ ನೇತೃತ್ವದ ಸರ್ಕಾರ ಇಲ್ಲದಿದ್ದರೆ, ಈ ಚಲನಚಿತ್ರ ಬಿಡುಗಡೆ ಕಾಣುವ ಸಾಧ್ಯತೆ ಇತ್ತೆ' ಎಂದೆ. ಅಲ್ಲಿ ಸೇರಿದ್ದ ಸುಮಾರು 100-150 ಮಂದಿ 'ಸಾಧ್ಯವೇ ಇಲ್ಲ!' ಎಂದು ಕೂಗಿದರು. ನನ್ನನ್ನು 'ಮೋದಿ ಚಮಚ' ಎಂದರೂ ಸರಿ, ನನ್ನ ಅಭಿಪ್ರಾಯವೂ ಅದೇ ಆಗಿದೆ

1990ರ ಜನವರಿಯಲ್ಲಿ 'ಸಂಡೇ' ವಾರಪತ್ರಿಕೆಗೆ ಬೆಂಗಳೂರು ಕರೆಸ್ಪಾಂಡೆಂಟ್ ಆಗಿದ್ದ ನಾನು ಆಗಷ್ಟೆ ರಾಜೀನಾಮೆ ಕೊಟ್ಟು ಹೊರಗೆ ಬರುವ ನಿರ್ಧಾರ ಮಾಡಿದ್ದೆ. ಆ ಚಳಿಗಾಲದ ತಿಂಗಳಲ್ಲಾಗಲಿ ಅಥವಾ ಮುಂದೆ ನಾನು ಬೆಂಗಳೂರು ಮತ್ತು ದೆಹಲಿಯಲ್ಲಿ ಕೆಲಸ ಮಾಡಿದ ಏಷಿಯನ್ ಏಜ್ ಪತ್ರಿಕೆಯ ದಿನಗಳಲ್ಲಾಗಲಿ, ಬರೆದ ಅಂಕಣಗಳಲ್ಲಿ, ಪತ್ರಕರ್ತ ಬಂಧುಗಳ ಜೊತೆ ಮಾತು ಹರಟೆಯಲ್ಲಿ ಎಂದೂ ಕಾಶ್ಮೀರದ ಬಗ್ಗೆ ಪ್ರಸ್ತಾಪ ಮಾಡಿದ್ದು ನನಗೆ ನೆನಪಿಲ್ಲ. ಅವರು ಯಾರೂ ವಿಷಯದತ್ತ ಗಮನ ಹರಿಸಿದ್ದೂ ನೆನಪಿಲ್ಲ.

ಈಗ ವಿವೇಕ್ ಅಗ್ನಿಹೋತ್ರಿಯವರ 'ದ ಕಾಶ್ಮೀರ್ ಫೈಲ್ಸ್' ಚಿತ್ರ ಬಿಡುಗಡೆ ಕಂಡ ಒಂದು ವಾರದಲ್ಲಿ ಅದರ ಬಗ್ಗೆ ಬಿಡುವಿಲ್ಲದ ಚರ್ಚೆಯಾಗಿದೆ. ಚಿತ್ರದಲ್ಲಿ ನಾನು ಒಂದು ಪಾತ್ರದಲ್ಲಿ ಅಭಿನಯಿಸಿರುವ ಕಾರಣ ಹಲವು ಚರ್ಚೆಗಳಲ್ಲಿ ಪಾಲ್ಗೊಳ್ಳುವ ಅನಿವಾರ್ಯತೆಗೆ ಒಳಗಾಗಿದ್ದೇನೆ. ಜನಪ್ರಿಯವಾಗಿಯೂ ಹಲವು ವಿವಾದಗಳಿಗೆ ಪ್ರಶ್ನೆಗಳಿಗೆ ಕಾರಣವಾಗಿರುವ ಈ ಚಿತ್ರ ನಮ್ಮನ್ನು ಸ್ವಲ್ಪ ದಿನಗಳ ಮಟ್ಟಿಗಾದರೂ ಕಾಡುವುದಂತೂ ಖಂಡಿತ ಎನಿಸುತ್ತದೆ.

ನಮ್ಮ ಮುಂದೆ ಇರುವ ಪ್ರಶ್ನೆಗಳು ಒಟ್ಟು ಹೇಳಬಹುದಾದರೆ ಈ ರೀತಿಯವು: 1) ಇದು ಮುಚ್ಚಿಟ್ಟ ಸತ್ಯವೆ, ಅಥವ ಸುಳ್ಳೆ? 2) ಮುಚ್ಚಿಟ್ಟವರು ಯಾರು? 3) ತಪ್ಪಿತಸ್ಥರು ಯಾರುಯಾರು? 4) ಅಗ್ನಿಹೋತ್ರಿಯವರು ಸತ್ಯ ಸಂಗತಿಗಳನ್ನು ತಮ್ಮ ಸಿನಿಮಾ ಕಥೆಯನ್ನು ಕಟ್ಟುವುದಕ್ಕಾಗಿ ಕೆಲವನ್ನು ಇಟ್ಟುಕೊಂಡು, ಕೆಲವು ತಿರುಚಿ, ಕೆಲುವನ್ನು ಬಿಟ್ಟು ಮಾಡಿದ್ದಾರೆಯೆ? 5) ಕೋಮುಗಳ ಮಧ್ಯೆ ಇರುವ ಒಡಕುಗಳನ್ನು ಹೆಚ್ಚಿಸುತ್ತಿರುವ ಈ ಚಿತ್ರವನ್ನು ತಯಾರಿಸುವ ಅಗತ್ಯವಿತ್ತೆ? 6) ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಸಾರ್ವಜನಿಕವಾಗಿ ಈ ಚಿತ್ರವನ್ನು ಮೆಚ್ಚುವುದು, ಬೆಂಬಲಿಸುವುದು ಮತ್ತು ರಾಜ್ಯ ಸರ್ಕಾರಗಳು ಅದಕ್ಕೆ ತೆರಿಗೆ ವಿನಾಯತಿಯನ್ನು ಘೋಷಿಸುವುದು ಪಕ್ಷಪಾತ ಮಾಡಿದಂತೆ ಅಲ್ಲವೆ?

ಮೊದಲಿಗೆ, 1985ರ ನಂತರ ಕಾಶ್ಮೀರದಿಂದ ಭಯೋತ್ಪಾದನೆ ಮತ್ತು ಹಿಂಸೆಗೆ ಹೆದರಿ ಕಾಶ್ಮೀರದ ಪಂಡಿತರು ಹೆಚ್ಚಾಗಿ, ಜೊತೆಗೆ ಇತರ ಹಲವು ಜನಾಂಗದವರೂ ಕೂಡಿ ಗುಳೆ ಹೊರಟದ್ದು ನಿಜ. ಇಲ್ಲ ಎಂದು ಯಾರೂ ಹೇಳುತ್ತಿಲ್ಲ. ತಮ್ಮ ರಾಷ್ಟ್ರದಲ್ಲೇ ನಿರಾಶ್ರಿತರಾದ ಇವರಿಗೆ ಜಮ್ಮು ಮತ್ತು ದೆಹಲಿಯಲ್ಲಿಯ ನಿರಾಶ್ರಿತ ಶಿಬಿರಗಳಲ್ಲಿ ಆಶ್ರಯ ಒದಗಿಸಿರುವುದೂ ನಿಜ.

ಎಷ್ಟು ಜನ ಹಿಂಸೆಗೆ ಬಲಿಯಾದರೊ, ಗುಳೆ ಹೊರಟರೊ, ಈ ಕೊಳಕು ಶಿಬಿರಗಳಲ್ಲಿ ತಡೆಯಲಾಗದ ಬಿಸಿಲಿಗೆ, ಕಾಯಿಲೆಗಳಿಗೆ ಬಲಿಯಾದರೊ ಸ್ಪಷ್ಟವಾಗಿ ಗೊತ್ತಿಲ್ಲ. ದಾಖಲೆಗಳ ಕೊರತೆ ಏನೇ ಇರಲಿ, ಕಾಶ್ಮೀರದಲ್ಲಿ ಈಗ ಉಳಿದಿರುವ ಕಾಶ್ಮೀರಿ ಪಂಡಿತರ ಸಂಖ್ಯೆ, ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ಕಾಲದಲ್ಲಿ ಇದ್ದವರ ಸಂಖ್ಯೆಗೆ ಹೋಲಿಸಿದರೆ, ಲಕ್ಷಾಂತರ ಜನ ಪಂಡಿತರು ಮತ್ತು ಸಣ್ಣ ಸಣ್ಣ ಪ್ರಮಾಣದಲ್ಲಿ ಬೇರೆ ಜನಾಂಗಗಳ ನಿರಾಶ್ರಿತರು ಅಲ್ಲಿಂದ ಓಡಿಹೋಗಿದ್ದನ್ನು ಒಪ್ಪಲೇಬೇಕು.

ಚಿತ್ರಕಥೆಯಲ್ಲಿ ನಿರ್ದೇಶಕರು ಹೇಗೆ ಕಟ್ಟಿದ್ದಾರೆ, ಏನು ಬಿಟ್ಟಿದ್ದಾರೆ ಎಂಬ ಪ್ರಶ್ನೆಗೆ ಉತ್ತರ ಅವರೇ ಕೊಟ್ಟರೆ ಸರಿ. ಆದರೆ, ನಾನು ಒಂದು ಸಂವಾದದಲ್ಲಿ ಸಿನಿಮಾ ನೋಡಿ ಬಂದ ಕೆಲವು ಪ್ರೇಕ್ಷಕರ ಮುಂದೆ ನನ್ನದೊಂದು ಪ್ರಶ್ನೆಯಿಟ್ಟೆ: 'ನರೇಂದ್ರ ಮೋದಿಯವರ ನೇತೃತ್ವದ ಸರ್ಕಾರ ಇಲ್ಲದಿದ್ದರೆ, ಈ ಚಲನಚಿತ್ರ ಬಿಡುಗಡೆ ಕಾಣುವ ಸಾಧ್ಯತೆ ಇತ್ತೆ' ಎಂದೆ. ಅಲ್ಲಿ ಸೇರಿದ್ದ 100-150 ಮಂದಿ 'ಸಾಧ್ಯವೇ ಇಲ್ಲ!' ಎಂದರು. ನನ್ನನ್ನು 'ಮೋದಿ ಚಮಚ' ಎಂದರೂ ಸರಿ, ನನ್ನ ಅಭಿಪ್ರಾಯವೂ ಅದೇ ಆಗಿದೆ.

ಈ ಚಲನಚಿತ್ರವನ್ನು 'ಪ್ರೊಪಗಾಂಡ' ಅನ್ನುವವರಿಗೆ ಇನ್ನೊಂದು ಪ್ರಶ್ನೆ ಕೇಳುತ್ತೇನೆ. ಹಿಂದೆ ಐವತ್ತು ಅರವತ್ತು ವರ್ಷಗಳಿಗೂ ಹೆಚ್ಚು ಆಡಳಿತದಲ್ಲಿದ್ದ ಪಕ್ಷಗಳ ರಾಜಕೀಯ ಮತ್ತು ಸಾಮಾಜಿಕ ಕಲ್ಪನೆಗಳಿಗೆ ಒಪ್ಪುವ ಚಲನಚಿತ್ರಗಳನ್ನು ನಿರ್ದೇಶಕರು ತಯಾರಿಸಿದಾಗ, ಜನ ಅವನ್ನು ನೋಡಲಿ ಬಿಡಲಿ, ಕೇಂದ್ರದಲ್ಲಿ ಆಡಳಿತ ನಡೆಸುತ್ತಿದ್ದ ಸರ್ಕಾರಗಳು ಸೋವಿಯತ್ ಶೈಲಿಯ ಪ್ರಶಸ್ತಿ ಆಯ್ಕೆ ಸಮಿತಿಯನ್ನು ರಚಿಸಿ ಅವರಿಂದ ಇಂಥ ನಿರ್ದೇಶಕರಿಗೆ ಪ್ರಶಸ್ತಿ ಕೊಡಿಸಿಲ್ಲವೆ? ತಮ್ಮ ಏಕಸ್ವಾಮ್ಯ ಮತ್ತು ನಿಯಂತ್ರಣದಲ್ಲಿದ್ದ ದೂರದರ್ಶನದಲ್ಲಿ ಈ ಚಿತ್ರಗಳಿಗೆ ಪ್ರದರ್ಶನ ಕಾಣುವ ಅವಕಾಶ ಮಾಡಿಕೊಟ್ಟದ್ದೂ ನಿಜ. ಇದು ಸರಿಯೊ ತಪ್ಪೋ ಬಿಡಿ, ಆದರೆ ಇದು 'ಪ್ರೊಪಗಾಂಡ' ಎಂಬ ಪದಕ್ಕೆ ಸರಿಯಾಗಿ ಒದಗುವ ಕೆಲಸ. ಆಸಕ್ತ ವೀಕ್ಷಕರಿಂದ ದುಡ್ಡು ಪಡೆದು ಹೌಸ್‌ಫುಲ್ ಆಗುತ್ತಿರುವ ಚಿತ್ರಕ್ಕೆ ಇದು ಅನ್ವಯಿಸುವುದಿಲ್ಲ. ಅಲ್ಲದೆ ಹಿಂದಿನ ಸರ್ಕಾರಗಳು ಈ ಚಿತ್ರ ಬಿಡುಗಡೆ ಕಾಣಲು ಸುಲಭವಾಗಿ ಅವಕಾಶ ಮಾಡಿಕೊತ್ತಿರಲಿಲ್ಲ ಎನ್ನುವುದಾದರೆ, ಎಲ್ಲರಿಗೂ ಒದಗಬೇಕಾದ ಜವಾಬ್ದಾರಿ ಇರಬೇಕಾದ ಸರ್ಕಾರಗಳಲ್ಲಿಯೇ ಇಲ್ಲದ ಉದಾರ ಮಾನವತವಾದ, ವಿಷಯನಿಷ್ಠವಾದ ಪರಿಕಲ್ಪನೆಯುಳ್ಳ ಒಂದು ಚಲನಚಿತ್ರದಲ್ಲಿ ಸಿಗಬೇಕು ಎನ್ನುವುದು ಸೋಗಲಾಡಿತನವಷ್ಟೆ.

ಕಡೆಯದಾಗಿ, ಇದನ್ನು ಹೀಗೆ ರಾಜಾರೋಷವಾಗಿ ಮೋದಿಯವರು, ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳ ಸರ್ಕಾರಗಳು ಬೆಂಬಲಿಸುವುದು ಸರಿಯೆ? ಇದು ನನ್ನನ್ನು ಮುಜುಗರಕ್ಕೆ ಒಡ್ಡುವ ಸವಾಲು. ಕೋಮು ವಿವಾದಗಳಿಗೆ ನೆಲೆಯೊದಗಿಸುವ ಅಪಾಯ ಎದುರಾದಾಗ, ಆಡಳಿತದಲ್ಲಿದ್ದವರು ಈ ಚಲನಚಿತ್ರದಿಂದ ದೂರ ಉಳಿಯುವುದು ಸರಿ. ಬೇರೆ ಪಕ್ಷಗಳು ಏನೇ ಹೇಳಿದರೂ, ತಲೆಕೆಟ್ಟ ಟ್ವೀಟ್ ಮಾಡಿದರೂ 'ಸಬ್ಕಾ ವಿಶ್ವಾಸ್' ಪರಿಕಲ್ಪನೆಗೆ ಬದ್ಧವಾಗಿ ಇರುವುದು ಸರಿ. ಒಲಿದವರು, ಜೊತೆಗೆ ಒಲಿಯದವರಿಗೂ ಅವರೇ ಪ್ರಧಾನಿ. ಜೊತೆಗೆ ಅವರ ಮುಂದೆ ಇನ್ನೊಂದು ಸವಾಲಿದೆ. ಇದು ಗತಿಸಿಹೋದ ಇತಿಹಾಸವಲ್ಲ. ನಾವು ನೋಡಲು ನಿರಾಕರಿಸಿದ್ದರೂ ನಿರಾಶ್ರಿತರು ಇನ್ನೂ ನಮ್ಮ ಕಣ್ಣ ಮುಂದೆ ಇದ್ದಾರೆ. ಅವರಿಗೆ ತಕ್ಕ ಪರಿಹಾರವನ್ನು ನೀಡಬೇಕಾದ್ದ ಹೊಣೆಗಾರಿಕೆಯನ್ನು ಇಂದಿನ ಕೇಂದ್ರ ಸರ್ಕಾರ ಹೊರಬೇಕಾಗಿದೆ.

ಈ ಸಿನಿಮಾ 'ಬೇಕಿತ್ತೆ' ಎನ್ನುವವರಿಗೆ ಇದೇ ಉತ್ತರ. ಅನ್ಯಾಯಕ್ಕೆ ಒಳಗಾಗಿರುವ ಜನ ಎಲ್ಲಿಯವರೆಗೂ ನೋವಿನ ಅನುಭವಕ್ಕೆ ಒಳಗಾಗಿರುವರೊ, ಅಲ್ಲಿಯವರೆಗೂ ಅವರಿಗೆ ಸ್ಪಂದಿಸುವುದು ಪ್ರಸ್ತುತ. ಪರಸ್ಪರ ಸಂಶಯಗಳು, ಸಿಟ್ಟು ಅಸಮಾಧಾನಗಳು ಕೋಮುಗಳ ನಡುವೆ ಇದ್ದರೆ, ಎಲ್ಲರಿಗೂ ಸತ್ಯಾಸತ್ಯೆಗಳ ಬಗ್ಗೆ ಮನದಟ್ಟಾಗುವಂತೆ ಈ ಇತಿಹಾಸದಲ್ಲಿ ತಮ್ಮ ತಮ್ಮ ಪಾಲನ್ನು ಒಪ್ಪಿಕೊಂಡು ಎಲ್ಲಾ ಪಕ್ಷಗಳೂ ಕೂಡಿ ವಿಚಾರಣೆ ನಡೆಸಲಿ, ತಪ್ಪು ಮಾಡಿದವರು ಯಾರುಯಾರು ಎಂದು ತೀರ್ಮಾನಿಸಲಿ, ನೊಂದವರಿಗೆ ಪರಿಹಾರವನ್ನು ರೂಪಿಸಲಿ.

ಲೇಖಕ: ಸಿನಿಮಾ ನಿರ್ದೇಶಕ, ನಟ

ಪದಬಂಧ 4902

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

4.ಜನ ಮಾನಸದಲ್ಲಿರುವ ತಿಂಗಳು! (2)
5.ಚಂದವಾಗಿ ತೇಯ್ದಿರುವ ಶ್ರೀಗಂಧ (3)
6.ಪ್ರಾಣವಾಯು ಇಲ್ಲಿದೆ (5)
9.ರಜದಲ್ಲಿ ನೋಡಿರುವ ಪಾದರಸ (3)
10.ಗಣಿ ಹತ್ತಿರ ಕಲಿತಿರುವ ಲೆಕ್ಕಶಾಸ್ತ್ರ (3)
11.ಸ್ವಪ್ನವನ್ನು ಕಾಣುವವನು (5)
14.ಇಂಗಿ ಹೋಗದ ಮನೋಗತ! (3)
15.ತಪ್ಪನ್ನು ಮನ್ನಿಸುವುದು (2)

ಮೇಲಿಂದ ಕೆಳಕ್ಕೆ

1.ಆಶ್ರಯವೇ ಉಲ್ಟಾಪಲ್ಟಾ ಆಗಿದೆಯಲ್ಲಾ? (3)
2.ದನ ಕೊನೆಗಿರುವಾಗ ಈ ಅಲುಗಾಟ! (3)
3.ಮೆಲುವಾಗಿ ಬೀಸುತ್ತಿರುವ ಗಾಳಿ (5)
7.ನೀರಿನಿಂದಾದ ಅನಿಲ (5)
8.ಈ ರೀತಿ ಅಲಕ್ಷಿಸು (5)
9.ಅತ್ತಿಗೆ ತೋರಿಸಿದ ಚಿಟ್ಟೆ (5)
12.ಬೆಳಗಿನ ಜಾವವಿದು (3)
13.ಕಾಪಾಡುವವ ಇಲ್ಲಿದ್ದಾನೆ (3)



4901ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅನುವಾದಕ
3.ಬೀಜ5.ಲಾವಣಿ
6.ಪಕ್ಷ 8.ಪದವಿ10.ಕಲಿ
11.ಹಣ12.ಸುಗಮ
14.ಸುಮ16.ವಿಧಾತ
17.ಡಬ್ಬ
18.ರತ್ನಖಚಿತ

ಮೇಲಿಂದ ಕೆಳಕ್ಕೆ:
1.ಅನುಲೇಪ
2.ಕಲಾವಿದ4.ಜಯಶಾಲಿ
7.ಕ್ಷಪಣ8.ಪರಿಸು
9.ವಿರಾಮ 10.ಕನಸು
11.ಹತ್ಯಾಕಾಂಡ
13.ಗತ್ಯಂತರ15.ಮನೋಗತ

ಸುಡೊಕು 5288

				8			6	
			1		6		2	3
3		5		2		9		
	8	7					1	
		4	7	6	3	8		
5	9						7	4
		2	6	7		1		5
1	4		2				9	
	5			4		2		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5287 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಮಾರ್ಚ್ 19, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ-ಶಿಶಿರ ಋತು ಮೀನ ಮಾಸದ 05 ನೇ ದಿನ ತಿಥಿ: (ಫಾಲ್ಗುಣ ಕೃಷ್ಣ) ಪ್ರತಿಪದ್ ಗಂ. 11-38 ನಕ್ಷತ್ರ: ಹಸ್ತ ಗಂ. 23-38 ಯೋಗ: ವೃದ್ಧಿ ಗಂ. 21-00, ಕರಣ: ಕೌಲವ ಗಂ. 11-38.
ರಾಹುಕಾಲ : ಬೆಳಿಗ್ಗೆ 09:00 – 10:30 ಸೂರ್ಯೋದಯ : 06-39 ಸೂರ್ಯಾಸ್ತ : 06-38
ಮುಸ್ಲಿಂ ದಿನಾಂಕ : 15 ಶಬನ್ ದಿನ ವಿಶೇಷ : ಹೋಳಿ, ವಸಂತೋತ್ಸವ, ಸಬ್-ಎ-ಬಾರತ್ (ಹಿಂದಿನ ದಿನ-ಮುಸ್ಲಿಂ) ಅದೃಷ್ಟ ಸಂಖ್ಯೆ: 7, 9

ಮೇಷ: ನಿಮ್ಮ ಅವಕಾಶಗಳನ್ನು ಹೆಚ್ಚಿಸಿಕೊಳ್ಳಲು ಈ ಸುಸಂದರ್ಭವನ್ನು ಸೂಕ್ತವಾಗಿ ಬಳಸಿಕೊಳ್ಳಿ. ಹಿಂದೆಂದೂ ಮಾಡದ ಕೆಲಸಗಳನ್ನು ಈಗ ಮಾಡಬೇಕಾಗುವುದು. ಸುಗಂಧ ವಸ್ತುಗಳ ಮಾರಾಟದಲ್ಲಿ ಲಾಭ.

ವೃಷಭ: ನಿಮ್ಮನ್ನು ಅಥವಾ ನಿಮ್ಮ ನಾಜೂಕತೆಯ ಕೆಲಸವನ್ನು ಕಂಡು ಅಸೂಯೆ ಪಡುವ ಸಹೋದ್ಯೋಗಿಗಳು ಹಾಗೂ ಮೇಲಧಿಕಾರಿಗಳೊಂದಿಗೆ ಜಾಣ್ಮೆಯಿಂದ ವ್ಯವಹರಿಸಿ. ಸ್ಪರ್ಧಾತ್ಮಕ ವಾತಾವರಣ ಎದುರಿಸಬೇಕಾಗುವುದು.

ಮಿಥುನ: ಬದುಕಿನಲ್ಲಿ ಈ ದಿನವೂ ಒಂದು ಮಹತ್ವದ ದಿನವೆನಿಸಲಿದೆ. ವಿದ್ಯಾಭ್ಯಾಸದಲ್ಲಿ ಹಿನ್ನಡೆ ತೋರಿಬಂದು ವಿದ್ಯಾರ್ಥಿಗಳಿಗೆ ನಿರಾಸೆ ಹಾಗೂ ಕೋಪ ಕಾಡಲಿದೆ. ಹಲವು ದಿನಗಳಿಂದಿರುವ ದೇಹಾಯಾಸವು ಶಮನವಾಗುವುದು.

ಕರ್ಕಾಟಕ: ತಂದೆಯವರ ಆರೋಗ್ಯ ಸ್ಥಿತಿ ಗಂಭೀರವಾಗುವುದು. ಯೋಗ್ಯ ವಯಸ್ಕರರಿಗೆ ವಿವಾಹಭಾಗ್ಯ. ಈ ದಿನ ಗೋವಿನ ಸೇವೆ ಮಾಡುವುದರಿಂದ ಸಮಸ್ಯೆಗಳಿಗೆ ಪರಿಹಾರ ತಾನಾಗಿಯೇ ಗೋಚರಿಸಲಿದೆ.

ಸಿಂಹ: ಮನೆಯಲ್ಲಿ ಮಕ್ಕಳ ಸಂತಸ ಸಡಗರ ಕಂಡು ಮನಸ್ಸಿಗೆ ಸಂತೋಷ. ನಾನಾ ರೀತಿಯಲ್ಲಿ ಉನ್ನತಿ ಗೋಚರಕ್ಕೆ ಬಂದರೂ ಲೆಕ್ಕಾಚಾರದ ಬಗ್ಗೆ ಗಮನವಿರಲಿ. ತರಕಾರಿ, ಸೊಪ್ಪು ಬೆಳೆಗಾರರಿಗೆ ಅಧಿಕ ಲಾಭ.

ಕನ್ಯಾ: ಕೈಗೊಂಡ ಕೆಲಸಗಳು ಭಾಗಶಃ ಆರ್ಥಿಕ ದುಸ್ಥಿತಿಯಿಂದಾಗಿ ವಿಳಂಬ ಸಾಧ್ಯತೆ. ಸೋಲನ್ನು ಒಪ್ಪಿಕೊಳ್ಳುವ ಮನಸ್ಥಿತಿ ಬಿಡಿ. ಆತ್ಮವಿಶ್ವಾಸವನ್ನು ರೂಢಿಸಿಕೊಂಡು ಪರಿಶ್ರಮದಿಂದ ಪ್ರಗತಿಯ ಹಾದಿಗೆ ಗಮನಹರಿಸಿ.

ತುಲಾ: ಸಂಘ-ಸಂಸ್ಥೆಗಳಿಗೆ ಪದಾಧಿಕಾರಿಯಾಗುವ ಅವಕಾಶ ಸಿಗಲಿದೆ. ಸ್ವಂತ ಉದ್ದಿಮೆ ಆರಂಭಿಸುವ ಮನಸ್ಸಾಗಲಿದೆ. ಆಸ್ತಿ ಕೊಳ್ಳುವ ವಿಷಯದಲ್ಲಿ ಮಾತುಕತೆ ನಡೆಯುವುದು. ವ್ಯವಹಾರ ನಿಮಿತ್ತ ದೂರದ ಪ್ರಯಾಣ ಸಾಧ್ಯತೆ.

ವೃಶ್ಚಿಕ: ಇಂದು ನಿಮ್ಮ ಶತ್ರುಗಳು ಮಾಡುವ ರಾಜಕೀಯ ಸನ್ನಿವೇಶಗಳು ನಿಮಗೆ ಅನುಕೂಲವಾಗಿಯೇ ಇರುವುದು. ಈ ದಿನ ಮನರಂಜನೆಗಿಂತ ಕೆಲಸಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡುವುದು ಉತ್ತಮ. ನೀಲಿ ಬಣ್ಣ ಶುಭ ತರಲಿದೆ.

ಧನು: ಬಹಳ ಬೇಗ ಗುರಿ ತಲುಪಬೇಕು ಎಂಬ ಹಂಬಲವು ನಿಮ್ಮ ಫಲಿತಾಂಶಕ್ಕೆ ಅಡ್ಡಿ ಮಾಡುವ ಸಾಧ್ಯತೆಯಿದೆ. ಮನೆಯಲ್ಲಿ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ. ವಾಹನಗಳಿಂದ ಹೆಚ್ಚಿನ ಆದಾಯವನ್ನು ನಿರೀಕ್ಷಿಸಬಹುದು.

ಮಕರ: ಮಹತ್ವದ ನಿರ್ಧಾರಗಳನ್ನು ಕೈಗೊಳ್ಳಲು ಚಂಚಲ ಮನಸ್ಸು ಅಡ್ಡಿ ಮಾಡುವುದು. ಕೆಲಸಗಳು ಸುಲಭವಾಗಿಸಲು ಸ್ನೇಹಿತರೊಬ್ಬರು ನಿಮಗೆ ನೆರವಾಗಲಿದ್ದಾರೆ. ವಿವಾಹ ವಯಸ್ಕ ಮಗಳಿಗೆ ಅನುರೂಪ ವರ ದೊರೆತು ನೆಮ್ಮದಿ.

ಕುಂಭ: ಸರಿಯಾದ ಪರಿಶೀಲನೆ ಇಲ್ಲದೆ ಯಾವ ಕೆಲಸಗಳಲ್ಲೂ ಹೂಡಿಕೆ ಸಲ್ಲದು. ವೈಯಕ್ತಿಕ ಕಾರ್ಯದೊತ್ತಡದ ನಡುವೆಯೂ ಸಾಮಾಜಿಕ ಕೆಲಸ ಕಾರ್ಯಗಳನ್ನು ಮಾಡುವ ನಿಮಗೆ ರಾಜಕೀಯ ಸೇರಲು ಆಹ್ವಾನ ಬರಲಿದೆ.

ಮೀನ: ಸ್ನೇಹಿತರು ನಿಮ್ಮ ಪ್ರಾಮಾಣಿಕತೆಯನ್ನು ದುರುಪಯೋಗಪಡಿಸಿಕೊಂಡು ಲಾಭ ಮಾಡಿಕೊಳ್ಳಬಹುದು. ಇಂದು ಎದುರಾಗುವ ಎಲ್ಲಾ ತೊಂದರೆಗಳನ್ನೂ ಎದುರಿಸುವಾಗ ಧೈರ್ಯಗೆಡದಿರಿ.

ಮಾನ್ ಸಂಪುಟ: ಇಂದು ಪ್ರಮಾಣ

ಚಂಡೀಗಡ (ಪಿಟಿಐ): ಪಂಜಾಬ್‌ನಲ್ಲಿ ಅಧಿಕಾರಕ್ಕೆ ಬಂದಿರುವ ಎಎಪಿ ಸರ್ಕಾರಕ್ಕೆ ಒಬ್ಬರು ಮಹಿಳೆ ಸೇರಿದಂತೆ ಹತ್ತು ಸಚಿವರು ಶನಿವಾರ ಸೇರ್ಪಡೆ ಆಗಲಿದ್ದಾರೆ. ಸಂಭಾವ್ಯ 10 ಸಚಿವರಲ್ಲಿ ಎಂಟು ಮಂದಿ ಮೊದಲ ಬಾರಿಗೆ ಶಾಸಕರಾದವರು.

ಹೊಸ ಸಚಿವರ ಪ್ರಮಾಣವಚನ ಸಮಾರಂಭವು ರಾಜಭವನದಲ್ಲಿ ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ.

ಮುಖ್ಯಮಂತ್ರಿ ಭಗವಂತ ಮಾನ್ ಅವರು 10 ಸಚಿವರ ಹೆಸರನ್ನು ಶುಕ್ರವಾರ ಸಂಜೆ ಟ್ವೀಟ್‌ನಲ್ಲಿ ಪ್ರಕಟಿಸಿದ್ದಾರೆ.

ಎರಡನೇ ಬಾರಿಗೆ ಶಾಸಕರಾಗಿರುವ ಹರ್ಪಾಲ್ ಸಿಂಗ್ ಚೀಮಾ ಅವರಿಗೆ ಸಚಿವ ಸಂಪುಟದಲ್ಲಿ ಸ್ಥಾನ ನೀಡಲು ನಿರ್ಧರಿಸಲಾಗಿದೆ. ದಿಬ್ಬಾದ ಶಾಸಕ ರಾಗಿರುವ ಅವರು ದಲಿತ ಸಮುದಾಯದ ನಾಯಕ. ಈ ಹಿಂದಿನ ವಿಧಾನಸಭೆಯಲ್ಲಿ ಅವರು ವಿರೋಧ ಪಕ್ಷದ ನಾಯಕರಾಗಿದ್ದರು. ಎರಡನೇ ಬಾರಿಗೆ ಆಯ್ಕೆಯಾಗಿರುವ ಗುರ್ಮೀತ್ ಸಿಂಗ್ ಹಯರ್ ಅವರನ್ನೂ ಸಚಿವ ಸ್ಥಾನಕ್ಕೆ ಆಯ್ಕೆ ಮಾಡಲಾಗಿದೆ.

ಡಾ. ಬಲ್ಜಿತ್ ಕೌರ್, ಹರಭಜನ್ ಸಿಂಗ್, ಡಾ. ವಿಜಯ್ ಸಿಂಗ್ಲಾ, ಲಾಲ್ ಚಂದ್, ಕುಲದೀಪ್ ಸಿಂಗ್ ಧಾಲಿವಾಲ್, ಲಾಲ್‌ಜಿತ್ ಸಿಂಗ್ ಭುಲ್ಲರ್, ಬ್ರಹ್ಮ ಶಂಕರ್ ಮತ್ತು ಹರ್ಜೋತ್ ಬೈನ್ಸ್ ಅವರು ಸಂಪುಟ ಸೇರಲಿರುವ ಇತರರು.

ಮುಖ್ಯಮಂತ್ರಿ ಸೇರಿ 18 ಸಚಿವರಿಗೆ ಸಂಪುಟದಲ್ಲಿ ಅವಕಾಶ ಇದೆ.

ಮಾನ್ ನೇತೃತ್ವದ ಸಚಿವ ಸಂಪುಟದ ಮೊದಲ ಸಭೆ ಕೂಡ ಶನಿವಾರ ಮಧ್ಯಾಹ್ನ ನಂತರ ನಡೆಯಲಿದೆ.

ಪಂಜಾಬ್ ವಿಧಾನಸಭೆಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಎಎಪಿ ಭಾರಿ ಗೆಲುವು ಅಭಿಸಿತ್ತು. 117 ಕ್ಷೇತ್ರಗಳ ಪೈಕಿ 92ರಲ್ಲಿ ಗೆದ್ದಿದೆ. ಕಾಂಗ್ರೆಸ್ ಮತ್ತು ಅಕಾಲಿದಳ ಹೀನಾಯವಾಗಿ ಸೋತವು.

ಫಲಕಗಳ ತೆರವು: ಎಎಪಿ ಆಕ್ರೋಶ

ಕಪೂರ್ತಲ (ಪಿಟಿಐ): ನಗರದ ವಿವಿಧ ಭಾಗಗಳಲ್ಲಿ ಪ್ರದರ್ಶಿಸಲಾಗಿದ್ದ ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಅವರ 50ಕ್ಕೂ ಹೆಚ್ಚು ಫಲಕಗಳನ್ನು ನಗರ ಪಾಲಿಕೆಯು ತೆರವುಗೊಳಿಸಿದೆ ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ಮುಖಂಡರೊಬ್ಬರು ಶುಕ್ರವಾರ ಆರೋಪಿಸಿದ್ದಾರೆ.

ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಮಾನ್ ಅವರನ್ನು ಅಭಿನಂದಿಸುವ ಸಲುವಾಗಿ ಎಎಪಿಯ ಸ್ಥಳೀಯ ಘಟಕವು ಸುಮಾರು ₹2 ಲಕ್ಷ ಖರ್ಚು ಮಾಡಿ ಫಲಕಗಳನ್ನು ಹಾಕಿತ್ತು. ಅವುಗಳನ್ನು ನಗರ ಪಾಲಿಕೆ ತೆರವುಗೊಳಿಸಿದೆ. ನಗರ ಪಾಲಿಕೆ ಈಗಲೂ ಕಾಂಗ್ರೆಸ್ ಪ್ರಭಾವದಡಿ ಕೆಲಸ ಮಾಡುತ್ತಿದೆ ಎಂದು ಎಎಪಿ ಮುಖಂಡ ಪರ್ಮಿಂದರ್ ಸಿಂಗ್ ಢೋಟ್ ಆರೋಪಿಸಿದ್ದಾರೆ.

'ಫಲಕಗಳನ್ನು ಹರಿಯುವ ಮತ್ತು ಅವನ್ನು ಕಸದ ತೊಟ್ಟಿಗೆ ಎಸೆಯುವ ಮೂಲಕ ನಗರ ಪಾಲಿಕೆಯು ರಾಜ್ಯದ ಹೊಸ ಮುಖ್ಯಮಂತ್ರಿಯನ್ನು ಅವಮಾನಿಸಿದೆ. ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕು' ಎಂದಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲಾ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಿನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಸೋನಿಯಾ ಜತೆಗೆ ಗುಲಾಂ ನಬಿ ಆಜಾದ್ ಭೇಟಿ: 'ಪಕ್ಷ ಪುನಶ್ಚೇತನ'ದ ಕುರಿತು ಚರ್ಚೆ

ಜಿ–23 ಮುಖಂಡರ ಜತೆ ಸಂಧಾನ?

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್‌ನ 'ಭಿನ್ನಮತೀಯ ಗುಂಪು' ಜಿ–23ರ ಮುಖಂಡ ಗುಲಾಂ ನಬಿ ಆಜಾದ್ ಅವರು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಶುಕ್ರವಾರ ಭೇಟಿಯಾಗಿದ್ದಾರೆ. ಈ ಗುಂಪಿನ ಸದಸ್ಯರು ಪಕ್ಷದ ಪುನಶ್ಚೇತನಕ್ಕೆ ಸಂಬಂಧಿಸಿ ಹಲವು ಸುತ್ತು ಸಭೆ ನಡೆಸಿದ ಬಳಿಕ ಆಜಾದ್–ಸೋನಿಯಾ ಭೇಟಿ ನಡೆದಿದೆ.

ಜಿ–23 ಗುಂಪನ್ನು ಸಮಾಧಾನಪಡಿಸಲು ಗಾಂಧಿ ಕುಟುಂಬವು ನಡೆಸಿದ ಪ್ರಯತ್ನದ ಭಾಗವಾಗಿ ಈ ಭೇಟಿ ನಡೆದಿದೆ ಎನ್ನಲಾಗಿದೆ. ಸೋನಿಯಾ ಅವರು ಆಜಾದ್ ಅವರ ಜತೆಗೆ ಎರಡು ದಿನಗಳ ಹಿಂದೆ ದೂರವಾಣಿ ಮೂಲಕ ಮಾತುಕತೆ ನಡೆಸಿದ್ದರು.

ಕಾಂಗ್ರೆಸ್‌ಗೆ ಎಲ್ಲರನ್ನೂ ಒಳಗೊಂಡ ಸಾಮೂಹಿಕ ನಾಯಕತ್ವ ಅಗತ್ಯ ಎಂದು ಜಿ–23 ಗುಂಪಿನ ಮುಖಂಡರು ಪ್ರತಿಪಾದಿಸುತ್ತಿದ್ದಾರೆ. ಅದಾದ ಬಳಿಕ, ಗುಂಪಿನ ಸದಸ್ಯರಲ್ಲಿ ಒಬ್ಬರಾದ ಭೂಪಿಂದರ್ ಸಿಂಗ್ ಹೂಡಾ ಅವರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಗುರುವಾರ ಭೇಟಿಯಾಗಿದ್ದರು. ಪಕ್ಷದ ಪುನರ್ ರಚನೆಗೆ ಸಂಬಂಧಿಸಿ ಈ ಇಬ್ಬರು ನಾಯಕರು ಚರ್ಚೆ ನಡೆಸಿದ್ದಾರೆ ಎನ್ನಲಾಗಿದೆ. ಪಕ್ಷವನ್ನು ಪುನರ್ ರಚಿಸಬೇಕು ಎಂಬುದು ಭಿನ್ನಮತೀಯ ಗುಂಪಿನ ಪ್ರಮುಖ ಬೇಡಿಕೆಯಾಗಿದೆ.

ಮುಂಬರುವ ಚುನಾವಣೆಗಳನ್ನು ಹೇಗೆ ಒಗ್ಗಟ್ಟಿನಿಂದ ಎದುರಿಸಬೇಕು ಮತ್ತು ಪಕ್ಷವನ್ನು ಹೇಗೆ ಬಲಪಡಿಸಬೇಕು ಎಂಬ ಬಗ್ಗೆ ಚರ್ಚೆ ನಡೆಯಿತು ಎಂದು ಆಜಾದ್ ಅವರು ಭೇಟಿಯ ಬಳಿಕ ಹೇಳಿದ್ದಾರೆ.

'ಸೋನಿಯಾ ಜತೆಗಿನ ಮಾತುಕತೆ ಉತ್ತಮವಾಗಿತ್ತು. ನಾಯಕತ್ವದ ಪ್ರಶ್ನೆ ಬರಲೇ ಇಲ್ಲ. ಸೋನಿಯಾ ಅವರು ರಾಜೀನಾಮೆ ನೀಡುವುದಾಗಿ ಹೇಳಿದ್ದಾಗ, ಅಧ್ಯಕ್ಷೆಯಾಗಿ ಮುಂದುವರಿಯುವಂತೆ ನಾವೆಲ್ಲರೂ ಒತ್ತಾಯಿಸಿದ್ದೆವು. ಅಧ್ಯಕ್ಷ ಸ್ಥಾನಕ್ಕೆ ಚುನಾವಣೆಯ ಬಳಿಕವಷ್ಟೇ ಯಾವುದೇ ಬದಲಾವಣೆ ನಡೆಯಲಿದೆ. ಪಕ್ಷದ ಚುನಾವಣೆ ಕೆಲವೇ ತಿಂಗಳಲ್ಲಿ ನಡೆಯಲಿದೆ. ಹಾಗಾಗಿ, ಅಧ್ಯಕ್ಷ ಸ್ಥಾನ ಈಗ ಖಾಲಿ ಇಲ್ಲ' ಎಂದು ಆಜಾದ್ ಹೇಳಿದ್ದಾರೆ.

ಕಾಂಗ್ರೆಸ್‌ನ ಹಿರಿಯ ಮುಖಂಡ ಕರಣ್ ಸಿಂಗ್ ಅವರನ್ನು ಆಜಾದ್ ಅವರು ಶುಕ್ರವಾರ ಭೇಟಿಯಾಗಿದ್ದಾರೆ. ಕರಣ್ ಸಿಂಗ್ ಅವರು ಗಾಂಧಿ ಕುಟುಂಬದ ನಿಕಟವರ್ತಿ. ರಾಜ್ಯಸಭೆಯಿಂದ ನಿವೃತ್ತರಾದ ಬಳಿಕ ಅವರು ಪಕ್ಷದ ಚಟುವಟಿಕೆಗಳಿಂದ ದೂರವೇ ಉಳಿದಿದ್ದಾರೆ.

ಜಿ–23 ಗುಂಪಿನ 18 ಸದಸ್ಯರು ಆಜಾದ್ ಅವರ ನಿವಾಸದಲ್ಲಿ ಬುಧವಾರ ಸಭೆ ಸೇರಿದ್ದರು. ಕಾಂಗ್ರೆಸ್ ಪಕ್ಷದ ನಿರ್ಧಾರ ಕೈಗೊಳ್ಳುವ ಎಲ್ಲ ಹಂತಗಳಲ್ಲಿ ಸಾಮೂಹಿಕ ಮತ್ತು ಎಲ್ಲರನ್ನೂ ಒಳಗೊಂಡ ನಾಯಕತ್ವ ಬೇಕು ಎಂಬ ಬೇಡಿಕೆಯನ್ನು ಈ ನಾಯಕರು ಮುಂದಿರಿಸಿದ್ದರು. ಐದು ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸೋತ ಬಳಿಕ ನಾಯಕತ್ವ ಬದಲಾಗಬೇಕು ಎಂಬ ಕೂಗು ಬಲವಾಗಿದೆ. ಸೋಲಿನ ಬಳಿಕ ಕಾಂಗ್ರೆಸ್ ಕಾರ್ಯಕಾರಿಣಿ ಸಭೆ ನಡೆದಿತ್ತು. ಪಕ್ಷದ ಸಂಘಟನೆಯಲ್ಲಿ ಅಗತ್ಯ ಬದಲಾವಣೆ ತರುವ ಜವಾಬ್ದಾರಿಯನ್ನು ಈ ಸಭೆಯು ಸೋನಿಯಾ ಅವರಿಗೆ ನೀಡಿತ್ತು.

ಪಕ್ಷವನ್ನು ದುರ್ಬಲಗೊಳಿಸುವುದು ಅಥವಾ ಹಿನ್ನಡೆಗೆ ಬೇಡಿಕೆ ಇರಿಸುವುದು ತಮ್ಮ ಉದ್ದೇಶ ಅಲ್ಲ ಎಂಬುದನ್ನು ಜಿ–23 ಗುಂಪಿನ ನಾಯಕರು ಪಕ್ಷದ ನಾಯಕತ್ವಕ್ಕೆ ಮನವರಿಕೆ ಮಾಡಿಕೊಟ್ಟಿದ್ದಾರೆ ಎಂದು ಮೂಲಗಳು ಹೇಳಿವೆ. ಆದರೆ, ಪಕ್ಷದ ನಾಯಕತ್ವ ಬದಲಾಗಬೇಕು ಎಂದು ಜಿ–23 ಗುಂಪಿನಲ್ಲಿ ಇರುವ ಕಪಿಲ್ ಸಿಬಲ್ ಮತ್ತು ಮನೀಶ್ ತಿವಾರಿ ಹೇಳಿದ್ದರು.

ಕಾಂಗ್ರೆಸ್ ಮುಖಂಡ ಗುಲಾಂ ನಬಿ ಆಜಾದ್ ಅವರು ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಅವರ ನಿವಾಸದಲ್ಲಿ ಶುಕ್ರವಾರ ಭೇಟಿಯಾದ ಬಳಿಕ ಮಾಧ್ಯಮ ಪ್ರತಿನಿಧಿಗಳ ಬಳಿ ಮಾತನಾಡಿದರು ಪಿಟಿಐ ಚಿತ್ರ

ಹೂಡಾ ಬೇಡಿಕೆ

ರಾಹುಲ್ ಅವರ ಜತೆಗೆ ಭೂಪಿಂದರ್ ಸಿಂಗ್ ಹೂಡಾ ಅವರು ನೇರವಾಗಿ ಮತ್ತು ದೂರವಾಣಿ ಮೂಲಕ ಗುರುವಾರ ಮಾತುಕತೆ ನಡೆಸಿದ್ದಾರೆ. ತಮ್ಮ ತವರು ರಾಜ್ಯ ಹರಿಯಾಣದಲ್ಲಿ ಪಕ್ಷ ಸಂಘಟನೆಯನ್ನು ಪುನರ್‌ರಚಿಸಬೇಕು ಎಂಬುದು ಅವರ ಮುಖ್ಯ ಬೇಡಿಕೆಯಾಗಿದೆ. ಈಗ ರಾಜ್ಯ ಘಟಕದ ಅಧ್ಯಕ್ಷೆಯಾಗಿರುವ ಕುಮಾರಿ ಶೆಲ್ಜಾ ಅವರನ್ನು ಬದಲಾಯಿಸಿ ತಮಗೆ ಅಧ್ಯಕ್ಷ ಸ್ಥಾನ ನೀಡಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಈ ಬೇಡಿಕೆಗೆ ನಾಯಕತ್ವವು ಮನ್ನಣೆ ನೀಡಲಿದೆಯೇ ಎಂಬುದು ಸ್ಪಷ್ಟವಿಲ್ಲ. ಆದರೆ, ಭೂಪಿಂದರ್ ಅವರ ಮಗ, ರಾಜ್ಯಸಭಾ ಸದಸ್ಯ ದೀಪೇಂದರ್ ಹೂಡಾ ಅವರಿಗೆ ಅಧ್ಯಕ್ಷ ಸ್ಥಾನ ನೀಡುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

ಅಧಿಕಾರದಲ್ಲಿ ಇಲ್ಲ ಎಂಬ ಕಾರಣಕ್ಕೆ ನಾಯಕರು, ಕಾರ್ಯಕರ್ತರು ದಿಗಿಲುಗೊಳ್ಳುವ ಅಗತ್ಯ ಇಲ್ಲ. ಬಿಜೆಪಿ, ಇತರ ಪಕ್ಷಗಳು ಬರುತ್ತವೆ, ಹೋಗುತ್ತವೆ. ಕಾಂಗ್ರೆಸ್ ಮಾತ್ರ ಇಲ್ಲಿ ಉಳಿಯಲಿದೆ
ವೀರಪ್ಪ ಮೊಯಿಲಿ, ಕಾಂಗ್ರೆಸ್ ಮುಖಂಡ

ವಿವೇಕ್ ಅಗ್ನಿಹೋತ್ರಿಗೆ 'ವೈ' ಶ್ರೇಣಿಯ ಭದ್ರತೆ

ನವದೆಹಲಿ (ಪಿಟಿಐ): 'ದಿ ಕಾಶ್ಮೀರ್ ಫೈಲ್ಸ್' ಚಿತ್ರ ನಿರ್ದೇಶಕ ವಿವೇಕ್ ಅಗ್ನಿಹೋತ್ರಿ ಅವರಿಗೆ 'ವೈ' ಶ್ರೇಣಿಯ ಭದ್ರತೆಯನ್ನು ಕಲ್ಪಿಸಲಾಗಿದೆ.

ಭಯೋತ್ಪಾದನೆ ಹಾಗೂ ಭೀಕರ ಹತ್ಯಾಕಾಂಡದಿಂದ ಕಾಶ್ಮೀರ ಕಣಿವೆಯಿಂದ ಕಾಶ್ಮೀರಿ ಪಂಡಿತರ ವಲಸೆಯ ಕುರಿತ ಕಥಾಹಂದರವನ್ನು ಒಳಗೊಂಡ ಈ ಚಿತ್ರವನ್ನು ನಿರ್ದೇಶಿಸಿದ ಬಳಿಕ ಅಗ್ನಿಹೋತ್ರಿ ಅವರಿಗೆ ಜೀವ ಬೆದರಿಕೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಈ ಭದ್ರತೆ ಒದಗಿಸಲಾಗಿದೆ.

ಶಾ ವಿರುದ್ಧ ಪ್ರಕರಣ ದಾಖಲಿಸಲು ಕೋರಿದ್ದ ಅರ್ಜಿ: ಹೈಕೋರ್ಟ್ ತೀರ್ಪು

'ಭರವಸೆ ಈಡೇರಿಕೆ ಪಕ್ಷದ ಹೊಣೆಗಾರಿಕೆ ಅಲ್ಲ'

ಪ್ರಜಾವಾಣಿ ವಾರ್ತೆ

ಲಖನೌ: ಚುನಾವಣೆ ಸಂದರ್ಭದಲ್ಲಿ ಜನರಿಗೆ ನೀಡಿದ ಭರವಸೆಯನ್ನು ಈಡೇರಿಸದೇ ಇದ್ದರೆ ಅದಕ್ಕೆ ರಾಜಕೀಯ ಪಕ್ಷಗಳನ್ನು ಉತ್ತರದಾಯಿ ಮಾಡಲು ಸಾಧ್ಯವಿಲ್ಲ ಎಂದು ಅಲಹಾಬಾದ್ ಹೈಕೋರ್ಟ್ ತೀರ್ಪು ನೀಡಿದೆ.

2014ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಬಿಜೆಪಿ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಗಳನ್ನು ಈಡೇರಿಸಿಲ್ಲ. ಹಾಗಾಗಿ, ಆಗ ಪಕ್ಷದ ಅಧ್ಯಕ್ಷರಾಗಿದ್ದ ಅಮಿತ್ ಶಾ ಅವರ ವಿರುದ್ಧ ಅಪರಾಧ ಪ್ರಕರಣ ದಾಖಲಿಸಬೇಕು ಎಂದು ಕೋರಿ ಕೆಳ ನ್ಯಾಯಾಲಯ ವೊಂದರಲ್ಲಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ಆ ನ್ಯಾಯಾಲಯವು ವಜಾ ಮಾಡಿತ್ತು. ಅದನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗಿತ್ತು. ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ದಿನೇಶ್ ಪಾಠಕ್ ಅವರ ಏಕಸದಸ್ಯ ಪೀಠವು ಈ ತೀರ್ಪು ನೀಡಿದೆ.

ಯಾವುದೇ ಪಕ್ಷದ ಚುನಾವಣಾ ಪ್ರಣಾಳಿಕೆಯು ಆ ಪಕ್ಷದ ನೀತಿ, ನಿಲುವು, ಭರವಸೆಗಳು ಮತ್ತು ಪ್ರತಿಜ್ಞೆ ಆಗಿರುತ್ತದೆ. ಆದರೆ, ಆ ಭರವಸೆಗಳನ್ನು ಕಡ್ಡಾಯವಾಗಿ ಈಡೇರಿಸಬೇಕು ಎಂದು ಹೇಳಲಾಗದು. ಭರವಸೆಗಳನ್ನು ಈಡೇರಿಸಬೇಕು ಎಂದು ನ್ಯಾಯಾಲಯವು ಆದೇಶ ನೀಡಲು ಸಾಧ್ಯವಿಲ್ಲ. ಚುನಾವಣಾ ಪ್ರಣಾಳಿಕೆಯ ಭರವಸೆಗಳನ್ನು ಈಡೇರಿಸದೇ ಇದ್ದಾಗ ಪಕ್ಷದ ವಿರುದ್ಧ ಕ್ರಮ ಕೈಗೊಳ್ಳಲು ಯಾವುದೇ ಕಾಯ್ದೆಯ ಬಲವೂ ಇಲ್ಲ ಎಂದು ತೀರ್ಪಿನಲ್ಲಿ ಹೇಳಲಾಗಿದೆ.

ಪಕ್ಷವು ಭರವಸೆಗಳನ್ನು ಈಡೇರಿಸಿಲ್ಲ ಎಂದು ಜನರಿಗೆ ಅನಿಸಿದರೆ, ತಮ್ಮ ಅಸಮಾಧಾನವನ್ನು ಅವರು ಮುಂದಿನ ಚುನಾವಣೆಯಲ್ಲಿ ತೋರಿಸಬಹುದು ಎಂದು ಪೀಠವು ಹೇಳಿದೆ.

ಬ್ರಿಟನ್‌ನ ನ್ಯಾಯಾಲಯದಲ್ಲಿ ನಡೆದ ಬ್ರೋಮ್ಲಿ ಲಂಡನ್ ಬರೋ ಕೌನ್ಸಿಲ್ ಮತ್ತು ಗ್ರೇಟರ್ ಲಂಡನ್ ಕೌನ್ಸಿಲ್ ನಡುವಣ ಪ್ರಕರಣದ ತೀರ್ಪನ್ನು ನ್ಯಾಯಮೂರ್ತಿ ಉಲ್ಲೇಖಿಸಿದ್ದಾರೆ. ರಾಜಕೀಯ ಪಕ್ಷದ ಪ್ರಣಾಳಿಕೆಯನ್ನು ವೇದವಾಕ್ಯ ಎಂದು ಪರಿಗಣಿಸಬೇಕಿಲ್ಲ. ಅದು ಸಹಿ ಮಾಡಿ ಕೊಟ್ಟ ಕರಾರು ಪತ್ರವೂ ಅಲ್ಲ. ಕಾರ್ಯಸಾಧುವಲ್ಲದ ಅಥವಾ ಈಡೇರಿಸಲು ಸಾಧ್ಯವೇ ಇಲ್ಲದ ಭರವಸೆಗಳು ಅಥವಾ ಪ್ರಸ್ತಾವಗಳನ್ನು ಪ್ರಣಾಳಿಕೆಯು ಹೊಂದಿರಬಹುದು. ಮತದಾರರಲ್ಲಿ ಕೆಲವೇ ಕೆಲವು ಮಂದಿ ಮಾತ್ರ ಪ್ರಣಾಳಿಕೆಯನ್ನು ಪೂರ್ಣವಾಗಿ ಓದಿರುತ್ತಾರೆ. ಜನರು ಪಕ್ಷಕ್ಕೆ ಮತ ಹಾಕುತ್ತಾರೆಯೇ ವಿನಾ ಪ್ರಣಾಳಿಕೆಗೆ ಅಲ್ಲ ಎಂದು ಬ್ರಿಟನ್ ನ್ಯಾಯಮೂರ್ತಿ ಡೆನಿಂಗ್ ಹೇಳಿದ್ದನ್ನು ಪೀಠವು ಉಲ್ಲೇಖಿಸಿದೆ.

ಹಾಂಗ್‌ಕಾಂಗ್‌ನಲ್ಲಿ 20 ಸಾವಿರ ಪ್ರಕರಣ

ಹಾಂಗ್‌ಕಾಂಗ್ (ಎಪಿ): ಹಾಂಗ್‌ಕಾಂಗ್‌ನಲ್ಲಿ ಶುಕ್ರವಾರ ಹೊಸದಾಗಿ 20,079 ಕೋವಿಡ್ ಪ್ರಕರಣ ದೃಢಪಟ್ಟಿದೆ. ಇದರೊಂದಿಗೆ ಒಟ್ಟು ಪ್ರಕರಣಗಳ ಸಂಖ್ಯೆ 10 ಲಕ್ಷದ ಗಡಿ ದಾಟಿದೆ.



ಸೋಂಕು ಪೀಡಿತರಲ್ಲಿ ಶೇ 97ರಷ್ಟು ಮಂದಿ ಫೆಬ್ರುವರಿ 9ರ ನಂತರ ಕಾಣಿಸಿ ಕೊಂಡಿರುವ ಅಲೆಯಲ್ಲಿ ಸೋಂಕು ಪೀಡಿತರಾಗಿದ್ದಾರೆ. ಈವರೆಗೆ 5,200 ಜನರು ಮೃತಪಟ್ಟಿದ್ದಾರೆ ಎಂದು ಆರೋಗ್ಯಾಧಿಕಾರಿಗಳು ತಿಳಿಸಿದ್ದಾರೆ.

ಆಸ್ಪತ್ರೆಗಳಲ್ಲಿ ಹಾಸಿಗೆ ಸಮಸ್ಯೆ ಎದುರಾಗಿದೆ. ಶವಸಂಸ್ಕಾರ ಕೇಂದ್ರಗಳ ಮೇಲೆ ಒತ್ತಡ ಹೆಚ್ಚಿದ್ದು, ಶವಗಳನ್ನು ಶೀಥಲೀಕರಣ ಘಟಕದಲ್ಲಿ ಇಡಬೇಕಾಗಿದೆ. ಮೃತರಲ್ಲಿ ಹೆಚ್ಚಿನವರು ವಯಸ್ಕರು ಎಂದು ತಿಳಿಸಿದ್ದಾರೆ.

ಲಂಡನ್‌ನಲ್ಲಿ ನಿರ್ಬಂಧ ತೆರವು: ಕೋವಿಡ್ ಕಾರಣದಿಂದ ಅಂತರರಾಷ್ಟ್ರೀಯ ಪ್ರಯಾಣಿಕರಿಗೆ ವಿಧಿಸಲಾಗಿದ್ದ ನಿರ್ಬಂಧ ಕ್ರಮಗಳನ್ನು ಬ್ರಿಟನ್ ಸರ್ಕಾರ ಶುಕ್ರವಾರದಿಂದ ಅನ್ವಯವಾಗುವಂತೆ ಹಿಂಪಡೆದಿದೆ.

ಈ ಕುರಿತು ಹೇಳಿಕೆಯಲ್ಲಿ, 'ಪರಿಸ್ಥಿತಿ ಗಮನಿಸಿದರೆ, ಭವಿಷ್ಯದಲ್ಲಿ ಸೋಂಕು ದೇಶದಲ್ಲಿ ಕಾಣಿಸಿಕೊಂಡರೂ ಜಾಗತಿಕವಾಗಿ ವಹಿಸಲಾಗುವುದು. ಅಗತ್ಯವಿದ್ದಲ್ಲಿ ನಿರ್ಬಂಧ ಜಾರಿಗೊಳಿಸಲಾಗುವುದು' ಎಂದು ತಿಳಿಸಿದೆ.

ಈವರೆಗೆ ಲಸಿಕೆ ಪಡೆದ ಪ್ರಯಾಣಿಕರಿಗೆ ಪಿಸಿಆರ್ ಪರೀಕ್ಷೆಯಿಂದ ವಿನಾಯಿತಿ ನೀಡಲಾಗುತ್ತಿತ್ತು. ಲಸಿಕೆ ಪಡೆಯದವರು ನಿಗದಿತ ಅವಧಿಯ ಮುನ್ನ ಮತ್ತು ಬಂದ ನಂತರ ಎರಡು ದಿನದ ಬಳಿಕ ಪರೀಕ್ಷೆಗೆ ಒಳಗಾಗಬೇಕಿತ್ತು.

ವ್ಯಾಂಕೂವರ್ ವರದಿ: ದೇಶಕ್ಕೆ ಭೇಟಿ ನೀಡುವ ಪ್ರಯಾಣಿಕರು ಕಡ್ಡಾಯವಾಗಿ ಕೋವಿಡ್ ನೆಗಟಿವ್ ವರದಿ ಹಾಜರುಪಡಿಸಬೇಕು ಎಂಬ ನಿರ್ಬಂಧವನ್ನು ಏಪ್ರಿಲ್ 1ರಿಂದ ಜಾರಿಗೆ ಬರುವಂತೆ ಕೆನಡಾ ಕೈಬಿಡಲಿದೆ. ಆರೋಗ್ಯ ಸಚಿವರು ಈ ಮಾಹಿತಿ ನೀಡಿದ್ದಾರೆ. ದೇಶ ಪ್ರವೇಶಿಸಲು ಕೋವಿಡ್ ಲಸಿಕೆ ಪಡೆದಿರುವುದು ಕಡ್ಡಾಯ. ಲಸಿಕೆ ಪಡೆದಿರುವವರನ್ನೂ ರ್‍ಯಾಂಡಮ್ ಮಾದರಿಯಲ್ಲಿ ಪರೀಕ್ಷೆಗೆ ಒಳಪಡಿಸಲಾಗುವುದು ಎಂದು ತಿಳಿಸಿದ್ದಾರೆ.

ಸಮೋವಾ ಲಾಕ್‌ಡೌನ್

ವೆಲ್ಲಿಂಗ್ಟನ್ (ಎಪಿ): ದ್ವೀಪರಾಷ್ಟ್ರ ಸಮೋವಾದಲ್ಲಿ ಇದೇ ಮೊದಲ ಬಾರಿಗೆ ಕೋವಿಡ್ ಸೋಂಕು ಪತ್ತೆಯಾಗಿದ್ದು, ಇದರ ಹಿಂದೆಯೇ ಸರ್ಕಾರ ಲಾಕ್‌ಡೌನ್ ಘೋಷಿಸಿದೆ.

ಮಹಿಳೆಯೊಬ್ಬರಲ್ಲಿ ಸೋಂಕು ಪತ್ತೆಯಾಗಿದೆ. ಮಹಿಳೆಯು ಕಳೆದ ಒಂದು ವಾರದಲ್ಲಿ ಚರ್ಚ್, ಗ್ರಂಥಾಲಯ, ಆಸ್ಪತ್ರೆ ಭೇಟಿ ನೀಡಿದ್ದರು. ಸೋಂಕು ವ್ಯಾಪಿಸದಂತೆ ಮುಂಜಾಗ್ರತೆ ವಹಿಸಲಾಗಿದೆ ಎಂದು ಸರ್ಕಾರ ತಿಳಿಸಿದೆ.

ಲಾಕ್‌ಡೌನ್ ಘೋಷಣೆ ಹಿನ್ನೆಲೆಯಲ್ಲಿ ಶುಕ್ರವಾರ ನಾಗರಿಕರು ಅಗತ್ಯವಸ್ತುಗಳ ಖರೀದಿಗೆ ಮುಗಿಬಿದ್ದಿದ್ದರು.

ಪರಿಶಿಷ್ಟ ಜಾತಿ ಯುವತಿ ಕೊಲೆ?

ಒಂದನೇ ಪುಟದಿಂದ...

ಇಬ್ಬರ ಸ್ನೇಹವು ಪ್ರೀತಿಯಾಗಿ ಮಾರ್ಪಟ್ಟಿತ್ತು. ನಾಲ್ಕು ವರ್ಷಗಳಿಂದ ಪರಸ್ಪರ ಪ್ರೀತಿಸುತ್ತಿದ್ದರು. ವ್ಯಾಸಂಗ ಮುಗಿಸಿದ್ದ ಶಿವಕುಮಾರ್, ಕೆಲಸಕ್ಕಾಗಿ ನಗರಕ್ಕೆ ಬಂದು ವೀರಸಂದ್ರದಲ್ಲಿ ವಾಸವಿದ್ದರು. ದಾನೇಶ್ವರಿ ಸಹ ಪತ್ರೀಕೆಗೆ ನಗರಕ್ಕೆ ಬಂದಿದ್ದರು. ಆರೋಪಿಯನ್ನು ಹಲವು ಬಾರಿ ಆತನ ಮನೆಯಲ್ಲೇ ಭೇಟಿಯಾಗಿದ್ದರು' ಎಂದೂ ಹೇಳಿದರು.

ಮದುವೆ ವಿಚಾರವಾಗಿ ಗಲಾಟೆ: 'ಶಿವಕುಮಾರ್ ಜತೆಗಿನ ಪ್ರೀತಿಯನ್ನು ದಾನೇಶ್ವರಿ ತಂದೆಗೆ ತಿಳಿಸಿದ್ದರು. ಆತನನ್ನೇ ಮದುವೆಯಾಗುವುದಾಗಿ ಪಟ್ಟು ಹಿಡಿದಿದ್ದರು. ಇದೇ ವಿಷಯವನ್ನು ಯುವತಿ ಆರೋಪಿಗೆ ತಿಳಿಸಿದ್ದರು. ಮದುವೆಯಾಗಲು ನಿರಾಕರಿಸಿದ್ದ ಶಿವಕುಮಾರ್, 'ನಿನ್ನದು ಕೀಳು ಜಾತಿ. ನಿನ್ನನ್ನು ಮದುವೆಯಾಗಲು ನಮ್ಮ ಮನೆಯಲ್ಲಿ ಒಪ್ಪುವುದಿಲ್ಲ. ನನ್ನನ್ನು ಮನೆಯಿಂದ ಹೊರಗೆ ಹಾಕುತ್ತಾರೆ' ಎಂದಿದ್ದರು. ಕೆಲ ದಿನ ಮಾತನಾಡುವುದನ್ನೇ ಬಿಟ್ಟಿದ್ದ ಆತ, ಮೊಬೈಲ್ ಕರೆ ಸಹ ಸ್ವೀಕರಿಸುತ್ತಿರಲಿಲ್ಲವೆಂದು ದೂರಿನಲ್ಲಿ ಹೇಳಲಾಗಿದೆ' ಎಂದೂ ವಿವರಿಸಿದರು.

ಆಸ್ಪತ್ರೆಗೆ ಸೇರಿಸಿ ಪರಾರಿ: 'ಶಿವಕುಮಾರ್ ಕೆಲಸ ಮಾಡುತ್ತಿದ್ದ ಎಲೆಕ್ಟ್ರಾನಿಕ್ ಸಿಟಿ ಠಾಣೆ ವ್ಯಾಪ್ತಿಯ ಕಚೇರಿಗೆ ಮಾ. 15ರಂದು ದಾನೇಶ್ವರಿ ಹೋಗಿದ್ದರು. ಕಚೇರಿಯಿಂದ ಹೊರಬಂದಿದ್ದ ಶಿವಕುಮಾರ್, ಯುವತಿಯನ್ನು ನಿರ್ಜನ ಪ್ರದೇಶದತ್ತ ಕರೆದೊಯ್ದಿದ್ದ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ಮದುವೆಯಾಗುವಂತೆ ಯುವತಿ ಬೇಡಿಕೊಂಡಿದ್ದರೆಂದು ಗೊತ್ತಾಗಿದೆ. ಅದಕ್ಕೆ ಒಪ್ಪದ ಶಿವಕುಮಾರ್, ಮೈಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದನೆಂದು ಸಂಬಂಧಿಕರು ದೂರಿದ್ದಾರೆ. ತೀವ್ರ ಗಾಯಗೊಂಡಿದ್ದ ದಾನೇಶ್ವರಿ ಅವರನ್ನು ಆರೋಪಿಯೇ ಸಮೀಪದ ಆಸ್ಪತ್ರೆಯೊಂದಕ್ಕೆ ದಾಖಲಿಸಿ ಪರಾರಿಯಾಗಿದ್ದಾನೆ' ಎಂದೂ ಹೇಳಿದರು.

'ಹಲ್ಲೆಯಾದ ಯುವತಿಯ ಗುರುತುಗಳು ಮೃತದೇಹದ ಮೇಲಿಲ್ಲ. ಸುಟ್ಟಗಾಯಗಳು ಮಾತ್ರ ಇವೆ. ಮರಣೋತ್ತರ ಪರೀಕ್ಷೆ ವರದಿಗಾಗಿ ಕಾಯುತ್ತಿದ್ದೇವೆ. ತನಿಖೆ ಪೂರ್ಣಗೊಂಡ ಬಳಿಕವೇ ಇದೊ ಕೊಲೆಯೋ ಅಥವಾ ಬೇರೆ ಏನಾದರೂ ಕಾರಣ ಇದೆಯಾ ಎಂಬುದು ಗೊತ್ತಾಗಲಿದೆ' ಎಂದೂ ತಿಳಿಸಿದರು.

ದಾನೇಶ್ವರಿ ಅವರದ್ದು ಕೊಲೆ ಎಂಬುದಾಗಿ ಸಹೋದರಿ ಮಾರ್ಚ್ 17ರಂದು ದೂರು ನೀಡಿದ್ದಾರೆ. ಆರೋಪಿ ಎನ್ನಲಾದ ಶಿವಕುಮಾರ್ ತಲೆಮರೆಸಿಕೊಂಡಿದ್ದು, ಆತನ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ
ಶ್ರೀನಾಥ್ ಜೋಶಿ, ಆಗ್ನೇಯ ವಿಭಾಗದ ಡಿಸಿಪಿ

ಪೊಲೀಸರ ನಡೆಗೆ ಸಂಬಂಧಿಕರ ಅಸಮಾಧಾನ

'ದಾನೇಶ್ವರಿ ಕೊಲೆ ಪ್ರಕರಣದ ತನಿಖೆಯಲ್ಲಿ ಪೊಲೀಸರು ನಿರ್ಲಕ್ಷ್ಯ ತೋರುತ್ತಿದ್ದಾರೆ. ದೂರು ಕೊಟ್ಟವರನ್ನೇ ಪದೇ ಪದೇ ವಿಚಾರಣೆಗೆ ಒಳಪಡಿಸುತ್ತಿದ್ದಾರೆ. ಆರೋಪಿಯನ್ನು ಬಂಧಿಸಲು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಪ್ರಕರಣವೂ ನಿಲ್ಲುವುದಿಲ್ಲವೆಂದು ನೇರವಾಗಿ ಹೇಳುತ್ತಿದ್ದಾರೆ. ನಮಗೆ ನ್ಯಾಯ ಬೇಕು' ಎಂದು ಸಂಬಂಧಿಕರು ಅಸಮಾಧಾನ ವ್ಯಕ್ತಪಡಿಸಿದರು.

ಆಳ ಸಮುದ್ರದಲ್ಲಿ ಜೀವಿಗಳ ಉಗಮ– ಅಧ್ಯಯನಕ್ಕೆ ಸಜ್ಜು

ನವದೆಹಲಿ (ಪಿಟಿಐ): ಸಮುದ್ರದಾಳದಲ್ಲಿ ಜೀವಿಗಳ ಉಗಮದ ರಹಸ್ಯವನ್ನು ತಿಳಿಯುವ ಉದ್ದೇಶದಿಂದ ದೇಶದ ವಿಜ್ಞಾನಿಗಳು 'ಡೀಪ್ ಓಷನ್ ಮಿಷನ್' (ಡಿಒಎಂ) ಅಡಿಯಲ್ಲಿ ಸಮುದ್ರದ 6,000 ಮೀಟರ್‌ಗಳಷ್ಟು ಆಳಕ್ಕೆ ಪ್ರಯಾಣಿಸಿ ಸಾಗರ ತಳವನ್ನು ಅಧ್ಯಯನ ನಡೆಸಲು ಸಜ್ಜಾಗಿದ್ದಾರೆ.

ಇದು ₹4,077 ಕೋಟಿ ಯೋಜನೆಯಾಗಿದ್ದು, ಈ ಅಜ್ಞಾತ ಸ್ಥಳಕ್ಕೆ ಪ್ರಯಾಣಿಸುವುದಕ್ಕೂ ಮುನ್ನ ವಿಜ್ಞಾನಿಗಳು ಸಮುದ್ರದ 500 ಮೀಟರ್ ಆಳಕ್ಕೆ ಪ್ರಯಾಣಿಸಿ, ತಂತ್ರಜ್ಞಾನವನ್ನು ಪರೀಕ್ಷೆಗೊಳಪಡಿಸಲಿದ್ದಾರೆ. ಎಂದು ಭೂ ವಿಜ್ಞಾನ ಸಚಿವಾಲಯ ತಿಳಿಸಿದೆ.

ಪಾಕ್ ಪ್ರಧಾನಿ ವಿರುದ್ಧ ಅವಿಶ್ವಾಸ ನಿರ್ಣಯ: ಬೆಂಬಲಿಸುವುದಾಗಿ ಪಿಟಿಐ ಸದಸ್ಯರ ಎಚ್ಚರಿಕೆ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಪ್ರಧಾನಿ ಇಮ್ರಾನ್ ಖಾನ್ ಅವರ ವಿರುದ್ಧ ಅವಿಶ್ವಾಸ ನಿಲುವಳಿ ಮಂಡನೆಗೆ ನೋಟಿಸ್ ನೀಡಲಾಗಿದೆ. ನಿರ್ಣಯದ ಪರವಾಗಿ ಮತ ಚಲಾಯಿಸುವುದಾಗಿ ಸ್ವಪಕ್ಷದ 24 ಸದಸ್ಯರೂ ಬೆದರಿಕೆ ಒಡ್ಡಿದ್ದಾರೆ. ಇದರಿಂದಾಗಿ ಅಧಿಕಾರ ಉಳಿಸಿಕೊಳ್ಳುವ ಪ್ರಧಾನಿ ಯತ್ನಕ್ಕೆ ಹಿನ್ನಡೆಯಾಗಿದೆ.

ಪಾಕಿಸ್ತಾನ್ ಮುಸ್ಲಿಂ ಲೀಗ್ (ನವಾಜ್) ಪಕ್ಷ ಹಾಗೂ ಪಾಕಿಸ್ತಾನ್ ಪೀಪಲ್ಸ್ ಪಾರ್ಟಿ (ಪಿಪಿಪಿ) ಸುಮಾರು 100 ಸದಸ್ಯರು ಪ್ರಧಾನಿ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ಮಾರ್ಚ್ 8ರಂದು ನೋಟಿಸ್ ಜಾರಿ ಮಾಡಿದ್ದಾರೆ.

ದೇಶ ಎದುರಿಸುತ್ತಿರುವ ಆರ್ಥಿಕ ಬಿಕ್ಕಟ್ಟು ಮತ್ತು ಹಣದುಬ್ಬರ ಏರಿಕೆಗೆ ಖಾನ್ ನೇತೃತ್ವದ ಪಾಕಿಸ್ತಾನ್ ತೆಹ್ರೀಕ್ ಇ ಇನ್ಸಾಫ್ (ಪಿಟಿಐ) ಪಕ್ಷವೇ ನೇರ ಕಾರಣ ಎಂದು ದೂರಲಾಗಿದೆ.



ಇಮ್ರಾನ್ ಖಾನ್

ಈ ಕುರಿತು ಚರ್ಚಿಸಲು ಇದೇ 21ರಂದು ಪಾಕಿಸ್ತಾನ ಸಂಸತ್ತಿನ ಅಧಿವೇಶನ ಕರೆಯುವ ಸಾಧ್ಯತೆ ಇದೆ. ನಿರ್ಣಯವನ್ನು ಇದೇ 28ರಂದು ಮತಕ್ಕೆ ಹಾಕುವ ಸಂಭವವಿದೆ. ಈ ಬೆಳವಣಿಗೆಯ ಹಿಂದೆಯೇ ಆಡಳಿತ ಪಕ್ಷ ಪಿಟಿಐ ಸದಸ್ಯರಿಂದ ಬೆದರಿಕೆ ವ್ಯಕ್ತವಾಗಿದೆ.

ಢಾಕಾ: ಇಸ್ಕಾನ್ ದೇಗುಲದಲ್ಲಿ ದಾಂದಲೆ

ಢಾಕಾ: ಬಾಂಗ್ಲಾದೇಶದ ರಾಜಧಾನಿ ಢಾಕಾದಲ್ಲಿನ ಇಸ್ಕಾನ್ ರಾಧಾಕೃಷ್ಣ ದೇವಸ್ಥಾನದ ಮೇಲೆ ಸುಮಾರು 200 ಜನರಿದ್ದ ಗುಂಪೊಂದು ದಾಳಿ ನಡೆಸಿದ್ದು, ಭಕ್ತರ ಮೇಲೆ ಹಲ್ಲೆ ನಡೆಸಿ ದೇವಸ್ಥಾನದಲ್ಲಿ ದಾಂದಲೆ ಮಾಡಿದೆ.

ಗುರುವಾರ ಘಟನೆ ನಡೆದಿದೆ. ಗುರುಪೌರ್ಣಿಮೆ ಹಿನ್ನೆಲೆಯಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು. ಇದೇ ವೇಳೆ ಗುಂಪು ದಾಳಿ ನಡೆಸಿದೆ ಎಂದು ಕೋಲ್ಕತ್ತ ಇಸ್ಕಾನ್‌ನ ಉಪಾಧ್ಯಕ್ಷ ರಾಧಾರಮಣ್ ದಾಸ್ ಹೇಳಿದ್ದಾರೆ.

ಎನ್‌ಡಿಟಿವಿ ವರದಿ ಪ್ರಕಾರ, ದಾಂದಲೆಯಿಂದಾಗಿ ಮೂವರು ಭಕ್ತರಿಗೆ ಗಾಯವಾಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

WORK FROM HOME ಮನೆಯಿಂದಲೇ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲಿಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155/ 8139988588

ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 18,000-56,000/- (ತಕ್ಷಣ ಬೇಕಾಗಿದ್ದಾರೆ) ವಸತಿಯೊಂದಿಗೆ 8197650569, 7204396011

ನಮ್ಮ ಕಂಪನಿಯ ಆರ್ಯುವೇದಿಕ್ ಉತ್ಪನ್ನಗಳನ್ನು ಕಾರಿನಲ್ಲಿ ತೆರಳಿ ಮಾರ್ಕೆಟ್ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ. ಉಚಿತ ವಸತಿಯೊಂದಿಗೆ ದಿನಕ್ಕೆ 900- 1200 ಸಂಪಾದಿಸಲು ಸಂಪರ್ಕಿಸಿ: 8904379634/ 9513670249

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ15000 to 28000 ಸಂಪರ್ಕಿಸಿ 9980814578, 9980812378

Marketing & Sales

WANTED SALES Representative for Surgical Industry. Must Travel across the States . Email: info.albat@gmail.com Ph: +91-9560096877 / 9448992997

Multiple Vacancy

ಹಿರಿಯ ಉದ್ಯೋಗ ಮತ್ತು ಉದ್ಯಮಶೀಲತೆ ಮೇಳ 25 ಮಾರ್ಚ್ 2022 ಬೆಂಗಳೂರು ಹೆಚ್ಚಿನ ವಿವರಗಳಿಗಾಗಿ ಕರೆ ಮಾಡಿ 9886781297

Part-Time Jobs

ಕನ್ನಡ ಮತ್ತು ಇಂಗ್ಲಿಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೇ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000/- ವರೆಗೆ ಸಂಪಾದಿಸಿ.(ಕೊರಿಯರ್ ಇದೆ). 8884686861, 8884686860.

ಕನ್ನಡ ಮತ್ತುಇಂಗ್ಲಿಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ,ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ಬೆಂಗಳೂರಿನ ಖಾಸಗಿಶಾಲೆ ಮನೆಯಲ್ಲಿ ಅಡುಗೆ (ವೆಜ್ & ನಾನ್ ವೆಜ್) ಕೆಲಸ ಹಾಗೂ ಮನೆಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ. ವಯಸ್ಸು 30-40 ವರ್ಷ ಸಂಬಳ:10,000/- ಊಟ ಉಚಿತ + ವಸತಿ ಕೊಡಲಾಗುವುದು.ಸಂಪರ್ಕಿಸಿ: 9902817655.

ರಿಯಲ್ ಎಸ್ಟೇಟ್ ಸೆಲ್ಲಿಂಗ್

J P Nagar

2 BHK flat in JP Nagar 7th Phase, 60 Lakhs , Contact: 9449788764

Residential/ Commercial

Peenya

T. DASARAHALLI 1350 Sqft East Facing Earning 54000 rent Ramesh Road Malleswaram Tailoring Society land 1.08 Cr Contact 7760080110

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್... ಲೀಕೇಜ್.. ನಿಮ್ಮಮನೆ, ಕಟ್ಟಡಗಳ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

EDUCATION CORNER

ಸ್ಪರ್ಧಾಮಿತ್ರ Academy IAS / KAS Prelims & Mains Exams PSI 1st & 2nd Paper ಬೆಂಗಳೂರು & ಕಲಬುರ್ಗಿ Near Attiguppe Metro Station, Opp. Maruthi Medicals, Vijayanagar, Blore-40 9535111133 / 9535111199

ವ್ಯಾಪಾರ

Business to Business

Business

★ಮೇಣಬತ್ತಿ ತಯಾರಿಸಲು★ ತರಬೇತಿ ನೀಡುತ್ತೇವೆ. ಹಾಗೂ ತಯಾರಿಸಿದ ಮೇಣಬತ್ತಿ ಕೊಂಡುಕೊಳ್ಳುತ್ತೇವೆ. ತರಬೇತಿ, ಕಚ್ಚಾಸಾಮಗ್ರಿಗಳು ಬೆಂಗಳೂರು: 9060476868/ 8792252077, ಶಿವಮೊಗ್ಗ:9008013895

Business Offers

Franchise

PMS COMPANY is inviting Franchise Partner and Channel Partner for every Pincode in Bangalore And Karnataka for Real Estate Activity. For details Call 9342335589 or visit @ office M.G.Road Bangalore.

ಭವಿಷ್ಯ

Astrology

★|ವಶೀಕರಣ ಸ್ಪೆಷಲಿಸ್ಟ್|★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ, ಮಾತನಾಡುವ ಮೂಲಕ, ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಶಾಶ್ವತ ಪರಿಹಾರ, 9900511008

||ಉಚಿತ ಭವಿಷ್ಯ||: *ವಶೀಕರಣ ಸ್ಪೆಷಲಿಸ್ಟ್* ಯಾವುದೇ ಕಠಿಣ ಸಮಸ್ಯೆಗಳಿಗೆ 20 ನಿಮಿಷಗಳಲ್ಲಿ 100% ಪರಿಹಾರ. ಪಂಡಿತ್. ಅಮರ್‌ಭಟ್. 8095569819

ವೈಯಕ್ತಿಕ

Change of Name

ನಾಗೇಶ.ಹೆಚ್.ಎಂ.ಹಾಗಲಹಳ್ಳಿ, ಸಿ.ಎ.ಕೆರೆ ಹೋಬಳಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆಯ ವಾಸಿಯಾದ್ದು,ನನ್ನ ತಂದೆಯ ಹೆಸರು ಮಲ್ಲೇಗೌಡ@ಉಲ್ಲಂಡೇಗೌಡ ಮತ್ತು ಮಲ್ಲೇಗೌಡ ಎಂಬುದಾಗಿ ಬದಲಿಸಲಾಗಿದೆ. ಉಲ್ಲಂಡೇಗೌಡ ಎಂದು ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಮದ್ದೂರು, ಆದೇಶ ಮತ್ತು ಡಿಕ್ರಿ ದಿನಾಂಕ: 18.09.2021. O.S.No.431/2019, ಬದಲಾಯಿಸಲಾಗಿದೆ

ಪ್ರವಾಸ

Travel

★13.05.2022 12/16★ ದಿನಗಳು ಸಿಮ್ಲಾ, ಕುಲು, ಮನಾಲಿ, ವೈಷ್ಣೋದೇವಿ, ಸ್ವರ್ಣ ಶಕ್ತಿಪೀಠಗಳು, ಆರ್. ಗಾಂಧಿ ಟೂರ್ಸ್. (ರಿ) 9945445809/ 9902433500

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿಸಲಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುವುದರಿಂದ ಹೊಂದಿರುತ್ತವೆ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

★ನಂ.1 ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ನಿಮ್ಮ ಯಾವುದೇ ಸಮಸ್ಯೆಗಳಿದ್ದರು ಶೀಘ್ರದಲ್ಲಿ ಪರಿಹಾರ ಪಂಡಿತ್.ದೇವೇಂದ್ರಭಟ್‌ಅವರಿಂದ ನೇರವಾಗಿಸಂಪರ್ಕಿಸಿ ಒಮ್ಮೆ ಕರೆಮಾಡಿ ನಿಮ್ಮ ಜೀವನ ಬದಲಾಯಿಸಿಕೊಳ್ಳಿ. 9845333808

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115

CD Per Sqcm	Single Col	Double Col	Multi Col
	430	450	475

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

ರೋಜರ್ ಫೆಡರರ್

ಉಕ್ರೇನ್ ಮಕ್ಕಳಿಗೆ ಫೆಡರರ್ ನೆರವು

ಲಂಡನ್ (ಎಪಿ): ರಷ್ಯಾದ ದಾಳಿಯಿಂದಾಗಿ ನಲುಗಿರುವ ಉಕ್ರೇನ್ ದೇಶದ ಮಕ್ಕಳಿಗೆ ಟೆನಿಸ್ ದಿಗ್ಗಜ ಸಹಾಯಹಸ್ತ ಚಾಚಿದ್ದಾರೆ.

'ಯುದ್ಧಪೀಡಿತ ಉಕ್ರೇನಿನ ಮಕ್ಕಳ ಶಿಕ್ಷಣ ಮುಂದುವರಿಯಲು ನಮ್ಮ ಸಂಸ್ಥೆಯಿಂದ ₹ 3.8 ಕೋಟಿ ದೇಣಿಗೆ ನೀಡಲಾಗಿದೆ' ಎಂದು ಸ್ವಿಟ್ಜರ್‌ಲೆಂಡ್ ಟೆನಿಸ್ ತಾರೆ ಫೆಡರರ್ ಸಾಮಾಜಿಕ ಜಾಲತಾಣದಲ್ಲಿ ಬರೆದಿದ್ದಾರೆ.

'ಉಕ್ರೇನ್‌ನ ಸದ್ಯದ ಪರಿಸ್ಥಿತಿಯ ದೃಶ್ಯಗಳನ್ನು ನೋಡಿ ನಾನು ಮತ್ತು ಕುಟುಂಬ ಭಯಭೀತರಾದೆವು. ಅಲ್ಲಿಯ ಅಮಾಯಕ ಜನರು ಅನುಭವಿಸುತ್ತಿರುವ ಸಂಕಷ್ಟವನ್ನು ಊಹಿಸಿಕೊಂಡರೇ ಸಂಕಟವಾಗುತ್ತದೆ. ನಾವು ಶಾಂತಿ ಪರವಾಗಿ ನಿಲ್ಲಬೇಕಿದೆ' ಎಂದೂ ಫೆಡರರ್ ಬರೆದಿದ್ದಾರೆ. 40 ವರ್ಷದ ಫೆಡರರ್ 20 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದಿದ್ದಾರೆ.

ಬ್ರಿಟನ್ ಟೆನಿಸ್ ತಾರೆ ಆ್ಯಂಡಿ ಮರೆ ಈಚೆಗೆ ತಾವು ಈ ವರ್ಷ ಆಡುವ ಟೂರ್ನಿಗಳಲ್ಲಿ ಪಡೆಯುವ ಬಹುಮಾನ ಮೊತ್ತವನ್ನು ಉಕ್ರೇನ್ ಸಂತ್ರಸ್ತರ ನಿಧಿಗೆ ನೀಡುವುದಾಗಿ ಘೋಷಿಸಿದ್ದರು.

ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್: ನಾಲ್ಕರಘಟ್ಟಕ್ಕೆ ಲಕ್ಷ್ಯ ಸೇನ್

ಡಬಲ್ಸ್ ಸೆಮಿಗೆ ತ್ರೀಸಾ–ಗಾಯತ್ರಿ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಅಂಗಣದಲ್ಲಿ ಶುಕ್ರವಾರ ಭಾರತದ ಪ್ರತಿಭೆಗಳದ್ದೇ ಪಾರಮ್ಯ.

ಮಹಿಳೆಯರ ಡಬಲ್ಸ್‌ನ ಎಂಟರ ಘಟ್ಟದಲ್ಲಿ ತ್ರೀಸಾ ಜಾಲಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿ ತಮ್ಮ ವೃತ್ತಿಜೀವನದಲ್ಲಿಯೇ ಅತಿದೊಡ್ಡ ಜಯ ದಾಖಲಿಸಿದರು. ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ಲಕ್ಷ್ಯ ಸೇನ್ ಪುರುಷರ ಸಿಂಗಲ್ಸ್‌ನಲ್ಲಿ ಸೆಮಿಫೈನಲ್‌ಗೆ ಲಗ್ಗೆಯಿಟ್ಟರು.

ಇದೇ ಮೊದಲ ಬಾರಿಗೆ ಸೂಪರ್ –1000 ಟೂರ್ನಿಯಲ್ಲಿ ಆಡುತ್ತಿರುವ ತ್ರೀಸಾ–ಗಾಯತ್ರಿ ಜೋಡಿಯು 14–21, 22–20, 21–15ರಿಂದ ದಕ್ಷಿಣ ಕೊರಿಯಾದ ಲೀ ಸೋಹಿ ಮತ್ತು ಶಿನ್ ಸೆಂಗ್ಚಾನ್ ಜೋಡಿಗೆ ಆಘಾತ ನೀಡಿದರು.

46ನೇ ಶ್ರೇಯಾಂಕದ ಕೊರಿಯಾ ಜೋಡಿಯು ಮೊದಲ ಗೇಮ್‌ನಲ್ಲಿ ಏಳು ಅಂಕಗಳ ಅಂತರದಿಂದ ಜಯಿಸಿತು. ಆದರೆ ಎರಡನೇ ಗೇಮ್‌ನಲ್ಲಿ ಭಾರತದ ಜೋಡಿ ತಿರುಗೇಟು ನೀಡಿತು.

ತುರುಸಿನ ಹೋರಾಟ ನಡೆದ ಈ ಗೇಮ್ ಫಲಿತಾಂಶವು ಟೈಬ್ರೇಕರ್‌ನಲ್ಲಿ ನಿರ್ಧಾರವಾಯಿತು. ತ್ರೀಸಾ ಮತ್ತು ಗಾಯತ್ರಿ ಜೋಡಿಯು ಜಯಿಸಿ ಸಮಬಲ ಸಾಧಿಸಿತು. ಇದರಿಂದಾಗಿ ಕೊನೆಯ ಮತ್ತು ನಿರ್ಣಾಯಕ ಗೇಮ್ ಅತ್ಯಂತ ಕುತೂಹಲ ಕೆರಳಿಸಿತ್ತು.

ಗಾಯತ್ರಿ ಗೋಪಿಚಂದ್

ತ್ರೀಸಾ ಜಾಲಿ

ಈ ಗೇಮ್‌ನ ಆರಂಭಿಕ ಹಂತದಲ್ಲಿ ಸ್ವಲ್ಪ ಪೈಪೋಟಿ ಯೊಡ್ಡಿದ ಕೊರಿಯಾ ಜೋಡಿ ನಂತರ ಒತ್ತಡಕ್ಕೊಳಗಾಯಿತು. ತ್ರೀಸಾ–ಗಾಯತ್ರಿ ಜೋಡಿಯು ಜಯದತ್ತ ನಡೆಯಿತು.

'ನಮ್ಮ ಸಂಪೂರ್ಣ ಸಾಮರ್ಥ್ಯ ಪಣಕ್ಕೊಡ್ಡುವ ಪ್ರಯತ್ನ ಮಾಡಿದೆವು. ಎರಡನೇ ಗೇಮ್‌ನಲ್ಲಿ ನಾವು 18–20ಯಿಂದ ಹಿನ್ನಡೆಯಲ್ಲಿದ್ದೆವು. ಆ ಸಂದರ್ಭದಲ್ಲಿ ದಿಟ್ಟ ಹೋರಾಟ ನಡೆಸಲೇಬೇಕೆಂದು ನಿರ್ಧರಿಸಿದೆವು' ಎಂದು ಗಾಯತ್ರಿ ಹೇಳಿದರು. ರಾಷ್ಟ್ರೀಯ ಬ್ಯಾಡ್ಮಿಂಟನ್ ಕೋಚ್ ಪುಲ್ಲೇಲ ಗೋಪಿಚಂದ್ ಅವರ ಮಗಳು ಗಾಯತ್ರಿ ಹಾಗೂ ತ್ರೀಸಾ ಜೋಡಿಯು ಈಚೆಗೆ ಇನ್ಫೊಸಿಸ್ ಪ್ರತಿಷ್ಠಾನದ ಇಂಡಿಯಾ ಇಂಟರ್‌ನ್ಯಾಷನಲ್ ಚಾಲೆಂಜ್ ಪ್ರಶಸ್ತಿಯನ್ನು ಗೆದ್ದಿತ್ತು.

ಸೆಮಿಗೆ ಲಕ್ಷ್ಯ: ಪ್ರಕಾಶ್ ಪಡುಕೋಣೆ ಮತ್ತು ಪುಲ್ಲೇಲ ಗೋಪಿಚಂದ್ ಅವರ ನಂತರ ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್ ಸೆಮಿಫೈನಲ್ ಪ್ರವೇಶಿಸಿದ ಭಾರತದ ಆಟಗಾರನೆಂಬ ಹೆಗ್ಗಳಿಕೆಗೆ ಲಕ್ಷ್ಯ ಸೇನ್ ಪಾತ್ರರಾದರು.

ಎಂಟರ ಘಟ್ಟದಲ್ಲಿ ಲಕ್ಷ್ಯ ಅವರಿಗೆ ಚೀನಾದ ಲು ಗುವಾಂಗ್ ಝು ಅವರಿಂದ ವಾಕ್‌ಓವರ್ ಲಭಿಸಿತು. ಗುವಾಂಗ್ ಗಾಯಗೊಂಡಿದ್ದಾರೆ.

ಡಬಲ್ಸ್‌ನಲ್ಲಿ ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಕ್ವಾರ್ಟರ್‌ಫೈನಲ್‌ನಲ್ಲಿ ಸೋಲನುಭವಿಸಿದರು. ಇಂಡೋನೇಷ್ಯಾದ ಮಾರ್ಕಸ್ ಜಿಡಿಯಾನ್ ಮತ್ತು ಕೆವಿನ್ ಸುಕಾಮುಲ್ಜೊ 24–22, 21–17ರಿಂದ ಭಾರತದ ಜೋಡಿಯನ್ನು ಪರಾಭವಗೊಳಿಸಿತು.

ಬೆಲ್‌ಗ್ರೇಡ್‌ನಲ್ಲಿ ವಿಶ್ವ ಒಳಾಂಗಣ ಅಥ್ಲೆಟಿಕ್ಸ್

ಲೇಜಾರೊಗೆ ಟ್ರಿಪಲ್ ಜಂಪ್ ಚಿನ್ನ

ಬೆಲ್‌ಗ್ರೇಡ್ (ಎಎಫ್‌ಪಿ/ಪಿಟಿಐ): ಕ್ಯೂಬಾದ ಅಥ್ಲೀಟ್ ಲೇಜಾರೊ ಮಾರ್ಟಿನೇಜ್ ಶುಕ್ರವಾರ ಇಲ್ಲಿ ಆರಂಭವಾದ ವಿಶ್ವ ಒಳಾಂಗಣ ಅಥ್ಲೆಟಿಕ್ಸ್‌ನ ಪುರುಷರ ಟ್ರಿಪಲ್ ಜಂಪ್‌ನಲ್ಲಿ ಚಿನ್ನದ ಪದಕ ಗೆದ್ದರು.

ಈ ವಿಭಾಗದ ಸ್ಪರ್ಧೆಯಲ್ಲಿ ಮಾರ್ಟಿನೇಜ್, ಒಲಿಂಪಿಕ್ ಚಾಂಪಿಯನ್ ಪೆಡ್ರೊ ಪಿಚಾರ್ಡೊ ಅವರನ್ನು ಹಿಂದಿಕ್ಕಿದರು.

ಮೊದಲ ಸುತ್ತಿನ ಜಿಗಿತದಲ್ಲಿ ಮಾರ್ಟಿನೇಜ್ 17.64 ಮೀಟರ್ಸ್ ಸಾಧನೆ ಮಾಡಿದರು. ತಮ್ಮ ಹಿಂದಿನ ದಾಖಲೆಗಿಂತ 43 ಸೆಂಟಿಮೀಟರ್ಸ್ ಹೆಚ್ಚು ಜಿಗಿದರು. ಪೋರ್ಚುಗಲ್‌ನ ಪಿಚಾರ್ಡೊ 17.46 ಮೀಟರ್ಸ್ ಜಿಗಿಯುವ ಮೂಲಕ ಬೆಳ್ಳಿ ಪದಕ ಪಡೆದರು. ಅಮೆರಿಕದ ಡೊನಾಲ್ಡ್ ಸ್ಕಾಟ್ ಕಂಚು ಪಡೆದರು.

ದ್ಯುತಿ ಚಾಂದ್‌ಗೆ ನಿರಾಶೆ: ಭಾರತದ ಅಥ್ಲೀಟ್ ದ್ಯುತಿ ಚಾಂದ್ ಮಹಿಳೆಯರ 60 ಮೀಟರ್ಸ್ ಓಟದಲ್ಲಿ ಸೆಮಿಫೈನಲ್ ಪ್ರವೇಶಿಸುವಲ್ಲಿ ನಿರಾಶೆ ಅನುಭವಿಸಿದರು.

ಹೀಟ್ಸ್‌ನಲ್ಲಿ ದ್ಯುತಿ 7.35 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಆರನೇ ಸ್ಥಾನ ಪಡೆದರು. ಒಟ್ಟು 46 ಸ್ಪರ್ಧಿಗಳಿದ್ದ ಈ ವಿಭಾಗದಲ್ಲಿ ದ್ಯುತಿ 30ನೇ ರ‍್ಯಾಂಕ್ ಪಡೆದರು.

ಒಟ್ಟು ಆರು ಹೀಟ್ಸ್‌ಗಳು ನಡೆದವು. ಪ್ರತಿ ಹೀಟ್ಸ್‌ನಲ್ಲಿ ಅಗ್ರ ಮೂರು ಸ್ಥಾನ ಪಡೆದವರು ಸೆಮಿಗೆ ಅರ್ಹತೆ ಪಡೆದರು.

ಕ್ಯೂಬಾದ ಲೆಜಾರೊ ಮಾರ್ಟಿನೇಜ್ ಗೆಲುವಿನ ಸಂಭ್ರಮ –ಎಎಫ್‌ಪಿ ಚಿತ್ರ

ಮಾರ್ಕ್ ಮಾರ್ಕ್ವೆಜ್ ಮುನ್ನುಗ್ಗಿದ ಪರಿ –ಎಎಫ್‌ಪಿ ಚಿತ್ರ

ಗ್ರ್ಯಾನ್ ಪ್ರಿ: ಮಾರ್ಕ್ ಮಾರ್ಕ್ವೆಜ್‌ಗೆ ಗಾಯ

ಕುತಾ ಮಾಂಡಲಿಕ, ಇಂಡೋನೇಷ್ಯ (ಎಎಫ್‌ಪಿ): ಆರು ಬಾರಿಯ ಮೋಟೊ ಜಿಪಿ ವಿಶ್ವ ಚಾಂಪಿಯನ್ ಸ್ಪೇನ್‌ನ ಮಾರ್ಕ್ ಮಾರ್ಕ್ವೆಜ್ ಇಂಡೋನೇಷ್ಯಾ ಗ್ರ್ಯಾನ್ ಪ್ರಿ ಮೋಟರ್ ರೇಸ್‌ನ ಅಭ್ಯಾಸದ ವೇಳೆ ಬಿದ್ದು ಗಾಯಗೊಂಡರು.

ಶುಕ್ರವಾರ ನಡೆದ ಎರಡನೇ ಅಭ್ಯಾಸದ ಸಂದರ್ಭದಲ್ಲಿ ವೇಗವಾಗಿ ಮುನ್ನುಗ್ಗಿದ ಅವರು ಟ್ರ್ಯಾಕ್‌ನಲ್ಲೇ ಬಿದ್ದರು. ಹಾಲಿ ಚಾಂಪಿಯನ್ ಫ್ರಾನ್ಸ್‌ನ ಫ್ಯಾಬಿಯೊ ಕ್ವಾರ್ಟರರೊ ವೇಗದ ಚಾಲಕ ಎನಿಸಿಕೊಂಡರು. ಮಾರ್ಕ್ವೆಜ್ 22ನೇ ಸ್ಥಾನಕ್ಕೆ ಕುಸಿದರು.

ಇಂಡೋನೇಷ್ಯಾದಲ್ಲಿ 25 ವರ್ಷಗಳ ನಂತರ ವಿಶ್ವದರ್ಜೆಯ ಮೋಟರ್ ಸೈಕಲ್ ರೇಸ್‌ಗೆ ವೇದಿಕೆ ಸಿದ್ಧವಾಗಿದೆ. ಲಾಂಬೋಕ್‌ನ ಮಾಂಡಲಿಕ ಸರ್ಕೀಟ್‌ನಲ್ಲಿ ಶುಕ್ರವಾರ ಮಧ್ಯಾಹ್ನ ಬಿಸಿಲಿನ ಬೇಗೆಯಲ್ಲಿ ನಡೆದ ರೇಸ್ ಕುತೂಹಲ ಕೆರಳಿಸಿತ್ತು. ಮಾರ್ಕ್ವೆಜ್ 11ನೇ ತಿರುವು ತಲುಪುತ್ತಿದ್ದಂತೆ ನೆಲಕ್ಕೆ ಬಿದ್ದರು. ತಕ್ಷಣ ಎದ್ದು ಸ್ಪರ್ಧೆ ಮುಂದುವರಿಸಿದರು. ದಿನದ ಕೊನೆಯ ರೇಸ್‌ನಲ್ಲಿ ಉತ್ಸಾಹದಿಂದ ಪಾಲ್ಗೊಂಡ ಅವರು ಗಮನ ಸೆಳೆದರು.

ಶನಿವಾರ ನಡೆಯಲಿರುವ ಅರ್ಹತಾ ಸುತ್ತಿನ ಸ್ಪರ್ಧೆಗಳಲ್ಲಿ ಮತ್ತು ಭಾನುವಾರ ನಡೆಯಲಿರುವ ಸ್ಪರ್ಧೆಯಲ್ಲಿ ಅವರು ಪಾಲ್ಗೊಳ್ಳಲಿದ್ದಾರೆ. ಆದರೆ ಈ ಎರಡೂ ದಿನ ಗುಡುಗು ಸಿಡಿಲಿನಿಂದೊಡಗೂಡಿದ ಮಳೆ ಸುರಿಯುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮನೀಷ್ ಸುರೇಶ್ ಕುಮಾರ್ ಅವರ ಆಟದ ಶೈಲಿ –ಪ್ರಜಾವಾಣಿ ಚಿತ್ರ

ಮಾರ್ಕ್ಸ್‌ಗೆ ಮಣಿದ ಶಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಗ್ರ ಶ್ರೇಯಾಂಕದ ಆಟಗಾರ ಭಾರತದ ಶಶಿಕುಮಾರ್ ಮುಕುಂದ್ ಅವರನ್ನು ಮಣಿಸಿದ ಪೋಲೆಂಡ್‌ನ ಮಾರ್ಕ್ಸ್ ಮಾಸ್ನಿಕೊವ್‌ಸ್ಕಿ ಅವರು ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಅಂಗಣದಲ್ಲಿ ಶುಕ್ರವಾರ ಮಿಂಚಿದರು.

ಕೆಎಸ್‌ಎಲ್‌ಟಿಎ ಆಯೋಜಿಸಿರುವ ಎಸ್‌ಕೆಎಂಇ ಐಟಿಎಫ್ ಓಪನ್ ಟೆನಿಸ್ ಟೂರ್ನಿಯಲ್ಲಿ 6-7 (5), 7-6 (5), 6-3ರಲ್ಲಿ ಜಯ ಸಾಧಿಸಿದ ಅವರು ಸೆಮಿಫೈನಲ್ ಪ್ರವೇಶಿಸಿದರು. ನಾಲ್ಕರ ಘಟ್ಟದಲ್ಲಿ ಭಾರತದ ಅರ್ಜುನ್ ಖಾಡೆ ವಿರುದ್ಧ ಸೆಣಸುವರು. ಅರ್ಜುನ್ 7-5, 5-7, 7-6 (2)ರಲ್ಲಿ ದಿಗ್ವಿಜಯ್ ಪ್ರತಾಪ್ ಸಿಂಗ್ ಅವರನ್ನು ಸೋಲಿಸಿದರು.

ಶುಕ್ರವಾರದ ಪಂದ್ಯದ ಆರಂಭದಲ್ಲಿ ಶಶಿಕುಮಾರ್ 4–1ರ ಮುನ್ನಡೆ ಗಳಿಸಿದ್ದರು. ನಂತರ ತಿರುಗೇಟು ನೀಡಿದ ಮಾರ್ಕ್ಸ್ 4–4ರ ಸಮಬಲ ಸಾಧಿಸಿದರು. ಅದರೂ ಟೈಬ್ರೇಕರ್‌ನಲ್ಲಿ ಸೆಟ್ ಗೆದ್ದು ಶಶಿಕುಮಾರ್ ಮುನ್ನಡೆದರು.

ಎರಡನೇ ಸೆಟ್‌ನಲ್ಲಿ ಉಭಯ ಆಟಗಾರರು ಅಮೋಘ ಸರ್ವ್‌ಗಳ ಮೂಲಕ ಮಿಂಚಿದರು. ಶಶಿಕುಮಾರ್ ಅವರು ಸ್ವಯಂ ತಪ್ಪುಗಳ ಮೂಲಕ ಪಾಯಿಂಟ್‌ಗಳನ್ನು ಬಿಟ್ಟುಕೊಟ್ಟರು. ಇದು ಪೋಲೆಂಡ್ ಆಟಗಾರನ ಓಟಕ್ಕೆ ನೆರವಾಯಿತು. ನಿರ್ಣಾಯಕ ಮೂರನೇ ಸೆಟ್‌ನಲ್ಲಿ ಮಾರ್ಕ್ಸ್ ಇನ್ನಷ್ಟು ರೋಚಕ ಆಟವಾಡಿ ಗೆಲುವಿನ ನಗೆ ಸೂಸಿದರು.

ಈಚೆಗೆ ನಡೆದ ಬೆಂಗಳೂರು ಓಪನ್ ಟೂರ್ನಿಯ ಡಬಲ್ಸ್ ವಿಭಾದ ಚಾಂಪಿಯನ್ ಆಗಿದ್ದ ಖಾಡೆ ಸತತ ಎರಡನೇ ಪ್ರಶಸ್ತಿಯ ಕನಸಿನೊಂದಿಗೆ ಟೂರ್ನಿಯಲ್ಲಿ ಕಣಕ್ಕೆ ಇಳಿದಿದ್ದಾರೆ. ಶುಕ್ರವಾರ ಆರಂಭದಲ್ಲಿ 1-3ರ ಹಿನ್ನಡೆಯಲ್ಲಿದ್ದ ಅವರು ನಂತರ ಚೇತರಿಕೆಯ ಆಟವಾಡಿದರು. ದಿಗ್ವಿಜಯ್ ಕೂಡ ದಿಟ್ಟ ಆಟದ ಮೂಲಕ ಮಿಂಚಿದರು.

ನಾಲ್ಕನೇ ಶ್ರೇಯಾಂಕದ ಮನೀಷ್ ಸುರೇಶ್ ಕುಮಾರ್ ಬ್ರಿಟನ್ ಆಟಗಾರ ಜುಲಿಯನ್ ಕ್ಯಾಷ್ ವಿರುದ್ಧ 6-7 (5), 6-4, 6-3ರಲ್ಲಿ ಪಂದ್ಯ ಗೆದ್ದುಕೊಂಡರು. ಸೆಮಿಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಸಿದ್ಧಾರ್ಥ್ ರಾವತ್ ವಿರುದ್ಧ ಸೆಣಸುವರು. ನಿಕ್ಕಿ ಪೂಣಚ್ಚ ಅವರನ್ನು 6-2, 6-4ರಲ್ಲಿ ಸಿದ್ಧಾರ್ಥ್ ಸೋಲಿಸಿದರು.

ಮಾನಸಿಕ – ದೈಹಿಕ ಆರೋಗ್ಯದ ಗುರಿ; ನರಮಂಡಲದ ಬಲವೃದ್ಧಿಗೆ 'ಗೇಮ್ ಥೆರಪಿ'ಯ ಮೂಲಕ ಪ್ರಯೋಗ

ಥ್ರೋಬಾಲ್ ಮೂಲಕ 'ಚೇತನ' ತುಂಬುವ ಯತ್ನ...

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಟಿಸಂನಿಂದ ಬಳಲುವವರು, ಮೂಳೆಗಳ ಬಲ ಕಳೆದುಕೊಂಡಿರುವವರು, ಡೌನ್ ಸಿಂಡ್ರೋಮ್ ಸಮಸ್ಯೆ ಅನುಭವಿಸುತ್ತಿರುವವರು, ಏಕಾಗ್ರತೆಯ ಕೊರತೆ ಇರುವವರು.... ಹೀಗೆ ನಾನಾ ಬಗೆಯ ದೈಹಿಕ–ಮಾನಸಿಕ ತೊಂದರೆ ಇರುವವರು ಅಲ್ಲಿದ್ದಾರೆ. ಅವರ ಪಾಲಕರು ಮತ್ತು ತರಬೇತುದಾರರಲ್ಲಿ ಈಗ ನಿರೀಕ್ಷೆ ಗರಿಗೆದರಿದೆ; ಭರವಸೆಯ ಅರುಣೋದಯವಾಗಿದೆ.

ನಗರದ ಮಲ್ಲೇಶ್ವರದಲ್ಲಿರುವ ಅರುಣ ಚೇತನ 'ವಿಶೇಷ' ಶಾಲೆಯಲ್ಲಿ ಥ್ರೋಬಾಲ್ ಮೂಲಕ ಚಿಕಿತ್ಸೆ ನೀಡುವ ಹೊಸ ಯೋಜನೆ ಶುಕ್ರವಾರ ಆರಂಭಗೊಂಡಿದ್ದು ಅಲ್ಲಿನ ವಿದ್ಯಾರ್ಥಿಗಳ ಮಾನಸಿಕ ಮತ್ತು ದೈಹಿಕ ಬೆಳವಣಿಗೆಯಲ್ಲಿ ಪರಿಣಾಮ ಬೀರುವ ಭರವಸೆ ಮೂಡಿದೆ.

ಭಾರತ ಥ್ರೋಬಾಲ್ ಫೆಡರೇಷನ್ ಸಹಯೋಗದಲ್ಲಿ ಅಂತರರಾಷ್ಟ್ರೀಯ ಥ್ರೋಬಾಲ್ ಫೆಡರೇಷನ್ ಆಯೋಜಿಸಿರುವ ಈ ಯೋಜನೆಯ ಹಿಂದೆ, ಮೂತ್ರಪಿಂಡ ತೊಂದರೆಯಿಂದ ಬಳಲುತ್ತಿರುವವರ ಮೇಲೆ ನಡೆಸಿರುವ ಪ್ರಯೋಗದ ಯಶೋಗಾಥೆಯಿದೆ.

ಅರುಣ ಚೇತನ ಶಾಲೆಯಲ್ಲಿ ಥ್ರೋಬಾಲ್ ತರಬೇತಿ ಪ್ರಜಾವಾಣಿ ಚಿತ್ರ

ಥ್ರೋಬಾಲ್ ಯಾಕೆ ಪರಿಣಾಮಕಾರಿ?: ಥ್ರೋಬಾಲ್ ಬಳಸಿಕೊಂಡು ಆರೋಗ್ಯ ಕ್ಷೇತ್ರದಲ್ಲಿ ಕೆಲವು ಪ್ರಯೋಗಗಳು ಈಗಾಗಲೇ ನಡೆದಿವೆ. ಈ ಕ್ರೀಡೆಯ ನಿಯಮಗಳಲ್ಲೇ ಅಡಗಿರುವ ಕೆಲವು 'ತಂತ್ರಗಳು' ಇಂಥ ಪ್ರಯೋಗಗಳಿಗೆ ಪ್ರೇರಣೆ. ಬಲಗೈಯಲ್ಲಿ ಚೆಂಡು ಹಿಡಿದರೆ ಬಲಗೈಯಲ್ಲೇ ವಾಪಸ್ ಎಸೆಯಬೇಕು, ಎಡಗೈಯಲ್ಲಿ ಹಿಡಿದರೆ ಅದೇ ಕೈಯಲ್ಲಿ ಹಿಂದಿರುಗಿಸಬೇಕು ಎಂಬ ನಿಯಮದಿಂದಾಗಿ ಈ ಕ್ರೀಡೆ ಮಿದುಳು ಮತ್ತು ನರಗಳ ಶಕ್ತಿ ವೃದ್ಧಿಸಲು ಕಾರಣವಾಗುತ್ತದೆ ಎಂಬುದು ಯೋಜನೆಯಲ್ಲಿ ತೊಡಗಿಸಿಕೊಂಡಿರುವವರ ಅಭಿಪ್ರಾಯ.

ದತ್ತಾಂಶದಿಂದ ಲಭಿಸಿದ ಮಾಹಿತಿ

ಸಂಪೂರ್ಣಾ ಹೆಗಡೆ ಅವರು ದತ್ತಾಂಶ ವಿಜ್ಞಾನಿ. ನೆಫ್ರಾಲಜಿ ಸಂಘದ ಸಮೀಕ್ಷೆಯನ್ನು ಸಂಪೂರ್ಣ ಅವರ ಬ್ಲೂಮ್ ವ್ಯಾಲ್ಯೂಸ್ ಸಂಸ್ಥೆ ಮಾಡುತ್ತದೆ. ಮೂತ್ರಪಿಂಡ ಸಮಸ್ಯೆ ಇರುವವರ ಪೈಕಿ ಬಹುತೇಕರಿಗೆ ಸಾಮಾಜದ ಜೊತೆ ಬೆರೆಯಲು ಆಗುತ್ತಿಲ್ಲ ಎಂಬ ಅಂಶ ಪತ್ತೆಹಚ್ಚಿದ ನಂತರ 'ಗೇಮ್ ಥೆರಪಿ' ಮೂಲಕ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಯೋಚನೆ ಸಿದ್ಧವಾಯಿತು. ಇದು, ಪ್ರಯೋಗಗಳಿಗೆ ಪ್ರೇರಣೆಯಾಯಿತು.

> **ಪ್ರತಿ ಬಾರಿ ಚೆಂಡನ್ನು ಹಿಡಿದಾಗ ಅಕ್ಯುಪ್ರೆಷರ್‌ನ ಪ್ರಭಾವ ಉಂಟಾಗುತ್ತದೆ. ಇದರಿಂದ ನರಗಳು ಉದ್ದೀಪನಗೊಂಡು ದೇಹ, ಮನಸ್ಸಿಗೆ ವ್ಯಾಯಾಮ ಸಿಗುತ್ತದೆ.**
>
> **ಟಿ.ರಾಮಣ್ಣ**
> ಅಂತರರಾಷ್ಟ್ರೀಯ ಥ್ರೋಬಾಲ್ ಫೆಡರೇಷನ್ ಪ್ರಧಾನ ಕಾರ್ಯದರ್ಶಿ

'ಥ್ರೋಬಾಲ್ ಪಟುಗಳ ಪೈಕಿ ಬಹುತೇಕರು ಶೈಕ್ಷಣಿಕವಾಗಿ ಉತ್ತಮ ಪ್ರಗತಿ ಸಾಧಿಸಿದ್ದಾರೆ. ಮಿದುಳಿನ ಎರಡೂ ಭಾಗಗಳಿಗೆ ಕಸರತ್ತು ನೀಡಲು ಈ ಕ್ರೀಡೆ ನೆರವಾಗುತ್ತಿರುವುದೇ ಇದಕ್ಕೆ ಕಾರಣ. ಈ ಹಿನ್ನೆಲೆಯಲ್ಲಿ ನಡೆದ ಪ್ರಯೋಗಗಳು ಯಶಸ್ಸು ಕಂಡಿವೆ. ಬೆಂಗಳೂರಿನ ಟ್ರಸ್ಟ್‌ವೆಲ್ ಆಸ್ಪತ್ರೆಯ ಡಾ.ಅರವಿಂದ ಕಂಚಿ ಅವರು ಮೂತ್ರಪಿಂಡದ ಸಮಸ್ಯೆ ಇರುವವರಿಗೆ ಗೇಮ್ ಥೆರಪಿ ನೀಡಿ ನಿರ್ದಿಷ್ಟ ಅವಧಿಯ ನಂತರ ಪರೀಕ್ಷಿಸಿದಾಗ ದೈಹಿಕವಾಗಿ ಬಲಿಷ್ಠವಾಗಿರುವುದು, ಬಿಪಿ ಮತ್ತು ಸಕ್ಕರೆಯ ಅಂಶ ಕಡಿಮೆಯಾಗಿರುವುದು ಕಂಡುಬಂದಿದೆ' ಎಂದು ಅಂತರರಾಷ್ಟ್ರೀಯ ಥ್ರೋಬಾಲ್ ಪಟು ಸಂಪೂರ್ಣಾ ಹೆಗಡೆ 'ಪ್ರಜಾವಾಣಿ'ಗೆ ತಿಳಿಸಿದರು.

'ಟ್ರಸ್ಟ್‌ವೆಲ್'ನಲ್ಲಿ ನಡೆದ ಪ್ರಯೋಗದ ಹಿನ್ನೆಲೆಯಲ್ಲಿ ರಾಧಿಕಾ ಬಿಂದು ರಾವ್ ಅವರ ಪ್ರಾಯೋಜಕತ್ವದಲ್ಲಿ 'ಆರೋಗ್ಯಕ್ಕೆ ಥ್ರೋಬಾಲ್' ಯೋಜನೆ ಜಾರಿಗೆ ತರಲು ನಿರ್ಧರಿಸಲಾಯಿತು. ಅರುಣ ಚೇತನ ಶಾಲೆಯಲ್ಲಿ ನಿರ್ದಿಷ್ಟ ಅವಧಿಯ ನಂತರ ಮೌಲ್ಯಮಾಪನ ನಡೆಸಿ ಮುಂದಿನ ಹಾದಿ ತುಳಿಯಲಾಗುವುದು' ಎಂದು ಅವರು ತಿಳಿಸಿದರು.

ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಅರುಣ ಚೇತನ ಶಾಲೆಯ ಮುಖ್ಯಸ್ಥ ಜಿ.ಆರ್ ಸುರೇಶ್, ಪ್ರಾಚಾರ್ಯೆ ಗಾಯತ್ರಿ, ಅಂತರರಾಷ್ಟ್ರೀಯ ಥ್ರೋಬಾಲ್ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಟಿ.ರಾಮಣ್ಣ ಇದ್ದರು.

ಐಪಿಎಲ್ ಆಟಗಾರರ ಕೈಬಿಟ್ಟ ದಕ್ಷಿಣ ಆಫ್ರಿಕಾ

ಜೋಹಾನ್ಸ್‌ಬರ್ಗ್ (ಪಿಟಿಐ): ಬಾಂಗ್ಲಾದೇಶ ಎದುರಿನ ಟೆಸ್ಟ್ ಸರಣಿಯಲ್ಲಿ ಆಡುವ ಆಫ್ರಿಕಾ ಕ್ರಿಕೆಟ್ ತಂಡದಲ್ಲಿ ಐಪಿಎಲ್ ನಲ್ಲಿ ಆಡುವ ಆಟಗಾರರನ್ನು ಆಯ್ಕೆಗೆ ಪರಿಗಣಿಸಿಲ್ಲ.

ಇದರಿಂದಾಗಿ ಪ್ರಮುಖ ಆಟಗಾರರಾದ ಕಗಿಸೊ ರಬಾಡ, ಲುಂಗಿ ಗಿಡಿ, ಮಾರ್ಕೊ ಜೆನ್ಸನ್, ಬ್ಯಾಟರ್‌ಗಳಾದ ಏಡನ್ ಮಾರ್ಕರಂ ಮತ್ತು ರಸಿ ವ್ಯಾನ್ ಡರ್ ಡಸೆನ್ ಅವರು ಬಾಂಗ್ಲಾ ಪ್ರವಾಸದ ಬದಲು ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಟೂರ್ನಿಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಆದ್ದರಿಂದ ಅವರನ್ನು ತಂಡದಿಂದ ಕೈಬಿಡಲಾಗಿದೆ.

ಎನ್ರಿಚ್ ನಾಕಿಯಾ ಗಾಯದಿಂದಾಗಿ ಆಯ್ಕೆಯಾಗಿಲ್ಲ. ಅವರು ಐಪಿಎಲ್‌ನಲ್ಲಿ ಆಡುವುದೂ ಅನುಮಾನವಾಗಿದೆ.

ಮಾರ್ಚ್ 31ರಿಂದ ಡರ್ಬನ್‌ನಲ್ಲಿ ಮೊದಲ ಟೆಸ್ಟ್ ಆರಂಭವಾಗಲಿದೆ. ಪೋರ್ಟ್ ಎಲಿಜಬೆತ್‌ನಲ್ಲಿ ಏಪ್ರಿಲ್ 7ರಿಂದ ಎರಡನೇ ಟೆಸ್ಟ್ ನಡೆಯಲಿದೆ.

ಇದೇ 26ರಿಂದ ಮುಂಬೈನಲ್ಲಿ 15ನೇ ಆವೃತ್ತಿಯ ಐಪಿಎಲ್ ಆರಂಭವಾಗುವುದು.

ತಂಡ: ಡೀನ್ ಎಲ್ಗರ್ (ನಾಯಕ), ತೆಂಬಾ ಬವುಮಾ (ಉಪನಾಯಕ), ಡ್ಯಾರಿನ್ ಡುಪಾವಿಲನ್, ಸರೆಲ್ ಎರ್ವಿ, ಸೈಮನ್ ಹಾರ್ಮರ್, ಕೇಶವ್ ಮಹಾರಾಜ್, ವಿಯಾನ್ ಮಲ್ಡರ್, ಡುವಾನ್ ಒಲಿವಿಯರ್, ಕೀಗನ್ ಪೀಟರ್ಸನ್, ರಯಾನ್ ರಿಕೆಲ್ಟನ್, ಲುಥೊ ಸಿಪಾಮ್ಲಾ, ಗ್ಲೆಂಟನ್ ಸ್ಟರ್‌ಮನ್, ಕೈಲ್ ವೆರೆಯನ್ (ವಿಕೆಟ್‌ಕೀಪರ್), ಲಿಝಾದ್ ವಿಲಿಯಮ್ಸ್, ಖಾಯಾ ಜೊಂಡೊ.

ಇಂದು, ನಾಳೆ ಬಾಲ್ ಬ್ಯಾಡ್ಮಿಂಟನ್ ಲೀಗ್

ಬೆಂಗಳೂರು: ಜಿಲ್ಲಾ ಬಾಲ್ ಬ್ಯಾಡ್ಮಿಂಟನ್ ಸಂಸ್ಥೆ ಆಯೋಜಿಸಿರುವ ಜಿಲ್ಲಾ ಲೀಗ್ ಚಾಂಪಿಯನ್‌ಷಿಪ್ ಶನಿವಾರ ಮತ್ತು ಭಾನುವಾರ ಜೆ.ಪಿ ನಗರ ಎಂಟನೇ ಹಂತದಲ್ಲಿರುವ ಸ್ಕ್ಯಾಲ್ವಿ ಮೈದಾನದಲ್ಲಿ ನಡೆಯಲಿದೆ.

ಟರ್ಫ್ ಮತ್ತು ಕೃತಕ ಹುಲ್ಲಿನ ಅಂಗಣದಲ್ಲಿ ಪಂದ್ಯಗಳು ನಡೆಯಲಿವೆ. ಸಿ.ಟಿ ಶಶಿಕುಮಾರ್ ಮತ್ತು ಕೆ.ಎಸ್. ಮಮತಾ ಅವರನ್ನು ಲೀಗ್ ಸಂದರ್ಭದಲ್ಲಿ ಸನ್ಮಾನಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಬೆಂಗಳೂರು ರೇಸ್

ಎಂಪೈರ್ ಆಫ್ ಡ್ರೀಮ್ಸ್ ಗೆಲ್ಲುವ ನಿರೀಕ್ಷೆ

ಎಸ್.ರಂಗರಾಜನ್ ಮೆಮೋರಿಯಲ್ ಕಪ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಎಂಪೈರ್ ಆಫ್ ಡ್ರೀಮ್ಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.30ಕ್ಕೆ ಆರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಇಂಪೆಕಬಲ್ 7, ವಾರ್ ಟ್ರಯಲ್ 4, ಕಮಾಂಡ್ ಪೋಸ್ಟ್ 6
2ನೇ ರೇಸ್: ಇನ್ ಎ ಬ್ರೀಝ್ 4, ತೆನಾಲಿ 7, ಸೀಸರ್ಸ್ ಪ್ಯಾಲೇಸ್ 2
3ನೇ ರೇಸ್: ಕೆನ್ಸಿಂಗ್ಟನ್ ಕೋರ್ಟ್ 2, ಗುಡ್‌ಟೈಮ್ ಇಂಡೀಡ್ 1, ಆಗಸ್ಟಿನಾ 9
4ನೇ ರೇಸ್: ಎಂಪೈರ್ ಆಫ್ ಡ್ರೀಮ್ಸ್ 3, ಅಪ್ಸರ 3, ಆಚ್‌ವೇ 1
5ನೇ ರೇಸ್: ಥೌಸಂಡ್ ವರ್ಡ್ಸ್ 2, ಚೆರೋಕಿ ಮೂನ್ 1, ಮಿಲ್‌ಬ್ರೂಕ್ 5
6ನೇ ರೇಸ್: ಏರ್ ಕ್ರಾಫ್ಟ್ 1, ಅಮೆಜಾನ್ಸೈಟ್ 2, ಡೊಮಿನಿಯಾ 8

ಉತ್ತಮ ಬೆಟ್: ಥೌಸಂಡ್ ವರ್ಡ್ಸ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

'ತೈಲ ವಹಿವಾಟು ರಾಜಕೀಯಕ್ಕೆ ಬಳಕೆ ಬೇಡ'

ನವದೆಹಲಿ (ಪಿಟಿಐ): ಭಾರತವು ಕಾನೂನುಬದ್ಧವಾಗಿ ನಡೆಸುವ, ತೈಲ ಖರೀದಿಗೆ ಸಂಬಂಧಿಸಿದ ವ್ಯವಹಾರಗಳನ್ನು ರಾಜಕೀಯಕ್ಕೆ ಬಳಸಿಕೊಳ್ಳಬಾರದು ಎಂದು ಕೇಂದ್ರ ಸರ್ಕಾರದ ಮೂಲಗಳು ಪ್ರತಿಪಾದಿಸಿವೆ.

ರಷ್ಯಾದಿಂದ ರಿಯಾಯಿತಿ ದರದಲ್ಲಿ ಕಚ್ಚಾ ತೈಲ ತರಿಸಿಕೊಳ್ಳಲು ಸಿದ್ಧವಿರುವುದಾಗಿ ಭಾರತದ ಹೇಳಿದ ನಂತರ, ಆ ನಿಲುವಿನ ಕುರಿತು ಟೀಕೆಗಳು ವ್ಯಕ್ತವಾಗಿವೆ. ಅವುಗಳಿಗೆ ಪ್ರತಿಯಾಗಿ ಭಾರತವು ಹೀಗೆ ಹೇಳಿದೆ.

ರಷ್ಯಾ–ಉಕ್ರೇನ್ ಯುದ್ಧದ ನಂತರದಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಹೆಚ್ಚಾಗಿದೆ. ಇದರಿಂದಾಗಿ ಭಾರತ ನಿಭಾಯಿಸಬೇಕಾದ ಸಮಸ್ಯೆಗಳೂ ಹೆಚ್ಚಾದವು. ಕಡಿಮೆ ಬೆಲೆಗೆ ಕಚ್ಚಾ ತೈಲ ಸಿಗುವಲ್ಲಿಂದ ತರಿಸಿಕೊಳ್ಳಬೇಕಾದ ಒತ್ತಡ ನಿರ್ಮಾಣವಾಯಿತು ಎಂದು ಮೂಲಗಳು ವಿವರಿಸಿವೆ.

ಕಚ್ಚಾ ತೈಲವು ಯಾವುದೇ ದೇಶದಿಂದ ಕಡಿಮೆ ಬೆಲೆಗೆ ಸಿಗುತ್ತದೆ ಎಂದಾದರೆ, ಅದನ್ನು ಭಾರತ ಸ್ವಾಗತಿಸುತ್ತದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಬೆಳವಣಿಗೆ ಅಂದಾಜು ತಗ್ಗಿಸಿದ ಮೂಡಿಸ್

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ ಭಾರತದ ಅರ್ಥ ವ್ಯವಸ್ಥೆಯ ಬೆಳವಣಿಗೆ ಪ್ರಮಾಣವು ಶೇಕಡ 9.1ರಷ್ಟು ಇರಲಿದೆ ಎಂದು ಮೂಡಿಸ್ ಅಂದಾಜಿಸಿದೆ. ಅರ್ಥ ವ್ಯವಸ್ಥೆಯ ಬೆಳವಣಿಗೆ ಪ್ರಮಾಣವು ಶೇ 9.5ರಷ್ಟು ಆಗಬಹುದು ಎಂದು ಮೂಡಿಸ್ ಈ ಮೊದಲು ಅಂದಾಜು ಮಾಡಿತ್ತು.

ಕಚ್ಚಾ ತೈಲ ಬೆಲೆ ಏರಿಕೆ ಆಗಿರುವುದು ಮತ್ತು ರಸಗೊಬ್ಬರ ಆಮದು ವೆಚ್ಚ ಜಾಸ್ತಿ ಆಗಿರುವುದರಿಂದ ಸರ್ಕಾರವು ಬಂಡವಾಳ ವೆಚ್ಚಕ್ಕೆ ವಿನಿಯೋಗಿಸುವ ಮೊತ್ತ ಕಡಿಮೆ ಆಗಬಹುದು ಎಂದಿದೆ.

ಫೆಬ್ರುವರಿಯಲ್ಲಿ ಕಚ್ಚಾ ತೈಲ ಆಮದು ಹೆಚ್ಚಳ

ನವದೆಹಲಿ (ರಾಯಿಟರ್ಸ್): ಭಾರತದ ಕಚ್ಚಾ ತೈಲ ಆಮದು ಫೆಬ್ರುವರಿಯಲ್ಲಿ 48.6 ಲಕ್ಷ ಬ್ಯಾರಲ್‌ಗಳಷ್ಟು ಆಗಿದೆ. ಇದು, 2020ರ ಡಿಸೆಂಬರ್ ನಂತರ ದೇಶ ಆಮದು ಮಾಡಿಕೊಂಡಿರುವ ಅತ್ಯಂತ ಗರಿಷ್ಠ ಪ್ರಮಾಣದ ಕಚ್ಚಾ ತೈಲ.

ದೇಶದಲ್ಲಿ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸುವ ಸಲುವಾಗಿ ತೈಲ ಕಂಪನಿಗಳು ಸಂಸ್ಕರಣಾ ಪ್ರಕ್ರಿಯೆಗೆ ವೇಗ ನೀಡಿವೆ. ಹೀಗಾಗಿ ಆಮದು ಸಹ ಹೆಚ್ಚಾಗುತ್ತಿದೆ.

ಆಮದು ಪ್ರಮಾಣವು ಜನವರಿಗೆ ಹೋಲಿಸಿದರೆ ಫೆಬ್ರುವರಿಯಲ್ಲಿ ಶೇಕಡ 5ರಷ್ಟು ಹೆಚ್ಚಾಗಿದೆ. 2021ರ ಫೆಬ್ರುವರಿಗೆ ಹೋಲಿಸಿದರೆ ಶೇ 24ರಷ್ಟು ಏರಿಕೆ ಕಂಡಿದೆ.

ಭಾರತದ ಕಂಪನಿಗಳು ಸಾಮಾನ್ಯವಾಗಿ ಸಂಸ್ಕರಣೆ ಮಾಡುವುದಕ್ಕೂ ಎರಡು ತಿಂಗಳು ಮೊದಲು ಕಚ್ಚಾ ತೈಲ ಖರೀದಿಸುತ್ತವೆ. ಆದರೆ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಹೆಚ್ಚಾಗಿದ್ದರೂ ಅದನ್ನು ಗ್ರಾಹಕರ ಮೇಲೆ ವರ್ಗಾಯಿಸದೇ ಇರುವುದರಿಂದ ಮಾರಾಟದಿಂದ ನಷ್ಟ ಅನುಭವಿಸುತ್ತಿವೆ. ಹೀಗಾಗಿ ಕಂಪನಿಗಳು ಹೆಚ್ಚಿನ ಮಾರ್ಜಿನ್ ಗಳಿಸುವ ಸಲುವಾಗಿ ಸಂಸ್ಕರಣಾ ಪ್ರಕ್ರಿಯೆಗೆ ವೇಗ ನೀಡಿವೆ.

ಕೋವಿಡ್ ನಿರ್ಬಂಧಗಳನ್ನು ಸರ್ಕಾರ ತೆಗೆದುಹಾಕಿದ ಬಳಿಕ ದೇಶದಲ್ಲಿ ಇಂಧನ ಮಾರಾಟದಲ್ಲಿ ಹೆಚ್ಚಳ ಆಗುತ್ತಲೇ ಇದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	500
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಹೊಸನಗರ	
ಬಿಳಿಗೋಟು	21619-24809
ಚಾಲಿ	32699-36739
ಕೆಂಪುಗೋಟು	28469-33899
ರಾಶಿ	44129-47239
ಕುಂದಾಪುರ	
ಹಳೆಚಾಲಿ	51500-52500
ಹೊಸಚಾಲಿ	43500-44500
ಪುತ್ತೂರು	
ಕೋಕ	11000-26000
ಹೊಸತು	27500-45000
ಸಿದ್ದಾಪುರ	
ಬಿಳಿಗೋಟು	23699-30408
ಕೋಕ	22199-27969
ಹೊಸಚಾಲಿ	36869-39639
ಕೆಂಪುಗೋಟು	23699-31499
ರಾಶಿ	44399-46329
ತಟ್ಟಿಬೆಟ್ಟೆ	34129-41599
ಶಿರಸಿ	
ಬೆಟ್ಟೆ	33199-43919
ಬಿಳಿಗೋಟು	21899-33030
ಚಾಲಿ	35699-40039
ರಾಶಿ	44589-48899
ಯಲ್ಲಾಪುರ	
ಬಿಳಿಗೋಟು	26899-32899
ಚಾಲಿ	35599-40421
ಕೋಕ	18899-29112
ಕೆಂಪುಗೋಟು	28699-36016
ರಾಶಿ	46615-52909
ತಟ್ಟಿಬೆಟ್ಟೆ	38119-46400
ರಾಮನಗರ ರೇಷ್ಮೆಗೂಡು	
ಮಿಶ್ರತಳಿ	400-758
ದ್ವಿತಳಿ	200-906

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15600	15400	15450	216.10 ಸೆಂಟ್ಸ್
ಎಸಿ	7600	7600	8000	
ಆರ್‌ಪಿ	8500	8500	8650	ಲಂಡನ್
ಆರ್‌ಸಿ	3900	3900	3975	2139 ಡಾಲರ್ಸ್

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹395
12 ಮೊಟ್ಟೆಗೆ	₹55
ಮೈಸೂರು	
100 ಮೊಟ್ಟೆಗೆ	₹398

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1400-2000
ಮಧ್ಯಮ	₹800-1400
ಸಣ್ಣ	₹400-800

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಮಂಗಳೂರು	₹7500-13523
ಪುತ್ತೂರು	₹4000-10500
ತುರುವೇಕೆರೆ	₹17300-17300

ಭಾರತದಲ್ಲಿನ ಇರಾನ್ ರಾಯಭಾರಿ ಅಲಿ ಚೆಗೆನಿ

ಭಾರತದ ಇಂಧನ ಅಗತ್ಯ ಈಡೇರಿಸಲು ಇರಾನ್ ಸಿದ್ಧ

ನವದೆಹಲಿ (ರಾಯಿಟರ್ಸ್): ಭಾರತದ ಇಂಧನ ಅಗತ್ಯವನ್ನು ಈಡೇರಿಸಲು ಇರಾನ್ ಸಿದ್ಧವಿದೆ ಎಂದು ಭಾರತದಲ್ಲಿನ ಇರಾನ್ ರಾಯಭಾರಿ ಅಲಿ ಚೆಗೆನಿ ಅವರು ಕೇಂದ್ರ ಸರ್ಕಾರಕ್ಕೆ ಶುಕ್ರವಾರ ತಿಳಿಸಿದ್ದಾರೆ.

ಇರಾನ್ ಮೇಲಿನ ಆರ್ಥಿಕ ನಿರ್ಬಂಧವನ್ನು ತೆಗೆದುಹಾಕುವ ಸಂಬಂಧ ವಿಶ್ವದ ಬಲಿಷ್ಠ ರಾಷ್ಟ್ರಗಳು ಮತ್ತು ಇರಾನ್ ಮಧ್ಯೆ ಸಂಧಾನ ಮಾತುಕತೆ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಈ ಹೇಳಿಕೆ ಬಂದಿದೆ.

ಭಾರತಕ್ಕೆ ಅತಿ ಹೆಚ್ಚು ಕಚ್ಚಾ ತೈಲ ಪೂರೈಕೆಯಲ್ಲಿ ಇರಾನ್ ಎರಡನೇ ಸ್ಥಾನದಲ್ಲಿತ್ತು. ಆದರೆ, ಅಮೆರಿಕದ ಹಿಂದಿನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇರಾನ್ ಮೇಲೆ ತೈಲ ರಫ್ತು ಮಾಡುವುದಕ್ಕೆ ನಿರ್ಬಂಧ ಹೇರಿದ್ದರಿಂದಾಗಿ ಭಾರತವು ಇರಾನ್‌ನಿಂದ ತೈಲ ಆಮದು ಮಾಡುವುದನ್ನು ನಿಲ್ಲಿಸಬೇಕಾಯಿತು.

ರೂಪಾಯಿ ಹಾಗೂ ಇರಾನ್‌ನ ಕರೆನ್ಸಿಯಾದ ರಿಯಾಲ್ ಬಳಸಿ ವ್ಯವಹಾರ ನಡೆಸುವುದರಿಂದ ಎರಡೂ ದೇಶಗಳ ಕಂಪನಿಗಳಿಗೆ ಅನುಕೂಲ ಆಗಲಿದೆ ಎಂದು ಚೆಗೆನಿ ಹೇಳಿರುವುದಾಗಿ 'ಎಂವಿಐಆರ್‌ಡಿಸಿ ವಿಶ್ವ ವ್ಯಾಪಾರ ಕೇಂದ್ರ'ವು ತಿಳಿಸಿದೆ.

ಭಾರತ ಮತ್ತು ಇರಾನ್ ದೇಶಗಳು ವ್ಯಾಪಾರ ನಡೆಸಲು ವಸ್ತು ವಿನಿಯಮ ಸ್ವರೂಪದ ವ್ಯವಸ್ಥೆ ಹೊಂದಿವೆ. ಭಾರತದ ತೈಲ ಸಂಸ್ಕರಣಾ ಕಂಪನಿಗಳು ಇರಾನ್ ತೈಲಕ್ಕೆ ಸ್ಥಳೀಯ ಬ್ಯಾಂಕ್‌ಗಳಲ್ಲಿ ರೂಪಾಯಿ ಲೆಕ್ಕದಲ್ಲಿ ಹಣ ಪಾವತಿಸುತ್ತವೆ. ಈ ಹಣವನ್ನು ಇರಾನ್, ಭಾರತದಿಂದ ತನಗೆ ಅಗತ್ಯವಿರುವ ವಸ್ತುಗಳನ್ನು ಆಮದು ಮಾಡಿಕೊಳ್ಳಲು ಬಳಸುತ್ತಿದೆ.

ಭಾರತ–ಇರಾನ್ ವ್ಯಾಪಾರವು ₹ 1.29 ಲಕ್ಷ ಕೋಟಿ ಇದ್ದಿದ್ದು, ಅಮೆರಿಕವು ಇರಾನ್ ಮೇಲೆ ವಿಧಿಸಿದ ನಿರ್ಬಂಧಗಳಿಂದಾಗಿ ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಜನವರಿ ಅವಧಿಯಲ್ಲಿ ₹ 15,200 ಕೋಟಿಗೂ ಕಡಿಮೆ ಮೊತ್ತಕ್ಕೆ ಇಳಿದಿದೆ.

ಎರಡೂ ದೇಶಗಳು ರೂಪಾಯಿ–ರಿಯಾಲ್ ಪಾವತಿ ವ್ಯವಸ್ಥೆ ಬಳಸಿದರೆ ದ್ವಿಪಕ್ಷೀಯ ವ್ಯಾಪಾರವು ₹ 2.28 ಲಕ್ಷ ಕೋಟಿಗೆ ಏರಿಕೆ ಆಗುವ ಸಾಧ್ಯತೆ ಇದೆ ಎಂದು ಚೆಗೆನಿ ತಿಳಿಸಿದ್ದಾರೆ.

ತೈಲ ಉತ್ಪಾದನೆ ಕಡಿತ ಹೆಚ್ಚಳ

ಒಪೆಕ್ + ದೇಶಗಳು ತಾವು ನಿಗದಿ ಮಾಡಿಕೊಂಡಿರುವ ಗುರಿಗಿಂತಲೂ ಕಡಿಮೆ ಪ್ರಮಾಣದಲ್ಲಿ ಕಚ್ಚಾತೈಲ ಉತ್ಪಾದಿಸುತ್ತಿವೆ. ಕಚ್ಚಾ ತೈಲ ಉತ್ಪಾದನೆ ಕಡಿತ ಪ್ರಮಾಣವು ಜನವರಿಯಲ್ಲಿ ಶೇ 129ರಷ್ಟು ಇದ್ದಿದ್ದು ಫೆಬ್ರುವರಿಯಲ್ಲಿ ಶೇ 136ಕ್ಕೆ ಏರಿಕೆ ಆಗಿದೆ ಎಂದು ಮೂಲಗಳು ಹೇಳಿವೆ.

ಹಲವು ದೇಶಗಳು ಉತ್ಪಾದನೆ ಹೆಚ್ಚಿಸಲು ಕಷ್ಟಪಡುತ್ತಿವೆ. ಇದೇ ವೇಳೆ ಒಪೆಕ್ + ದೇಶಗಳು ಉತ್ಪಾದನಾ ಕಡಿತವನ್ನು ಕ್ರಮೇಣ ತಗ್ಗಿಸಲಿವೆ.

ಪಾಶ್ಚಾತ್ಯ ದೇಶಗಳು ರಷ್ಯಾ ಮೇಲೆ ನಿರ್ಬಂಧ ಹೇರಿರುವುದರಿಂದ ಆ ದೇಶದ ಕಚ್ಚಾ ತೈಲ ಉತ್ಪಾದನೆ ಕಡಿಮೆ ಆಗುವ ಸಾಧ್ಯತೆ ಇದೆ. ಹೀಗಾಗಿ ಅಮೆರಿಕ ಮತ್ತು ಹಲವು ದೇಶಗಳು ತ್ವರಿತವಾಗಿ ಉತ್ಪಾದನೆ ಹೆಚ್ಚಿಸುವಂತೆ ಒಪೆಕ್ ದೇಶಗಳನ್ನು ಒತ್ತಾಯಿಸಿವೆ.

ಮಿಥಾಲಿ ಬಳಗಕ್ಕೆ ಬ್ಯಾಟಿಂಗ್ ಚಿಂತೆ: ಸ್ಮೃತಿ, ಹರ್ಮನ್‌ಪ್ರೀತ್ ಕೌರ್ ಮೇಲೆ ನಿರೀಕ್ಷೆಯ ಭಾರ

ಭಾರತಕ್ಕೆ ಅಜೇಯ ಆಸ್ಟ್ರೇಲಿಯಾದ ಸವಾಲು

ಆಕ್ಲೆಂಡ್ (ಪಿಟಿಐ): ಮಿಥಾಲಿ ರಾಜ್ ನಾಯಕತ್ವದ ಭಾರತ ತಂಡ ಮಹಿಳಾ ವಿಶ್ವಕಪ್ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಇದುವರೆಗೆ ಸಿಹಿ–ಕಹಿ ಎರಡನ್ನೂ ಅನುಭವಿಸಿದೆ.

ಆಡಿರುವ ನಾಲ್ಕು ಪಂದ್ಯಗಳಲ್ಲಿ ಎರಡು ಗೆದ್ದು, ಇನ್ನೆರಡರಲ್ಲಿ ಸೋತಿರುವ ತಂಡ ಇನ್ನೂ ಸೆಮಿಫೈನಲ್ ಪ್ರವೇಶಿಸುವ ಅವಕಾಶವನ್ನು ಉಳಿಸಿಕೊಂಡಿದೆ. ಆದರೆ ಮುಂದಿನ ಮೂರು ಪಂದ್ಯಗಳಲ್ಲಿ ಎಡವಿದರೆ ಲೀಗ್ ಹಂತದಿಂದಲೇ ಹೊರಬೀಳುವ ಅಪಾಯವಿದೆ. ಆದ್ದರಿಂದ ಶನಿವಾರ ಆಸ್ಟ್ರೇಲಿಯಾ ವಿರುದ್ಧ ನಡೆಯಲಿರುವ ಪಂದ್ಯದಲ್ಲಿ ಜಯದ ಹಾದಿಗೆ ಮರಳುವ ಒತ್ತಡದಲ್ಲಿ ಭಾರತದ ವನಿತೆಯರು ಇದ್ದಾರೆ.

ಪಾಯಿಂಟ್ ಪಟ್ಟಿಯಲ್ಲಿ ಸದ್ಯ ಮೂರನೇ ಸ್ಥಾನದಲ್ಲಿರುವ ಭಾರತ ತಂಡವು ಇನ್ನೆರಡು ಪಂದ್ಯಗಳಲ್ಲಿ ಗೆದ್ದರೆ ನಿರಾಳವಾಗಬಹುದು. ಅಗ್ರ ನಾಲ್ಕರಲ್ಲಿ ಸ್ಥಾನ ಗಳಿಸಬಹುದು.

‘ಆಸ್ಟ್ರೇಲಿಯಾ ಎದುರಿನ ಪಂದ್ಯದಲ್ಲಿ ನಮ್ಮ ಬ್ಯಾಟರ್‌ಗಳು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಆಡುವುದು ಖಚಿತ. ಬೌಲಿಂಗ್ ಪಡೆ ಅಮೋಘ ಆಟವನ್ನು ಈ ಪಂದ್ಯದಲ್ಲಿಯೂ ಮುಂದುವರಿಸಲಿದೆ’ ಎಂದು ತಂಡದ ಆಟಗಾರ್ತಿ ಸ್ಮೃತಿ ಮಂದಾನ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ವೆಸ್ಟ್ ಇಂಡೀಸ್ ವಿರುದ್ಧದ ಪಂದ್ಯದಲ್ಲಿ ಸ್ಮೃತಿ ಮತ್ತು ಹರ್ಮನ್‌ಪ್ರೀತ್ ಕೌರ್ ಶತಕ ಸಿಡಿಸಿದ್ದರು. ಆದರೆ ಇಂಗ್ಲೆಂಡ್ ಎದುರಿನ ಪಂದ್ಯ ದಲ್ಲಿ ಭಾರತದ ಬ್ಯಾಟಿಂಗ್ ಪಡೆ ವಿಫಲವಾಗಿತ್ತು. ಬೌಲಿಂಗ್‌ನಲ್ಲಿ ಮೇಘನಾ ಸಿಂಗ್ ಮತ್ತು ಅನುಭವಿ ಜೂಲನ್ ಗೋಸ್ವಾಮಿ ಅವರು ಉತ್ತಮ ಲಯದಲ್ಲಿದ್ದು, ಆಸ್ಟ್ರೇಲಿಯಾದ ಬಲಿಷ್ಠ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕುವ ಭರವಸೆ ಇದೆ. ಅವರೊಂದಿಗೆ ರಾಜೇಶ್ವರಿ ಗಾಯಕವಾಡ್ ಮತ್ತು ಪೂಜಾ ವಸ್ತ್ರಕರ್ ಕೂಡ ತಮ್ಮ ಸಾಮರ್ಥ್ಯಕ್ಕನುಗುಣವಾಗಿ ಬೌಲಿಂಗ್ ಮಾಡಿದರೆ ಆಸ್ಟ್ರೇಲಿಯಾಕ್ಕೆ ಕಠಿಣ ಸವಾಲೊಡ್ಡಬಹುದು.

ಮೆಗ್ ಲ್ಯಾನಿಂಗ್ ನಾಯಕತ್ವದ ಆಸ್ಟ್ರೇಲಿಯಾ ತಂಡವು ಆಡಿರುವ ನಾಲ್ಕು ಪಂದ್ಯಗಳಲ್ಲಿಯೂ ಜಯಸಾಧಿಸಿದೆ. ಬ್ಯಾಟರ್ ರಚೆಲ್ ಹೇನ್ಸ್ ಒಟ್ಟು 277 ರನ್ ಗಳಿಸಿ ಅಗ್ರಸ್ಥಾನದಲ್ಲಿದ್ದಾರೆ. ವೇಗದ ಬೌಲರ್ ಎಲ್ಲೈಸಾ ಪೆರಿ ಮತ್ತು ಸ್ಪಿನ್ನರ್ ಆ್ಯಶ್ಲಿ ಗಾರ್ಡನರ್ ಕೂಡ ಉತ್ತಮ ಫಾರ್ಮ್‌ನಲ್ಲಿದ್ದಾರೆ. ಭಾರತದ ಬ್ಯಾಟರ್‌ಗಳಿಗೆ ಇವರಿಬ್ಬರೂ ಕಠಿಣ ಸವಾಲೊಡ್ಡುವ ಸಮರ್ಥ ಬೌಲರ್‌ಗಳಾಗಿದ್ದಾರೆ.

ಭಾರತ ಮಹಿಳಾ ಕ್ರಿಕೆಟ್ ತಂಡದ ಆಟಗಾರ್ತಿಯರು ಶುಕ್ರವಾರ ಹೋಳಿ ಹಬ್ಬದ ಸಂಭ್ರಮ ಆಚರಿಸಿದರು –ಟ್ವಿಟರ್ ಚಿತ್ರ

ತಂಡಗಳು:ಭಾರತ: ಮಿಥಾಲಿ ರಾಜ್ (ನಾಯಕಿ), ಹರ್ಮನ್‌ಪ್ರೀತ್ ಕೌರ್ (ಉಪನಾಯಕಿ), ಸ್ಮೃತಿ ಮಂದಾನ, ಶಫಾಲಿ ವರ್ಮಾ, ಯಷ್ತಿಕಾ ಭಾಟಿಯಾ, ದೀಪ್ತಿ ಶರ್ಮಾ, ರಿಚಾ ಘೋಷ್ (ವಿಕೆಟ್‌ಕೀಪರ್), ಸ್ನೇಹಾ ರಾಣಾ, ಜೂಲನ್ ಗೋಸ್ವಾಮಿ, ಪೂಜಾ ವಸ್ತ್ರಕರ್, ಮೇಘನಾ ಸಿಂಗ್, ರೇಣುಕಾ ಸಿಂಗ್ ಠಾಕೂರ್, ತಾನಿಯಾ ಭಾಟಿಯಾ (ವಿಕೆಟ್‌ಕೀಪರ್), ರಾಜೇಶ್ವರಿ ಗಾಯಕವಾಡ್, ಪೂನಮ್ ಯಾದವ್

ಆಸ್ಟ್ರೇಲಿಯಾ: ಮೆಗ್ ಲ್ಯಾನಿಂಗ್ (ನಾಯಕಿ), ರಚೆಲ್ ಹೇನ್ಸ್ (ಉಪನಾಯಕಿ), ಡಾರ್ಸಿ ಬ್ರೌನ್, ನಿಕ್ ಕ್ಯಾರಿ, ಆ್ಯಶ್ಲಿ ಗಾರ್ಡನರ್, ಗ್ರೇಸ್ ಹ್ಯಾರಿಸ್, ಅಲೈಸಾ ಹೀಲಿ, ಜೆಸ್ ಜಾನ್ಸನ್, ಅಲ್ಲಾನ ಕಿಂಗ್, ತಹಿಲಾ ಮೆಕ್‌ಗ್ರಾ, ಬೆತ್ ಮೂನಿ, ಎಲ್ಲೈಸ್ ಪೆರಿ, ಮೆಘನ್ ಶೂಟ್, ಅನಾಬೆಲ್ ಸದರ್ಲೆಂಡ್, ಅಮಂದಾ ಜೇಡ್ ವೆಲಿಂಗ್ಟನ್

ಪಂದ್ಯ ಆರಂಭ: ಬೆಳಿಗ್ಗೆ 6.30

ಬ್ಯಾಸ್ಕೆಟ್ ಬಾಲ್: ರಾಜ್‌ಕುಮಾರ್, ವಿವೇಕ್ಸ್ ತಂಡಗಳಿಗೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್‌ಕುಮಾರ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ಮತ್ತು ವಿವೇಕ್ಸ್ ತಂಡಗಳು ಇಲ್ಲಿ ಆರಂಭಗೊಂಡ ಭಾರತ ಬ್ಯಾಸ್ಕೆಟ್ ಬಾಲ್ ಫೆಡರೇಷನ್ ಆಶ್ರಯದ 3x3 ರಾಷ್ಟ್ರೀಯ ಲೀಗ್‌ನ ಮೊದಲ ಆವೃತ್ತಿಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಗೆಲುವಿನೊಂದಿಗೆ ಶುಭಾರಂಭ ಮಾಡಿದವು.

ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಲೀಗ್‌ನ ಶುಕ್ರವಾರದ ಪಂದ್ಯಗಳಲ್ಲಿ ರಾಜ್‌ಕುಮಾರ್ ಬಿ.ಸಿ 22–3ರಲ್ಲಿ ನೆಟ್ ರಿಪ್ಪರ್ಸ್ ಎದುರು ಜಯ ಸಾಧಿಸಿತು. ವಿವೇಕ್ಸ್ ತಂಡದವರು 21–9ರಲ್ಲಿ ಸ್ವಿಷ್ ತಂಡವನ್ನು ಮಣಿಸಿದರು.

ಮೊದಲ ದಿನದ ಫಲಿತಾಂಶಗಳು: ಪುರುಷರ ವಿಭಾಗ: ಬರೋಡಿಯನ್ಸ್‌ಗೆ 21–12ರಲ್ಲಿ ಹೂಪರ್ಸ್ ವಿರುದ್ಧ ಜಯ; ಬ್ಯಾಂಕ್ ಆಫ್ ಬರೋಡಗೆ ಟ್ರಿಪಲ್ ಟಿಬಿ ಬಾಲ್ ಇನ್ ವಿರುದ್ಧ 21–4ರಲ್ಲಿ ಜಯ; ಐಬಿಬಿಸಿಗೆ 21–14ರಲ್ಲಿ ಯಂಗ್ ಫ್ರೆಂಡ್ಸ್ ವಿರುದ್ಧ, ಕ್ರಿಡಾ ಶಾಲೆಗೆ 21–10ರಲ್ಲಿ ಫ್ಲೇಮ್ ಥ್ರೋವರ್ಸ್ ವಿರುದ್ಧ, ಹೂಪ್ಸ್ ಜೆನೆಸಿಸ್‌ಗೆ 21–10ರಲ್ಲಿ ವೈಯಿಂಗ್ ಫಾರ್ ಟ್ರೂಥ್ ವಿರುದ್ಧ, ಬಾಲ್ ಹಾಗ್ಸ್‌ಗೆ 16–14ರಲ್ಲಿ ರೈಸಿಂಗ್ ಸ್ಟಾರ್ಸ್ ವಿರುದ್ಧ, ಹಸ್ಟ್ಲರ್ಸ್‌ಗೆ 16–6ರಲ್ಲಿ ಕೆನ್ಯೂಸ್ ವಿರುದ್ಧ, ಸ್ವಿಷ್ ಕೆಬಾಬ್ಸ್‌ಗೆ 21–9ರಲ್ಲಿ ಎಸಿಇ ಬೀದರ್ ವಿರುದ್ಧ, ಅಂಡರ್‌ರೇಟೆಡ್‌ಗೆ 22–10ರಲ್ಲಿ ಕೋಬ್ ಸಿಜ್ಲರ್ಸ್ ವಿರುದ್ಧ, ಜೆಲಿ ಫ್ಯಾಮ್‌ಗೆ 21–15ರಲ್ಲಿ ಡಾಮಿನೇಟರ್ಸ್ ವಿರುದ್ಧ, ಸ್ಯಾಪರ್ಸ್‌ಗೆ 10–12ರಲ್ಲಿ ಬೆಂಗಳೂರಿನ ಡಿವೈಇಎಸ್ ವಿರುದ್ಧ ಗೆಲುವು.

ಮಹಿಳೆಯರ ವಿಭಾಗ: ಆಲ್ ಸ್ಟಾರ್ಸ್‌ಗೆ 17–3ರಲ್ಲಿ ಬಬಲ್‌ಗಮ್ ವಿರುದ್ಧ, ವಿವೇಕ್ಸ್‌ಗೆ 21–9ರಲ್ಲಿ ಸ್ವಿಷ್ ವಿರುದ್ಧ, ಡಂಕರ್ಸ್‌ಗೆ 17–14ರಲ್ಲಿ ಟೀಮ್ ರುಚಿತಾ ವಿರುದ್ಧ, ಈಡನ್‌ಗೆ 11–6ರಲ್ಲಿ ಹೂಪ್ಸ್ ಐ ಡಿಡ್ ಇಟ್ ವಿರುದ್ಧ, ರಾಕೆಟ್ಸ್‌ಗೆ 7–3ರಲ್ಲಿ ಬೀಟಲ್ಸ್ ವಿರುದ್ಧ, ವಿದ್ಯಾನಗರ ಡಿವೈಇಎಸ್‌ಗೆ 13–3ರಲ್ಲಿ ಬೀಟಲ್ಸ್ ವಿರುದ್ಧ ಜಯ.

ಅಲ್ಪಮೊತ್ತದ ಗುರಿ ತಲುಪುವಲ್ಲಿ ಎಡವಿದ ಬಾಂಗ್ಲಾ: ಮಿಂಚಿದ ಹೇಯಲಿ ಮ್ಯಾಥ್ಯೂಸ್, ಶೆಮೈನ್

ಟೇಲರ್ ಬಳಗಕ್ಕೆ ಬಾಂಗ್ಲಾ ವಿರುದ್ಧ ರೋಚಕ ಜಯ

ಮೌಂಟ್ ಮಾಂಗನೂಯಿ (ಪಿಟಿಐ): ಆಫ್‌ಸ್ಪಿನ್ನರ್ ಹೇಯಲಿ ಮ್ಯಾಥ್ಯೂಸ್ ಅಮೋಘ ಬೌಲಿಂಗ್‌ನಿಂದ ವೆಸ್ಟ್ ಇಂಡೀಸ್ ತಂಡ ಬಾಂಗ್ಲಾದೇಶ ಎದುರು ನಾಲ್ಕು ರನ್‌ಗಳಿಂದ ರೋಚಕ ಜಯ ಗಳಿಸಿತು.

ಬೇ ಓವಲ್ ಮೈದಾನದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಬಾಂಗ್ಲಾದೇಶ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ತಂಡದ ಬೌಲರ್‌ಗಳ ಶಿಸ್ತಿನ ದಾಳಿಯ ಮುಂದೆ ವಿಂಡೀಸ್ ಬಳಗವನ್ನು 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 140 ರನ್ ಗಳಿಸಿತು. ಶೆಮೈನ್ ಕ್ಯಾಂಪ್‌ಬೆಲ್ (ಅಜೇಯ 53; 107ಎಸೆತ, 4X5) ಅವರೊಬ್ಬರೇ ಉತ್ತಮವಾಗಿ ಬ್ಯಾಟಿಂಗ್ ಮಾಡಿದರು.

ಗುರಿ ಬೆನ್ನತ್ತಿದ ಬಾಂಗ್ಲಾ ಎಡವಿತು. 49.3 ಓವರ್‌ಗಳಲ್ಲಿ 136 ರನ್‌ಗಳಿಗೆ ಆಲೌಟ್ ಆಯಿತು. ಹೇಯಲಿ (15ಕ್ಕೆ4) ಅಫೈ ಅಖ್ತರ್ (29ಕ್ಕೆ3) ಮತ್ತು ಸ್ಟೆಫಾನಿ ಟೇಲರ್ (29ಕ್ಕೆ3) ಬಾಂಗ್ಲಾ ತಂಡದ ಕೈಯಿಂದ ಗೆಲುವು ಕಸಿದುಕೊಂಡರು.

ನಾಹೀದಾ ಕೊನೆಯ ಹಂತದಲ್ಲಿ ದಿಟ್ಟ ಹೋರಾಟ ತೋರಿದರು. ಇದರಿಂದಾಗಿ ಪಂದ್ಯ ರೋಚಕವಾಯಿತು.

ಸಂಕ್ಷಿಪ್ತ ಸ್ಕೋರು: ವೆಸ್ಟ್ ಇಂಡೀಸ್: 50 ಓವರ್‌ಗಳಲ್ಲಿ 9ಕ್ಕೆ 140 (ಶೆಮೈನ್ ಕ್ಯಾಂಪ್‌ಬೆಲ್ ಔಟಾಗದೆ 53, ಸಲ್ಮಾ ಖಾತೂನ್ 23ಕ್ಕೆ2, ನಾಹೀದಾ ಅಕ್ತರ್ 23ಕ್ಕೆ2) **ಬಾಂಗ್ಲಾದೇಶ:** 49.3 ಓವರ್‌ಗಳಲ್ಲಿ 136 (ನಾಹೀದಾ ಅಕ್ತರ್ ಔಟಾಗದೆ 25, ನಿಜಾರ್ ಸುಲ್ತಾನಾ 25, ಹೇಯಲಿ ಮ್ಯಾಥ್ಯೂಸ್ 15ಕ್ಕೆ4, ಅಫೈ ಫ್ಲೆಚರ್ 29ಕ್ಕೆ3, ಸ್ಟೆಫಾನಿ ಟೇಲರ್ 29ಕ್ಕೆ3) **ಫಲಿತಾಂಶ:** ವೆಸ್ಟ್ ಇಂಡೀಸ್ ತಂಡಕ್ಕೆ 4 ರನ್‌ಗಳಿಂದ ಜಯ.

ಕುಸಿದ ಕಾನೆಲ್

ವಿಂಡೀಸ್‌ನ ಶಮಿಲಿಯಾ ಕಾನೆಲ್ ಪಂದ್ಯದಲ್ಲಿ ಕುಸಿದು ಬಿದ್ದರು. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಫೀಲ್ಡಿಂಗ್ ಮಾಡುವ ಸಂದರ್ಭದಲ್ಲಿ ಅವರು ಕುಸಿದರು. ಇನಿಂಗ್ಸ್‌ನ 47ನೇ ಓವರ್‌ನಲ್ಲಿ ಈ ಘಟನೆ ಸಂಭವಿಸಿತು. ತಂಡದ ವೈದ್ಯಕೀಯ ಸಿಬ್ಬಂದಿ ಅವರತ್ತ ಧಾವಿಸಿ ಪ್ರಥಮ ಚಿಕಿತ್ಸೆ ನೀಡಿತು. ನಂತರ ಅಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕರೆದೊಯ್ಯಲಾಯಿತು.

ಕುಸಿದ ಶಮಿಲಿಯಾ ಕಾನೆಲ್ –ಎಎಫ್‌ಪಿ ಚಿತ್ರ

ಶತಕ ಗಳಿಸಿದ ನಂತರ ಬೆನ್ ಸ್ಟೋಕ್ಸ್ ಸಂಭ್ರಮಿಸಿದ ರೀತಿ –ಎಎಫ್‌ಪಿ ಚಿತ್ರ

ಟೆಸ್ಟ್: ಬೆನ್ ಸ್ಟೋಕ್ಸ್ ಶತಕ

ಬಾರ್ಬಡೀಸ್ (ಪಿಟಿಐ/ಎಎಫ್‌ಪಿ): ಅರ್ಧ ಡಜನ್ ಸಿಕ್ಸರ್ ಸಿಡಿಸಿದ ಬೆನ್ ಸ್ಟೋಕ್ಸ್ ಇಲ್ಲಿ ನಡೆಯುತ್ತಿರುವ ವೆಸ್ಟ್ ಇಂಡೀಸ್ ವಿರುದ್ಧದ ಎರಡನೇ ಟೆಸ್ಟ್‌ನಲ್ಲಿ ಸಿಡಿಲಬ್ಬರದ ಶತಕ ದಾಖಲಿಸಿದರು.

ಕೆನ್ಸಿಂಗ್ಟನ್ ಓವೆಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಎರಡನೇ ದಿನದಾಟದಲ್ಲಿ ಸ್ಟೋಕ್ಸ್ 128 ಎಸೆತಗಳಲ್ಲಿ 120 ರನ್ ಗಳಿಸಿದರು. ಅದರಲ್ಲಿ 11 ಬೌಂಡರಿಗಳೂ ಇದ್ದವು. ಇಂಗ್ಲೆಂಡ್ ತಂಡವು 150.5 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 507 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ಮೂರನೇ ದಿನ ಚಹಾ ವಿರಾಮದ ವೇಳೆ ವಿಂಡೀಸ್ 82 ಓವರ್‌ಗಳಲ್ಲಿ 3 ವಿಕೆಟ್‌ಗೆ 196 ರನ್ ಗಳಿಸಿತು. ಕ್ರೆಗ್ ಬ್ರಾಥ್‌ವೇಟ್ 79 ಮತ್ತು ಜರ್ಮೈನ್ ಬ್ಲ್ಯಾಕ್‌ವುಡ್ 50 ರನ್ ಗಳಿಸಿ ಕ್ರೀಸ್‌ನಲ್ಲಿದ್ದರು.

ಪಂದ್ಯದ ಮೊದಲ ದಿನದಾಟದಲ್ಲಿ ನಾಯಕ ಜೋ ರೂಟ್ ಶತಕ ಬಾರಿಸಿ ಕ್ರೀಸ್‌ನಲ್ಲಿ ಉಳಿದಿದ್ದರು. ಆಟ ಮುಂದುವರಿಸಿದ ಅವರು ಸ್ಟೋಕ್ಸ್ ಅವರೊಂದಿಗೆ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 129 ರನ್ ಸೇರಿಸಿದರು. ಇದರಿಂದಾಗಿ ತಂಡ ಬೃಹತ್ ಮೊತ್ತ ಗಳಿಸಿತು.

ಸ್ಟೋಕ್ಸ್ ಟೆಸ್ಟ್ ಕ್ರಿಕೆಟ್‌ನಲ್ಲಿ ಐದು ಸಾವಿರ ರನ್ ಪೂರೈಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಇಂಗ್ಲೆಂಡ್: 150.5 ಓವರ್‌ಗಳಲ್ಲಿ 9ಕ್ಕೆ 507 (ಜೋ ರೂಟ್ 153, ಬೆನ್ ಸ್ಟೋಕ್ಸ್ 120, ಜಾನಿ ಬೆಸ್ಟೊ 20, ಬೆನ್ ಫೋಕ್ಸ್ 33, ಕ್ರಿಸ್ ವೋಕ್ಸ್ 41, ವೀರಸ್ವಾಮಿ ಪೆರುಮಾಳ್ 126ಕ್ಕೆ3, ಕೆಮರ್ ರೋಚ್ 68ಕ್ಕೆ2) **ವೆಸ್ಟ್ ಇಂಡೀಸ್:** 82 ಓವರ್‌ಗಳಲ್ಲಿ 3 ವಿಕೆಟ್‌ಗೆ 196 (ಕ್ರೇಗ್ ಬ್ರಾಥ್‌ವೇಟ್ ಬ್ಯಾಟಿಂಗ್ 79, ಶಾಮ್ರಾ ಬ್ರೂಕ್ಸ್ 39, ಜರ್ಮೈನ್ ಬ್ಲ್ಯಾಕ್‌ವುಡ್ ಬ್ಯಾಟಿಂಗ್ 50; ಮ್ಯಾಥ್ಯೂ ಫಿಷರ್ 32ಕ್ಕೆ1, ಜ್ಯಾಕ್ ಲೀಚ್ 72ಕ್ಕೆ1).